

prajavani.net prajavani

ಶನಿವಾರ, ಏಪ್ರಿಲ್ 4, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 93 | ಪುಟ 20

www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

'ಎಲ್‌ಪಿಜಿ ಅಕ್ರಮ ದಾಸ್ತಾನು ವಿರುದ್ಧ ಕ್ರಮ' 10 | ಅಂಗನವಾಡಿ: 4.26 ಲಕ್ಷ ಅಪೌಷ್ಟಿಕ ಮಕ್ಕಳು 5



ಹಿಂದಿ 'ಗ್ರೇಡ್': ಲೋಕಭವನ ಆಕ್ಷೇಪ

'ಭಾಷೆಯ ಶೈಕ್ಷಣಿಕ ಮಹತ್ವಕ್ಕೆ ಪೆಟ್ಟು ನೀಡುವುದು ಬೇಡ' ನಿರ್ಧಾರ ಮರುಪರಿಶೀಲಿಸಲು ಸರ್ಕಾರಕ್ಕೆ ಸಲಹೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದಿ ಸೇರಿದಂತೆ ತೃತೀಯ ಭಾಷೆಗೆ ಅಂಕಗಳ ಬದಲು ಗ್ರೇಡ್ ನೀಡುವ ರಾಜ್ಯ ಸರ್ಕಾರದ ನಿರ್ಧಾರದ ನಂತರ ವಿವಿಧ ಸಂಘಟನೆಗಳ ನಡುವೆ ಆರಂಭವಾದ ಪರ–ವಿರೋಧ ವಾಗ್ವಾದ, ಹೋರಾಟ ಈಗ ಲೋಕಭವನನ್ನೂ ತಲುಪಿದೆ.

ಎಸ್‌ಎಸ್‌ಎಲ್‌ಸಿ ಹಿಂದಿ ಪರೀಕ್ಷೆ ಬರೆಯುವ ಮಕ್ಕಳ ಫಲಿತಾಂಶ ಪ್ರಕಟಿಸುವಾಗ ಅಂಕಗಳ ಬದಲು ಗ್ರೇಡ್ ನೀಡುವ ನಿರ್ಧಾರವನ್ನು ಪುನರ್ ಪರಿಶೀಲಿಸುವಂತೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರ ವಿಶೇಷ ಕಾರ್ಯದರ್ಶಿ ಆರ್. ಪ್ರಭುಶಂಕರ್ ಅವರು ಸರ್ಕಾರದ ಮುಖ್ಯಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ಪತ್ರ ಬರೆದಿದ್ದಾರೆ.

ತೃತೀಯ ಭಾಷೆಯು ರಾಜ್ಯ ಪಠ್ಯಕ್ರಮ ಓದುವ ವಿದ್ಯಾರ್ಥಿಗಳ ಭಾಷಾ ವೈವಿಧ್ಯ, ಅರಿವು ಹಾಗೂ ಬೌದ್ಧಿಕ ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಅಂಕಗಳ ಬದಲಿಗೆ ಗ್ರೇಡ್ ನೀಡುವ ಪದ್ಧತಿಯಿಂದ ಹಿಂದಿ ಭಾಷೆಯ ಶೈಕ್ಷಣಿಕ ಮಹತ್ವ ಕುಗ್ಗುವ ಸಾಧ್ಯತೆ ಇದೆ. ವಿದ್ಯಾರ್ಥಿಗಳು ಕಲಿಕೆಯಲ್ಲಿ ಹಿಂದಿಯನ್ನು ಗಂಭೀರವಾಗಿ ತೆಗೆದುಕೊಳ್ಳದೇ ಇರುವ ಸಾಧ್ಯತೆಯೂ ಇದೆ. ಹಾಗಾಗಿ, ರಾಜ್ಯ ಸರ್ಕಾರ ಈ ಹಿಂದೆ ಇದ್ದಂತೆ ತೃತೀಯ ಭಾಷೆಗೆ ಅಂಕ ನೀಡುವ ಪದ್ಧತಿಯನ್ನೇ ಉಳಿಸಿಕೊಳ್ಳಬೇಕು ಎಂದು ಸಲಹೆ ನೀಡಿದ್ದಾರೆ. ಈ ಕುರಿತು 'ಸ್ಥಳೀಯ ಭಾಷೆಗಳ ಸಂರಕ್ಷಣಾ ಸಂಘ' ಸಲ್ಲಿಸಿದ ಮನವಿಯ ಕುರಿತೂ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.


11

ಹಿಂದಿ ಕಲಿಕೆ, ಬೋಧನೆಗಿಲ್ಲ ಅಡ್ಡಿ: ಮಧು ಬಂಗಾರಪ್ಪ

ಮೂರನೇ ಭಾಷಾ ವಿಷಯಗಳಿಗೆ ಅಂಕ ನೀಡುವ ಪದ್ಧತಿ ಕೈಬಿಟ್ಟು, ಗ್ರೇಡ್ ನಮೂದಿಸುವ ನಿರ್ಧಾರವು ವಿದ್ಯಾರ್ಥಿಗಳ ಹಿಂದಿ ಕಲಿಕೆ, ಬೋಧನೆ, ಶಿಕ್ಷಕರ ಕಾರ್ಯಭಾರಕ್ಕೆ ಅಡ್ಡಿಯಾಗದು ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದ್ದಾರೆ.

ಶಾಲೆಗಳಲ್ಲಿ ಹಿಂದೆ ಇದ್ದಂತೆ ನಿಗದಿತ ತರಗತಿಗಳು ಇರುತ್ತವೆ. ಶಿಕ್ಷಕರ ಹುದ್ದೆಗಳನ್ನೂ ಕಡಿಮೆ ಮಾಡುವುದಿಲ್ಲ. ಹಿಂದಿನ ವರ್ಷಗಳಂತೆ 100 ಅಂಕಗಳಿಗೆ ಪ್ರಶ್ನೆ ಪತ್ರಿಕೆ ಇರುತ್ತದೆ. ಆದರೆ, ಮೌಲ್ಯಮಾಪನದ ನಂತರ ಅಂಕಪಟ್ಟಿಯಲ್ಲಿ ಅಂಕಗಳನ್ನು ನಮೂದಿಸದೆ ಗ್ರೇಡ್ ಎ, ಬಿ, ಸಿ, ಡಿ ಎಂದು ನಮೂದಿಸಲಾಗುತ್ತದೆ. ವಿದ್ಯಾರ್ಥಿಗಳ ಮೇಲಿನ ಅನ್ಯ ಭಾಷೆಯ ಕಲಿಕಾ ಒತ್ತಡವನ್ನು ಕಡಿಮೆ ಮಾಡುವುದಷ್ಟೇ ಇದರ ಉದ್ದೇಶ ಎಂದಿದ್ದಾರೆ. 2025ರ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಸುಮಾರು 1.48 ಲಕ್ಷ ವಿದ್ಯಾರ್ಥಿಗಳು ಹಿಂದಿಯಲ್ಲಿ ಅನುತ್ತೀರ್ಣರಾಗಿದ್ದರು. ಹಿಂದಿ ಬಲವಂತದ ಹೇರಿಕೆ ಕೈಬಿಡುವಂತೆ ರಾಜ್ಯದ ಕನ್ನಡಪರ ಸಂಘಟನೆಗಳು ಸಲ್ಲಿಸಿದ ಮನವಿಯಂತೆ ವಿದ್ಯಾರ್ಥಿಗಳ ಹಿತಾಸಕ್ತಿಯಿಂದ ಈ ತೀರ್ಮಾನ ಕೈಗೊಳ್ಳಲಾಗಿದೆ ಎಂದಿದ್ದಾರೆ.

ಸಿಬಿಎಸ್‌ಇ: ತ್ರಿಭಾಷಾ ಸೂತ್ರ ಕಡ್ಡಾಯ





ನವದೆಹಲಿ (ಪಿಟಿಐ): ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿಯು (ಸಿಬಿಎಸ್‌ಇ) 2026–27ನೇ ಶೈಕ್ಷಣಿಕ ವರ್ಷಕ್ಕೆ ಹೊಸ ಪಠ್ಯಕ್ರಮವನ್ನು ಜಾರಿಗೆ ತಂದಿದ್ದು, ಇದರ ಪ್ರಕಾರ 6ನೇ ತರಗತಿಯಿಂದ ಕಡ್ಡಾಯವಾಗಿ ತ್ರಿಭಾಷಾ ಸೂತ್ರವನ್ನು ಅಳವಡಿಸಲಾಗುತ್ತದೆ.

ಇದರೊಂದಿಗೆ 9ನೇ ತರಗತಿಯ ವಿದ್ಯಾರ್ಥಿಗಳು ಗಣಿತ ಮತ್ತು ವಿಜ್ಞಾನ ವಿಷಯವನ್ನು ಎರಡು ಹಂತಗಳಲ್ಲಿ ಅಧ್ಯಯನ ನಡೆಸಬಹುದಾದ ಹೊಸ ಅವಕಾಶವನ್ನು ಒದಗಿಸಲಾಗಿದೆ ಎಂದು ಅಧಿಕಾರಿಗಳು ಶುಕ್ರವಾರ ತಿಳಿಸಿದರು. ನೂತನ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಅಡಿಯಲ್ಲಿ ಕಡ್ಡಾಯಗೊಳಿಸಲಾಗಿರುವ ತ್ರಿಭಾಷಾ ಸೂತ್ರವನ್ನು 6ನೇ ತರಗತಿಯಿಂದ ಪ್ರಾರಂಭಿಸಲಾಗುವುದು (ಮೂರನೇ ಭಾಷೆ ಕಡ್ಡಾಯ). ಈ ವಿಷಯಗಳನ್ನು ಆರ್1, ಆರ್2 ಮತ್ತು ಆರ್3 ಎಂದು ಗುರುತಿಸಲಾಗಿದೆ. ಆದರೆ 9ನೇ ತರಗತಿಯ ವಿದ್ಯಾರ್ಥಿಗಳಿಗೆ ಮೂರನೇ ಭಾಷೆಯನ್ನು ಇನ್ನೂ ಕಡ್ಡಾಯಗೊಳಿಸಿಲ್ಲ. ರಾಷ್ಟ್ರೀಯ ಪಠ್ಯಕ್ರಮ ರೂಪುರೇಷೆ (ಎನ್‌ಸಿಎಫ್) ಶಿಫಾರಸು ಮಾಡಿರುವಂತೆ, ಮೂರರ ಪೈಕಿ ಎರಡು ಭಾರತದ ಸ್ಥಳೀಯ ಭಾಷೆಗಳಾಗಿರಬೇಕು.

9ನೇ ತರಗತಿಯ ವಿದ್ಯಾರ್ಥಿಗಳು ಕಡ್ಡಾಯವಾಗಿ ವಿಜ್ಞಾನ ಮತ್ತು ಗಣಿತ ವಿಷಯಗಳನ್ನು ಅಧ್ಯಯನ ಮಾಡುತ್ತಾರೆ. ಅಲ್ಲದೇ ಈ ಎರಡೂ ವಿಷಯಗಳಲ್ಲಿ ಐಚ್ಛಿಕವಾಗಿಯೂ, ಅಧ್ಯಯನ ಮಾಡಲೂ ಅವಕಾಶವಿದೆ.

ಎಲ್ಲಾ ವಿದ್ಯಾರ್ಥಿಗಳು ಗಣಿತ ಮತ್ತು ವಿಜ್ಞಾನದ ಮೂಲ ಪಠ್ಯಕ್ರಮವನ್ನು ಕಡ್ಡಾಯವಾಗಿ ಅಧ್ಯಯನ ಮಾಡಬೇಕು. ಈ ಪರೀಕ್ಷೆಗಳು ತಲಾ 80 ಅಂಕಗಳಿಗೆ ನಡೆಯಲಿದ್ದು, ಪರೀಕ್ಷಾ ಅವಧಿ 3 ಗಂಟೆಯಾಗಿರುತ್ತದೆ.

11

ಹೆಚ್ಚಿನ ಕಚ್ಚಾ ತೈಲ, ಅನಿಲ ಭಾರತಕ್ಕೆ ರಷ್ಯಾ ಭರವಸೆ



ನವದೆಹಲಿ (ಪಿಟಿಐ): ಭಾರತಕ್ಕೆ ಕಚ್ಚಾ ತೈಲ ಹಾಗೂ ನೈಸರ್ಗಿಕ ಅನಿಲದ ಪೂರೈಕೆಯನ್ನು ಹೆಚ್ಚು ಮಾಡಲು ಸಿದ್ಧ ಇರುವುದಾಗಿ ರಷ್ಯಾ ಹೇಳಿದೆ. ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಸಮರವು ಜಾಗತಿಕ ಕಚ್ಚಾ ತೈಲ ಮಾರುಕಟ್ಟೆಯಲ್ಲಿ ತೀವ್ರ ಅಸ್ಥಿರತೆ ಸೃಷ್ಟಿಸಿರುವ ಹೊತ್ತಿನಲ್ಲಿ ರಷ್ಯಾ ಈ ಭರವಸೆ ಇತ್ತಿದೆ.

ರಷ್ಯಾದ ಪ್ರಥಮ ಉಪ ಪ್ರಧಾನಿ ಡೆನಿಸ್ ಮಂಟುರೊವ್ ಅವರು ಭಾರತದ ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೊಬಾಲ್ ಮತ್ತು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರ ಜೊತೆ ಗುರುವಾರ ನಡೆಸಿದ ಸಭೆಯಲ್ಲಿ ಈ ವಿಚಾರವು ಪ್ರಮುಖವಾಗಿ ಪ್ರಸ್ತಾಪ ಆಗಿದೆ ಎಂದು ಮೂಲಗಳು ತಿಳಿಸಿವೆ.

ಮಂಟುರೊವ್ ಅವರು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರ ಜೊತೆಗೂ ಮಾತುಕತೆ ನಡೆಸಿದ್ದಾರೆ. ನಂತರ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಕೂಡ ಭೇಟಿ ಮಾಡಿದ್ದರು.

ತೈಲ ಹಾಗೂ ಅನಿಲ ವಲಯದಲ್ಲಿ ದ್ವಿಪಕ್ಷೀಯ ಸಹಕಾರದ ಬಗ್ಗೆ ಮಾತುಕತೆ ಸಂದರ್ಭದಲ್ಲಿ ವಿಶೇಷ ಗಮನ ನೀಡಲಾಯಿತು ಎಂದು ರಷ್ಯಾದ ಪ್ರಕಟಣೆ ತಿಳಿಸಿದೆ. 'ಭಾರತದ ಮಾರುಕಟ್ಟೆಗೆ ಕಚ್ಚಾ ತೈಲ ಹಾಗೂ ದ್ರವೀಕೃತ ನೈಸರ್ಗಿಕ ಅನಿಲದ (ಎಲ್‌ಎನ್‌ಜಿ) ಪೂರೈಕೆಯನ್ನು ಸ್ಥಿರ ಪ್ರಮಾಣದಲ್ಲಿ ಹೆಚ್ಚಿಸುವ ಸಾಮರ್ಥ್ಯವು ರಷ್ಯಾದ ಕಂಪನಿಗಳಿಗೆ ಇದೆ ಎಂಬುದನ್ನು ಮಂಟುರೊವ್ ಅವರು ಖಚಿತಪಡಿಸಿದ್ದಾರೆ' ಎಂದು ಪ್ರಕಟಣೆಯಲ್ಲಿ ಹೇಳಲಾಗಿದೆ.

ಎರಡೂ ದೇಶಗಳಿಗೆ ಅನುಕೂಲ ಕಲ್ಪಿಸುವಂತಹ ವ್ಯಾಪಾರ, ಹೂಡಿಕೆ ಮತ್ತು ಕೈಗಾರಿಕಾ ಸಹಕಾರವನ್ನು ಹೆಚ್ಚು ಮಾಡುವುದು ಕೂಡ ಸಭೆಯಲ್ಲಿ ಚರ್ಚೆಯಾದ ಅಂಶವಾಗಿದೆ ಎಂದು ಅದು ಹೇಳಿದೆ.

ಭಾರತಕ್ಕೆ ರಸಗೊಬ್ಬರ ಪೂರೈಕೆ ಮಾಡುವುದನ್ನು ರಷ್ಯಾ 2025ರ ಅಂತ್ಯದ ಹೊತ್ತಿಗೆ ಶೇ 40ರಷ್ಟು ಹೆಚ್ಚು ಮಾಡಿದೆ, ಭಾರತದ ಅಗತ್ಯವನ್ನು ಪೂರೈಸಲು ರಷ್ಯಾ ಸಿದ್ಧವಿದೆ ಎಂದು ಮಂಟುರೊವ್ ಹೇಳಿದ್ದಾರೆ ಎಂಬುದಾಗಿಯೂ ಪ್ರಕಟಣೆಯು ತಿಳಿಸಿದೆ.





ಕುಸಿದು ಬಿದ್ದ ಸಂತೋಷ್ ಹೆಗ್ಡೆ



ಬೆಂಗಳೂರು: ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆ ಅವರು ಕಾರ್ಯಕ್ರಮವೊಂದರಲ್ಲಿ ಕುಸಿದು ಬಿದ್ದಿದ್ದು, ಅವರನ್ನು ಆಸ್ಪತ್ರೆಗೆ ದಾಖಲಿಸಲಾಯಿತು.

ವಿವರ ಪುಟ 5

'2028ರಲ್ಲೂ ಗೆಲ್ಲುತ್ತೇವೆ'

ಬಾಗಲಕೋಟೆ: 'ಬಿಜೆಪಿಯವರ ಸುಳ್ಳು ಜನರಿಗೆ ಗೊತ್ತಾಗುತ್ತಿದೆ. ಹಿಂದೆ ನಡೆದಿದ್ದ ಮೂರು ಉಪ ಚುನಾವಣೆಗಳಲ್ಲಿ ನಾವು ಗೆದ್ದಿದ್ದೇವೆ. ಈಗಲೂ ಎರಡೂ ಕ್ಷೇತ್ರಗಳಲ್ಲಿ ಗೆಲ್ಲುತ್ತೇವೆ. 2028ಕ್ಕೂ ನಾವೇ ಗೆಲ್ಲುತ್ತೇವೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಲ್ಲಿ ಪ್ರತಿಪಾದಿಸಿದರು.

ವಿವರ ಪುಟ 6

ಚಿನಕುರುಳಿ ಪ್ರಕಾಶ್ ಶೆಟ್ಟಿ



4.83 ಲಕ್ಷ	243	25	700 ಯೋಜನೆಗೆ	₹120 ಕೋಟಿ	₹35 ಕೋಟಿ
ಯೋಜನೆಗೆ ಒಳಪಟ್ಟ ನೌಕರರು	ಸೇವೆ ನೀಡುತ್ತಿರುವ ಆಸ್ಪತ್ರೆಗಳು	ಯೋಜನೆಯಿಂದ ಹಿಂದೆ ಸರಿದ ಆಸ್ಪತ್ರೆಗಳು	ಒಳಪಡಲು ಒಪ್ಪದ ಆಸ್ಪತ್ರೆಗಳು	ಸಂಗ್ರಹವಾದ ಮೊತ್ತ	ವೆಚ್ಚ ಮಾಡಿದ ಮೊತ್ತ

'ಸಂಜೀವಿನಿ'ಗೆ ತೊಡಕಾದ ನಿರಾಸಕ್ತಿ

• ಚಂದ್ರಹಾಸ ಹಿರೇಮಳಲಿ



ಚಿಕಿತ್ಸಾ ವೆಚ್ಚಗಳ ದರ ಪರಿಷ್ಕರಣೆ ಕಡತ ಹಣಕಾಸು ಇಲಾಖೆಯ ಮುಂದಿದೆ. ದರ ಪರಿಷ್ಕರಣೆಯಾದರೆ ಯೋಜನೆ ವ್ಯಾಪ್ತಿಗೆ ಇನ್ನಷ್ಟು ಆಸ್ಪತ್ರೆಗಳು ಸೇರ್ಪಡೆಯಾಗುತ್ತವೆ. ಸರ್ಕಾರ ವಿಳಂಬ ಮಾಡದೆ ಕ್ರಮಕೈಗೊಳ್ಳಬೇಕು

ಸಿ.ಎಸ್.ಷಡಾಕ್ಷರಿ, ಅಧ್ಯಕ್ಷ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ

ಬೆಂಗಳೂರು: 'ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆ' ಒಪ್ಪಿಕೊಳ್ಳಲು ಬಹುತೇಕ ಖಾಸಗಿ ಆಸ್ಪತ್ರೆಗಳು ನಿರಾಸಕ್ತಿ ತೋರುತ್ತಿರುವುದು ರಾಜ್ಯ ಸರ್ಕಾರಿ ನೌಕರರು ಹಾಗೂ ಅವರ ಕುಟುಂಬದ ಅವಲಂಬಿತ ಸದಸ್ಯರ ನಗದುರಹಿತ ಚಿಕಿತ್ಸೆಗೆ ತೊಡಕಾಗಿದೆ.

ರಾಜ್ಯ ಸರ್ಕಾರ ಹಲವು ವರ್ಷಗಳ ಹಿಂದೆಯೇ ಯೋಜನೆ ರೂಪಿಸಿತ್ತಾದರೂ 2025ರ ಅ.1ರಿಂದ ಯೋಜನೆಯನ್ನು ಅಧಿಕೃತವಾಗಿ ಜಾರಿಗೊಳಿಸಲಾಗಿದೆ. ಯೋಜನೆ ಜಾರಿಗೂ ಮೊದಲು ಒಂದು ಸಾವಿರಕ್ಕೂ ಹೆಚ್ಚು ಆಸ್ಪತ್ರೆಗಳು ನಗದು ರಹಿತ ಚಿಕಿತ್ಸೆ ನೀಡಲು ಸರ್ಕಾರದ ಜತೆ ಒಪ್ಪಂದ ಮಾಡಿಕೊಳ್ಳುವ ಕುರಿತು ಭರವಸೆ ನೀಡಿದ್ದವು. ಆದರೆ, ಯೋಜನೆ ಆರಂಭವಾಗಿ ಆರು ತಿಂಗಳು ಕಳೆದರೂ ಯೋಜನೆ ಅಳವಡಿಸಿಕೊಂಡ ಆಸ್ಪತ್ರೆಗಳ ಸಂಖ್ಯೆ 243 ಮಾತ್ರ. ಆರಂಭದಲ್ಲಿ ಸಹಿ ಹಾಕಿದ್ದ ಸುಮಾರು 25 ಆಸ್ಪತ್ರೆಗಳು ಒಪ್ಪಂದದಿಂದ ಹಿಂದೆ ಸರಿದಿವೆ. 700ಕ್ಕೂ ಹೆಚ್ಚು ಆಸ್ಪತ್ರೆಗಳು ಯೋಜನೆಗೆ ಒಳಪಡಲು ಮೀನಮೇಷ ಎಣಿಸುತ್ತಿವೆ.



ನೌಕರರ ಶ್ರೇಣಿ	ಪಾವತಿ ಕಂತು
ಗ್ರೂಪ್–ಎ	₹1,000
ಗ್ರೂಪ್–ಬಿ	₹500
ಗ್ರೂಪ್–ಸಿ	₹350
ಗ್ರೂಪ್–ಡಿ	₹250

ದರ ಪರಿಷ್ಕರಣೆ ಸಮಸ್ಯೆ: 'ರಾಜ್ಯ ಸರ್ಕಾರಿ ನೌಕರರು, ನಿಗಮ, ಮಂಡಳಿ, ಅನುದಾನಿತ ಸಂಸ್ಥೆಗಳ ಸಿಬ್ಬಂದಿ ಹಾಗೂ ಅವರ ಕುಟುಂಬದ ಅವಲಂಬಿತ ಸದಸ್ಯರು ಯೋಜನೆಯ ವ್ಯಾಪ್ತಿಗೆ ಒಳಪಟ್ಟಿದ್ದಾರೆ. ಜ್ಯೋತಿ ಸಂಜೀವಿನಿ ಯೋಜನೆಯಲ್ಲಿ ಪುರುಷ ನೌಕರರ ತಂದೆ–ತಾಯಿಗೆ ಮಾತ್ರ ಸಿಗುತ್ತಿದ್ದ ಆರೋಗ್ಯ ಸೌಲಭ್ಯವನ್ನು ಹೊಸ ಯೋಜನೆಯಲ್ಲಿ ಮಹಿಳಾ ನೌಕರರ ತಂದೆ–ತಾಯಿಗೂ ವಿಸ್ತರಿಸಲಾಗಿತ್ತು.

11

ಲಭ್ಯವಾಗದ ಒಪಿಡಿ ಸೌಲಭ್ಯ

ಆರೋಗ್ಯ ಸಂಜೀವಿನಿ ಯೋಜನೆ ಅಡಿ ಹೊರ ರೋಗಿಗಳ ಚಿಕಿತ್ಸಾ ಸೌಲಭ್ಯ (ಒಪಿಡಿ) ಸೇರಿದಂತೆ ಹಲವು ಸೇವೆಗಳನ್ನು ಒದಗಿಸುವ ಭರವಸೆಯನ್ನು ಸರ್ಕಾರ ನೀಡಿತ್ತು. ಆದರೆ, ಒಳರೋಗಿಗಳಾಗಿ ದಾಖಲಾದವರಿಗೆ ಮಾತ್ರ ಈ ಸೌಲಭ್ಯ ಸಿಗುತ್ತಿದೆ.

4 ದೇಶಗಳ 8 ಸೇತುವೆಗಳ ಗುರಿಯಾಗಿಸುತ್ತೇವೆ: ಇರಾನ್ ಪ್ರತೀಕಾರದ ಮಾತು

ಇರಾನ್ ಸೇತುವೆ ಮೇಲೆ ಅಮೆರಿಕ ದಾಳಿ

ಟೆಹರಾನ್/ದುಬೈ (ಎಪಿ): ಅಮೆರಿಕ ಮತ್ತು ಇಸ್ರೇಲ್ ಜಂಟಿಯಾಗಿ ಇರಾನ್‌ನ ಕರಾಜ್ ನಗರದಲ್ಲಿರುವ ಅತಿ ಎತ್ತರದ ಸೇತುವೆ ಮೇಲೆ ಗುರುವಾರ ದಾಳಿ ನಡೆಸಿದ್ದರಿಂದ ಕುಪಿತಗೊಂಡಿರುವ ಇರಾನ್, ಪಶ್ಚಿಮ ಏಷ್ಯಾದ ನಾಲ್ಕು ದೇಶಗಳ ಎಂಟು ಸೇತುವೆಗಳ ಪಟ್ಟಿಯನ್ನು ಶುಕ್ರವಾರ ಬಿಡುಗಡೆ ಮಾಡಿದ್ದು, ಪ್ರತೀಕಾರದ ಸುಳಿವು ನೀಡಿದೆ.

ಕೊಲ್ಲಿ ದೇಶಗಳು ಮತ್ತು ಜೋರ್ಡನ್‌ನಲ್ಲಿರುವ ಹಲವು ಪ್ರಮುಖ ಸೇತುವೆಗಳು ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕೋರ್‌ನ (ಐಆರ್‌ಜಿಸಿ) ಸಂಭಾವ್ಯ ಗುರಿಗಳಾಗಿವೆ ಎಂದು ಇರಾನ್‌ನ ಸುದ್ದಿಸಂಸ್ಥೆ ಶುಕ್ರವಾರ ಹೇಳಿದೆ.

ಟೆಹರಾನ್ ಮತ್ತು ಕರಾಜ್‌ಗೆ ಸಂಪರ್ಕ ಕಲ್ಪಿಸುವ, ನಿರ್ಮಾಣ ಹಂತದಲ್ಲಿದ್ದ ಸುಮಾರು 136 ಮೀಟರ್ ಎತ್ತರದ ಬಿ–1 ಸೇತುವೆಯನ್ನು ಅಮೆರಿಕ, ಇಸ್ರೇಲ್ ವೈಮಾನಿಕ ದಾಳಿ ನಡೆಸಿ ಭಾಗಶಃ ನಾಶಪಡಿಸಿವೆ. ಈ ದಾಳಿಯಲ್ಲಿ ಎಂಟು ಜನರು ಮೃತಪಟ್ಟಿದ್ದು, 95 ಜನರು ಗಾಯಗೊಂಡಿದ್ದಾರೆ ಎಂದು ಅಲ್ಬೋರ್ಜ್ ಪ್ರಾಂತ್ಯದ ಉಪ ಗವರ್ನರ್ ಘೋದ್ರತೊಲ್ಲಾ ಸೈಫ್ ಅವರು ತಿಳಿಸಿದ್ದಾರೆ.

7

ದಿನದ ಬೆಳವಣಿಗೆಗಳು

- ಹೊರ್ಮುಜ್ ಜಲಸಂಧಿಯ ಮೇಲ್ವಿಚಾರಣೆ ಮಾಡಲು ಒಮನ್ ಜತೆ ಪ್ರಸ್ತಾವನೆ ರೂಪಿಸುತ್ತಿರುವುದಾಗಿ ಇರಾನ್ ಹೇಳಿಕೊಂಡಿದೆ. ಆದರೆ ಈ ಕುರಿತು ಒಮನ್ ತಕ್ಷಣದ ಪ್ರತಿಕ್ರಿಯೆ ನೀಡಿಲ್ಲ
- ಜಲಸಂಧಿಯನ್ನು ಮುಕ್ತಗೊಳಿಸುವ ಮೂಲಕ ಇರಾನ್ ಈಗ ಕದನ ವಿರಾಮ ಒಪ್ಪಂದಕ್ಕೆ ಮುಂದಾಗಬೇಕು ಎಂದು ಅಲ್ಲಿನ ಮಾಜಿ ರಾಜತಾಂತ್ರಿಕ ಅಧಿಕಾರಿ ಮೊಹಮ್ಮದ್ ಜಾವದ್ ಜರೀಫ್ ತಿಳಿಸಿದ್ದಾರೆ
- ಇರಾನ್‌ನ ಶೇ 70ರಷ್ಟು ಉಕ್ಕು ಉತ್ಪಾದನಾ ಸಾಮರ್ಥ್ಯವನ್ನು ಇಸ್ರೇಲ್ ನಾಶ ಮಾಡಿದೆ ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಪ್ರತಿಪಾದಿಸಿದ್ದಾರೆ
- ಯುದ್ಧ ಆರಂಭವಾದಾಗಿನಿಂದ ಇರಾನ್‌ನಲ್ಲಿ 1,900, ಇಸ್ರೇಲ್‌ನಲ್ಲಿ 19, ಕೊಲ್ಲಿ ದೇಶಗಳಲ್ಲಿ 24 ಜನರು ಮೃತಪಟ್ಟಿದ್ದಾರೆ. ಅಮೆರಿಕದ 13 ಸೈನಿಕರು ಮೃತಪಟ್ಟಿದ್ದಾರೆ. ಲೆಬನಾನ್‌ನಲ್ಲಿ 1,300ಕ್ಕೂ ಹೆಚ್ಚು ಜನ ಮೃತಪಟ್ಟಿದ್ದಾರೆ






ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರ
ಕಂದಾಯ ಇಲಾಖೆಯಲ್ಲಿ ಕ್ರಾಂತ್ರಿಕಾರಿ ಬದಲಾವಣೆ ತಂದ ಧೀಮಂತ ನಾಯಕ ಕರ್ನಾಟಕ ಸರ್ಕಾರ ಕಂದಾಯ
ಇಲಾಖೆ ಸಚಿವರು ಹಾಗೂ ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರ ಜನಪ್ರಿಯ ಶಾಸಕರಾದ
ಶ್ರೀ ಕೃಷ್ಣ ಬೈರೇಗೌಡ ರವರಿಗೆ
ಹುಟ್ಟುಹಬ್ಬದ ಶುಭಾಶಯಗಳು
KRISHNABYREGOWDA
ಅಶೋಕ್.ಕೆ
ಮಾಜಿ ಅಧ್ಯಕ್ಷರು ಬೆಂಗಳೂರು ನಗರ
ಜಿಲ್ಲಾ ಪಂಚಾಯತ್
ಜಯಕುಮಾರ್ ಹೆಚ್.ಜಿ
ಉಪಾಧ್ಯಕ್ಷರು ಜಾಲ ಬ್ಲಾಕ್ ಕಾಂಗ್ರೆಸ್
ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರ
ನಾಗೇಶ್.ಬಿ.ಎಂ
ಮಾಜಿ ಅಧ್ಯಕ್ಷರು ಬೆಟ್ಟಹಲಸೂರು
ಗ್ರಾಮ ಪಂಚಾಯಿತಿ
ಮಹೇಶ್ ಕುಮಾರ್ ಎನ್.ಕೆ
ಅಧ್ಯಕ್ಷರು ಜಾಲ ಬ್ಲಾಕ್ ಕಾಂಗ್ರೆಸ್ ಸಮಿತಿ
ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರ

37,393 ವಿದ್ಯಾರ್ಥಿಗಳು ಪದವಿಗೆ ಅರ್ಹ

ಡಾ. ಮನಮೋಹನ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ ಐದನೇ ಘಟಿಕೋತ್ಸವ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಾ.ಮನಮೋಹನ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ ಐದನೇ ಘಟಿಕೋತ್ಸವ ಏಪ್ರಿಲ್ 4ರಂದು ನಡೆಯಲಿದ್ದು, ಸ್ನಾತಕ, ಸ್ನಾತಕೋತ್ತರ ಪದವಿ ಸೇರಿ ಒಟ್ಟು 37,393 ವಿದ್ಯಾರ್ಥಿಗಳಿಗೆ (21,912 ಹುಡುಗಿಯರು, 15,458 ಹುಡುಗರು) ಪದವಿ ಪ್ರದಾನ ಮಾಡಲಾಗುತ್ತದೆ ಎಂದು ಕುಲಪತಿ ಬಿ.ರಮೇಶ್ ತಿಳಿಸಿದರು.

ಸೆಂಟ್ರಲ್ ಕಾಲೇಜು ಆವರಣದಲ್ಲಿರುವ ಜ್ಞಾನಜ್ಯೋತಿ ಸಭಾಂಗಣದಲ್ಲಿ ಬೆಳಿಗ್ಗೆ 11.30ಕ್ಕೆ ಕಾರ್ಯಕ್ರಮ ನಡೆಯಲಿದ್ದು, ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯ ಎಲೆಕ್ಟ್ರಾನಿಕ್ಸ್ ಆ್ಯಂಡ್ ಕಮ್ಯುನಿಕೇಷನ್ ಸಿಸ್ಟಮ್ಸ್ ಮಹಾ ನಿರ್ದೇಶಕ ಬಿನಯ್ ಕುಮಾರ್ ದಾಸ್ ಅವರು ಘಟಿಕೋತ್ಸವ ಭಾಷಣ ಮಾಡುವರು. ರಾಜ್ಯಪಾಲ ಥಾವರಚಂದ್ ಗೆಹಲೋತ್ ಅಧ್ಯಕ್ಷತೆ ವಹಿಸಲಿದ್ದು, ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಭಾಗವಹಿಸಲಿದ್ದಾರೆ ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಗಣಿತ, ನಿರ್ವಹಣೆ, ಫ್ರೆಂಚ್, ಆಹಾರ ವಿಜ್ಞಾನ, ಪೌಷ್ಟಿಕಾಂಶ, ಶಿಕ್ಷಣ, ವಾಣಿಜ್ಯ, ರಸಾಯನ ವಿಜ್ಞಾನ, ಅರ್ಥಶಾಸ್ತ್ರ ವಿಷಯದಲ್ಲಿ ಒಟ್ಟು 23 ಸಂಶೋಧನಾ ವಿದ್ಯಾರ್ಥಿಗಳು ಪಿಎಚ್‌.ಡಿ. ಪದವಿ ಪಡೆಯಲಿದ್ದಾರೆ. ಸ್ನಾತಕ ಪದವಿಯಲ್ಲಿ ಉತ್ತೀರ್ಣ ಪ್ರಮಾಣ ಶೇಕಡ 93.37 ಹಾಗೂ ಸ್ನಾತಕೋತ್ತರ ಪದವಿಯಲ್ಲಿ ಶೇಕಡ 93.37ರಷ್ಟಿದೆ ಎಂದರು.

ಘಟಿಕೋತ್ಸವದಲ್ಲಿ 71 ವಿದ್ಯಾರ್ಥಿಗಳು ಪ್ರಥಮ ರ‍್ಯಾಂಕ್ ಪ್ರಮಾಣ ಪತ್ರ, ಚಿನ್ನದ ಪದಕ ಹಾಗೂ ನಗದು ಬಹುಮಾನ ಸ್ವೀಕರಿಸಲಿದ್ದಾರೆ. ವಿಶ್ವವಿದ್ಯಾಲಯ ಸ್ಥಾಪಿಸಿದ ಹಾಗೂ ವಿವಿಧ ದಾನಿಗಳು ಸ್ಥಾಪಿಸಿದ 64 ಚಿನ್ನದ ಪದಕ ಮತ್ತು ನಗದು ಬಹುಮಾನಗಳಲ್ಲಿ 54 ಚಿನ್ನದ ಪದಕ ಹಾಗೂ ನಗದು ಬಹುಮಾನಗಳನ್ನು 43 ವಿವಿಧ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ಹಾಗೂ 10 ಚಿನ್ನದ ಪದಕ ಮತ್ತು ನಗದು ಬಹುಮಾನವನ್ನು ಬಿ.ಎ, ಬಿಎಸ್‌.ಸಿ, ಬಿ.ಕಾಂ., ಬಿಬಿಎ, ಬಿ.ಇಡಿ ಕೋರ್ಸ್‌ಗಳಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ನೀಡಲಾಗುವುದು ಎಂದು ಹೇಳಿದರು.

ಒಟ್ಟು 71 ರ‍್ಯಾಂಕ್ ವಿಜೇತರಲ್ಲಿ 42 ವಿದ್ಯಾರ್ಥಿಗಳು ಸ್ನಾತಕೋತ್ತರ ಪದವಿಯವರು. ಇವರಲ್ಲಿ 5 ಹುಡುಗರು, 37 ಹುಡುಗಿಯರು. ಸ್ನಾತಕ ಪದವಿಗೆ ಸೇರಿದ 9 ಹುಡುಗರು, 37 ಹುಡುಗಿಯರು ಎಂದರು.

ಸುದ್ದಿಗೋಷ್ಠಿಯಲ್ಲಿ ಕುಲಸಚಿವ ನವೀನ್ ಜೋಸೆಫ್ ಎ, ಕುಲಸಚಿವ (ಮೌಲ್ಯಮಾಪನ) ಪ್ರೊ.ರಮೇಶ. ಬಿ.ಕುಡೇನಟ್ಟಿ, ವಿತ್ತಾಧಿಕಾರಿ ಎಂ.ವಿ. ವಿಜಯಲಕ್ಷ್ಮಿ, ಸಿಂಡಿಕೇಟ್ ಸದಸ್ಯರಾದ ಪ್ರೊ. ಬಿ.ಆರ್. ಸುಪ್ರೀತ್, ಶಿಲ್ಪಶ್ರೀ ಮತ್ತು ವಿದ್ಯಾ ವಿಷಯಕ ಪರಿಷತ್ತಿನ ಸದಸ್ಯ ಅಬ್ದುಲ್ ಖಾದರ್ ಉಪಸ್ಥಿತರಿದ್ದರು.

ವೆಂಕಟೇಶ್ ಪ್ರಸಾದ್, ಅರ್ಜುನ ಜನ್ಯ ಸೇರಿ 6 ಮಂದಿಗೆ ಗೌರವ ಡಾಕ್ಟರೇಟ್

ಕೆಎಸ್‌ಸಿಎ ಅಧ್ಯಕ್ಷ ಬಿ.ಕೆ.ವೆಂಕಟೇಶ್ ಪ್ರಸಾದ್, ಸಂಗೀತ ನಿರ್ದೇಶಕ ಅರ್ಜುನ್ ಜನ್ಯ, ವಿಧಾನ ಪರಿಷತ್ ಸದಸ್ಯ ಕೆ.ಗೋವಿಂದರಾಜ್, ಶಿಕ್ಷಣ ತಜ್ಞರಾದ ಟಿ.ಕೆ. ನಾರಾಯಣಪ್ಪ, ಮೋಹನ್ ಆಳ್ವ, ಕೈಗಾರಿಕೋದ್ಯಮಿ ಬಾವಾ ಮೊಹಮ್ಮದ್ ಫಾರೂಖ್ ಅವರಿಗೆ ಡಾ. ಮನಮೋಹನ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ಘೋಷಿಸಿದೆ.

ವಿಶ್ವವಿದ್ಯಾಲಯದ ಐದನೇ ಘಟಿಕೋತ್ಸವದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಗೌರವ ಡಾಕ್ಟರೇಟ್ ಪ್ರದಾನ ಮಾಡಲಿದ್ದಾರೆ ಎಂದು ಕುಲಪತಿ ಬಿ.ರಮೇಶ್ ತಿಳಿಸಿದರು.

ಎರಡು ವರ್ಷಗಳಿಂದ ಗೌರವ ಡಾಕ್ಟರೇಟ್ ಪ್ರದಾನ ಮಾಡಿರಲಿಲ್ಲ. ರಾಜ್ಯಪಾಲರ ಅನುಮತಿ ಮೇರೆಗೆ ಕಳೆದ ಸಾಲಿಗೆ ಮೂವರು ಹಾಗೂ ಪ್ರಸಕ್ತ ಸಾಲಿಗೆ ಮೂವರು ಸಾಧಕರನ್ನು ಆಯ್ಕೆ ಮಾಡಲಾಗಿದೆ. ವಿಶ್ವವಿದ್ಯಾಲಯದಿಂದ 14 ಮಂದಿಯ ಹೆಸರನ್ನು ರಾಜ್ಯಪಾಲರಿಗೆ ಕಳುಹಿಸಲಾಗಿತ್ತು ಎಂದರು.

ಕೆಲವರ ಹೆಸರಿಗೆ ಕೆಲ ಸಿಂಡಿಕೇಟ್ ಸದಸ್ಯರು ವಿರೋಧ ವ್ಯಕ್ತಪಡಿಸಿರುವ ಕುರಿತು ಕೇಳಿದ ಪ್ರಶ್ನೆಗೆ, '14 ಹೆಸರನ್ನು ಗೋಪ್ಯವಾಗಿ ರಾಜ್ಯಪಾಲರಿಗೆ ಕಳುಹಿಸಲಾಗಿತ್ತು. ರಾಜ್ಯಪಾಲರು ನಿರ್ಧಾರ ಕೈಗೊಂಡಿದ್ದಾರೆ. ಮುಂದಿನ ವರ್ಷದಿಂದ ಪಾರದರ್ಶಕವಾಗಿ ಮತ್ತು ನಿಯಮಾವಳಿ ಅನುಸಾರ ಗೌರವ ಡಾಕ್ಟರೇಟ್‌ಗೆ ಸಾಧಕರನ್ನು ಆಯ್ಕೆ ಮಾಡಬೇಕು ಎಂದು ಸಿಂಡಿಕೇಟ್‌ನ ಕೆಲವು ಸದಸ್ಯರು ಸಲಹೆ ನೀಡಿದ್ದಾರೆ. ಆಯ್ಕೆಯ ಹಿಂದೆ ಯಾವುದೇ ರಾಜಕೀಯ ಪ್ರಭಾವ ಇರಲಿಲ್ಲ' ಎಂದು ಸ್ಪಷ್ಟಪಡಿಸಿದರು.

ರೈತನ ಮಗಳಿಗೆ ನಾಲ್ಕು ಚಿನ್ನದ ಪದಕ


ಸ್ನೇಹಾ


ದಿವ್ಯಾಶ್ರೀ


ಅಭಿಷೇಕ್

ಟಿ.ಸ್ನೇಹಾ ಅವರು ಎಂ.ಎಸ್‌ಸಿ ರಸಾಯನ ವಿಜ್ಞಾನದಲ್ಲಿ ಗರಿಷ್ಠ ಅಂಕಗಳನ್ನು ಗಳಿಸಿ, ಒಟ್ಟು 4 ಚಿನ್ನದ ಪದಕಗಳೊಂದಿಗೆ ವಿಶ್ವವಿದ್ಯಾಲಯದ ಟಾಪರ್ ಆಗಿ ಹೊರಹೊಮ್ಮಿದ್ದಾರೆ.

ಶೇಷಾದ್ರಿಪುರಂ ಇನ್‌ಸ್ಟಿಟ್ಯೂಟ್ ಆಫ್ ಕಾಮರ್ಸ್ ಮತ್ತು ಮ್ಯಾನೇಜ್‌ಮೆಂಟ್‌ನ ಅಭಿಷೇಕ್ ಶ್ರೀರಾಮ್ ಅವರು ಬಿ.ಕಾಂ ಪದವಿಯಲ್ಲಿ ಹಾಗೂ ಚಿಕ್ಕಬೆಳ್ಳಂದೂರು ಕೃಪಾನಿಧಿ ಕಾಲೇಜ್ ಆಫ್ ಕಾಮರ್ಸ್ ಮತ್ತು ಮ್ಯಾನೇಜ್‌ಮೆಂಟ್‌ನ ಎಸ್.ದಿವ್ಯಶ್ರೀ ಅವರು ಬಿಬಿಎ ಪದವಿಯಲ್ಲಿ ತಲಾ ಮೂರು ಚಿನ್ನದ ಪದಕ ಪಡೆದುಕೊಂಡಿದ್ದಾರೆ. 18 ಕ್ಯಾರೆಟ್‌ನ 1.3 ಗ್ರಾಂ ಚಿನ್ನ, 20 ಗ್ರಾಂ ಬೆಳ್ಳಿ ಹಾಗೂ ₹20 ಸಾವಿರ ನಗದು ನೀಡಲಾಗುತ್ತದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕಿನ ದೊಡ್ಡಸಣ್ಣೆ ಗ್ರಾಮದ ಸ್ನೇಹಾ ಅವರು ಪ್ರಸ್ತುತ ಚಿಕ್ಕಬಳ್ಳಾಪುರದ ಬಿಜಿಎಸ್ ವಿಜ್ಞಾನ ಅಕಾಡೆಮಿ ಮತ್ತು ಸಂಶೋಧನಾ ಕೇಂದ್ರದಲ್ಲಿ ಸಹಾಯಕ ಪ್ರಾಧ್ಯಾಪಕಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ತಂದೆ ತಿಮ್ಮರಾಯಪ್ಪ ಮತ್ತು ತಾಯಿ ಭಾಗ್ಯಮ್ಮ ರೈತರು. ಹೂವು, ತರಕಾರಿ ಬೆಳೆಯುತ್ತಾರೆ.

'ನನ್ನ ಸಾಧನೆಯ ಹಿಂದೆ ವಿಶ್ವವಿದ್ಯಾಲಯದ ಅಧ್ಯಾಪಕರು ಮತ್ತು ಪೋಷಕರ ಪಾತ್ರ ಇದೆ. ನಿತ್ಯ ಗ್ರಾಮದಿಂದ ಕಾಲೇಜಿಗೆ ಪ್ರಯಾಣಿಸುತ್ತಿದ್ದೆ. ಪ್ರಯಾಣದಲ್ಲಿಯೇ ಅರ್ಧ ದಿನ ಕಳೆದು ಹೋಗುತ್ತಿತ್ತು. ಹಾಗಾಗಿ ಬಸ್‌ನಲ್ಲಿಯೇ ನಿದ್ರಿಸುತ್ತಿದ್ದೆ. ಆದರೆ, ವರ್ಷದ ಆರಂಭದಿಂದಲೂ, ಆಯಾ ದಿನದ ಪಾಠಗಳನ್ನು ಅಂದೇ ಪೂರ್ಣಗೊಳಿಸುತ್ತಿದ್ದೆ. ರಸಾಯನವಿಜ್ಞಾನದಲ್ಲಿ ಪಿಎಚ್‌.ಡಿ ಮಾಡಿ, ಸಂಶೋಧನೆಯಲ್ಲಿ ತೊಡಗಿಸಿಕೊಳ್ಳುವ ಉದ್ದೇಶ ಇದೆ. ಪ್ರಾಧ್ಯಾಪಕಿ ಆಗಬೇಕೆಂದುಕೊಂಡಿದ್ದೇನೆ' ಎಂದರು.

ಅಭಿಷೇಕ್ ಅವರು ಬಿ.ಕಾಂನಲ್ಲಿ ಅತಿ ಹೆಚ್ಚು ಅಂಕಗಳನ್ನು ಗಳಿಸಿ 3 ಚಿನ್ನದ ಪದಕಗಳೊಂದಿಗೆ ದ್ವಿತೀಯ ಟಾಪರ್ ಆಗಿದ್ದಾರೆ. ಕೇಂದ್ರ ನಾಗರಿಕ ಸೇವಾ ಅಧಿಕಾರಿಯಾಗುವ ಉದ್ದೇಶ ಹೊಂದಿರುವ ಅವರು, ಸಿವಿಲ್ ಸರ್ವಿಸ್ ಪರೀಕ್ಷೆಯ ತರಬೇತಿಗೆ ಸೇರಿದ್ದಾರೆ.

'ಪ್ರತಿ ವರ್ಷ ಸ್ಪಷ್ಟ ಗುರಿಯೊಂದಿಗೆ ಓದುತ್ತಿದ್ದೆ. ಇದರಿಂದ ಹೆಚ್ಚು ಅಂಕ ಗಳಿಸಲು ಸಾಧ್ಯವಾಯಿತು. ಪೋಷಕರು ಎಂದಿಗೂ ಒತ್ತಡ ಹಾಕಲಿಲ್ಲ. ನನ್ನ ಅಂಕ ಅಥವಾ ರ‍್ಯಾಂಕ್ ಬಗ್ಗೆ ಎಂದಿಗೂ ಕೇಳಲಿಲ್ಲ' ಎಂದು ಅಭಿಷೇಕ್ ಹೇಳಿದರು.

ಪದವಿ ಪ್ರದಾನ ವಿವರ

29,886	7,484	23
ವಿದ್ಯಾರ್ಥಿಗಳು ಸ್ನಾತಕ ವಿಭಾಗ	ವಿದ್ಯಾರ್ಥಿಗಳು ಸ್ನಾತಕೋತ್ತರ ವಿಭಾಗ	ವಿದ್ಯಾರ್ಥಿಗಳು ಪಿಎಚ್‌.ಡಿ

ನಿರ್ಮಲಾನಂದನಾಥ ಸ್ವಾಮೀಜಿ ಸೇರಿ 6 ಮಂದಿಗೆ ಗೌರವ ಡಿ.ಲಿಟ್

ಪ್ರಜಾವಾಣಿ ವಾರ್ತೆ


ನಿರ್ಮಲಾನಂದನಾಥ ಸ್ವಾಮೀಜಿ

ಬೆಂಗಳೂರು: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಇದೇ 7ರಂದು ಬೆಳಿಗ್ಗೆ 11.30ಕ್ಕೆ 12 ಮತ್ತು 13ನೇ ಘಟಿಕೋತ್ಸವವನ್ನು ಜ್ಞಾನಜ್ಯೋತಿ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದು, ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಸೇರಿ ಆರು ವಿದ್ವಾಂಸರಿಗೆ ಗೌರವ ಡಿ.ಲಿಟ್ ಪ್ರದಾನ ಮಾಡಲಾಗುತ್ತದೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕುಲಪತಿ ಡಾ.ಎಸ್. ಅಹಲ್ಯ, 'ಮಹಾಬೋಧಿ ಸೊಸೈಟಿಯ ಬೌದ್ಧ ಭಿಕ್ಕು ಆನಂದ ಥೇರೊ, ವಿದ್ವಾಂಸರಾದ ಪುಷ್ಪಾ ದೀಕ್ಷಿತ್, ವ್ಯಾಸನಕೆರೆ ಪ್ರಭಂಜನಾಚಾರ್ಯ, ಶಿಂಗಪ್ಪ ಎಚ್.ಎಂ. ಹಾಗೂ ಸುಕಾಂತ್ ಕುಮಾರ್ ಸೇನಾಪತಿ ಅವರಿಗೆ ಘಟಿಕೋತ್ಸವದಲ್ಲಿ ಡಿ.ಲಿಟ್ ಪದವಿ ನೀಡಿ ಗೌರವಿಸಲಾಗುತ್ತದೆ. 2023-24 ಮತ್ತು 2024-25ನೇ ಸಾಲಿನ ಒಟ್ಟು 917 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಗುತ್ತದೆ' ಎಂದು ಹೇಳಿದರು.

'ತಲಾ 21 ವಿದ್ಯಾರ್ಥಿಗಳು ನಗದು ಬಹುಮಾನ ಪಡೆದರೆ, ಕ್ರಮವಾಗಿ 26 ಹಾಗೂ 27 ವಿದ್ಯಾರ್ಥಿಗಳು ಚಿನ್ನದ ಪದಕ ಸ್ವೀಕರಿಸಲಿದ್ದಾರೆ. 36 ಅಭ್ಯರ್ಥಿಗಳು ಪಿಎಚ್‌.ಡಿ ಪದವಿ ಪಡೆಯಲಿದ್ದಾರೆ' ಎಂದು ಹೇಳಿದರು.

ಬಡ್ತಿ: ರಾಜ್ಯ ಸರ್ಕಾರಕ್ಕೆ ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಲ್ಲಾ ನ್ಯಾಯಾಧೀಶರ ಸೇವಾ ಹಿರಿತನದ ಅಂತಿಮ ಪಟ್ಟಿಯನ್ನು ಹೈಕೋರ್ಟ್ ಪೂರ್ಣಪೀಠ ಎತ್ತಿಹಿಡಿದಿದೆ. ಭವಿಷ್ಯದಲ್ಲಿ ನ್ಯಾಯಾಂಗ ಅಧಿಕಾರಿಗಳಿಗೆ ಬಡ್ತಿ ನೀಡಲು '4 ಪಾಯಿಂಟ್ ರೋಸ್ಟರ್' ಜಾರಿಗೆ ತರುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

ಏಕಸದಸ್ಯ ನ್ಯಾಯಪೀಠದ ಆದೇಶ ಪ್ರಶ್ನಿಸಿ ಹೈಕೋರ್ಟ್ ರಿಜಿಸ್ಟ್ರಾರ್ ಜನರಲ್ ಮತ್ತು ಬಡ್ತಿ ಪಡೆದ ನ್ಯಾಯಾಧೀಶರು ಸಲ್ಲಿಸಿದ್ದ ಮೇಲ್ಮನವಿಯನ್ನು (ಡಬ್ಲ್ಯೂಎ 1006/2023) ನ್ಯಾಯಮೂರ್ತಿಗಳಾದ ಎಸ್.ಸುನಿಲ್ ದತ್ ಯಾದವ್, ಲಲಿತಾ ಕನ್ನೆಗಂಟಿ ಮತ್ತು ವಿಜಯಕುಮಾರ್ ಎ. ಪಾಟೀಲ್ ಅವರಿದ್ದ ಪೂರ್ಣಪೀಠ ವಿಚಾರಣೆ ನಡೆಸಿ ಈ ಕುರಿತಂತೆ ತೀರ್ಪು ನೀಡಿದೆ.

ಎಲ್‌ಪಿಜಿ ಕೊರತೆ: ಆಟೊ ಚಾಲಕರಿಗೆ ಸಂಕಷ್ಟ

ಪ್ರಜಾವಾಣಿ ವಾರ್ತೆ



ಮೈಸೂರು ರಸ್ತೆಯ ಖಾಸಗಿ ಎಲ್‌ಪಿಜಿ ಅನಿಲ ಸ್ಟೇಷನ್ ಮುಂದೆ 'ನೋ ಸ್ಟಾಕ್' ಫಲಕ ಹಾಕಲಾಗಿದೆ

ಬೆಂಗಳೂರು: ನಗರದಲ್ಲಿ ಆಟೊಗಳಿಗೆ ಎಲ್‌ಪಿಜಿ ವಿತರಣೆಯಲ್ಲಿ ವ್ಯತ್ಯಯವಾಗಿದ್ದು, ದರವೂ ದುಬಾರಿ ಆಗಿರುವುದರಿಂದ ಸಮಸ್ಯೆಯಾಗಿದೆ.

ಎಲ್‌ಪಿಜಿ ಸರಬರಾಜಿನಲ್ಲಿ ಉಂಟಾಗುತ್ತಿರುವ ಗೊಂದಲದಿಂದಾಗಿ ಆಟೊಗಳಿಗೆ ಎಲ್‌ಪಿಜಿ ಪೂರೈಸಲು ಕಂಪನಿಗಳಿಗೂ ಆಗುತ್ತಿಲ್ಲ. ಹಲವು ಕಂಪನಿಗಳ ಅನಿಲ ಸ್ಟೇಷನ್‌ಗಳು ಸೇವೆ ಸ್ಥಗಿತಗೊಳಿಸಿವೆ. ನಾಲ್ಕು ದಿನಗಳಿಂದ ಹಲವು ಸ್ಟೇಷನ್‌ಗಳನ್ನು ಬಂದ್ ಮಾಡಲಾಗಿದೆ. ಇದರಲ್ಲಿ ಖಾಸಗಿ ಅನಿಲ ಕಂಪನಿಗಳ ಸ್ಟೇಷನ್‌ಗಳ ಸಂಖ್ಯೆಯೇ ಹೆಚ್ಚಾಗಿದೆ.

ಹಿಂದೂಸ್ತಾನ್ ಪೆಟ್ರೋಲಿಯಂ, ಭಾರತ್ ಪೆಟ್ರೋಲಿಯಂಗೆ ಸೇರಿದ ಅನಿಲ ಸ್ಟೇಷನ್‌ಗಳ ಮುಂಭಾಗ ಆಟೊಗಳು ಸರತಿ ಸಾಲಿನಲ್ಲಿ ನಿಂತಿರುವುದು ಕಂಡು ಬಂದಿತು. ಕೆಲವು ಕಡೆಗಳಲ್ಲಿ ಮೂರು ಕಿ.ಮೀ.ವರೆಗೂ ಆಟೊಗಳು ಸರತಿಯಲ್ಲಿ ನಿಂತಿದ್ದವು.

ಸರಬರಾಜಿನಲ್ಲಿ ವ್ಯತ್ಯಯವಾದಾಗಿನಿಂದ ಆಟೊ ಎಲ್‌ಪಿಜಿ ದರದಲ್ಲಿ ಹೆಚ್ಚಳವಾಗುತ್ತಲೇ ಇದೆ. ಪ್ರತಿ ಕೆಜಿಗೆ ಕೆಲವೆಡೆ ₹85 ರಿಂದ ₹120ರವರೆಗೂ ಮಾರಾಟ ಮಾಡುತ್ತಿರುವ ದೂರುಗಳು ಕೇಳಿ ಬಂದಿವೆ. ಸರ್ಕಾರಿ ಸ್ವಾಮ್ಯದ ಕಂಪನಿಗಳ ದರದಲ್ಲಿ ಕಡಿಮೆ ಇದ್ದರೆ, ಖಾಸಗಿ ಕಂಪನಿಗಳಲ್ಲಿ ದುಬಾರಿ ಆಗಿದೆ.

'ಮೂರು ದಿನಗಳಿಂದ ದಾಸ್ತಾನು ಬಾರದೇ ವಿತರಣೆ ಕಷ್ಟವಾಗಿದೆ. ಪರಿಸ್ಥಿತಿ ಚೆನ್ನಾಗಿ ಇದ್ದಾಗ 4 ಟನ್ ಇತ್ತು. ಈಗ 2 ಟನ್ ಸರಬರಾಜು ಆದರೆ ಹೆಚ್ಚು. ಯಾವಾಗ ಸರಿಯಾಗುತ್ತದೆಯೋ ಗೊತ್ತಿಲ್ಲ' ಎಂದು ಮಾರಾಟ ಸಂಸ್ಥೆಯ ವ್ಯವಸ್ಥಾಪಕ ಚೇತನ್‌ಗೌಡ ತಿಳಿಸಿದರು.

'ಎರಡು ದಿನದ ಹಿಂದೆ ಅನಿಲ ತುಂಬಿಸಿಕೊಂಡು ಓಡಿಸುತ್ತಿದ್ದೇನೆ. ಶನಿವಾರದ ಹೊತ್ತಿಗೆ ತುಂಬಿಸಲೇಬೇಕು. ಈಗಲೇ ಪರಿಸ್ಥಿತಿ ನೋಡಿದರೆ ಭಯವಾಗುತ್ತದೆ. ಎಲ್‌ಪಿಜಿ ಸಿಗುತ್ತದೋ ಇಲ್ಲವೋ ನೋಡಬೇಕು. ಇಲ್ಲದೇ ಇದ್ದರೆ ಆಟೊ ಓಡಿಸುವುದು ಕಷ್ಟವಾಗಲಿದೆ' ಎಂದು ಚಾಲಕರಾದ ಕೃಷ್ಣಸ್ವಾಮಿ, ಶರವಣ ಹೇಳಿದರು.

ಔಷಧ ದರ ಹೆಚ್ಚಳಕ್ಕೆ ಖಂಡನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಣಿಜ್ಯ ಬಳಕೆಯ ಅಡುಗೆ ಅನಿಲ ಮತ್ತು ಜೀವ ರಕ್ಷಕ ಔಷಧಗಳ ಬೆಲೆ ಹೆಚ್ಚಿಸಿರುವ ಕೇಂದ್ರ ಸರ್ಕಾರದ ನಿರ್ಧಾರವನ್ನು ಎಸ್‌ಯುಸಿಐ (ಕಮ್ಯುನಿಸ್ಟ್) ಪಕ್ಷದ ರಾಜ್ಯ ಸಮಿತಿ ಖಂಡಿಸಿದೆ.

'ಕೇಂದ್ರದ ಸರ್ಕಾರ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ದೇಶದ ಜನರನ್ನು ರಕ್ಷಿಸುವ ಬದಲು, 19 ಕೆ.ಜಿ ತೂಕದ ವಾಣಿಜ್ಯ ಬಳಕೆಯ ಗ್ಯಾಸ್ ಸಿಲಿಂಡರ್ ಬೆಲೆಯನ್ನು 25 ದಿನಗಳ ಅಂತರದಲ್ಲಿ ಮತ್ತೆ ₹218 ಹೆಚ್ಚಿಸಿದೆ. ಏಪ್ರಿಲ್ 1 ರಿಂದ ಇದರ ಮಾರುಕಟ್ಟೆ ಬೆಲೆ ₹2208 ಆಗಿದೆ. ಇದಕ್ಕೂ ಮುನ್ನ, 25 ದಿನಗಳ ಹಿಂದೆಯಷ್ಟೇ ಕೇಂದ್ರ ಸರ್ಕಾರವು ಗೃಹಬಳಕೆಯ ಎಲ್‌ಪಿಜಿ ಸಿಲಿಂಡರ್ ಬೆಲೆಯನ್ನು ₹60, ವಾಣಿಜ್ಯ ಸಿಲಿಂಡರ್ ಬೆಲೆಯನ್ನು ₹114.50 ಹೆಚ್ಚಿಸಿತ್ತು' ಎಂದು ಎಸ್‌ಯುಸಿಐ ರಾಜ್ಯ ಕಾರ್ಯದರ್ಶಿ ಕೆ. ಉಮಾ ಆರೋಪಿಸಿದ್ದಾರೆ.

700 ರಿಂದ 900 ಔಷಧಗಳ ಬೆಲೆಯನ್ನೂ ಹೆಚ್ಚಿಸಿದೆ. ಇದು ಸಂಕಷ್ಟದಲ್ಲಿರುವ ಜನರಿಗೆ ದೊಡ್ಡ ಹೊಡೆತ ನೀಡಲಿದೆ. ಬಹುತೇಕ ಎಲ್ಲ ಜೀವನಾವಶ್ಯಕ ವಸ್ತುಗಳ ಬೆಲೆ ಏರಿಕೆಯ ಹೊರೆಯಿಂದ ಸಾಮಾನ್ಯ ಜನರು ತತ್ತರಿಸುತ್ತಿದ್ದಾರೆ. ಕೂಡಲೇ ಬೆಲೆ ಏರಿಕೆಯನ್ನು ಹಿಂಪಡೆಯಬೇಕು ಎಂದು ಮನವಿ ಮಾಡಿದ್ದಾರೆ.

ಎಫ್‌ಕೆಸಿಸಿಐ ಆಯೋಜನೆ • ಕೃಷಿ ನವೋದ್ಯಮಗಳು ಭಾಗಿ

24ರಿಂದ ಕೃಷಿ ತಂತ್ರಜ್ಞಾನ ಶೃಂಗಸಭೆ

ಪ್ರಜಾವಾಣಿ ವಾರ್ತೆ


'ಅಂತರರಾಷ್ಟ್ರೀಯ ಕೃಷಿ ತಂತ್ರಜ್ಞಾನ ಶೃಂಗಸಭೆ'ಯ ಮಾಹಿತಿ ಪತ್ರವನ್ನು ಬಿಡುಗಡೆ ಮಾಡಲಾಯಿತು. ಎಫ್‌ಕೆಸಿಸಿಐ ಪ್ರಧಾನ ಕಾರ್ಯದರ್ಶಿ ಲೋಕರಾಜ್, ಬೆಂಗಳೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ನಿರ್ದೇಶಕ ವೈ.ಎನ್. ಶಿವಲಿಂಗಯ್ಯ, ಕುಲಪತಿ ಎಸ್.ವಿ.ಸುರೇಶ್, ಎಫ್‌ಕೆಸಿಸಿಐ ಅಧ್ಯಕ್ಷೆ ಉಮಾ ರೆಡ್ಡಿ, ಹಿರಿಯ ಉಪಾಧ್ಯಕ್ಷ ಟಿ. ಸಾಯಿರಾಂ ಪ್ರಸಾದ್ ಉಪಸ್ಥಿತರಿದ್ದರು

ಬೆಂಗಳೂರು: ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ ವತಿಯಿಂದ (ಎಫ್‌ಕೆಸಿಸಿಐ) 'ಅಂತರರಾಷ್ಟ್ರೀಯ ಕೃಷಿ ತಂತ್ರಜ್ಞಾನ ಶೃಂಗಸಭೆ-2026' ಅನ್ನು ಏಪ್ರಿಲ್ 24ರಿಂದ 26ರವರೆಗೆ ನಗರದ ಅರಮನೆ ಮೈದಾನದ ತ್ರಿಪುರವಾಸಿನಿಯಲ್ಲಿ ಆಯೋಜಿಸಲಾಗಿದೆ.

ಈ ಶೃಂಗಸಭೆಯು ರೈತರು, ಕೃಷಿ ಉದ್ಯಮಿಗಳು, ನವೋದ್ಯಮಗಳು ಮತ್ತು ಖರೀದಿದಾರರನ್ನು ಒಂದೇ ವೇದಿಕೆಯಲ್ಲಿ ಸೇರಿಸಲಿದೆ. ಕೃಷಿ ಕ್ಷೇತ್ರದಲ್ಲಿನ ಹೊಸ ತಂತ್ರಜ್ಞಾನಗಳು, ಆವಿಷ್ಕಾರಗಳು, ಉಪಕರಣಗಳು, ಆಹಾರ ಸಂಸ್ಕರಣಾ ಕ್ಷೇತ್ರದಲ್ಲಿನ ವ್ಯಾಪಾರ ಅವಕಾಶಗಳು, ಹೂಡಿಕೆ ಬಗ್ಗೆ ರೈತರು ನೇರವಾಗಿ ತಂತ್ರಜ್ಞಾನ ಪೂರೈಕೆದಾರರು, ಉದ್ಯಮಗಳು ಮತ್ತು ಸರ್ಕಾರದ ಪ್ರತಿನಿಧಿಗಳ ಜೊತೆ ಮಾತುಕತೆ ನಡೆಸಬಹುದು ಎಂದು ಎಫ್‌ಕೆಸಿಸಿಐ ಅಧ್ಯಕ್ಷೆ ಉಮಾ ರೆಡ್ಡಿ ಅವರು ಪತ್ರಿಕಾಗೋಷ್ಠಿಯಲ್ಲಿ ಶುಕ್ರವಾರ ತಿಳಿಸಿದರು.


ಬೆಂಗಳೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಕರ್ನಾಟಕ ರಾಜ್ಯ ಕೃಷಿ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳ ಸಹಯೋಗದೊಂದಿಗೆ ಶೃಂಗಸಭೆ ಏರ್ಪಡಿಸಲಾಗಿದೆ. ಮೂರು ದಿನವೂ ವಿಚಾರ ಸಂಕಿರಣಗಳು ನಡೆಯಲಿದ್ದು, 100ಕ್ಕೂ ಅಧಿಕ ಕೃಷಿ ನವೋದ್ಯಮಗಳು ಭಾಗವಹಿಸುವ ನಿರೀಕ್ಷೆ ಇದೆ. 200 ಮಳಿಗೆಗಳು ಇರಲಿದ್ದು, ಶೇ 80ರಷ್ಟು ಮಳಿಗೆಗಳನ್ನು ಕೃಷಿಕರಿಗೆ ಮೀಸಲಿಸಲಾಗುತ್ತದೆ ಎಂದರು.

ಎಫ್‌ಕೆಸಿಸಿಐನಲ್ಲಿನ ಉದ್ಯಮಿಗಳಿಂದ ಕೃಷಿ ಉಪಕರಣಗಳನ್ನು ಸಹಾಯಧನದಲ್ಲಿ ರೈತರಿಗೆ ನೀಡುವ ಕುರಿತು ಮಾತುಕತೆ ನಡೆಸಲಾಗುವುದು ಎಂದು ಹೇಳಿದರು.

ಬೆಂಗಳೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಎಸ್.ವಿ. ಸುರೇಶ್ ಮಾತನಾಡಿ, 'ರೈತರಿಗೆ ಹೊಸ ತಂತ್ರಜ್ಞಾನವನ್ನು ತಲುಪಿಸಲು ಎಫ್‌ಕೆಸಿಸಿಐ ಜೊತೆ ಕೈಜೋಡಿಸಿದ್ದೇವೆ. ಕೃಷಿ ಕ್ಷೇತ್ರದಲ್ಲಿ ಕಾರ್ಮಿಕರ ಸಂಖ್ಯೆ ಇಳಿಕೆಯಾಗಿದೆ. ಕೃಷಿಯನ್ನು ಲಾಭದಾಯಕವಾಗಿಸಲು ಕೃಷಿಯನ್ನು ಯಾಂತ್ರೀಕರಣಗೊಳಿಸಬೇಕಾದ ಅಗತ್ಯ ಇದೆ' ಎಂದರು.

ಸಂಗೀತ ಸಂಜೆ 11ರಂದು

ಪ್ರಜಾವಾಣಿ ವಾರ್ತೆ


ಸಮನ್ವಿತಾ ಶರ್ಮಾ

ಬೆಂಗಳೂರು: ಅನುರಾಗ್ಸ್ ಸಂಗೀತ ಗುರುಕುಲ ಸಂಸ್ಥೆಯು ಇದೇ 11ರಂದು ಸಂಜೆ 5.30ಕ್ಕೆ ಜೆ.ಸಿ.ರಸ್ತೆಯಲ್ಲಿರುವ ಸರ್ ಪುಟ್ಟಣ್ಣ ಚೆಟ್ಟಿ ಪುರಭವನದಲ್ಲಿ (ಟೌನ್ ಹಾಲ್) ಕನ್ನಡ ಮತ್ತು ಹಿಂದಿ ಗಜಲ್ ಗಾಯನದ 'ಸಂಗೀತ ಸಂಜೆ' ಕಾರ್ಯಕ್ರಮ ಹಮ್ಮಿಕೊಂಡಿದೆ.

ಇದು 'ಪ್ರಜಾವಾಣಿ' ಮಾಧ್ಯಮ ಸಹಯೋಗದಲ್ಲಿ ನಡೆಯಲಿದೆ. ಗಾಯಕರಾದ ಸಮನ್ವಿತಾ ಶರ್ಮಾ, ಅನುರಾಗ್ ಗದ್ದಿ, ಶರಣ್ ಚೌಧರಿ ಅವರು ಈ ಸಂಗೀತ ಸಂಜೆಯಲ್ಲಿ ಭಾಗವಹಿಸಲಿದ್ದಾರೆ. ತಬಲಾದಲ್ಲಿ ವೇಣುಗೋಪಾಲ್ ರಾಜು, ಪಿಟೀಲ್‌ನಲ್ಲಿ ರಂಜನ್ ಬ್ಯೂರ, ಕೀಬೋರ್ಡ್‌ನಲ್ಲಿ ದೀಪು ಹಾಗೂ ರಿದಮ್ ಪ್ಯಾಡ್‌ನಲ್ಲಿ ಸೆಲೆಸ್ಟಿನ್ ಜೆರಾಲ್ಡ್ ಸಾಥ್ ನೀಡಲಿದ್ದಾರೆ.

ಟಿಕೆಟ್‌ಗಳು ಬುಕ್ ಮೈ ಶೋದಲ್ಲಿ ಲಭ್ಯವಿದೆ. ಪ್ರಾಯೋಜಕತ್ವ ಮತ್ತು ಪಾಸ್‌ಗಳಿಗೆ ಮೊ.ಸಂಖ್ಯೆ 9743752223 ಅಥವಾ 9036790600ಗೆ ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ದ್ವಿಭಾಷಾ ನೀತಿ ಅನುಷ್ಠಾನಕ್ಕೆ ಎಬಿವಿಪಿ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ದ್ವಿಭಾಷಾ ನೀತಿಯನ್ನು ಅನುಷ್ಠಾನ ಮಾಡಲು ರಾಜ್ಯ ಸರ್ಕಾರ ಮುಂದಾಗಿರುವುದು ಖಂಡನೀಯ ಎಂದು ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಎಬಿವಿಪಿ) ತಿಳಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎಬಿವಿಪಿ ಪ್ರಾಂತ ಕಾರ್ಯದರ್ಶಿ ಗೋಪಿ ರಂಗಸ್ವಾಮಿ, 'ಪ್ರಸ್ತುತ ಜಾರಿಯಲ್ಲಿರುವಂತೆ ಕನ್ನಡ, ಇಂಗ್ಲಿಷ್, ಹಿಂದಿ, ತಮಿಳು, ಉರ್ದು, ಮರಾಠಿ ಮೊದಲಾದವನ್ನು ತೃತೀಯ ಭಾಷೆಯಾಗಿ ಮುಂದುವರಿಸಬೇಕು. ತ್ರಿಭಾಷಾ ನೀತಿಯು ದೇಶವನ್ನು ಒಂದುಗೂಡಿಸುವ ಭಾವನಾತ್ಮಕ ವಿಚಾರವಾಗಿದೆ' ಎಂದು ಹೇಳಿದರು.

'ತ್ರಿಭಾಷಾ ಸೂತ್ರ ಎಂಬುದು ಯಾವುದೇ ಭಾಷೆಯ ಹೇರಿಕೆಗಾಗಿ ಅಥವಾ ಯಾವುದೋ ಹೋರಾಟದ ಫಲವಾಗಿ ಬಂದಿಲ್ಲ. ಶಿಕ್ಷಣ ತಜ್ಞರ ಅನೇಕ ವರ್ಷಗಳ ಚಿಂತನೆಯಿಂದ ಬಂದಿದೆ. ಇದು ಮಕ್ಕಳ ಪ್ರತಿಭೆಯನ್ನು ಅನಾವರಣ ಮಾಡುವುದಕ್ಕೆ ಈ ನೀತಿ ಸಹಾಯಕವಾಗಿದೆ' ಎಂದರು.

'ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಸಂದರ್ಭದಲ್ಲಿ ರಾಜ್ಯ ಸರ್ಕಾರವು ವಿದ್ಯಾರ್ಥಿಗಳಲ್ಲಿ ದ್ವಿಭಾಷಾ ನೀತಿ ಎಂಬ ಗೊಂದಲ ಸೃಷ್ಟಿಸಿದೆ. ಈ ನೀತಿಯನ್ನು ಘೋಷಿಸುವ ಮೊದಲು ಸಾರ್ವಜನಿಕ ಚರ್ಚೆಗೆ ಒಳಪಡಿಸಬೇಕಿತ್ತು. ಅದನ್ನು ಬಿಟ್ಟು ಯಾರದೋ ಒತ್ತಡಕ್ಕೆ ಮಣಿದು, ಪರೀಕ್ಷೆಯ ಸಂದರ್ಭದಲ್ಲಿ ದ್ವಿಭಾಷಾ ನೀತಿಯನ್ನು ಅನುಷ್ಠಾನ ಮಾಡಲು ಹೊರಟಿರುವುದು ಸರಿಯಲ್ಲ' ಎಂದು ಹೇಳಿದರು.

ನೇರ ವೆಚ್ಚಕ್ಕೆ ಅವಕಾಶವಿಲ್ಲದ ಜಿಬಿಎ ಬಜೆಟ್

ಐದು ನಗರ ಪಾಲಿಕೆಗಳ ಬಜೆಟ್ ಮಂಡನೆಗೆ ಮುನ್ನವೇ ಜಿಬಿಎ ಆಯವ್ಯಯಕ್ಕೆ ಅನುಮೋದನೆ

• ಆರ್.ಮಂಜುನಾಥ್

ಮುಖ್ಯಾಂಶಗಳು

- ಜಿಬಿಎ ಆಡಳಿತ ಮಂಡಳಿ ಸಭೆಯ ಅನುಮೋದನೆ ಪಡೆಯದ ಬಜೆಟ್
- ಸಿಬ್ಬಂದಿ ವೇತನ, ಆಡಳಿತ ವೆಚ್ಚಕ್ಕೆ ಹಣ ಬಿಡುಗಡೆಗೆ ತಡೆ

ಬೆಂಗಳೂರು: ಅನುದಾನವನ್ನು ನೇರವಾಗಿ ಖರ್ಚು ಮಾಡುವ ಅಧಿಕಾರವನ್ನು ಹೊಂದಿಲ್ಲದ ಜಿಬಿಎ ಬಜೆಟ್‌ಗೆ, ಐದು ನಗರ ಪಾಲಿಕೆಗಳ ಬಜೆಟ್ ಮಂಡನೆಗಿಂತ ಒಂದು ವಾರ ಮೊದಲೇ ನಡೆದಿದ್ದ ಜಿಬಿಎ ಕಾರ್ಯಕಾರಿ ಸಮಿತಿಯ ಮೊದಲನೇ ಸಭೆ ಅನುಮೋದನೆ ನೀಡಿದೆ. ಈ ಬಜೆಟ್‌ಗೆ ಜಿಬಿಎ ಆಡಳಿತ ಮಂಡಳಿ ಸಭೆಯ ಅನುಮೋದನೆ ಅಗತ್ಯವಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಜಿಬಿಎ ಆಡಳಿತ ಮಂಡಳಿಯ ಮೊದಲ ಸಭೆ 2025ರ ಅಕ್ಟೋಬರ್ 10ರಂದು ನಡೆದಿತ್ತು. ನಂತರ, ಮೂರು ತಿಂಗಳಿಗೊಮ್ಮೆ ನಡೆಯಬೇಕಾಗಿದ್ದ ಸಭೆ ಆರು ತಿಂಗಳಾದರೂ ನಡೆದಿಲ್ಲ. ಇದೀಗ ಆರ್ಥಿಕ ವರ್ಷ ಮುಗಿದಿರುವುದರಿಂದ, ಜಿಬಿಎ ಕಾರ್ಯಕಾರಿ ಸಮಿತಿ ಅನುಮೋದಿಸಿರುವ ಬಜೆಟ್‌ಗೆ ಮಾನ್ಯತೆ ಇದೆಯೇ, ಇಲ್ಲವೇ ಎಂಬ ಸಂಶಯ ವ್ಯಕ್ತವಾಗಿದೆ.

ಜಿಬಿಎ ಆಡಳಿತ ಮಂಡಳಿಯ ಸಭೆಯ ಅನುಮೋದನೆ ಇಲ್ಲದೆ, ಜಿಬಿಎ ಹೇಗೆ ಹಣ ವೆಚ್ಚ ಮಾಡುತ್ತದೆ, ಸಿಬ್ಬಂದಿಗೆ ಹೇಗೆ ವೇತನ ಪಾವತಿ ಮಾಡುತ್ತದೆ ಎಂಬುದು ಅಧಿಕಾರಿಗಳಲ್ಲೇ ಗೊಂದಲ ಮೂಡಿದೆ.

ಬೆಂಗಳೂರು ನಗರ ಉಸ್ತುವಾರಿ ಸಚಿವ ಡಿ.ಕೆ. ಶಿವಕುಮಾರ್ ಅಧ್ಯಕ್ಷರಾಗಿರುವ ಜಿಬಿಎ ಕಾರ್ಯಕಾರಿ ಸಮಿತಿ ಮೊದಲ ಸಭೆ, ಮಾರ್ಚ್ 20ರಂದು ನಡೆದಿದ್ದು, 2026–27ನೇ ಸಾಲಿನ ₹1,767.91 ಕೋಟಿ ಗಾತ್ರದ ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ಬಜೆಟ್‌ಗೆ ಅನುಮೋದನೆ ದೊರೆತಿದೆ. ಈ ಬಜೆಟ್ ಅನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮಂಡಳಿ ಸಭೆಯ ಮುಂದೆಯೂ ಮಂಡಿಸಿ ಅನುಮೋದನೆ ಪಡೆಯಬೇಕು ಎಂದೂ ಕಾರ್ಯಕಾರಿ ಸಮಿತಿ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಗಿದೆ.

ವೇತನ ಭತ್ಯೆ ಹಾಗೂ ಕಚೇರಿ ವೆಚ್ಚಗಳನ್ನು ಹೊರತುಪಡಿಸಿ ಉಳಿದ ಲೆಕ್ಕ ಶೀರ್ಷಿಕೆಗಳಲ್ಲಿ ಅನುದಾನವನ್ನು ನೇರವಾಗಿ ವೆಚ್ಚ ಮಾಡುವ ಅಧಿಕಾರ ಜಿಬಿಎ ಅಧಿಕಾರಿಗಳಿಗೆ ಇಲ್ಲ. ಇಲಾಖಾ ಮುಖ್ಯಸ್ಥರು ಉಳಿದ ಎಲ್ಲ ಕಾಮಗಾರಿಗಳು, ಇತರೆ ವೆಚ್ಚಗಳಿಗೆ ಮುಖ್ಯ ಆಯುಕ್ತರು, ಕಾರ್ಯಕಾರಿ ಸಮಿತಿ ಅಥವಾ ಪ್ರಾಧಿಕಾರದ ಸಭೆಯ ನಿರ್ದಿಷ್ಟ ಮಂಜೂರಾತಿ ಪಡೆದ ನಂತರವೇ ವೆಚ್ಚಗಳನ್ನು ಭರಿಸಬೇಕು. ಇಲಾಖಾವಾರು, ಲೆಕ್ಕ ಶೀರ್ಷಿಕೆವಾರು ಬಿಲ್‌ಗಳ ಜ್ಯೇಷ್ಠತೆ ಆಧಾರದಲ್ಲಿ ಪಾವತಿಸಬೇಕು. ಬಟವಾಡೆ ಅಧಿಕಾರಿಗಳು ವೆಚ್ಚವನ್ನು ಭರಿಸುವ ಮುನ್ನ ಎಲ್ಲ ನಿಯಮಗಳನ್ನು ಪಾಲಿಸುವುದು ಕಡ್ಡಾಯವಾಗಿದೆ ಎಂಬ ವಿಶೇಷ ಸೂಚನೆ ಮೇರೆಗೆ ಬಜೆಟ್‌ಗೆ ಸಮ್ಮತಿಸಲಾಗಿದೆ.

ಬಿಬಿಎಂಪಿ ಬ್ಯಾಂಕ್ ಖಾತೆಗಳು ಹಾಗೂ ರಾಜ್ಯ ಸರ್ಕಾರದ ಅನುದಾನಗಳು ಜಿಬಿಎ ಖಾತೆಯಲ್ಲೇ 2025–26ನೇ ಸಾಲಿನಲ್ಲಿ ಜಮೆ ಆಗುತ್ತಿದ್ದವು. ಹೀಗಾಗಿ, ₹389 ಕೋಟಿಗಳ ಪ್ರಾರಂಭಿಕ ಹಣದಿಂದ ಜಿಬಿಎ ಆಯವ್ಯಯ ಆರಂಭವಾಗಿದೆ. ಬ್ಯಾಂಕ್ ಠೇವಣಿಯಿಂದಲೇ ₹4.75 ಕೋಟಿ ಲಭ್ಯವಾಗಲಿದ್ದು, ಮೇಲ್ವಿಚಾರಣೆ ಶುಲ್ಕವಾಗಿ ₹5 ಕೋಟಿ, ನಗರ ಯೋಜನೆಯಲ್ಲಿ ಮೇಲ್ವಿಚಾರಣೆ ಶುಲ್ಕವಾಗಿ ₹10 ಕೋಟಿ, ಕಟ್ಟಡ ನಿರ್ಮಾಣ ಅಭಿವೃದ್ಧಿ ಶುಲ್ಕ ₹17 ಕೋಟಿ, ಕೆರೆಗಳ ಪುನರುಜ್ಜೀವನ ಶುಲ್ಕ ₹2.65 ಕೋಟಿ ಹಾಗೂ ಇತರೆ ಆದಾಯವಾಗಿ ₹5 ಕೋಟಿ ಸ್ವೀಕೃತಿಯಾಗಲಿದೆ.

₹738 ಕೋಟಿ ವಿಪತ್ತು ಪರಿಹಾರ, ವಿಶ್ವಬ್ಯಾಂಕ್ ನೆರವು

ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿಯನ್ನು ಕಳೆದ ಸಾಲಿನಲ್ಲಿ ಶೂನ್ಯವಾಗಿರಿಸಿದ್ದ ಜಿಬಿಎ, ಈ ಸಾಲಿನಲ್ಲಿ ₹238.50 ಕೋಟಿ ನಿರೀಕ್ಷಿಸಿದೆ. ವಿಶ್ವಬ್ಯಾಂಕ್ ನೆರವಿನ ಯೋಜನೆಗೆ ₹500 ಕೋಟಿಯನ್ನು ನೇರವಾಗಿ ಪಡೆಯಲಿದೆ.

ವೇತನ, ಕಚೇರಿ ವೆಚ್ಚ ಮತ್ತು ನಿರ್ವಹಣೆಗೆ ರಾಜ್ಯ ಸರ್ಕಾರದಿಂದ ₹30 ಕೋಟಿ ಪಡೆಯಲಿರುವ ಜಿಬಿಎಗೆ, ಪಿಂಚಣಿ ಮತ್ತು ನಿವೃತ್ತಿ ಸೌಲಭ್ಯ ಪಾವತಿಗೆ ಐದು ನಗರ ಪಾಲಿಕೆಗಳಿಂದ ₹375 ಕೋಟಿ ಅನುದಾನ ಲಭ್ಯವಾಗಲಿದೆ. ಬ್ರಾಂಡ್ ಬೆಂಗಳೂರು–ಆರೋಗ್ಯ ಬೆಂಗಳೂರಿಗೆ ಐದು ನಗರ ಪಾಲಿಕೆಗಳಿಂದ ₹175 ಕೋಟಿ ಅನುದಾನ ಪಡೆಯಲಿದೆ.

ನೀರು ಸರಬರಾಜು ಯೋಜನೆ, ಅಭಿವೃದ್ಧಿ ಸರ್‌ಚಾರ್ಜ್‌ನಿಂದ ₹1.82 ಕೋಟಿ, ಹೊರ ವರ್ತುಲ ರಸ್ತೆಯ ನಿರ್ಮಾಣ ಅಭಿವೃದ್ಧಿ ಸರ್‌ಚಾರ್ಜ್ ₹2.14 ಕೋಟಿ, ಕೊಳೆಗೇರಿ ಸುಧಾರಣೆ– ಅಭಿವೃದ್ಧಿ ಸರ್‌ಚಾರ್ಜ್ ₹91 ಲಕ್ಷ, ತ್ವರಿತ ಸಾರಿಗೆ ವ್ಯವಸ್ಥೆ ಅಭಿವೃದ್ಧಿ ಸರ್‌ಚಾರ್ಜ್ ₹10.74 ಕೋಟಿ ಸ್ವೀಕೃತಿಯಾಗಲಿದೆ.

2026-27ರ ಜಿಬಿಎ ಬಜೆಟ್

₹389.20 ಕೋಟಿ ಪ್ರಾರಂಭಿಕ ಶಿಲ್ಕು	₹1,378.71 ಕೋಟಿ ಸ್ವೀಕೃತಿ
₹1,767.55 ಕೋಟಿ ಪಾವತಿ	₹36.90 ಲಕ್ಷ ಉಳಿತಾಯ

ಗ್ರೇಟರ್ ಬೆಂಗಳೂರು ಪ್ರಾಧಿಕಾರ / Greater Bengaluru Authority

ವೆಚ್ಚ

- ₹47 ಕೋಟಿ: ಸಿಬ್ಬಂದಿ ವೆಚ್ಚ
- ₹425 ಕೋಟಿ: ಪಿಂಚಣಿ, ನಿವೃತ್ತ ಸೌಲಭ್ಯ
- ₹51.25 ಕೋಟಿ: ಸಾಮಾನ್ಯ ಆಡಳಿತ ವೆಚ್ಚ
- ₹39.50 ಕೋಟಿ: ನಿರ್ವಹಣೆ ವೆಚ್ಚ
- ₹4.25 ಕೋಟಿ: ದುರಸ್ತಿ–ನಿರ್ವಹಣೆ
- ₹1,074.94 ಕೋಟಿ: ರಾಜ್ಯ ಸರ್ಕಾರ ಮತ್ತು ಇತರೆ ಅನುದಾನದ ಕಾಮಗಾರಿ

ಕಾರ್ಯಕಾರಿ ಸಮಿತಿ ಸಮ್ಮತಿಸಿದ ವಿಷಯಗಳು

- ಉತ್ತರ– ದಕ್ಷಿಣ ಸುರಂಗ ರಸ್ತೆಯ ₹17,780 ಕೋಟಿ ಯೋಜನೆಯ ಆರ್ಥಿಕ ಬಿಡ್ ಅನ್ನು ತಜ್ಞರ ಸಮಿತಿ ಮೌಲ್ಯಮಾಪನ ಮಾಡುತ್ತಿದೆ. ಪೂರ್ವ–ಪಶ್ಚಿಮ ಸುರಂಗ ರಸ್ತೆಯ ₹20 ಸಾವಿರ ಕೋಟಿಯ ಕಾಮಗಾರಿಗೆ ವಿಸ್ತೃತ ಯೋಜನಾ ವರದಿ ಸಿದ್ಧಪಡಿಸಲಾಗುತ್ತಿದ್ದು, ಟೆಂಡರ್ ಪ್ರಕ್ರಿಯೆ ಅಂತಿಮಗೊಳಿಸಿ ಸರ್ಕಾರಕ್ಕೆ ಸಲ್ಲಿಸಬೇಕು.
- 13 ಎಲಿವೇಟೆಡ್ ಕಾಮಗಾರಿಗಳನ್ನು ₹11,801.08 ಕೋಟಿ ವೆಚ್ಚದಲ್ಲಿ ಕೈಗೊಳ್ಳಲಾಗುತ್ತಿದ್ದು, ಇದರಲ್ಲಿ ಭೂಸ್ವಾಧೀನಕ್ಕೆ ಐದು ನಗರ ಪಾಲಿಕೆಗಳಿಂದ ₹4,072.27 ಕೋಟಿ ಪಡೆಯಬೇಕು. ಬಾಕಿ ಮೊತ್ತ ₹7,728.5 ಕೋಟಿಯನ್ನು ಸರ್ಕಾರದ ಅನುದಾನದಲ್ಲಿ ಬಳಸಿಕೊಳ್ಳಬೇಕು.
- ಬೆಂಗಳೂರು ಉತ್ತರ ನಗರ ಪಾಲಿಕೆ ವ್ಯಾಪ್ತಿಯ 44 ಕಿ.ಮೀ ಉದ್ದದ ಹೆಣ್ಣೂರು– ನಾಗವಾರ ಎಲಿವೇಟೆಡ್ ಯೋಜನೆಯ ಪ್ರಸ್ತಾವವನ್ನು ಪ್ರತ್ಯೇಕವಾಗಿ ಸರ್ಕಾರಕ್ಕೆ ಸಲ್ಲಿಸಬೇಕು.
- ರಾಜಕಾಲುವೆ ಬಫರ್ ರಸ್ತೆಗಳನ್ನು ನಗರ ಅಭಿವೃದ್ಧಿ ಯೋಜನೆಯ (ಸಿಡಿಪಿ) ಭಾಗವಾಗಿ ಸೇರಿಸಿಕೊಂಡು, ಇವುಗಳನ್ನು ಮುಖ್ಯ ರಸ್ತೆ/ ಸಿಡಿಪಿ ರಸ್ತೆ ಎಂದು ಪರಿವರ್ತಿಸಲು ತೀರ್ಮಾನಿಸಲಾಯಿತು. ಈ ರಸ್ತೆಗಳಿಗಾಗಿ ಸುತ್ತಮುತ್ತಲಿನ ಆಸ್ತಿಗಳಿಗೆ ಮೂರನೇ ಒಂದು ಭಾಗ ಅಭಿವೃದ್ಧಿ ಶುಲ್ಕ ವಿಧಿಸುವುದಕ್ಕಾಗಿ ನಿಯಮ ರೂಪಿಸಲು ನಿರ್ಧರಿಸಲಾಯಿತು.
- ಐದು ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಅಗ್ನಿಶಾಮಕ ಘಟಕಗಳಿಗೆ ನಾಗರಿಕ ಸೌಲಭ್ಯ (ಸಿಎ) ನಿವೇಶನಗಳನ್ನು ಹಸ್ತಾಂತರಿಸಲು ಬಿಡಿಎ ಆಯುಕ್ತರ ಸಮ್ಮತಿ.
- ಗ್ರೇಟರ್ ಬೆಂಗಳೂರು ಸ್ಥಳೀಯ ಯೋಜನಾ ಪ್ರದೇಶಕ್ಕೆ 'ಮಾಸ್ಟರ್ ಪ್ಲಾನ್' ತಯಾರಿಸಲು ವೇಳಾಪಟ್ಟಿ ನಿಗದಿ. 2026ರ ಫೆಬ್ರುವರಿ 16ರಂದು ಕಾರ್ಯಾದೇಶ ನೀಡಿ, 2027ರ ಮಾರ್ಚ್ 15ಕ್ಕೆ ಕರಡು ಸಿದ್ಧಪಡಿಸಿ, ಸರ್ಕಾರಕ್ಕೆ ಸಲ್ಲಿಸಬೇಕು.
- ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ವಿಧಿಸಲಾಗುತ್ತಿದ್ದ ವಿವಿಧ ಭೂ ಅಭಿವೃದ್ಧಿ ಮಂಜೂರಾತಿ ಶುಲ್ಕಗಳನ್ನು ಯಥಾವತ್ತಾಗಿ ಜಿಬಿಎ ವ್ಯಾಪ್ತಿಯಲ್ಲಿ ವಿಧಿಸಲು ನಿರ್ಧರಿಸಲಾಯಿತು.
- ಆನ್‌ಲೈನ್ ತಂತ್ರಾಂಶದಲ್ಲಿ ಖಾಸಗಿ ಆರ್ಕಿಟೆಕ್ಟ್, ಎಂಜಿನಿಯರ್, ಸ್ಟ್ರಕ್ಚರಲ್ ಎಂಜಿನಿಯರ್, ಸೂಪರ್‌ವೈಸರ್‌ಗಳ ನೋಂದಣಿ ನವೀಕರಿಸಿ, ಪ್ರಕ್ರಿಯೆಯನ್ನು ಕೇಂದ್ರೀಕೃತಗೊಳಿಸಿ ಜಿಬಿಎ ನಗರ ಯೋಜನಾ ಶಾಖೆಯ ಜಂಟಿ ನಿರ್ದೇಶಕರಿಗೆ ಅಧಿಕಾರ ಪ್ರತ್ಯಾಯೋಜಿಸಲಾಯಿತು.
- ಐದು ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಅಗ್ನಿಶಾಮಕ ಘಟಕಗಳನ್ನು ಪುನರ್ ರಚಿಸುವುದು, ಹೊಸದಾಗಿ ಅಗ್ನಿಶಾಮಕ ಘಟಕಗಳನ್ನು ಸ್ಥಾಪಿಸಲು ಜಾಗ ನೀಡಲು ನಿರ್ಧರಿಸಲಾಯಿತು.
- ಬಿಬಿಎಂಪಿ ಬಜೆಟ್‌ನಲ್ಲಿ ಮೀಸಲಿರಿಸಿದ್ದ ₹28 ಕೋಟಿಯನ್ನು ಹವಾಮಾನ ವೈಪರೀತ್ಯ ಮತ್ತು ಪರಿಸರಕ್ಕೆ ಸಂಬಂಧಿಸಿದಂತೆ ಪೂರಕ ಕಾಮಗಾರಿಗಳಿಗಾಗಿ ಹವಾಮಾನ ಕ್ರಿಯಾಕೋಶದಿಂದ ಕೈಗೊಳ್ಳುವ ಕ್ರಿಯಾಯೋಜನೆಗೆ ಅನುಮೋದನೆ ನೀಡಲಾಯಿತು.
- ಐದು ನಗರ ಪಾಲಿಕೆಗಳ ವಲಯಗಳಲ್ಲಿ '10 ಜಿಬಿಎ ಗ್ಯಾರಂಟಿ ಸೇವಾ ಕೇಂದ್ರ'ಗಳನ್ನು ಬೂಟ್ ಮಾದರಿಯಲ್ಲಿ ಸ್ಥಾಪಿಸಿ, ನಾಗರಿಕರಿಂದ ಸೇವಾ ಶುಲ್ಕ ಭರಿಸಿಕೊಳ್ಳಲು ಅನುಮೋದನೆ ನೀಡಲಾಯಿತು.
- ಪಾದಚಾರಿ ಮಾರ್ಗ, ಉದ್ಯಾನ, ಕೆರೆಗಳ ಸುತ್ತಲಿನ ಪ್ರದೇಶ, ಮೇಲ್ಸೇತುವೆ ಕೆಳಭಾಗ, ಜಂಕ್ಷನ್‌ಗಳನ್ನು ಸಮರ್ಥವಾಗಿ ವಿನ್ಯಾಸಗೊಳಿಸಲು ಜಿಬಿಎ ಮತ್ತು ಐದು ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ 'ನಗರ ವಿನ್ಯಾಸ ಕೋಶ' ಸ್ಥಾಪಿಸಲು ಅನುಮೋದನೆ.

ಗ್ಯಾರಂಟಿ ಸೇವಾ ಕೇಂದ್ರದ ಸೇವಾ ಶುಲ್ಕ

ಸೇವೆ	ಶುಲ್ಕ
ಕರಡುನಿಂದ ಅಂತಿಮ ಇ–ಖಾತಾ	₹1,000
ಬಿ ಖಾತಾದಿಂದ ಎ ಖಾತಾ	₹2,500
ಹೊಸ ಖಾತಾ (ಫ್ಲ್ಯಾಟ್/ ಕಟ್ಟಡ/ ನಿವೇಶನಕ್ಕೆ)	₹2,500
ಬಡಾವಣೆಯ ಬಲ್ಕ್ ಹೊಸ ಖಾತಾ (ಪ್ರತಿ ಖಾತಾಗೆ)	₹1,000
ಬಹುಮಹಡಿಯ ಬಲ್ಕ್ ಖಾತಾ (ಪ್ರತಿ ಖಾತಾಗೆ)	₹1,500
ಇ–ಖಾತಾ ಒಂದುಗೂಡಿಸುವುದು	₹1,000
ಇ–ಖಾತಾ ವಿಭಾಗ	₹1,500
ಖಾತಾ ಮ್ಯೂಟೇಷನ್	₹1,000
ಜನನ/ ಮರಣ ಪ್ರಮಾಣಪತ್ರ	₹500
ಟೆಲಿಕಾಂ ಟವರ್ ಪರವಾನಗಿ	₹500
ಮರ ಕಡಿತ	₹1,000
ಆಸ್ತಿ ತೆರಿಗೆ ಪಾವತಿ	₹500
ಉದ್ದಿಮೆ ಪರವಾನಗಿ/ ನವೀಕರಣ	₹500
ಜಾಹೀರಾತು ಪರವಾನಗಿ	₹1,000
ರಸ್ತೆ ಅಗೆತ	₹1,000
ಅಭಿವೃದ್ಧಿ ನಕ್ಷೆ ಮಂಜೂರು	₹1,500
ಬಡಾವಣೆ ಮಂಜೂರು (ನಿವೇಶನವೊಂದಕ್ಕೆ)	₹1,000
ಸ್ಥಳ ಪ್ರಮಾಣಪತ್ರ	₹500
ಇತರೆ ಆಸ್ತಿ ಸೇವೆಗಳು	₹500
ಭೂ ಬಳಕೆ ಬದಲು	₹1,000
ಭೂ ಬಳಕೆ ನಿಯೋಜನೆ	₹1,000
ಸೂಕ್ಷ್ಮ ಸಮ್ಮತಿಗಳು	₹1,000
25ಕ್ಕೂ ಕಡಿಮೆ ಅಂಶಗಳ ಡೇಟಾ ಎಂಟ್ರಿ	₹500
25ಕ್ಕೂ ಹೆಚ್ಚು ಅಂಶಗಳ ಡೇಟಾ ಎಂಟ್ರಿ	₹1,000
ಕ್ಷೇತ್ರ ಪರಿಶೀಲನೆ ಸೇವೆ (ಡೇಟಾ ಎಂಟ್ರಿ ಶುಲ್ಕ ಹೊರತುಪಡಿಸಿ)	₹1,000

ಕರಗ ಮಹೋತ್ಸವ: 455 ಟನ್ ತ್ಯಾಜ್ಯ ವಿಲೇವಾರಿ

ಬೆಂಗಳೂರು: ಕರಗ ಮಹೋತ್ಸವ ನಡೆದ ಪ್ರದೇಶಗಳಲ್ಲಿ 12 ದಿನಗಳಲ್ಲಿ 455 ಟನ್ ತ್ಯಾಜ್ಯ ವಿಲೇವಾರಿ ಮಾಡಲಾಗಿದೆ ಎಂದು ಬೆಂಗಳೂರು ಕೇಂದ್ರ ನಗರ ಪಾಲಿಕೆ ಆಯುಕ್ತ ರಾಜೇಂದ್ರ ಚೋಳನ್ ತಿಳಿಸಿದರು.

ಮಾರ್ಚ್ 23ರಿಂದ ಏಪ್ರಿಲ್ 3 ರವರೆಗೆ ಕರಗ ಮಹೋತ್ಸವದ ಕೇಂದ್ರ ಬಿಂದುವಾದ ಶ್ರೀ ಧರ್ಮರಾಯಸ್ವಾಮಿ ದೇವಸ್ಥಾನದಲ್ಲಿನ ಹೂವು ಸೇರಿದಂತೆ ದಿನನಿತ್ಯ ಉತ್ಪತ್ತಿಯಾಗುವ ತ್ಯಾಜ್ಯ ಸೇರಿದಂತೆ ಕರಗ ಸಂಚರಿಸುವ ಪ್ರಮುಖ ರಸ್ತೆ ಹಾಗೂ ಸ್ಥಳಗಳ ವ್ಯಾಪ್ತಿಯಲ್ಲಿ ಪ್ರತಿನಿತ್ಯ ಕಸ ಗುಡಿಸಿ, ತ್ಯಾಜ್ಯ ವಿಲೇವಾರಿ ಮಾಡಲಾಗಿದೆ ಎಂದರು.



ಸ್ವಚ್ಛತಾ ಕಾರ್ಯ ನಡೆಸಿದ ಸಿಬ್ಬಂದಿ

ಪ್ರತಿದಿನ ಮಧ್ಯಾಹ್ನ 2.30ರಿಂದ ರಾತ್ರಿ 9.30ವರೆಗೆ ಹಾಗೂ ರಾತ್ರಿ 9.30 ರಿಂದ ಬೆಳಿಗ್ಗೆ 6.30ರವರೆಗೆ ಎರಡು ಪಾಳಿಯಲ್ಲಿ ಸ್ವಚ್ಛತಾ ಕಾರ್ಯ ಮಾಡಲಾಗಿದೆ. 35 ಹೆಚ್ಚುವರಿ ಸಿಬ್ಬಂದಿ, ಹೆಚ್ಚುವರಿಯಾಗಿ ಎರಡು ಕಾಂಪ್ಯಾಕ್ಟರ್ ಹಾಗೂ 15 ಹೆಚ್ಚುವರಿ ಆಟೊ ಟಿಪ್ಪರ್‌ಗಳ ಬಳಕೆ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ಶ್ರೀ ಧರ್ಮರಾಯ ಸ್ವಾಮಿ ದೇವಸ್ಥಾನ ಮಾರ್ಗದ ರಸ್ತೆಗಳು ಹಾಗೂ ಪಾದಚಾರಿ ಮಾರ್ಗ ಸ್ವಚ್ಛತೆಗೆ ಜೆಟ್ಟಿಂಗ್ ಪ್ರೆಶರ್ ಯಂತ್ರಗಳ ಬಳಕೆ ಮೂಲಕ ಸ್ವಚ್ಛಗೊಳಿಸಲಾಗಿತ್ತು ಎಂದರು.

ಮೂರು ದಿನ ವಿದ್ಯುತ್ ದೀಪ, ರಸ್ತೆ ಗುಂಡಿ ಮುಚ್ಚುವುದು, ಸ್ವಚ್ಛತಾ ಕಾರ್ಯ ಹಾಗೂ ಇತರೆ ಪೂರ್ವ ಸಿದ್ಧತೆ ಬಗ್ಗೆ ಸ್ಥಳ ಪರಿಶೀಲನೆ ನಡೆಸಿ, ಅಧಿಕಾರಿಗಳಿಗೆ ಅಗತ್ಯ ಸೂಚನೆ ನೀಡಲಾಗಿತ್ತು ಎಂದರು.

ಕಾಲಮಿತಿಯೊಳಗೆ ಕಾಮಗಾರಿ ಮುಗಿಸಿ, ಕಿರಿಕಿರಿ ತಪ್ಪಿಸಲು ಆಗ್ರಹ

ಯೋಜನೆಗಳು ಅಪೂರ್ಣ: ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಲವು ಕಡೆ ಅಪೂರ್ಣ ಕಾಮಗಾರಿಯಿಂದ ಅಡ್ಡಿ ಆಗುತ್ತಿರುವುದನ್ನು ವಿರೋಧಿಸಿ ಗ್ರೀನ್ ಪೀಸ್ ಇಂಡಿಯಾ ಹಾಗೂ ರೈಸಿಂಗ್ ಬೆಂಗಳೂರು ಸಂಘಟನೆಯಿಂದ ವಿವಿಧ ಭಾಗಗಳಲ್ಲಿ ಪ್ರತಿಭಟನೆ ನಡೆಸಲಾಯಿತು.

ಸಿಲಿಕಾನ್ ವ್ಯಾಲಿ ಎಂದೇ ಪ್ರಸಿದ್ಧವಾಗಿರುವ ನಗರವು ಇನ್ನೂ ಹಳೆಯ, 20ನೇ ಶತಮಾನದ ನಗರ ಯೋಜನೆಗಳ ಮೇಲೆ ಅವಲಂಬಿತವಾಗಿದೆ ಎನ್ನುವುದನ್ನು ಈಗಿನ ಪರಿಸ್ಥಿತಿ ಹೇಳುತ್ತಿದೆ ಎಂದು ಸಂಘಟನೆಗಳ ಪ್ರಮುಖರು ಅಣಕ ಮಾಡಿ ಪ್ರತಿಭಟನೆ ನಡೆಸಿದರು.

'ರಾಜರಾಜೇಶ್ವರಿ ನಗರ ಮತ್ತು ದೊಮ್ಮಸಂದ್ರದ ಮೇಲ್ಸೇತುವೆ ಯೋಜನೆಗಳು ಸೇರಿದಂತೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಕೈಗೊಳ್ಳಲು ಉದ್ದೇಶಿಸಿರುವ ಅನೇಕ ಯೋಜನೆಗಳು ಅರ್ಥಹೀನ ಎನ್ನುವಂತಾಗಿವೆ. ನಗರಾಭಿವೃದ್ಧಿಗೆ ಸಂಬಂಧಿಸಿ ರೂಪಿಸಿರುವ ಯೋಜನೆಗಳ ಮರುಕಲ್ಪನೆಗೆ ಮುಂದಾಗಬೇಕು' ಎಂದು ಪ್ರತಿಭಟನನಿರತರು ಆಗ್ರಹಿಸಿದರು.



ನಗರದಲ್ಲಿ ಅಪೂರ್ಣವಾಗಿರುವ ಯೋಜನೆಗಳನ್ನು ಬೇಗ ಪೂರ್ಣಗೊಳಿಸುವಂತೆ ಆಗ್ರಹಿಸಿ ವಿವಿಧ ಸಂಘಟನೆಗಳ ಸದಸ್ಯರು ಪ್ರತಿಭಟನೆ ನಡೆಸಿದರು

'ಯೋಜನೆಗಳ ವಿಳಂಬದಿಂದ ವೆಚ್ಚವೂ ಹೆಚ್ಚಾಗಿ ಜನರ ಮೇಲೆ ಪರೋಕ್ಷವಾಗಿ ಹೊರೆ ಬೀಳುತ್ತಿದೆ. ಇದನ್ನು ತಪ್ಪಿಸಲು ಕಾಲಮಿತಿಯೊಳಗೆ ಯೋಜನೆ ಪೂರ್ಣಗೊಳಿಸಲು ಗಮನ ನೀಡಬೇಕು' ಎಂದು ಒತ್ತಾಯಿಸಿದರು.

ಗ್ರೀನ್‌ಪೀಸ್ ಇಂಡಿಯಾದ ಹವಾಮಾನ, ಇಂಧನ ವಿಭಾಗದ ಕ್ಯಾಂಪೇನರ್ ಎಸ್.ಎನ್ ಅಮೃತಾ ಮಾತನಾಡಿ, 'ಜಿಬಿಎ ಚುನಾವಣೆಗೆ ಸಿದ್ಧತೆಗಳು ನಡೆದಿವೆ. ಪಕ್ಷಗಳ ಜತೆಗೆ ಚುನಾವಣೆ ಆಕಾಂಕ್ಷಿಗಳು ಈ ಕುರಿತು ಮಾತನಾಡಬೇಕು. ಜಾಗತಿಕ ಮಟ್ಟದಲ್ಲಿ ಬೆಂಗಳೂರಿನ ಯೋಜನೆಗಳ ಸ್ಥಿತಿಗತಿ ಕುರಿತು ನಗೆಪಾಟಲಿಗೆ ಈಡಾಗುವ ಮುನ್ನ ಪೂರ್ಣಗೊಳಿಸಬೇಕು' ಎಂದು ಸಲಹೆ ನೀಡಿದರು.

ಮಲ್ಲೇಶ್ವರ ಸೋಶಿಯಲ್ ಸದಸ್ಯರಾದ ಕೌಸ್ತುಭ್ ರಾವ್ ಮಾತನಾಡಿ, 'ಸಾರ್ವಜನಿಕ ಸ್ಥಳಗಳಲ್ಲಿ ಪರಿಸರ ಮತ್ತು ಜೀವ ವೈವಿಧ್ಯತೆಗೆ ಪ್ರಾಧಾನ್ಯತೆ ನೀಡಬೇಕು. ಮೈಸೂರು ಲ್ಯಾಂಪ್ಸ್ ಪ್ರದೇಶದಲ್ಲಿ ಸಮುದಾಯ ಕೇಂದ್ರ ನಿರ್ಮಾಣಕ್ಕಾಗಿ ಪ್ರಮುಖ ಅರಣ್ಯಪ್ರದೇಶವನ್ನೇ ಕಳೆದುಕೊಳ್ಳುವ ಸಾಧ್ಯತೆಯಿದೆ. ಇದರಿಂದ ಸಾರ್ವಜನಿಕರ ದೈನಂದಿನ ಜನಜೀವನಕ್ಕೆ ಅಡ್ಡಿಯಾಗುತ್ತಿದೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಗ್ರಾಮೀಣ ಪುನರ್ವಸತಿ ಕಾರ್ಯಕರ್ತ ಹುದ್ದೆ ಅರ್ಜಿ ಆಹ್ವಾನ

ಬೆಂಗಳೂರು: ವಿಕಲಚೇತನ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ವತಿಯಿಂದ 2026-27ನೇ ಸಾಲಿನ ಗ್ರಾಮೀಣ ಪುನರ್ವಸತಿ ಯೋಜನೆಯಡಿಯಲ್ಲಿ ನಗರ ಜಿಲ್ಲೆ ವ್ಯಾಪ್ತಿಯ ಗ್ರಾಮ ಪಂಚಾಯಿತಿಗಳಲ್ಲಿ ಖಾಲಿ ಇರುವ ಗ್ರಾಮೀಣ ಪುನರ್ವಸತಿ ಕಾರ್ಯಕರ್ತರ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ.

ದಕ್ಷಿಣ ತಾಲ್ಲೂಕು ಪಂಚಾಯಿತಿ ವ್ಯಾಪ್ತಿಯ ಕೆ.ಗೊಲ್ಲಹಳ್ಳಿ, ಎಚ್. ಗೊಲ್ಲಹಳ್ಳಿ, ಕಗ್ಗಲಿಪುರ, ರಾಮೋಹಳ್ಳಿ, ಚಿಕ್ಕನಹಳ್ಳಿ, ಸುಲಿಕೆರೆ, ಅಗರ ಗ್ರಾಮ ಪಂಚಾಯಿತಿ. ಯಲಹಂಕ ತಾಲ್ಲೂಕು ಪಂಚಾಯಿತಿ ವ್ಯಾಪ್ತಿಯ ದೊಡ್ಡಜಾಲ ಗ್ರಾಮ ಪಂಚಾಯಿತಿ. ಪೂರ್ವ ತಾಲ್ಲೂಕು ಪಂಚಾಯಿತಿ ವ್ಯಾಪ್ತಿಯ ಕೊಡತಿ, ಕಿತ್ತಗನೂರು ಗ್ರಾಮ ಪಂಚಾಯಿತಿಗಳಲ್ಲಿ ಅಂಗವಿಕಲ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು.

ಮಾಹಿತಿಗೆ : 080-29752324

ನಿಧನ ವಾರ್ತೆ

ಶಾಂತಾ



ರಾಜರಾಜೇಶ್ವರಿ ನಗರ: ಹೇರೋಹಳ್ಳಿಯ ಸಿಂಡಿಕೇಟ್ ಬ್ಯಾಂಕ್ ಕಾಲೊನಿಯ ನಿವಾಸಿ ಶಾಂತಾ (79) ಅವರು ಶುಕ್ರವಾರ ನಿಧನರಾದರು. ಶಾಂತಾ ಅವರು ವಯೋಸಹಜ ಅನಾರೋಗ್ಯದಿಂದ ಬಳಲುತ್ತಿದ್ದರು.

ಮೃತರಿಗೆ ಕವಿ ಮುದಲ್ ವಿಜಯ್ ಹಾಗೂ ಪುತ್ರಿ ಇದ್ದಾರೆ.

ಮಾಗಡಿ ರಸ್ತೆಯ ಸುಮನಹಳ್ಳಿಯ ಚಿತಾಗಾರದಲ್ಲಿ ಶನಿವಾರ ಮಧ್ಯಾಹ್ನ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. (ಮೊಬೈಲ್ ಸಂಖ್ಯೆ: 98440 78793)

DH DECCAN HERALD | ಪ್ರಜಾವಾಣಿ

ಎಡ್ಯುವರ್ಸ್™

ಪ್ರೀಮಿಯರ್ ಎಜುಕೇಶನ್ ಎಕ್ಸ್‌ಪೋ

ಪ್ರಾಯೋಜಕರು

AD6 advertising — A Unit of Sri Sairam Enterprises

ಮುಖ್ಯ ಅತಿಥಿಗಳು





ಬೆಂಗಳೂರು: 04-05 ಏಪ್ರಿಲ್ 2026
ಗಾಯತ್ರಿ ಗ್ರಾಂಡ್, ಅರಮನೆ ಮೈದಾನ (Gate 4)

ಸಮಯ: ಬೆಳಿಗ್ಗೆ 9 ರಿಂದ
ಸಂಜೆ 6 ರವರೆಗೆ



ಮುಖ್ಯಾಂಶಗಳು

ಇಂದು 04 ಏಪ್ರಿಲ್ 2026

ಮುಖ್ಯ ಅತಿಥಿಗಳು

- **ಪ್ರಸನ್ನ ಹೆಚ್** — ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ — 11:00 AM
- **ಡಾ. ಬ್ರೋ ಗಗನ್ ಶ್ರೀನಿವಾಸ್** — ಯೂಟ್ಯೂಬರ್ | ಗೋಪ್ರವಾಸ ಸಂಸ್ಥಾಪಕರು — 11:00 AM

ಗೋಷ್ಠಿ - ಉನ್ನತ ಶಿಕ್ಷಣದಲ್ಲಿ ಕೃತಕ ಬುದ್ಧಿಮತ್ತೆ (ಎಐ) ಸಂಪನ್ಮೂಲ ವ್ಯಕ್ತಿ
ಡಾ. ಜೆ ಬಿ ಸಿಂಹ
ಪ್ರಾಧ್ಯಾಪಕರು ಮತ್ತು ಮುಖ್ಯ ಮಾರ್ಗದರ್ಶಕರು
ಎಐ - ಆರ್‌ಎಸಿಇ, ರೇವಾ ವಿಶ್ವವಿದ್ಯಾಲಯ
11:30 AM

ಸಿಇಟಿ/ನೀಟ್ ಮತ್ತು ಕಾಮೆಡ್ ಕೆ ಕೌನ್ಸೆಲಿಂಗ್ ಸಂಪನ್ಮೂಲ ವ್ಯಕ್ತಿ
ರವಿ ಎ ಎಸ್
ನಿವೃತ್ತ ಪಿಆರ್‌ಒ ಹಾಗೂ ಪ್ರಾಂಶುಪಾಲರು
12:00 PM


ನಾಳೆ 05 ಏಪ್ರಿಲ್ 2026

ಮುಖ್ಯ ಅತಿಥಿ
ಧ್ರುವ ಸರ್ಜಾ
ಸ್ಯಾಂಡಲ್‌ವುಡ್ ನಟ
11:00 AM


ಗೋಷ್ಠಿ - ಹೆಚ್‌ಆರ್ ವೃತ್ತಿಜೀವನದ ಅಗತ್ಯತೆ ಸಂಪನ್ಮೂಲ ವ್ಯಕ್ತಿ
ನಾಗನಗೌಡ ಎಸ್ ಜೆ
ಗೌರವಾನ್ವಿತ ಕಾರ್ಯದರ್ಶಿ - NHRD, ಕರ್ನಾಟಕ
ಹ್ಯೂಮನ್ ರಿಸೋರ್ಸ್ ಲೀಡರ್ ಮತ್ತು ಇನ್ಫ್ಲುಯೆನ್ಸರ್
11:30 AM

ಗೋಷ್ಠಿ - ವಿನ್ಯಾಸ ಚಿಂತನೆ ಮತ್ತು ತಂತ್ರಜ್ಞಾನ ಆಧಾರಿತ ನಾವೀನ್ಯತೆ ಸಂಪನ್ಮೂಲ ವ್ಯಕ್ತಿ
ಕಮೋಡೋರ್ (ಡಾ) ಪ್ರಮೋದ್ ಆರ್ ಕುಲಕರ್ಣಿ
ಪ್ರೊ ವೈಸ್ ಚಾನ್ಸಲರ್ - ಸ್ಕೂಲ್ ಆಫ್ ಡಿಸೈನ್ ಇಂಜಿನಿಯರಿಂಗ್, ರೇವಾ ವಿಶ್ವವಿದ್ಯಾಲಯ
12:00 PM









ಸಾಧ್ಯತೆಗಳ ಜಗತ್ತನ್ನೊಮ್ಮೆ ಅನ್ವೇಷಿಸಿ!

ಎಲ್ಲಾ ವಿದ್ಯಾರ್ಥಿಗಳಿಗೆ ಒಂದು ಕರೆ! ಇದೀಗ ನಿಮ್ಮ ಗುರಿ ರೂಪಿಸಿಕೊಳ್ಳುವ ಮತ್ತು ಉಜ್ವಲ ಭವಿಷ್ಯದ ಮಾರ್ಗ ನಿರ್ಮಿಸಿಕೊಳ್ಳುವ ಸಮಯ ಬಂದಿದೆ!

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿಯ ಎಜುವರ್ಸ್ ವಿದ್ಯಾರ್ಥಿಗಳ ಉನ್ನತ ಭವಿಷ್ಯದ ಕನಸಿಗೊಂದು ಆಸರೆಯನ್ನು ನೀಡುತ್ತಿದೆ. ರಾಜ್ಯದ ಪ್ರತಿಷ್ಟಿತ ಶಿಕ್ಷಣ ಸಂಸ್ಥೆಗಳ ಅಸಂಖ್ಯ ಕೋರ್ಸ್‌ಗಳ ಕುರಿತ ಮಾಹಿತಿಯನ್ನು ಒಂದೇ ಸೂರಿನಡಿ ಒಗ್ಗೂಡಿಸುತ್ತಿದೆ. ಇಂಜಿನಿಯರಿಂಗ್, ವೈದ್ಯಕೀಯ ಸೇರಿದಂತೆ ವೃತ್ತಿಪರ ಕೋರ್ಸ್ ಮಾತ್ರವಲ್ಲದೇ ಪ್ರಸ್ತುತ ಜಗತ್ತಿನ ಎಲ್ಲಾ ವೈವಿಧ್ಯಮಯ ಶೈಕ್ಷಣಿಕ ಅಧ್ಯಯನದ ಅವಕಾಶಗಳ ಮಾಹಿತಿಯನ್ನು 'ಎಜುವರ್ಸ್' ಒದಗಿಸಲಿದೆ. ಜತೆಗೆ, ಶಿಕ್ಷಣ ಸಂಸ್ಥೆಗಳ ಶೈಕ್ಷಣಿಕ ತಜ್ಞರು ನಿಮ್ಮೆಲ್ಲಾ ಭವಿಷ್ಯದ ಕನಸಿಗೆ ಅಗತ್ಯ ಮಾರ್ಗದರ್ಶನ ಮಾಡಲಿದ್ದಾರೆ.

ಬನ್ನಿ, 'ಎಡ್ಯೂವರ್ಸ್' ಸಂಪನ್ಮೂಲಗಳನ್ನು ಸದುಪಯೋಗಪಡಿಸಿಕೊಳ್ಳಿ!

REGISTER NOW
CET & NEET ಮಾಕ್ ಪರೀಕ್ಷೆಗಾಗಿ
VISION PU COLLEGE BENGALURU
ಕೋಡ್ ಸ್ಕ್ಯಾನ್ ಮಾಡಿ

ಪ್ರವೇಶ ಉಚಿತ

University Pavilion Sponsors

CMR UNIVERSITY · DAYANANDA SAGAR UNIVERSITY · GARDEN CITY UNIVERSITY · GITAM · ICFAI Foundation for Higher Education · KLE ACADEMY OF HIGHER EDUCATION AND RESEARCH, BELAGAVI · MANIPAL ACADEMY of HIGHER EDUCATION BENGALURU · Parul University · PRESIDENCY UNIVERSITY · RAMAIAH UNIVERSITY OF APPLIED SCIENCES · REVA UNIVERSITY · RV UNIVERSITY · SAPTHAGIRI NPS UNIVERSITY · SHIV NADAR UNIVERSITY · SRM UNIVERSITY AP

Platinum Sponsor

VIT Vellore Institute of Technology

Gold Sponsors

CAMBRIDGE INSTITUTE OF TECHNOLOGY · EAST POINT GROUP OF INSTITUTIONS · KAMMAVARI SANGHAM · KLE Technological University · KRUPANIDHI GROUP OF INSTITUTIONS · THE OXFORD EDUCATIONAL INSTITUTIONS · SHRI DHARMASTHALA MANJUNATHESHWARA EDUCATIONAL SOCIETY / TRUST (R)

Silver Sponsors

AMITY UNIVERSITY BENGALURU · BGU BIRLA GLOBAL UNIVERSITY Bhubaneswar · EAST WEST GROUP OF INSTITUTIONS · VIDYAPEETH IIT-JEE | NEET | FOUNDATION · RAJARAJESWARI COLLEGE OF ENGINEERING · SAMBHRAM INSTITUTIONS

Travel Partner

ಗೋ ಪ್ರವಾಸ Go Pravasa

Exhibitors

ABBS · ACS COLLEGE OF ENGINEERING · AGI · AIMS INSTITUTES · AMRITA BENGALURU CAMPUS · ATRIA INSTITUTE OF TECHNOLOGY · ATRIA UNIVERSITY · DECCAN PU COLLEGE · GM UNIVERSITY · HKBK GROUP OF INSTITUTIONS · IAS BABA · IBMR BUSINESS SCHOOL · The Institute of Company Secretaries of India · ISB&M · VIVEKANANDA EDUCATIONAL INSTITUTIONS · KHAJA BANDANAWAZ UNIVERSITY · MITS · MIT MYSORE · MIT-WPU · MIT WORLD PEACE UNIVERSITY · MS ENGINEERING COLLEGE · PES UNIVERSITY · PES Institute of Technology and Management · RAMAIAH College of Arts, Science & Commerce · RG INSTITUTE OF COMMERCE & MANAGEMENT DAVANGERE · R R INSTITUTIONS · SVIT · SANJAY GHODAWAT UNIVERSITY · S.E.A GROUP OF INSTITUTIONS · S-VYASA · UNIVERSAL GROUP OF INSTITUTIONS · VVCE · vymak · Wonderspaces

ಸ್ಪಾನ್ಸರ್‌ಶಿಪ್ ಮತ್ತು ಸ್ಟಾಲ್ ಬುಕ್ಕಿಂಗ್‌ಗಾಗಿ ಸಂಪರ್ಕಿಸಿ: ದಿನೇಶ್ - 9986006598 | ಬೆಂಗಳೂರು

ಇನ್ಫೊಸಿಸ್ ಹೆಸರಿನಲ್ಲಿ ₹6 ಕೋಟಿ ವಂಚನೆ

ನಕಲಿ ಗುರುತಿನ ಚೀಟಿ, ಸಹಿ, ದಾಖಲೆ ಬಳಕೆ ● ಪ್ರಮುಖ ಆರೋಪಿ ವಶಕ್ಕೆ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಇನ್ಫೊಸಿಸ್ ಕಂಪನಿ ಹೆಸರು ದುರುಪಯೋಗಪಡಿಸಿಕೊಂಡು ವಂಚನೆ ನಡೆಸಿರುವ ಪ್ರಕರಣ ದೇವನಹಳ್ಳಿಯಲ್ಲಿ ನಡೆದಿದೆ.



ಗಗನ್

ಕಂಪನಿಯ ಸಾಮಾಜಿಕ ಯೋಜನೆ (ಸಿಎಸ್‌ಆರ್) ಪ್ರಾದೇಶಿಕ ಮುಖ್ಯಸ್ಥ ಎಂದು ಸುಳ್ಳು ಹೇಳಿ ಪರಿಚಯಿಸಿಕೊಂಡ ವ್ಯಕ್ತಿಗಳು ನಕಲಿ ಗುರುತಿನ ಚೀಟಿ, ಸಹಿ ಹಾಗೂ ನಕಲಿ ದಾಖಲೆ ಬಳಸಿಕೊಂಡು ಸುಮಾರು ₹6 ಕೋಟಿ ಡಿಮ್ಯಾಂಡ್ ಡ್ರಾಫ್ಟ್ ಹಾಗೂ ₹30 ಲಕ್ಷ ನಗದು ಪಡೆದು ವಂಚಿಸಿದ್ದಾರೆ.

ಪ್ರಮುಖ ಆರೋಪಿ ಗಗನ್ ಎಂಬುವರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಇನ್ನೂ ಮೂವರು ಆರೋಪಿಗಳು ತಲೆಮರೆಸಿಕೊಂಡಿದ್ದಾರೆ.

ಹೆಗ್ಗುಂಜೆ ರಾಜೀವ ಶೆಟ್ಟಿ ಚಾರಿಟಬಲ್ ಟ್ರಸ್ಟ್‌ಗೆ ಸಿಎಸ್‌ಆರ್ ನಿಧಿ ಒದಗಿಸುವುದಾಗಿ ಆಮಿಷವೊಡ್ಡಿ, ₹179 ಕೋಟಿ ಮೌಲ್ಯದ ಯೋಜನೆಗಳನ್ನು ತಂದು ಕೊಡುವುದಾಗಿ ಭರವಸೆ ನೀಡಿದ್ದಾರೆ. ರಾಜ್ಯದ ವಿವಿಧ ಭಾಗಗಳಲ್ಲಿ 855 ಮನೆಗಳ ನಿರ್ಮಾಣ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸ್ಥಾಪನೆಗೆ ಅನುದಾನ ಒದಗಿಸುವುದಾಗಿ ನಂಬಿಸಿ, ಟ್ರಸ್ಟ್ ಸದಸ್ಯರಿಂದ ಹಣ ಪಡೆಯಲಾಗಿದೆ.

ಹಣ ಬಿಡುಗಡೆಗೆ ಮುನ್ನ ಇಎಂಡಿ ಅಗತ್ಯವಿದೆ ಎಂದು ಹೇಳಿ, ವಿವಿಧ ಹೆಸರಿನಲ್ಲಿ ಡಿಮ್ಯಾಂಡ್ ಡ್ರಾಫ್ಟ್ ಪಡೆದುಕೊಳ್ಳಲಾಗಿದೆ. ನಂತರ ಯಾವುದೇ ಯೋಜನೆಗಳು ಜಾರಿಯಾಗದ ಕಾರಣ ಟ್ರಸ್ಟ್ ಸದಸ್ಯರಿಗೆ ಅನುಮಾನ ಬಂದಿದೆ. ಆರೋಪಿ ಕುರಿತು ಮಾಹಿತಿ ಸಂಗ್ರಹಿಸಿದಾಗ ಮೋಸ ನಡೆದಿರುವುದು ಗೊತ್ತಾಗಿದೆ.

ದೇವನಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಇಬ್ಬರಿಂದ ₹90 ಲಕ್ಷ ದೋಚಿದ ಸೈಬರ್ ವಂಚಕರು

ಅಪರಾಧ ಸುದ್ದಿ

ಬೆಂಗಳೂರು: ಪ್ರತ್ಯೇಕ ಪ್ರಕರಣಗಳಲ್ಲಿ ವೈಟ್‌ಫೀಲ್ಡ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನೆಲಸಿರುವ ಇಬ್ಬರಿಂದ ಸೈಬರ್ ವಂಚಕರು ₹90 ಲಕ್ಷ ದೋಚಿದ್ದಾರೆ. ಹಣ ಕಳೆದುಕೊಂಡವರು ನೀಡಿದ ದೂರಿನ ಮೇಲೆ ವಂಚಕರ ವಿರುದ್ಧ ವೈಟ್‌ಫೀಲ್ಡ್ ಸೈಬರ್ ಅಪರಾಧ ಠಾಣೆಯಲ್ಲಿ ಪ್ರತ್ಯೇಕ ಪ್ರಕರಣಗಳು ದಾಖಲಾಗಿವೆ.

ಇಬ್ಬಲೂರಿನ ಸನ್‌ಸಿಟಿ ಅಪಾರ್ಟ್‌ಮೆಂಟ್‌ನಲ್ಲಿ ನೆಲಸಿರುವ 39 ವರ್ಷದ ವ್ಯಕ್ತಿಯೊಬ್ಬರಿಗೆ ಸೈಬರ್ ವಂಚಕರು ಹೂಡಿಕೆ ಹೆಸರಿನಲ್ಲಿ ಕರೆ ಮಾಡಿ ₹40 ಲಕ್ಷ ದೋಚಿದ್ದಾರೆ.



'ದೂರುದಾರರನ್ನು 'ವಿಐಪಿ–ಇಂಡಿಯಾ ಸ್ಟಾಕ್ ಇನ್‌ಸೈಟ್' ಎಂಬ ವಾಟ್ಸ್‌ಆ್ಯಪ್ ಗ್ರೂಪ್‌ಗೆ ವಂಚಕರು ಸೇರಿಸಿದ್ದರು. ಅದಾದ ಮೇಲೆ ಇಬ್ಬರು ಬೇರೆ ಬೇರೆ ಮೊಬೈಲ್ ಸಂಖ್ಯೆಗಳಿಂದ ದೂರುದಾರರಿಗೆ ಕರೆ ಮಾಡಿ, ಇಪಿಕ್ಯೂಸಿ(ಇಬಿಕ್ಯೂ) ಎನ್ನುವ ಆ್ಯಪ್ ಡೌನ್‌ಲೋಡ್ ಮಾಡಿ, ಹಣ ಹೂಡಿಕೆ ಮಾಡಿದರೆ ಹೆಚ್ಚಿನ ಲಾಭಾಂಶ ಬರಲಿದೆ ಎಂಬುದಾಗಿ ನಂಬಿಸಿದ್ದರು. ಆರಂಭದಲ್ಲಿ ಹೂಡಿಕೆ ಮಾಡಲು ದೂರುದಾರ ವ್ಯಕ್ತಿ ಹಿಂದೇಟು ಹಾಕಿದ್ದರು. ಮತ್ತೆ ಕರೆ ಮಾಡಿದ್ದ ಆರೋಪಿಗಳು, ಹೂಡಿಕೆಯಿಂದ ಹೆಚ್ಚಿನ ಲಾಭಾಂಶ ಬರಲಿದೆ ಎಂಬುದಾಗಿ ಮನವೊಲಿಸಿದ್ದರು. ಅವರ ಮಾತನ್ನು ನಂಬಿದ್ದ ವ್ಯಕ್ತಿ, ಆ್ಯಪ್ ಮೂಲಕ ₹10 ಸಾವಿರ ಹೂಡಿಕೆ ಮಾಡಿದ್ದರು. ಇನ್ನೂ ಹೆಚ್ಚಿನ ಹೂಡಿಕೆ ಮಾಡುವಂತೆ ಹೇಳಿದ್ದರು. ಬಳಿಕ, ತಮ್ಮ ಬ್ಯಾಂಕ್ ಖಾತೆಯಿಂದ ಬೇರೆ ಬೇರೆ ಬ್ಯಾಂಕ್‌ನ 11 ಖಾತೆಗಳಿಗೆ ಹಣವನ್ನು ವರ್ಗಾವಣೆ ಮಾಡಿದ್ದರು' ಎಂದು ಸೈಬರ್ ಠಾಣೆಯ ಪೊಲೀಸರು ಹೇಳಿದರು.

'ಆರಂಭದಲ್ಲಿ ದೂರುದಾರರಿಗೆ ಲಾಭಾಂಶದ ರೂಪದಲ್ಲಿ ₹96 ಸಾವಿರವನ್ನು ವಂಚಕರು ಸಂದಾಯ ಮಾಡಿದ್ದರು. ಉಳಿದ ಹಣವನ್ನು ಡ್ರಾ ಮಾಡಿಕೊಳ್ಳಲು ಇನ್ನೂ ಹೆಚ್ಚಿನ ಹಣವನ್ನು ವರ್ಗಾವಣೆ ಮಾಡುವಂತೆ ಆರೋಪಿಗಳು ಸೂಚಿಸಿದ್ದರು. ಆಗ ದೂರುದಾರರಿಗೆ ವಂಚನೆ ನಡೆದಿರುವುದು ಗೊತ್ತಾಗಿ ದೂರು ನೀಡಿದ್ದಾರೆ' ಎಂದು ಪೊಲೀಸರು ಹೇಳಿದರು.

ಕೊಡಿಗೇಹಳ್ಳಿ ಮುಖ್ಯರಸ್ತೆಯ ಅಲ್ಫಾ ಗಾರ್ಡನ್ ಲೇಔಟ್‌ನಲ್ಲಿ ನೆಲಸಿರುವ 50 ವರ್ಷದ ವ್ಯಕ್ತಿಯೊಬ್ಬರಿಂದಲೂ ಸೈಬರ್ ವಂಚಕರ ತಂಡವು ₹49.50 ಲಕ್ಷವನ್ನು ದೋಚಿದೆ.

'ಹಣ ಕಳೆದುಕೊಂಡ ವ್ಯಕ್ತಿ ನೀಡಿದ ದೂರಿನ ಮೇಲೆ ಮಾಹಿತಿ ತಂತ್ರಜ್ಞಾನ ಕಾಯ್ದೆ 66(ಡಿ) ಹಾಗೂ ಭಾರತೀಯ ನ್ಯಾಯ ಸಂಹಿತೆ ಸೆಕ್ಷನ್ 318(4), 319(2)ರ ಅಡಿ ಪ್ರಕರಣ ದಾಖಲು ಮಾಡಲಾಗಿದೆ' ಎಂದು ಮೂಲಗಳು ಹೇಳಿವೆ.

'ಸೂಪರ್ ಸ್ಟಾಕ್ಸ್' ಹೆಸರಿನ ವಾಟ್ಸ್‌ಆ್ಯಪ್ ಗ್ರೂಪ್‌ಗೆ ಆರೋಪಿಗಳು ದೂರುದಾರರನ್ನು ಸೇರಿಸಿದ್ದರು. ಗ್ರೂಪ್‌ನಲ್ಲಿ ಲಿಂಕ್ ಕಳುಹಿಸಿ ವೆಬ್‌ಸೈಟ್‌ವೊಂದರಲ್ಲಿ ನೋಂದಣಿ ಮಾಡಿಸಿದ್ದರು. ಲಾಭದ ಆಸೆಯಿಂದ ದೂರುದಾರರು ಸಹ ಆರಂಭದಲ್ಲಿ ₹50 ಸಾವಿರ ಹೂಡಿಕೆ ಮಾಡಿದ್ದರು. ಅದಕ್ಕೆ ಪ್ರತಿಯಾಗಿ, ಲಾಭಾಂಶದ ರೂಪದಲ್ಲಿ ₹4 ಸಾವಿರವನ್ನು ದೂರುದಾರರಿಗೆ ವಂಚಕರು ಸಂದಾಯ ಮಾಡಿದ್ದರು. ವಂಚಕರ ಮಾತನ್ನು ನಂಬಿದ್ದ ವ್ಯಕ್ತಿ, ಬೇರೆ ಬೇರೆ ಬ್ಯಾಂಕ್‌ನ ನಾಲ್ಕು ಖಾತೆಗಳಿಗೆ ₹49.50 ಲಕ್ಷವನ್ನು ದೂರುದಾರ ವ್ಯಕ್ತಿ ವರ್ಗಾವಣೆ ಮಾಡಿದ್ದರು. ಬಳಿಕ ಯಾವುದೇ ಹಣವನ್ನು ವಾಪಸ್ ಮಾಡದೇ ವಂಚಿಸಲಾಗಿದೆ' ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಸುದ್ದಿ 2 ನಿಮಿಷ

₹40 ಕೋಟಿ ವಂಚನೆ ಆರೋಪ ಎಫ್‌ಐಆರ್ ರದ್ದತಿಗೆ ನಕಾರ

ಬೆಂಗಳೂರು: 'ಬ್ಯಾಂಕುಗಳಿಂದ ಕೋಟ್ಯಂತರ ರೂಪಾಯಿ ಸಾಲ ಕೊಡಿಸುವುದಾಗಿ ನಂಬಿಸಿ ಕಮಿಷನ್ ಪಡೆದು ₹40 ಕೋಟಿ ವಂಚನೆ ಮಾಡಿದ್ದಾರೆ' ಎಂಬ ಪ್ರಕರಣದ ಮೂವರು ಆರೋಪಿಗಳ ವಿರುದ್ಧದ 11 ಎಫ್‌ಐಆರ್‌ಗಳನ್ನು ರದ್ದುಗೊಳಿಸಲು ಹೈಕೋರ್ಟ್ ನಿರಾಕರಿಸಿದೆ.

ಈ ಸಂಬಂಧ ಆರೋಪಿಗಳು ಸಲ್ಲಿಸಿದ್ದ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಪ್ರಕರಣದ ಅಪರಾಧದ ಆರೋಪಗಳು ತನಿಖಾ ಹಂತದಲ್ಲಿವೆ. ಆರೋಪಗಳ ಬಗ್ಗೆ ತನಿಖೆ ನಡೆಯಬೇಕು ಎಂಬುದು ಕಾನೂನಿನ ಸ್ಪಷ್ಟ ನಿಯಮ. ಹಾಗಾಗಿ, ಈ ಹಂತದಲ್ಲಿ ಹೈಕೋರ್ಟ್ ಮಧ್ಯಪ್ರವೇಶ ಮಾಡುವುದಿಲ್ಲ' ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

'ಆರೋಪಿಗಳು ಹಲವು ಜನರೊಂದಿಗೆ ಆರ್ಥಿಕ ವಹಿವಾಟು ನಡೆಸಿ ವಂಚಿಸಿದ್ದಾರೆ ಎಂದು ಆರೋಪಿಸಲಾಗಿದೆ. ಆದ್ದರಿಂದ, ಇಂತಹ ಪ್ರಕರಣಗಳಲ್ಲಿ ತನಿಖೆಗೆ ಅಡ್ಡಿಪಡಿಸುವ ಪ್ರಶ್ನೆ ಉದ್ಭವಿಸುವುದಿಲ್ಲ' ಎಂದು ನ್ಯಾಯಪೀಠ ವಿವರಿಸಿದೆ.



ಆರೋಪಿಗಳಾದ ಮಂಗಳೂರಿನ ದಂಪತಿ ರೋಶನ್ ಸಲ್ಡಾನಾ, ಅವರ ಪತ್ನಿ ಡಾಫ್ನಿ ನೀತು ಡಿಸೋಜಾ ಮತ್ತು ಚಿತ್ರದುರ್ಗದ ಎನ್.ಚಂದ್ರಶೇಖರ್ ತಮ್ಮ ವಿರುದ್ಧದ 11 ಎಫ್‌ಐಆರ್‌ಗಳನ್ನು ರದ್ದುಪಡಿಸುವಂತೆ ಕೋರಿ ಹೈಕೋರ್ಟ್ ಮೆಟ್ಟಿಲೇರಿದ್ದರು.

ಆಟೊ ಕದ್ದು ₹5 ಸಾವಿರಕ್ಕೆ ಮಾರಾಟ: ಆರೋಪಿ ಸೆರೆ

ಬೆಂಗಳೂರು: ಮಾದಕ ವ್ಯಸನ ಮುಕ್ತ ಕೇಂದ್ರದ ಮಾಲೀಕ ಹಾಗೂ ಆಟೊ ಚಾಲಕನ ಮೇಲೆ ಹಲ್ಲೆ ನಡೆಸಿ, ಮೊಬೈಲ್ ಕಸಿದುಕೊಂಡು ಪರಾರಿ ಆಗಿದ್ದ ಆರೋಪಿಯನ್ನು ಬಾಗಲೂರು ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ದೇವನಹಳ್ಳಿಯ ಜೊನ್ನಹಳ್ಳಿ ನಿವಾಸಿ ಖನೀಶ್ ಬಂಧಿತ ವ್ಯಕ್ತಿ.

ಆರೋಪಿ ಖನೀಶ್ ಡ್ರಗ್ಸ್ ವ್ಯಸನಿಯಾಗಿದ್ದ. ಆತನನ್ನು ಸರಿದಾರಿಗೆ ತರುವ ಉದ್ದೇಶದಿಂದ ಎಚ್‌ಎಸ್‌ಆರ್ ಲೇಔಟ್‌ನ ಹರಳೂರು ಬಳಿಯ ನ್ಯೂ ಹೋಪ್ ಫೌಂಡೇಷನ್ ರಿಯಾಬ್ ಕೇಂದ್ರಕ್ಕೆ ಪೋಷಕರು ಸೇರಿಸಿದ್ದರು. ಈ ರಿಯಾಬ್ ಸೆಂಟರ್‌ನಲ್ಲಿದ್ದ ಮತ್ತೊಬ್ಬ ಸಹಚರನೊಂದಿಗೆ ಸೇರಿಕೊಂಡು ಕೇಂದ್ರದ ಮಾಲೀಕ ಮದನ್ ಮೇಲೆ ಆರೋಪಿ ಹಲ್ಲೆ ನಡೆಸಿದ್ದ. ಅಲ್ಲದೇ ಮೊಬೈಲ್ ಕಸಿದುಕೊಂಡು ಕಾಂಪೌಂಡ್ ಜಿಗಿದು ಪರಾರಿಯಾಗಿದ್ದ ಎಂದು ಪೊಲೀಸರು ಹೇಳಿದರು.

ಕದ್ದ ಮೊಬೈಲ್‌ನಲ್ಲಿದ್ದ ರ‍್ಯಾಪಿಡೊ ಆ್ಯಪ್ ಮೂಲಕ ಆಟೊ ಬುಕ್ ಮಾಡಿದ್ದ. ಬಾಗಲೂರು ಪೊಲೀಸ್ ಠಾಣೆ ವ್ಯಾಪ್ತಿಯ ಜೊನ್ನಹಳ್ಳಿ ಗ್ರಾಮಕ್ಕೆ ಆಟೊದಲ್ಲಿ ತೆರಳಿದ್ದ. ಅಲ್ಲಿ ಆಟೊ ನಿಲುಗಡೆ ಮಾಡುವಂತೆ ಹೇಳಿದ್ದ. ಆಟೊ ಚಾಲಕ ಬಾಡಿಗೆ ಕೊಡುವಂತೆ ಕೇಳಿದ್ದರು. ಇದರಿಂದ ಆಕ್ರೋಶಗೊಂಡು ರಸ್ತೆಬದಿ ಬಿದ್ದಿದ್ದ ಕಲ್ಲಿನಿಂದ ಆಟೊ ಚಾಲಕನ ಮೇಲೂ ಹಲ್ಲೆ ನಡೆಸಿದ್ದ. ನಂತರ ಆರೋಪಿ ಖನೀಶ್‌ನೇ ಆಟೊ ಓಡಿಸಿಕೊಂಡು ಮಾಲೂರಿಗೆ ಹೋಗಿ ಆಟೊವನ್ನು ₹5 ಸಾವಿರಕ್ಕೆ ಮಾರಾಟ ಮಾಡಿದ್ದ ಎಂದು ಪೊಲೀಸರು ಹೇಳಿದರು.

ಆಟೊ ಚಾಲಕ ಹಾಗೂ ಮಾದಕ ವ್ಯಸನ ಮುಕ್ತ ಕೇಂದ್ರದ ಮಾಲೀಕ ನೀಡಿದ ದೂರಿನ ಮೇಲೆ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಕ್ಯಾಂಟರ್ ಡಿಕ್ಕಿ: ಕಾರು ಚಾಲಕ ಸಾವು

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ನಗರದ ವಾಪಸಂದ್ರ ಬೈಪಾಸ್ ರಸ್ತೆಯಲ್ಲಿ ಶುಕ್ರವಾರ ಕಾರಿಗೆ ಕ್ಯಾಂಟರ್ ಡಿಕ್ಕಿಯಾದ ಪರಿಣಾಮ ಕಾರು ಚಾಲಕ ಮೃತಪಟ್ಟಿದ್ದಾರೆ. ಮತ್ತೊಬ್ಬರು ಗಾಯಗೊಂಡಿದ್ದಾರೆ.

ಬೆಂಗಳೂರಿನ ಅನ್ಸರ್ (60) ಮೃತರು. ಅನ್ಸರ್ ಕಾರು ಬಾಡಿಗೆ ಓಡಿಸುತ್ತಿದ್ದರು. ಕೆ.ಆರ್.ಪುರದಿಂದ ಚಿಕ್ಕಬಳ್ಳಾಪುರದ ದರ್ಗಾಗೆ ಜಿಯಾವುಲ್ಲಾ ಎಂಬುವವರನ್ನು ಕರೆದುಕೊಂಡು ಬರುತ್ತಿದ್ದರು. ಕಾರನ್ನು ಹೆದ್ದಾರಿಯಲ್ಲಿ ನಿಲ್ಲಿಸಿದ್ದಾರೆ.

ಹಿಂಬದಿಯಿಂದ ಬಂದ ಕ್ಯಾಂಟರ್ ಡಿಕ್ಕಿಯಾಗಿದೆ. ಡಿಕ್ಕಿ ರಭಸಕ್ಕೆ ಕಾರು ಜಖಂಗೊಂಡಿದೆ. ಅಪಘಾತದಿಂದ ಕೆಲವು ಗಂಟೆ ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಚಾರ ದಟ್ಟಣೆ ಉಂಟಾಗಿತ್ತು. ಸ್ಥಳೀಯರು ಆಟೊದಲ್ಲಿ ಗಾಯಾಳುವನ್ನು ಜಿಲ್ಲಾ ಆಸ್ಪತ್ರೆಗೆ ದಾಖಲಿಸಿದರು.

'ಡ್ರಾಪ್' ಕೇಳುವ ನೆಪದಲ್ಲಿ ದರೋಡೆ: ಇಬ್ಬರ ಬಂಧನ



ಸಂದೀಪ್



ಶಾಮ್

ಬೆಂಗಳೂರು: 'ಡ್ರಾಪ್' ಕೇಳುವ ನೆಪದಲ್ಲಿ ಚಾಕು ಹಾಗೂ ಹೆಲ್ಮೆಟ್‌ನಿಂದ ಹಲ್ಲೆ ನಡೆಸಿ ದರೋಡೆ ನಡೆಸಿದ್ದ ಇಬ್ಬರನ್ನು ಬಂಧಿಸುವಲ್ಲಿ ಚಿಕ್ಕಜಾಲ ಠಾಣಾ ಪೊಲೀಸರು ಯಶಸ್ವಿ ಆಗಿದ್ದಾರೆ.

ಯಲಹಂಕ ತಾಲ್ಲೂಕು ಹುಣಸಮಾರನಹಳ್ಳಿಯ ಬಿ.ವಿ. ರಾಮನ್‌ನಗರದ ನಿವಾಸಿ ಎಚ್.ಎಸ್. ಸಂದೀಪ್ (26) ಹಾಗೂ ಜನತಾ ಕ್ವಾಟ್ರಸ್‌ನ ನಿವಾಸಿ ಶಾಮ್ (23) ಬಂಧಿತರು.

ಬಂಧಿತರಿಂದ ಬೈಕ್, ಮೊಬೈಲ್, ಪರ್ಸ್ ಹಾಗೂ ಕೃತ್ಯಕ್ಕೆ ಬಳಸಿದ್ದ ಚಾಕು, ಹೆಲ್ಮೆಟ್ ಹಾಗೂ ₹2.20 ಲಕ್ಷ ನಗದು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಕಲ್ಯಾಣ ಮಂಟಪವೊಂದರಲ್ಲಿ ವ್ಯವಸ್ಥಾಪಕರಾಗಿ ಕೆಲಸ ಮಾಡುತ್ತಿರುವ ದೂರುದಾರರು, ಮಾರ್ಚ್ 25ರಂದು ಮುಂಜಾನೆ 3 ಗಂಟೆಯ ಸುಮಾರಿಗೆ ಹುಣಸಮಾರನಹಳ್ಳಿ ರಸ್ತೆಯಲ್ಲಿ ಬೈಕ್‌ನಲ್ಲಿ ತೆರಳುತ್ತಿದ್ದರು. ಅದೇ ಮಾರ್ಗದಲ್ಲಿ ದರೋಡೆ ನಡೆಸಲು ಇಬ್ಬರು ಆರೋಪಿಗಳು ಹೊಂಚು ಹಾಕಿದ್ದರು. ಬೈಕ್ ಅನ್ನು ಅಡ್ಡಗಟ್ಟಿ 'ಡ್ರಾಪ್' ಕೇಳಿದ್ದರು. ಆರೋಪಿಗಳನ್ನು ವ್ಯವಸ್ಥಾಪಕ ತಮ್ಮ ಬೈಕ್‌ನಲ್ಲಿ ಕೂರಿಸಿಕೊಂಡು ಹೊಸಹಳ್ಳಿ ರಸ್ತೆಯಲ್ಲಿ ತೆರಳುತ್ತಿದ್ದರು. ಡಿ–ಮಾರ್ಟ್ ಬಳಿ ಬೈಕ್ ತೆರಳುವಾಗ ವಾಹನವನ್ನು ನಿಲುಗಡೆ ಮಾಡುವಂತೆ ದರೋಡೆಕೋರರು ಸೂಚಿಸಿದ್ದರು. ಬೈಕ್ ನಿಲ್ಲಿಸುತ್ತಿದ್ದಂತೆಯೇ ಚಾಕು ಹಾಗೂ ಹೆಲ್ಮೆಟ್‌ನಿಂದ ಹಲ್ಲೆ ನಡೆಸಿದ್ದರು. ಬಳಿಕ ದ್ವಿಚಕ್ರ ವಾಹನ, ಪರ್ಸ್, ನಗದು ಹಾಗೂ ಮೊಬೈಲ್ ಕಸಿದುಕೊಂಡು ಪರಾರಿ ಆಗಿದ್ದರು ಎಂದು ಪೊಲೀಸರು ಹೇಳಿದರು.

'ಆರೋಪಿಗಳನ್ನು ಬಂಧಿಸಿ, ವಿಚಾರಣೆ ನಡೆಸಲಾಗಿದೆ. ಕೃತ್ಯ ಎಸಗಿರುವುದಾಗಿ ಆರೋಪಿಗಳು ತಪ್ಪೊಪ್ಪಿಕೊಂಡಿದ್ದಾರೆ. ಇನ್ನೂ ಯಾವ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ರೀತಿಯ ಕೃತ್ಯ ಎಸಗಿದ್ದಾರೆ ಎಂಬುದರ ಕುರಿತು ತನಿಖೆ ನಡೆಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

ಪಶ್ಚಿಮ ಬಂಗಾಳದ ವ್ಯಕ್ತಿ ಆತ್ಮಹತ್ಯೆ

ಬೆಂಗಳೂರು: ಕಬ್ಬನ್‌ಪಾರ್ಕ್‌ನ ಮರವೊಂದಕ್ಕೆ ನೇಣು ಹಾಕಿಕೊಂಡು ಪಶ್ಚಿಮ ಬಂಗಾಳದ ವ್ಯಕ್ತಿಯೊಬ್ಬರು ಶುಕ್ರವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.



ಸುರೇಶ್

ಸುರೇಶ್ (35) ಆತ್ಮಹತ್ಯೆ ಮಾಡಿಕೊಂಡವರು.

ಸುರೇಶ್ ಕಾಣೆ ಆಗಿರುವ ಸಂಬಂಧ ಅವರ ಕುಟುಂಬಸ್ಥರು, ಎಚ್‌ಎಸ್‌ಆರ್ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ನಾಪತ್ತೆ ದೂರು ದಾಖಲಿಸಿಕೊಂಡಿದ್ದ ಪೊಲೀಸರು, ನಗರದ ಬೇರೆ ಬೇರೆ ಠಾಣೆಗೆ ಮಾಹಿತಿ ನೀಡಿದ್ದರು. ಶುಕ್ರವಾರ ಬೆಳಿಗ್ಗೆ ಕಬ್ಬನ್‌ಪಾರ್ಕ್‌ನಲ್ಲಿ ವಾಯುವಿಹಾರಕ್ಕೆ ತೆರಳಿದ್ದ ಸಾರ್ವಜನಿಕರು, ಪೊಲೀಸರಿಗೆ ಮಾಹಿತಿ ನೀಡಿದ್ದರು. ಮಾಹಿತಿ ಆಧರಿಸಿ, ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದಾಗ ಮರವೊಂದಕ್ಕೆ ನೇಣು ಹಾಕಿಕೊಂಡ ಸ್ಥಿತಿಯಲ್ಲಿ ಸುರೇಶ್ ಶವ ಪತ್ತೆಯಾಗಿದೆ.

ಆತ್ಮಹತ್ಯೆಗೆ ನಿಖರ ಕಾರಣ ತಿಳಿದು ಬಂದಿಲ್ಲ. ಪಶ್ಚಿಮ ಬಂಗಾಳದ ಸುರೇಶ್ ಅವರು ನಗರದ ಎಸ್.ಪಿ ರಸ್ತೆಯಲ್ಲಿ ಇರುವ ಮೊಬೈಲ್ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದರು. ಮೃತ ವ್ಯಕ್ತಿಯ ಜೇಬಿನಲ್ಲಿ ಗುರುತಿನ ಚೀಟಿ ಮಾತ್ರ ಸಿಕ್ಕಿದೆ. ಯಾವುದೇ, ಮರಣ ಪತ್ರ ಸಿಕ್ಕಿಲ್ಲ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ತೆರಿಗೆ ವಂಚನೆ ಪ್ರಕರಣ ರಿಕ್ಕಿ ರೈಗೆ ನೋಟಿಸ್ ಜಾರಿ

ಬೆಂಗಳೂರು: ಲ್ಯಾಂಬೋರ್ಗಿನಿ ಕಾರಿಗೆ ನಕಲಿ ನೋಂದಣಿ ಸಂಖ್ಯೆ ಅಳವಡಿಸಿ, ತೆರಿಗೆ ವಂಚಿಸಿದ್ದ ಪ್ರಕರಣದಲ್ಲಿ ಉದ್ಯಮಿ ರಿಕ್ಕಿ ರೈ ಅವರಿಗೆ ವಿಚಾರಣೆಗೆ ಬರುವಂತೆ ಪೊಲೀಸರು ನೋಟಿಸ್ ಜಾರಿ ಮಾಡಿದ್ದಾರೆ.




ರಿಕ್ಕಿ ರೈ

ರಿಕ್ಕಿ ರೈ ಅವರ ವಿರುದ್ಧ ಕಬ್ಬನ್‌ಪಾರ್ಕ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು.

ರಿಕ್ಕಿ ರೈಗೆ ಸೇರಿದ ಲ್ಯಾಂಬೋರ್ಗಿನಿ ಕಾರನ್ನು ಅನಿಲ್ ಕುಂಬ್ಳೆ ವೃತ್ತದಲ್ಲಿ ಮಾರ್ಚ್ 21ರಂದು (ಕೆಎ-05-ಎನ್‌ಆರ್-0009) ಚಾಲಕ ಅಪಾಯಕಾರಿಯಾಗಿ ಚಾಲನೆ ಮಾಡಿದ್ದರು. ಈ ದೃಶ್ಯವನ್ನು ಸ್ಥಳೀಯರು ಮೊಬೈಲ್‌ನಲ್ಲಿ ಸೆರೆ ಹಿಡಿದು, 'ಎಕ್ಸ್' ಖಾತೆಯಲ್ಲಿ ಸಂಚಾರ ಪೊಲೀಸರಿಗೆ ಟ್ಯಾಗ್ ಮಾಡಿದ್ದರು. ಘಟನೆಯ ಸಂಬಂಧ ಕಬ್ಬನ್‌ಪಾರ್ಕ್ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಕಾರನ್ನು ಜಪ್ತಿ ಮಾಡಲಾಗಿತ್ತು. ಅಪಾಯಕಾರಿ ಚಾಲನೆ ಪ್ರಕರಣದ ತನಿಖೆ ನಡೆಸಿದಾಗಿ ಕಾರಿನ ಮಾಲೀಕರ ಪತ್ತೆ ಆಗಿತ್ತು. ಆಗ ರಿಕ್ಕಿ ರೈ ಅವರನ್ನು ಕರೆಸಿ ವಿಚಾರಣೆ ನಡೆಸಲಾಗಿತ್ತು. ಇದೀಗ ನಕಲಿ ನೋಂದಣಿ ಸಂಖ್ಯೆ ಅಳವಡಿಸಿ, ತೆರಿಗೆ ವಂಚಿಸಿದ್ದ ಪ್ರಕರಣದಲ್ಲೂ ವಿಚಾರಣೆ ನಡೆಸಬೇಕಿದೆ ಎಂದು ಪೊಲೀಸರು ಹೇಳಿದರು.

ಲ್ಯಾಂಬೋರ್ಗಿನಿ ಕಾರಿನ ಮಾಹಿತಿ ಮತ್ತು ದಾಖಲಾತಿ ನೀಡುವಂತೆ ಕೋರಿ ಬೆಂಗಳೂರು ದಕ್ಷಿಣ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ, ಮಾರ್ಚ್ 24ರಂದು ಪತ್ರ ಬರೆಯಲಾಗಿತ್ತು. ಆಗ ನಕಲಿ ನೋಂದಣಿ ಸಂಖ್ಯೆ ಅಳವಡಿಸಿಕೊಂಡಿರುವುದು ಪತ್ತೆ ಆಗಿತ್ತು. ರಿಕ್ಕಿ ರೈ ವಿರುದ್ಧ ಪ್ರಕರಣ ದಾಖಲು ಮಾಡಿಕೊಳ್ಳಲಾಗಿತ್ತು ಎಂದು ಪೊಲೀಸರು ಹೇಳಿದರು.

ರಿಕ್ಕಿ ರೈ ಪಡೆದುಕೊಂಡಿರುವ ಆಕರ್ಷಕ ನೋಂದಣಿ ಸಂಖ್ಯೆಯನ್ನು ಸಾರಿಗೆ ಇಲಾಖೆಯಲ್ಲಿ ನೋಂದಣಿ ಮಾಡಿಸಿಲ್ಲ. ಸಂಚಾರ ಅಪರಾಧ ನಿಯಮಗಳನ್ನು ಉಲ್ಲಂಘನೆ ಮಾಡಿದಾಗ ತಪ್ಪಿಸಿಕೊಳ್ಳುವ ಉದ್ದೇಶದಿಂದ ಮತ್ತು ಯಾವುದೊ ಅಪರಾಧ ಕೃತ್ಯ ಎಸಗುವ ಉದ್ದೇಶದಿಂದ ಮೂಲ ನಂಬರ್ ಪ್ಲೇಟ್ ಬದಲಾಗಿ ನಕಲಿ ನಂಬರ್ ಕೆಎ 05 ಎನ್‌ಆರ್ 0009 ಅನ್ನು ಈ ಕಾರಿನ ನೋಂದಣಿ ಸಂಖ್ಯೆಯೆಂದು ಸಾರ್ವಜನಿಕರು, ಸರ್ಕಾರ ಹಾಗೂ ಇಲಾಖೆ ಅಧಿಕಾರಿಗಳು ನಂಬುವಂತೆ ಅಳವಡಿಸಿಕೊಂಡು ವಂಚಿಸಿರುವುದು ಕಂಡುಬಂದಿದೆ ಎಂದು ಪೊಲೀಸರು ಹೇಳಿದರು.



ಬೆಂಗಳೂರಿಗೆ ಬಂದಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಶುಕ್ರವಾರ ಸ್ವಾಗತಿಸಿದರು

ಕಾಸು ಕೊಟ್ಟು ಪೊರಕೆ, ಮೊರದಲ್ಲಿ ಏಟು

ಪ್ರಜಾವಾಣಿ ವಾರ್ತೆ

ಆನೇಕಲ್: ಕಾಸು ಕೊಟ್ಟು ಪೊರಕೆ, ಮೊರದಲ್ಲಿ ಹೊಡೆಸಿಕೊಳ್ಳಲು ಭಕ್ತರು ಇಲ್ಲಿನ ಧರ್ಮರಾಯಸ್ವಾಮಿ ದೇವಾಲಯದಲ್ಲಿ ಮುಗಿಬಿದ್ದರು. ಕರಗ ಮಹೋತ್ಸವ ಪ್ರಯುಕ್ತ ಶುಕ್ರವಾರ ಪೊರಕೆ, ಮೊರದಲ್ಲಿ ಏಟು ತಿಂದು ಭಕ್ತಿ ಸಮರ್ಪಿಸಿದರು.

ಕೋಟೆ ಜಗಳ ಅಥವಾ ವೀರ ಅಭಿಮನ್ಯು ಪದ್ಮವ್ಯೂಹ ಭೇದಿಸುವುದು ಎಂಬ ಹೆಸರಿನಲ್ಲಿ ಈ ಆಚರಣೆ ನಡೆಯಿತು. ಮಹಿಳೆಯರು, ಮಕ್ಕಳು ಸೇರಿ ಕಾಳಿ ವೇಷಧಾರಿಗೆ ಹಣ ನೀಡಿ ಹೊಡೆಸಿಕೊಂಡರು. ಜನರನ್ನು ನಿಭಾಯಿಸಲು ಕರಗ ಸಮಿತಿ ಪದಾಧಿಕಾರಿಗಳು ಹರಸಾಹಸಪಟ್ಟರು.



ಧರ್ಮರಾಯ ಕರಗ ಮಹೋತ್ಸವದಲ್ಲಿ ಪೊರಕೆ, ಮೊರದಲ್ಲಿ ಹೊಡೆಸಿಕೊಳ್ಳುತ್ತಿರುವ ಭಕ್ತರು

ಕೋಟೆ ಜಗಳದಲ್ಲಿ ಕಾಳಿ ದೇವಿಯ ಆವಾಹನೆಗೊಳಗಾದ ವ್ಯಕ್ತಿ ಕರಗದ ಗುಡಿಯಲ್ಲಿ ಗುಡಿಸಿದ ಪೊರಕೆ, ಮೊರವನ್ನು ಹಿಡಿದು ಗುಡಿಯ ಸುತ್ತಲೂ ಸುತ್ತುತ್ತಿದ್ದರು. ದೇವಿ ಅವಾಹನೆಗೊಳಗಾದ ವ್ಯಕ್ತಿಯಿಂದ ಪೊರಕೆ, ಮೊರಗಳಿಂದ ಹೊಡೆಸಿಕೊಂಡರೆ ಒಳ್ಳೆಯದಾಗುವುದು ಮತ್ತು ನಕಾರಾತ್ಮಕ ಅಂಶ ನಾಶವಾಗುತ್ತದೆ ಎಂಬ ನಂಬಿಕೆಯಿದೆ.

ಉಚಿತ ದೃಷ್ಟಿ ತಪಾಸಣೆ, ಕನ್ನಡಕ ವಿತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ 40 ವರ್ಷ ಮೇಲ್ಪಟ್ಟವರಿಗೆ ಉಚಿತ ದೃಷ್ಟಿ ತಪಾಸಣೆ ಮತ್ತು ಓದುವಾಗ ಬಳಸುವ ಕನ್ನಡಕಗಳ ವಿತರಣೆಗೆ ಆರೋಗ್ಯ ಇಲಾಖೆಯು ರಿಸ್ಟೋರಿಂಗ್ ವಿಷನ್ ಸಂಸ್ಥೆ ಜತೆಗೆ ಒಡಂಬಡಿಕೆ ಮಾಡಿಕೊಂಡಿದೆ.



ಆಯುಷ್ಮಾನ್ ಆರೋಗ್ಯ ಮಂದಿರ ಉಪ ಕೇಂದ್ರಗಳ ಮೂಲಕ ಈ ತಪಾಸಣೆ ಹಾಗೂ ಕನ್ನಡಕ ವಿತರಣೆ ಕಾರ್ಯಕ್ರಮವನ್ನು ಪ್ರಾಯೋಗಿಕವಾಗಿ ಆರಂಭಿಸಲಾಗುತ್ತಿದೆ. ಮೊದಲ ಹಂತದಲ್ಲಿ ಯಾದಗಿರಿ ಜಿಲ್ಲೆಯನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಆಸ್ಪತ್ರೆಗಳು, ಸಮುದಾಯ ಆರೋಗ್ಯ ಕೇಂದ್ರಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ಉಪ ಕೇಂದ್ರಗಳನ್ನು ಒಳಗೊಂಡಂತೆ ಜಿಲ್ಲೆಯಲ್ಲಿ ಸುಮಾರು ಒಂದು ಲಕ್ಷ ಓದಲು ಬಳಸುವ ಕನ್ನಡಕಗಳನ್ನು ಉಚಿತವಾಗಿ ವಿತರಿಸುವ ಗುರಿಯನ್ನು ಇಲಾಖೆ ಹೊಂದಿದೆ.

ಯಾದಗಿರಿ ಜಿಲ್ಲೆಯಲ್ಲಿ ಶೇ 28 ರಷ್ಟು ಜನರು ದೂರದೃಷ್ಟಿ ಹಾಗೂ ಸಮೀಪ ದೃಷ್ಟಿ ಸಮಸ್ಯೆಯಿಂದ ಬಳಲುತ್ತಿದ್ದಾರೆ ಎಂದು ಇಲಾಖೆ ಅಂದಾಜಿಸಿದೆ.

'ರಾಜ್ಯದಲ್ಲಿ 2025ರ ಅಕ್ಟೋಬರ್‌ನಲ್ಲಿ ಆರಂಭಿಸಿದ 'ಆಶಾ ಕಿರಣ' ಯೋಜನೆಯ ಕ್ಷೇತ್ರ ಮೌಲ್ಯಮಾಪನದ ನಂತರ, ವಿಶ್ವ ಆರೋಗ್ಯ ಸಂಸ್ಥೆ ಮತ್ತು ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಪ್ರತಿನಿಧಿಗಳನ್ನು ಒಳಗೊಂಡ ಜಂಟಿ ತಂಡದ ಶಿಫಾರಸುಗಳನ್ನು ಆಧರಿಸಿ ಈ ಕಾರ್ಯಕ್ರಮ ವಿನ್ಯಾಸ ಮಾಡಲಾಗಿದೆ. ದೃಷ್ಟಿ ಸಮಸ್ಯೆ ಹೊಂದಿರುವ ವ್ಯಕ್ತಿಗಳನ್ನು ಸಮುದಾಯ ಮಟ್ಟದಲ್ಲಿ ಪರೀಕ್ಷಿಸಿ, ಅಗತ್ಯ ಇರುವವರಿಗೆ ಓದುವ ಕನ್ನಡಕಗಳನ್ನು ನೀಡಲಾಗುತ್ತದೆ' ಎಂದು ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

'ಆಶಾ ಸಿಬ್ಬಂದಿ ಸೇರಿ ಆರೋಗ್ಯ ಕಾರ್ಯಕರ್ತರು ಸಹ ಈ ಸಂಪರ್ಕ ಕಾರ್ಯಕ್ರಮದ ಭಾಗವಾಗಿ ಮನೆ ಮನೆಗೆ ತೆರಳಿ ತಪಾಸಣೆ ನಡೆಸಲಿದ್ದಾರೆ. ಮುಂದಿನ ಹಂತಗಳಲ್ಲಿ ರಾಜ್ಯದಾದ್ಯಂತ ಈ ಕಾರ್ಯಕ್ರಮ ವಿಸ್ತರಿಸಲು ಉದ್ದೇಶಿಸಲಾಗಿದೆ' ಎಂದು ವಿವರಿಸಿದ್ದಾರೆ.

ವೈಯಕ್ತಿಕ ದ್ವೇಷ: ಕ್ಯಾಬ್ ಚಾಲಕನ ಕೊಲೆ

ರಾಮನಗರ: ತಾಲ್ಲೂಕಿನ ಚಕ್ಕೆರೆದೊಡ್ಡಿ ಬಳಿ ಐದು ದಿನಗಳ ಹಿಂದೆ ತನ್ನ ಸಹೋದ್ಯೋಗಿ ಮತ್ತು ಆತನ ಸಹಚರರು ನಡೆಸಿದ ಹಲ್ಲೆಯಿಂದ ಗಂಭೀರವಾಗಿ ಗಾಯಗೊಂಡು ಬೆಂಗಳೂರಿನ ನಿಮ್ಹಾನ್ಸ್‌ನಲ್ಲಿ ಚಿಕಿತ್ಸೆಗೆ ದಾಖಲಾಗಿದ್ದ ಕ್ಯಾಬ್ ಚಾಲಕ ಅವಿನಾಶ್ (25) ಶುಕ್ರವಾರ ಸಾವಿಗೀಡಾಗಿದ್ದಾರೆ. ಕುಟುಂಬದವರು ಅವರ ಅಂಗಾಂಗ ದಾನ ಮಾಡಿದ್ದಾರೆ.

ಘಟನೆಗೆ ಸಂಬಂಧಿಸಿದಂತೆ ಸಹೋದ್ಯೋಗಿ ಕನಕಪುರ ತಾಲ್ಲೂಕಿನ ಜೀವನ್, ಸಂಬಂಧಿಕರಾದ ಶಿವರುದ್ರಯ್ಯ ಮತ್ತು ಚಂದನ್‌ನನ್ನು ಪೊಲೀಸರು ಬಂಧಿಸಿದ್ದಾರೆ.



ಕೊಚ್ಚಿನ್‌ನಲ್ಲಿ ನಡೆದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಲತಾ ಟಿ.ಎಸ್., ಎ.ಎಸ್. ಗೀತಾಂಜಲಿ ಪ್ರಶಸ್ತಿ ಸ್ವೀಕರಿಸಿದರು.

ಕೆಎಸ್‌ಆರ್‌ಟಿಸಿಗೆ ಪ್ರಶಸ್ತಿ


ಬೆಂಗಳೂರು: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ ಹಮ್ಮಿಕೊಂಡಿರುವ ಉತ್ತಮ ತರಬೇತಿ ಕಾರ್ಯಕ್ರಮಗಳಿಗೆ 'ಅತ್ಯುತ್ತಮ ತರಬೇತಿ ಮತ್ತು ಸಂಯೋಜಿತ ಅಭಿವೃದ್ಧಿ' ವರ್ಗದಲ್ಲಿ 'ವಿಶ್ವ ಮಾನವ ಸಂಪನ್ಮೂಲ ಅಭಿವೃದ್ಧಿ ಕಾಂಗ್ರೆಸ್ ಪ್ರಶಸ್ತಿ-2026' ಪಡೆದಿದೆ.

ಕೆಎಸ್‌ಆರ್‌ಟಿಸಿಯ 5 ತರಬೇತಿ ಕೇಂದ್ರಗಳಲ್ಲಿ ಇಂಧನ ಕ್ಷಮತೆ, ಪುನಶ್ಚೇತನ, ಅಪಘಾತ ರಹಿತ ಚಾಲನಾ ತರಬೇತಿ, ರಸ್ತೆ ಸುರಕ್ಷತೆ, ಸಿಮ್ಯುಲೇಟರ್, ಪಿ.ಎಂ.ಅಜಯ್ ಯೋಜನೆ ಅಡಿ ಪರಿಶಿಷ್ಟ ಜಾತಿ ಅಭ್ಯರ್ಥಿಗಳಿಗೆ ಭಾರಿ ವಾಹನದ ತರಬೇತಿ, ಸಾರಿಗೆ ಇಲಾಖೆಯ ಸಹಯೋಗದೊಂದಿಗೆ ಚಾಲನಾ ಪರವಾನಗಿ ಉಚಿತ ವಿತರಣೆ, ಅಲ್ಪಸಂಖ್ಯಾತ ನಿರ್ದೇಶನಾಲಯದ ಸಹಯೋಗದೊಂದಿಗೆ ಅಲ್ಪ ಸಂಖ್ಯಾತ ಸಮುದಾಯದ ಅಭ್ಯರ್ಥಿಗಳಿಗೆ ಲಘು/ಭಾರಿ ವಾಹನ ಚಾಲನಾ ತರಬೇತಿ, ಚಾಲನಾ ಪರವಾನಗಿ ಉಚಿತ ವಿತರಣೆ, ಖಾಸಗಿ ಅಭ್ಯರ್ಥಿಗಳಿಗೆ ಚಾಲನಾ ತರಬೇತಿ, ಹೊಸದಾಗಿ ಆಯ್ಕೆಗೊಂಡ ಚಾಲಕ-ಕಂ-ನಿರ್ವಾಹಕರಿಗೆ, ಕರಾಸಾ ಪೇದೆಗಳಿಗೆ, ಕಿರಿಯ ಸಹಾಯಕರಿಗೆ ವೃತ್ತಿ ಪರಿಚಯ ಹಾಗೂ ಕರ್ತವ್ಯ ಮತ್ತು ಜವಾಬ್ದಾರಿ ತರಬೇತಿ, ಮೇಲ್ವಿಚಾರಕ ಸಿಬ್ಬಂದಿಗಳಿಗೆ ವಿಶೇಷ ತರಬೇತಿ, ಚಾಲಕ ಬೋಧಕರನ್ನು ಘಟಕಗಳಿಗೆ ನಿಯೋಜಿಸಿ ಚಾಲನಾ ಸಿಬ್ಬಂದಿಗೆ ತರಬೇತಿ, ಆಡಳಿತ ಸಿಬ್ಬಂದಿಗೆ ಪುನಶ್ಚೇತನ ತರಬೇತಿ ಸೇರಿದಂತೆ 6 ತಿಂಗಳಲ್ಲಿ 12,000ಕ್ಕೂ ಹೆಚ್ಚು ಮಂದಿಗೆ ತರಬೇತಿ ನೀಡಿರುವುದನ್ನು ಪರಿಗಣಿಸಿ ಈ ಪ್ರಶಸ್ತಿ ನೀಡಲಾಗಿದೆ.

ಕೊಚ್ಚಿನ್‌ನಲ್ಲಿ ನಡೆದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಂಡಳಿ ಕಾರ್ಯದರ್ಶಿಯೂ ಆಗಿರುವ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ಲತಾ ಟಿ.ಎಸ್., ಹಾಸನ ಪ್ರಾದೇಶಿಕ ತರಬೇತಿ ಕೇಂದ್ರದ ಪ್ರಾಂಶುಪಾಲರಾದ ಎ.ಎಸ್. ಗೀತಾಂಜಲಿ ಪ್ರಶಸ್ತಿ ಸ್ವೀಕರಿಸಿದರು.

ನಗರದಲ್ಲಿ ಇಂದು

ಸಿನಿಮಾ ಸಾಹಿತ್ಯ ರಚನೆ ಕುರಿತು ಮಾತುಕತೆ: **ಅತಿಥಿ:** ಜಯಂತ ಕಾಯ್ಕಿಣಿ, ಆಯೋಜನೆ ಹಾಗೂ ಸ್ಥಳ: ಟೆಂಟ್ ಸಿನಿಮಾ, ಲಿರಿಕ್ಸ್, 17ನೇ ಮುಖ್ಯ ರಸ್ತೆ, ಬನಶಂಕರಿ 2ನೇ ಹಂತ, ಬೆಳಿಗ್ಗೆ 10



ಜಯಂತ ಕಾಯ್ಕಿಣಿ

ಜಾಣಗೆರೆ ವೆಂಕಟರಾಮಯ್ಯ ಅವರ ಆತ್ಮಕಥೆ 'ಅರ್ಥವಾಗದ ಲೋಕ' ಪುಸ್ತಕ ಬಿಡುಗಡೆ: ಹಂಪ ನಾಗರಾಜಯ್ಯ, ಉದ್ಘಾಟನೆ: ವೂಡೇ ಪಿ. ಕೃಷ್ಣ, ಅಧ್ಯಕ್ಷತೆ: ಎಸ್.ಜಿ. ಸಿದ್ಧರಾಮಯ್ಯ, ಅತಿಥಿ: ಎಲ್. ಹನುಮಂತಯ್ಯ, ಪುಸ್ತಕದ ಬಗ್ಗೆ ಮಾತು: ಬಂಜಗೆರೆ ಜಯಪ್ರಕಾಶ್, ಆಯೋಜನೆ: ಜಾಣಗೆರೆ ಪತ್ರಿಕೆ ಪ್ರಕಾಶನ, ಸ್ಥಳ: ಬಾಪು ಸಭಾಂಗಣ, ಗಾಂಧಿ ಭವನ, ಕುಮಾರ ಪಾರ್ಕ್ ಪೂರ್ವ, ಬೆಳಿಗ್ಗೆ 10



ಜಾಣಗೆರೆ ವೆಂಕಟರಾಮಯ್ಯ

ಪ್ರೊ.ಮುನಿಯಪ್ಪ ಅವರ 'ಸಮಗ್ರ ಸಾಹಿತ್ಯ' ಮತ್ತು 'ಹಳೇ ಊರಿನ ಹಣತೆ' ಪುಸ್ತಕ ಬಿಡುಗಡೆ ಸಮಾರಂಭ: ಉದ್ಘಾಟನೆ: ಸತೀಶ್ ಜಾರಕಿಹೊಳಿ, ಪುಸ್ತಕ ಬಿಡುಗಡೆ: ಹಂಪ ನಾಗರಾಜಯ್ಯ, ಅಧ್ಯಕ್ಷತೆ: ಜಯಕರ ಎಸ್.ಎಂ., ಅತಿಥಿಗಳು: ಶಾಂತಲಾ ಕೆ.ಟಿ., ಚಂದ್ರಕಾಂತ್ ಕರಿಗಾರ್, ಎಂ.ಜಿ. ಮಂಜುನಾಥ್, ಎಚ್.ಎಲ್. ಪುಷ್ಪ, ಆಯೋಜನೆ: ಪ್ರೊ. ಮುನಿಯಪ್ಪ ಮೇಷ್ಟ್ರ ಶಿಷ್ಯ ಬಳಗ, ಸ್ಥಳ: ಪ್ರೊ.ಎಚ್.ಎನ್. ಸಭಾಂಗಣ, ಜ್ಞಾನಭಾರತಿ, ಬೆಂಗಳೂರು ವಿಶ್ವವಿದ್ಯಾಲಯ, ಬೆಳಿಗ್ಗೆ 10.30

'ಹೃದಯಸ್ಪಂದನ ಭಾವಜ್ಯೋತಿ' ಪುಸ್ತಕ ಬಿಡುಗಡೆ ಸಮಾರಂಭ: ಉದ್ಘಾಟನೆ: ಎಂ. ಪ್ರಕಾಶಮೂರ್ತಿ, ಅಧ್ಯಕ್ಷತೆ: ಜಿ. ಮುನಿರಾಜು, ಆಯೋಜನೆ: ಶ್ರೀ ನಾರಾಯಣ ಎಜುಕೇಷನ್ ಟ್ರಸ್ಟ್, ಸ್ಥಳ: ಘಾನಾಲಿಂಗ ಶಿವಯೋಗಿ ಸಭಾಭವನ, ಜೆ.ಎಸ್.ಎಸ್. ಶಾಲೆ ಆವರಣ, ಬನಶಂಕರಿ 2ನೇ ಹಂತ, ಬೆಳಿಗ್ಗೆ 10.15


'ಎಸ್‌ವಿಎನ್ ಸ್ಮಾರಕ ವಾರ್ಷಿಕ ಸಂಗೀತ ಉತ್ಸವ'ದ ಪ್ರಯುಕ್ತ ಸಂಗೀತ ಕಛೇರಿ: ಗಾಯನ: ಅಂಜಲಿ ಶ್ರೀರಾಮ್, ಪಿಟೀಲು: ಅಚ್ಯುತ ರಾವ್, ಮೃದಂಗ: ಬಿ.ಎಸ್. ಪ್ರಶಾಂತ್, ಗಾಯನ: ಎಂ.ಎಸ್. ಶೀಲಾ, ಪಿಟೀಲು: ಬಿ.ಆರ್. ರಘು, ಮೃದಂಗ: ಆನೂರು ಅನಂತಕೃಷ್ಣ ಶರ್ಮ, ಘಟ: ಓಂಕಾರ್ ರಾವ್, ಆಯೋಜನೆ: ಶ್ರೀ ರಾಮ ಸೇವಾ ಮಂಡಳಿ ಟ್ರಸ್ಟ್, ಸ್ಥಳ: ಎಸ್‌ವಿಎನ್ ಮೆಮೋರಿಯಲ್ ಹಾಲ್, ನೆಟ್ಟಿಗೆರೆ, ಮಧ್ಯಾಹ್ನ 3.15

ಯುದ್ಧ ಬೇಡ ಶಾಂತಿ ಬೇಕು: ಉಪಸ್ಥಿತಿ: ಸಂತೋಷ್ ಹೆಗ್ಡೆ, ವಿ. ಗೋಪಾಲಗೌಡ, ಗುರುರಾಜ ಕರಜಗಿ, ರೂಪಶ್ರೀ ಕುಮಾರ್, ಎನ್. ಕೃಷ್ಣಪ್ಪ, ನಾಗರಾಜ್ ಎಚ್., ಡಿ. ಕೃಷ್ಣಪ್ಪ, ರುದ್ರಯ್ಯ, ಪಿ. ಕೆಂಪಣ್ಣ, ಆಯೋಜನೆ: ಸ್ವಾಮಿ ವಿವೇಕಾನಂದ ಅಭ್ಯುದಯ ಪ್ರತಿಷ್ಠಾನ, ಸ್ಥಳ: ನ್ಯಾಯಾಂಗ ಇಲಾಖೆ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ಕಟ್ಟಡ, 8ನೇ ಮುಖ್ಯರಸ್ತೆ, ನ್ಯಾಯಾಂಗ ಬಡಾವಣೆ, ಮಧ್ಯಾಹ್ನ 3.30

33ನೇ ಶ್ರೀರಾಮನವಮಿ ಸಂಗೀತೋತ್ಸವ: ಸಂಗೀತ ಕಛೇರಿ: ಗಾಯನ: ಸಿ. ರಾಮಕೃಷ್ಣ, ಪಿಟೀಲು: ಮಹತಿ, ಮೃದಂಗ: ಪ್ರಹ್ಲಾದ್ ವರಹಸ್ವಾಮಿ, ಸಂಗೀತ ಕಛೇರಿ: ಪಿಟೀಲು: ಮೈಸೂರು ನಾಗರಾಜ್, ಮೈಸೂರು ಮಂಜುನಾಥ್, ಮೃದಂಗ: ನೈವೇಲಿ ವೆಂಕಟೇಶ್, ಘಟ: ವಝುಪ್ಪಳ್ಳಿ ಕೃಷ್ಣಕುಮಾರ್, ಆಯೋಜನೆ ಮತ್ತು ಸ್ಥಳ: ಶ್ರೀವಾಣಿ ಕಲಾ ಕೇಂದ್ರ, ಬಸವೇಶ್ವರನಗರ, ಸಂಜೆ 4.15

ನೆಲ್ಲುಕುಂಟೆ ವೆಂಕಟೇಶ್ ಅವರ 'ಮಿಥಿಲೆಯ ಮಾವಿನ ಮರ' ಪುಸ್ತಕ ಬಿಡುಗಡೆ: ಕೆ.ವಿ. ನಾರಾಯಣ, ಪುಸ್ತಕದ ಬಗ್ಗೆ ಮಾತು: ವಿನಯಾ ಒಕ್ಕುಂದ, ಅತಿಥಿ: ಕೆ.ಪಿ. ಸುರೇಶ, ಅಧ್ಯಕ್ಷತೆ: ಬಂಜಗೆರೆ ಜಯಪ್ರಕಾಶ್, ಆಯೋಜನೆ: ಆಕೃತಿ ಪುಸ್ತಕ, ಸ್ಥಳ: ಡಾ.ಎಚ್.ಎನ್. ಮಲ್ಟಿಮೀಡಿಯಾ ಹಾಲ್, ನ್ಯಾಷನಲ್ ಕಾಲೇಜು, ಬಸವನಗುಡಿ, ಸಂಜೆ 4.30

ಪದವಿ ಪ್ರಮಾಣಪತ್ರ ಪ್ರದಾನ, 'ಯಕ್ಷ ಸಾಹಿತ್ಯ ಸಾಂಗತ್ಯ' ಪುಸ್ತಕ ಬಿಡುಗಡೆ ಹಾಗೂ 'ಪುಣ್ಯಕೋಟಿ' ಯಕ್ಷಗಾನ ನೃತ್ಯ ರೂಪಕ ಪ್ರದರ್ಶನ: ಅಧ್ಯಕ್ಷತೆ: ನಾಗೇಶ್ ವಿ. ಬೆಟ್ಟಕೋಟೆ, ಪದವಿ ಪ್ರದಾನ: ಕೆ. ರಾಮಕೃಷ್ಣಯ್ಯ, ಪುಸ್ತಕ ಬಿಡುಗಡೆ: ಆರ್. ಲಕ್ಷ್ಮೀನಾರಾಯಣ, ಉಪಸ್ಥಿತಿ: ಆನಂದರಾಮ ಉಪಾಧ್ಯ, ಉಮೇಶ ಶಿರೂರು, ಆಯೋಜನೆ: ಕಲಾ ಕದಂಬ ಆರ್ಟ್ ಸೆಂಟರ್, ಸ್ಥಳ: ಬಿ.ಎಂ.ಶ್ರೀ. ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 4.30



ನಾಲ್ಕು ಪುಸ್ತಕಗಳ ಬಿಡುಗಡೆ: 'ಉದಾರವಾದಿಯ ಉಭಯಸಂಕಟ', 'ಮಸುಕು ಬೆಟ್ಟದ ದಾರಿ', 'ಪರಿಕ್ರಮ', 'ಕರ್ನಾಟಕದ ನದಿಗಳ ಕಥೆ–ವ್ಯಥೆ' ಪುಸ್ತಕ, ಅತಿಥಿಗಳು: ರಮೇಶ ದೊಡ್ಡಪುರ, ವಿದ್ಯಾರಶ್ಮಿ ಪೆಲ್ಲತ್ತಡ್ಕ, ಉಪಸ್ಥಿತಿ: ಎಂ.ಆರ್. ದತ್ತಾತ್ರಿ, ಬಿ.ಎಸ್. ಜಯಪ್ರಕಾಶ ನಾರಾಯಣ, ರಮ್ಯ ಎಸ್., ಕೃಷ್ಣ ಕೊಲ್ಹಾರ ಕುಲಕರ್ಣಿ, ಆಯೋಜನೆ: ಸಮನ್ವಿತ, ಸ್ಥಳ: ವಾಡಿಯಾ ಸಭಾಂಗಣ, ಬಸವನಗುಡಿ, ಸಂಜೆ 5


ಐ.ಎಂ. ವಿಠ್ಠಲಮೂರ್ತಿ ಅವರ 'ಬದುಕು ಜಟಕಾ ಬಂಡಿ, ನಾನದರ ಸಾಹೇಬ...' ಪುಸ್ತಕ ಬಿಡುಗಡೆ: ಚಿರಂಜೀವಿ ಸಿಂಘ್, ಪುಸ್ತಕದ ಬಗ್ಗೆ ಮಾತು: ಟಿ.ಎನ್. ಸೀತಾರಾಂ, ಅತಿಥಿ: ಕೆ.ಎನ್. ಶಾಂತಕುಮಾರ್, ಆಯೋಜನೆ: ಬಹುರೂಪಿ, ಅನಿಕೇತನ, ಸ್ಥಳ: ಐಎಎಸ್ ಅಧಿಕಾರಿಗಳ ಸಂಘ, ಇನ್‌ಫ್ಯಾಂಟ್ರಿ ರಸ್ತೆ, ಸಂಜೆ 5

ಕಗ್ಗ–ಮಂಥನ: ವಾಚನದ ಜತೆಗೆ ಭಾವಾರ್ಥವನ್ನು ಚಿತ್ರೀಕರಿಸಿದ ಕಗ್ಗಗಳ ಸರಣಿ ಜನಾರ್ಪಣೆ: ಅತಿಥಿಗಳು: ಎಲಿಜಬೆತ್ ಚೆರಿಯನ್, ವಿ. ನಾಗೇಂದ್ರ ಪ್ರಸಾದ್, ಬಿ.ಎಲ್. ನಾಗೇಂದ್ರ ಪ್ರಸಾದ್, ಅನಿರುದ್ಧ ಜತ್ಕರ್, ಅಧ್ಯಕ್ಷತೆ: ಸಂದೀಪ ಪರ್ವತೀಕರ, ಆಯೋಜನೆ: ಕಲಾವೇದಿಕೆ ಟ್ರಸ್ಟ್, ಸ್ಥಳ: ರೋಟರಿ ಬೆಂಗಳೂರು ಉದ್ಯೋಗ್ ಸಭಾಂಗಣ, ಪೀಣ್ಯ, ಸಂಜೆ 5.30

ಊಂಜಲ್ ಸಂಗೀತೋತ್ಸವ: ಗಾಯನ: ನಿರೀಕ್ಷಾ ಮಂಜುನಾಥ್, ಪಿಟೀಲು: ಎಸ್. ಶಶಿಧರ್, ಮೃದಂಗ: ಶ್ರೀನಿವಾಸ್ ಅನಂತರಾಮಯ್ಯ, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್, ಸ್ಥಳ: ವೆಂಕಟೇಶ್ವರಸ್ವಾಮಿ ದೇವಸ್ಥಾನ (ಟಿಟಿಡಿ), 16ನೇ ಅಡ್ಡರಸ್ತೆ, ವೈಯಾಲಿಕಾವಲ್, ಸಂಜೆ 6



ವಾರ್ಷಿಕ ಸಂಗೀತ ಉತ್ಸವ: ಸಿತಾರ್ ವಾದನ: ಮೋಹನ್ ಖಾನ್, ಗಾಯನ: ಅನುರಾಧಾ ಕುಬೇರ್, ತಬಲಾ: ಸುಮಿತ್ ನಾಯ್ಕ್, ರೂಪಕ್ ಕಲ್ಲೂರ್ಕರ್, ಹಾರ್ಮೋನಿಯಂ: ಸೌಮಿತ್ರ ಕ್ಷೀರಸಾಗರ್, ಆಯೋಜನೆ: ರಾಜಗುರು ಸ್ಮೃತಿ, ಸ್ಥಳ: ಖಿಂಚ ಸಭಾಂಗಣ, ಭಾರತೀಯ ವಿದ್ಯಾಭವನ, ರೇಸ್ ಕೋರ್ಸ್ ರಸ್ತೆ, ಸಂಜೆ 6



'ವೀಕೆಂಡ್' ನಾಟಕೋತ್ಸವ: 'ಸೂರ್ಯಾಸ್ತದಿಂದ ಸೂರ್ಯೋದಯದವರೆಗೆ' ನಾಟಕ ಪ್ರದರ್ಶನ, ನಿರ್ದೇಶನ: ನಂಜುಂಡೇಗೌಡ ಸಿ., ತಂಡ: ದೃಶ್ಯ ಕಾವ್ಯ, ಸ್ಥಳ: ಕೆ.ಇ.ಎ. ಪ್ರಭಾತ್ ರಂಗಮಂದಿರ, ಬಸವೇಶ್ವರನಗರ, ಸಂಜೆ 6.30

ಕೆಂಗೇರಿ ಯಲ್ಲಮ್ಮದೇವಿಯ ಕರಗ ಮಹೋತ್ಸವ ಪ್ರಯುಕ್ತ 'ಗದಾಯುದ್ಧ' ಯಕ್ಷಗಾನ ಪ್ರದರ್ಶನ: ಹಿಮ್ಮೇಳ: ಗಜಾನನ ಹೆಗಡೆ, ನಾರಾಯಣ ಹೆಬ್ಬಾರ್, ಪನ್ನಗ, ಮುಮ್ಮೇಳ: ದೇವದಾಸ್ ಶೆಟ್ಟಿ ಮರಾಳಿ, ಪ್ರಶಾಂತ ಹೆಗಡೆ, ಭರತರಾಜ ಪರ್ಕಳ, ಅಂಬರೀಷ ಭಟ್, ಮನೋಜ ಭಟ್, ರಾಮಕೃಷ್ಣ ಭಟ್, ಕೌಸ್ತುಭ ಉಡುಪ, ಪ್ರಸಾದ ಮಂದರ್ತಿ, ದೇವದಾಸ ಶೆಟ್ಟಿ ಮಾರಾಳಿ, ಸ್ಥಳ: ಯಲ್ಲಮ್ಮದೇವಿ ಹಸಿಕರಗ ಮಂಟಪದ ಆವರಣ, ಕೆಂಗೇರಿ, ಸಂಜೆ 6.30

88ನೇ ಶ್ರೀರಾಮನವಮಿ ಸಂಗೀತೋತ್ಸವ: **ಸಂಗೀತ ಕಛೇರಿ:** ಮಿಹಿಕಾ ಸೂರಜ್, ಸಂದೀಪ್ ನಾರಾಯಣ್, ಮತ್ತೂರ್ ಶ್ರೀನಿಧಿ, ಕೆ.ಯು. ಜಯಚಂದ್ರ ರಾವ್, ಎಸ್. ಕೃಷ್ಣ, ಆಯೋಜನೆ: ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲೆ ಆವರಣ, ಚಾಮರಾಜಪೇಟೆ, ಸಂಜೆ 5ರಿಂದ



ಸಂದೀಪ್ ನಾರಾಯಣ್

ಮುತ್ಯಾಲಮ್ಮ ದೇವಿ ರಥೋತ್ಸವ: ವಿವಿಧ ಧಾರ್ಮಿಕ ವಿಧಿವಿಧಾನ, ಆಯೋಜನೆ ಮತ್ತು ಸ್ಥಳ: ಮುತ್ಯಾಲಮ್ಮ ದೇವಿ ದೇವಸ್ಥಾನ ಟ್ರಸ್ಟ್, ಮುತ್ಯಾಲಮ್ಮ ಕೆ. ಸ್ಟ್ರೀಟ್, ಶಿವಾಜಿನಗರ, ಸಂಜೆ 7

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಸಂಚಾರ ಅಯೋಮಯ, ವಾತಾವರಣ ದೂಳುಮಯ

ನಿಧಾನಗತಿಯಲ್ಲಿ ಸಾಗಿದ ವೈಟ್ ಟಾಪಿಂಗ್ ಕಾಮಗಾರಿ

• ವಾಹನ ಸವಾರರು ಹೈರಾಣ, ವ್ಯಾಪಾರಸ್ಥರು ಕಂಗಾಲು

• ಖಲೀಲಅಹ್ಮದ ಶೇಖ

ಬೆಂಗಳೂರು: ಚಾಮರಾಜಪೇಟೆ ಐದನೇ ಮುಖ್ಯರಸ್ತೆಯಲ್ಲಿ ವೈಟ್ ಟಾಪಿಂಗ್ ಕಾಮಗಾರಿ ಕೈಗೊಂಡಿದ್ದು, ರಸ್ತೆ ಹಾಗೂ ಪಾದಚಾರಿ ಮಾರ್ಗಗಳು ಅಧ್ವಾನಗೊಂಡಿವೆ. ಇದರಿಂದ ವಾಹನ ಸಂಚಾರಕ್ಕೆ ತೊಂದರೆಯಾಗಿದೆ. ಇಡೀ ಪ್ರದೇಶ ದೂಳುಮಯವಾಗಿದ್ದು, ಸ್ಥಳೀಯರ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿದೆ.

ಎರಡು ತಿಂಗಳ ಹಿಂದೆಯೇ ಈ ರಸ್ತೆಯಲ್ಲಿ ವೈಟ್‌ಟಾಪಿಂಗ್ ಕಾಮಗಾರಿ ಆರಂಭವಾಗಿದೆ. ಇದಕ್ಕಾಗಿ ಬೆಸ್ಕಾಂನವರು ಭೂಗತ ಕೇಬಲ್ ಹಾಗೂ ಜಲಮಂಡಳಿಯವರು ಕೊಳವೆಗಳನ್ನು ಅಳವಡಿಸಲು ಒಂದು ಬದಿಯ ಪಾದಚಾರಿ ಮಾರ್ಗ ಹಾಗೂ ರಸ್ತೆಯನ್ನು ಅಗೆದು ಹಾಕಿದ್ದಾರೆ. ಚರಂಡಿ ಮೇಲಿನ ಕಾಂಕ್ರೀಟ್ ಸ್ಲ್ಯಾಬ್‌ಗಳು ಹಾಗೂ ಪೇವರ್ಸ್‌ಗಳನ್ನು ತೆಗೆದಿದ್ದಾರೆ. ಕೆಲವು ಕಡೆ ಗುಂಡಿಗಳನ್ನು ತೆಗೆಯಲಾಗಿದೆ. ಗುಂಡಿ ಹಾಗೂ ಸ್ಲ್ಯಾಬ್‌ಗಳನ್ನು ತೆಗೆದಿರುವ ಜಾಗದಲ್ಲಿ ಯಾವುದೇ ಸುರಕ್ಷತಾ ಕ್ರಮಗಳನ್ನು ಕೈಗೊಂಡಿಲ್ಲ.

‘ಈ ರಸ್ತೆಯಲ್ಲಿ ಏಕಮುಖ ಸಂಚಾರಕ್ಕೆ ಅವಕಾಶ ಕಲ್ಪಿಸಲಾಗಿದೆ. ಇದನ್ನು ಲೆಕ್ಕಿಸದ ದ್ವಿಚಕ್ರ ವಾಹನ ಸವಾರರು, ಆಟೊ ಚಾಲಕರು ಇದೇ ರಸ್ತೆಯಲ್ಲಿ ಸಂಚರಿಸುತ್ತಿದ್ದಾರೆ. ಇದರಿಂದ ನಿತ್ಯ ಸಂಚಾರ ದಟ್ಟಣೆ ಆಗುತ್ತಿದೆ. ಬೆಳಿಗ್ಗೆ 8ರಿಂದ 11 ಗಂಟೆ ಹಾಗೂ ಸಂಜೆ 5 ರಿಂದ ರಾತ್ರಿ 8 ಗಂಟೆಯ ಅವಧಿಯೊಳಗೆ ಈ ರಸ್ತೆಯಲ್ಲಿ ವಾಹನಗಳು ಸಾಲುಗಟ್ಟಿ ನಿಂತಿರುತ್ತವೆ’ ಎಂದು ಸಾರ್ವಜನಿಕರು ದೂರಿದರು.

ಮುಖ್ಯಾಂಶಗಳು

- ಹೆಚ್ಚಿದ ಅಪಘಾತಗಳ ಸಂಖ್ಯೆ
- ಜಲಮಂಡಳಿ ಕಡೆಗೆ ಬೊಟ್ಟು ಮಾಡುತ್ತಿರುವ ಪಾಲಿಕೆ ಅಧಿಕಾರಿಗಳು
- ಸಂಪರ್ಕ ರಸ್ತೆ ಅಗೆದು ಬಿಟ್ಟಿರುವುದರಿಂದ ಪರದಾಟ

‘ಕೆಲವು ಒಳ ರಸ್ತೆಗಳಿಂದ ಈ ರಸ್ತೆಯನ್ನು ಸಂಪರ್ಕಿಸುವ ಜಾಗದಲ್ಲಿ ಅಗೆದಿರುವುದರಿಂದ ಅಲ್ಲಲ್ಲ ವಾಹನಗಳು ಸುತ್ತಿಬಳಸಿ ಹೋಗಬೇಕಿದೆ. ನಗರದ ಜನರು ದೂಳಿನಿಂದ ತೊಂದರೆ ಅನುಭವಿಸುತ್ತಿದ್ದಾರೆ. ಕೆಲ ಪ್ರದೇಶಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳನ್ನು ಅಗೆದು ಹಾಗೆಯೇ ಬಿಡಲಾಗಿದೆ. ಸಾರ್ವಜನಿಕರ ಓಡಾಟಕ್ಕೆ ಸಮಸ್ಯೆ ಆಗಿದೆ. ಪಾದಚಾರಿ ಮಾರ್ಗವನ್ನು ಅಗೆದು ಚರಂಡಿ ಕಾಮಗಾರಿ ಕೈಗೊಂಡಿದ್ದು, ಅಂಗಡಿಗೆ ಹೋಗಲು ಯಾವುದೇ ರೀತಿಯ ವ್ಯವಸ್ಥೆ ಮಾಡಿಲ್ಲ. ಇದರಿಂದ ಗ್ರಾಹಕರೇ ಬರುತ್ತಿಲ್ಲ. ವ್ಯಾಪಾರ–ವಹಿವಾಟಿಗೆ ಧಕ್ಕೆಯಾಗಿದೆ’ ಎಂದು ಹೋಟೆಲ್ ಮಾಲೀಕರೊಬ್ಬರು ದೂರಿದರು.

‘ವಿಜಯನಗರ, ಮೈಸೂರು ರಸ್ತೆ, ಬಸವನಗುಡಿಯಿಂದ ಬರುವ ಬಿಎಂಟಿಸಿ ಬಸ್‌ಗಳು ಈ ರಸ್ತೆಯ ಮೂಲಕವೇ ಕೆ.ಆರ್. ಮಾರುಕಟ್ಟೆ ಹಾಗೂ ಮೆಜೆಸ್ಟಿಕ್‌ಗೆ ತೆರಳುತ್ತಿವೆ. ರಸ್ತೆಯಲ್ಲಿ ಏಕಮುಖ ಸಂಚಾರ ಇರುವುದರಿಂದ ಸಂಚಾರ ದಟ್ಟಣೆ ಆಗುತ್ತಿದೆ. ವಾಹನ ಸಂಚಾರದಿಂದ ನಿತ್ಯ ದೂಳಿನ ಮಜ್ಜನವಾಗುತ್ತಿದ್ದು, ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿದೆ. ಚೆನ್ನಾಗಿರುವ ರಸ್ತೆಯನ್ನು ಅಗೆದು ಹಾಕಲಾಗಿದೆ. ಮಳೆ ಬಂದಾಗ ಇಡೀ ರಸ್ತೆ ಕೆಸರುಗದ್ದೆಯಾಗಿ ಮಾರ್ಪಡುತ್ತದೆ’ ಎಂದು ಸ್ಥಳೀಯ ನಿವಾಸಿ ಚಂದ್ರಶೇಖರ್ ಆಕ್ರೋಶ ವ್ಯಕ್ತಪಡಿಸಿದರು.

‘ಈ ರಸ್ತೆಯಲ್ಲಿ ಬಿಎಂಟಿಸಿ ಬಸ್‌ಗಳು ಸೇರಿದಂತೆ ಲಾರಿ, ದ್ವಿಚಕ್ರ ವಾಹನಗಳು ಸಂಚರಿಸುತ್ತವೆ. ರಸ್ತೆ ಕಾಮಗಾರಿ ಪ್ರಗತಿಯಲ್ಲಿರುವ ಕಾರಣ ಪ್ರತಿನಿತ್ಯ ಸಂಚಾರ ದಟ್ಟಣೆ ಆಗುತ್ತಿದೆ. ರಸ್ತೆಯಲ್ಲಿ ಗುಂಡಿಗಳು ಬಿದ್ದಿರುವ ಕಾರಣ ಪ್ರತಿದಿನ ಒಂದಿಲ್ಲೊಂದು ಅಪಘಾತಗಳು ಸಂಭವಿಸುತ್ತಿವೆ. ಕಾಮಗಾರಿ ಪೂರ್ಣಗೊಳಿಸುವಂತೆ ಪಾಲಿಕೆ ಅಧಿಕಾರಿಗಳನ್ನು ಕೇಳಿದರೆ, ಜಲಮಂಡಳಿಯ ಕಡೆಗೆ ಬೊಟ್ಟು ಮಾಡಿ ತೋರಿಸುತ್ತಿದ್ದಾರೆ. ಇದರಿಂದ ಕಾಮಗಾರಿ ವಿಳಂಬವಾಗುತ್ತಿದೆ’ ಎಂದು ವ್ಯಾಪಾರಿಗಳು ದೂರಿದರು.

‘ರಸ್ತೆಯನ್ನು ಅಗೆದು, ಬೃಹತ್ ಕೊಳವೆಗಳನ್ನು ತಂದು ಇಡಲಾಗಿದೆ. ಆದರೆ, ಕಾಮಗಾರಿಗೆ ವೇಗ ಸಿಕ್ಕಿಲ್ಲ. ವಾಹನಗಳು ಓಡಾಡಿದಾಗಲೆಲ್ಲ ದೂಳಿನ ಮಜ್ಜನವಾಗುತ್ತಿದೆ’ ಎಂದು ವೃದ್ಧರೊಬ್ಬರು ಅಳಲು ತೋಡಿಕೊಂಡರು.

‘ಚಾಮರಾಜಪೇಟೆ ಐದನೇ ಮುಖ್ಯರಸ್ತೆಯಲ್ಲಿ ಜಿಬಿಎಯಿಂದ ವೈಟ್ ಟಾಪಿಂಗ್ ಕಾಮಗಾರಿ ನಡೆಸಲಾಗುತ್ತಿದೆ. ಇಲ್ಲಿ ಕೊಳವೆಗಳನ್ನು ಜೋಡಿಸುವ ಕಾಮಗಾರಿ ನಡೆಯುತ್ತಿದ್ದು, ಕಾಮಗಾರಿ ಶೀಘ್ರವೇ ಪೂರ್ಣಗೊಳಿಸುವಂತೆ ಗುತ್ತಿಗೆದಾರರಿಗೆ ಸೂಚಿಸಲಾಗಿದೆ’ ಎಂದು ಜಲಮಂಡಳಿಯ ಅಧಿಕಾರಿಯೊಬ್ಬರು ತಿಳಿಸಿದರು.



ಚಾಮರಾಜಪೇಟೆಯ ಐದನೇ ಮುಖ್ಯರಸ್ತೆಯನ್ನು ಅಗೆದಿರುವುದು ಪ್ರಜಾವಾಣಿ ಚಿತ್ರ: ರಂಜು ಪಿ.



ಯುವತಿಯೊಬ್ಬರು ಮೇಲೆ ಹತ್ತಲು ಹರಸಾಹಸ ಪಟ್ಟರು



ಚಾಮರಾಜಪೇಟೆಯ ಐದನೇ ಮುಖ್ಯರಸ್ತೆ ಕೆಸರು ಗದ್ದೆಯಾಗಿ ಮಾರ್ಪಟ್ಟಿದೆ

ಸಾರ್ವಜನಿಕರು ಏನಂತಾರೆ?



ವೈಟ್ ಟಾಪಿಂಗ್ ಕಾಮಗಾರಿಗಾಗಿ ರಸ್ತೆ ಹಾಗೂ ಪಾದಚಾರಿ ಮಾರ್ಗವನ್ನು ಅಗೆದು ಅಲ್ಲಲ್ಲಿ ಮಣ್ಣಿನ ರಾಶಿ ಹಾಕಿದ್ದಾರೆ. ಕೊಳವೆಗಳನ್ನು ರಸ್ತೆಯಲ್ಲಿ ಇಟ್ಟಿದ್ದಾರೆ. ಮಳೆಗಾಲದಲ್ಲಿ ಕೆಲಸ ಪ್ರಾರಂಭಿಸಿದ್ದು, ಹಲವು ಅಧ್ವಾನಗಳಿಗೆ ಕಾರಣವಾಗುತ್ತಿದೆ. ಚೆನ್ನಾಗಿರುವ ರಸ್ತೆಯನ್ನು ಅಗೆದು ಹಾಕಲಾಗಿದೆ. ಇದರಿಂದ ನಮ್ಮ ವ್ಯಾಪಾರ–ವಹಿವಾಟು ಕಡಿಮೆಯಾಗಿದೆ.

ಶ್ರೀನಿವಾಸ್, ಬಾಳೆಎಲೆ ಅಂಗಡಿ ಮಾಲೀಕ



ಮಳೆಗಾಲದಲ್ಲಿ ಪಾದಚಾರಿ ಮಾರ್ಗವೆಲ್ಲ ಕೆಸರುಗದ್ದೆಯಾಗುತ್ತದೆ. ಮಳೆ ಇಲ್ಲದಿದ್ದಾಗ ದೂಳಿನ ಮಜ್ಜನವಾಗುತ್ತಿದೆ. ಇದರಿಂದ ಹೋಟೆಲ್ ಹಾಗೂ ರೆಸ್ಟೋರೆಂಟ್‌ಗಳಿಗೆ ಬರುವ ಗ್ರಾಹಕರ ಸಂಖ್ಯೆಯೂ ಕಡಿಮೆ ಆಗಿದ್ದು, ವ್ಯಾಪಾರ–ವಹಿವಾಟಿಗೆ ಹೊಡೆತ ಬಿದ್ದಿದೆ. ನಮ್ಮ ಹೋಟೆಲ್‌ಗೆ ಬರುವ ಮಾರ್ಗವನ್ನೇ ಅಗೆದು ಹಾಕಿದ್ದಾರೆ. ಹೋಟೆಲ್‌ನಲ್ಲಿ 20 ಜನ ಕಾರ್ಮಿಕರು ಕಾರ್ಯನಿರ್ವಹಿಸುತ್ತಿದ್ದಾರೆ. ಅವರಿಗೆ ಸಂಬಳ ನೀಡಲು ಅಗತ್ಯ ಇರುವಷ್ಟು ವ್ಯಾಪಾರ ವಹಿವಾಟು ಆಗುತ್ತಿಲ್ಲ. ಕಾಮಗಾರಿಗೆ ವೇಗ ನೀಡಿ, ಶೀಘ್ರವೇ ಪೂರ್ಣಗೊಳಿಸಬೇಕು.

ಮೆಹುಲ್, ಹೋಟೆಲ್ ಮಾಲೀಕ

‘ಸಾಮಾಜಿಕ ಮಾಧ್ಯಮಗಳ ಮೂಲಕ ಮನವಿ’

‘ಈ ರಸ್ತೆಯ ಕಾಮಗಾರಿ ಪೂರ್ಣಗೊಳಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಸಲ್ಲಿಸಲಾಗಿದೆ. ಇದೇ ತಿಂಗಳಲ್ಲಿ ಕಾಮಗಾರಿ ಮುಕ್ತಾಯವಾಗಬೇಕಿತ್ತು. ಆದರೆ, ಇದುವರೆಗೆ ಶೇಕಡ 20ರಷ್ಟು ಕೆಲಸವೂ ಆಗಿಲ್ಲ’ ಎಂದು ಸಾರ್ವಜನಿಕರು ಕಾಮಗಾರಿ ಸ್ಥಿತಿಗತಿಯನ್ನು ವಿಡಿಯೊ ಮಾಡಿ ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡಿದ್ದಾರೆ.

ಅಫ್ಗಾನಿಸ್ತಾನದಲ್ಲಿ ಭೂಕಂಪ: ಎಂಟು ಮಂದಿ ಸಾವು

ಕಾಬೂಲ್/ನವದೆಹಲಿ (ಎಪಿ/ಪಿಟಿಐ): ಅಫ್ಗಾನಿಸ್ತಾನದ ಉತ್ತರ, ಪೂರ್ವ ಭಾಗ ಹಾಗೂ ಪಾಕಿಸ್ತಾನದ ಪಶ್ಚಿಮ ಭಾಗಗಳಲ್ಲಿ ಶುಕ್ರವಾರ ರಾತ್ರಿ ಭೂಕಂಪ ಸಂಭವಿಸಿದ್ದು, ಎಂಟು ಮಂದಿ ಮೃತಪಟ್ಟಿದ್ದಾರೆ.

ಇದರ ತೀವ್ರತೆ ರಿಕ್ಟರ್ ಮಾಪಕದಲ್ಲಿ 5.8ರಷ್ಟು ದಾಖಲಾಗಿದೆ. ಭೂಕಂಪದ ಕೇಂದ್ರಬಿಂದು ಅಫ್ಗಾನಿಸ್ತಾನದ ಕುಂದುಜ್ ನಗರದಿಂದ ಪೂರ್ವಕ್ಕೆ ಸುಮಾರು 150 ಕಿಲೋಮೀಟರ್ ದೂರದಲ್ಲಿರುವ ಹಿಂದೂ ಕುಶ್ ಪರ್ವತ ಶ್ರೇಣಿಯಲ್ಲಿ ಕಂಡುಬಂದಿದೆ. ಭಾರತದ ದೆಹಲಿ, ಜಮ್ಮು ಮತ್ತು ಕಾಶ್ಮೀರ, ಪಂಜಾಬ್ ಮತ್ತು ಹರಿಯಾಣ ಸೇರಿ ಹಲವೆಡೆ ರಾತ್ರಿ 9.45ರ ಸುಮಾರಿಗೆ ಕೆಲ ಸೆಕೆಂಡ್‌ಗಳ ವರೆಗೆ ಭೂಮಿ ಕಂಪಿಸಿದೆ.

ಚಿಟಿಕೆ ಸುದ್ದಿ

ನಾಳೆಯಿಂದ ಮಣ್ಣೆಮ್ಮ ಜಾತ್ರೆ

ದಾಬಸ್‌ಪೇಟೆ: ನೆಲಮಂಗಲ ತಾಲ್ಲೂಕಿನ ಮಣ್ಣೆ ಗ್ರಾಮದ ‘ಮಣ್ಣೆಮ್ಮ ದೇವಿ’ ಜಾತ್ರಾ ಮಹೋತ್ಸವ ಏಪ್ರಿಲ್ 5ರಂದು ನಡೆಯಲಿದೆ.

ಗಣೇಶ ದೇವಾಲಯದಲ್ಲಿ ರುದ್ರಾಭಿಷೇಕ ಹಾಗೂ ಮಣ್ಣೆಮ್ಮ ದೇವಿ ಅಮ್ಮನವರ ರುದ್ರಾಭಿಷೇಕ ರಾಜೋಪಚಾರ ಪೂಜೆಯೊಂದಿಗೆ ಪ್ರಾರಂಭವಾಗುತ್ತದೆ. ಸಂಜೆ ಚೌಡೇಶ್ವರಿ ದೇವಿಗೆ ಬೆಲ್ಲದ ಆರತಿ ಉತ್ಸವ ಇದೆ.

ಸೋಮವಾರ ಸೋಮೇಶ್ವರ ಸ್ವಾಮಿಯ ಬೆಲ್ಲದ ಆರತಿ, ಮಂಗಳವಾರ ಮಣ್ಣೆಮ್ಮ ದೇವಿ (ರಾಂಪುರ, ಶಿರಗನ ಹಳ್ಳಿ, ಕನ್ನೊಹಳ್ಳಿ ಗ್ರಾಮದ) ಮಡಿಲಕ್ಕಿ ಸೇವೆ ಹಾಗೂ ಸಂಜೆ ಮೆರವಣಿಗೆ ಸಾಗಲಿದೆ.

ಬುಧವಾರ ಮಣ್ಣೆಮ್ಮ ದೇವಿ (ಅಗ್ರಹಾರ, ಗೊಲ್ಲರಹಟ್ಟಿ, ಅಪ್ಪಗೊಂಡನಹಳ್ಳಿ ಗ್ರಾಮದ) ಮಡಿಲಕ್ಕಿ ಸೇವೆ ಹಾಗೂ ಸಂಜೆ ಪಾತರಾಜ ಸ್ವಾಮಿ ಬಲಿ ಪೂಜೆ ಮತ್ತು ರಾಶಿ ಪೂಜೆ ನಡೆಯಲಿದೆ.

ಗುರುವಾರ ಮಣ್ಣೆಮ್ಮ ದೇವಿ ವಿಶೇಷ ಉತ್ಸವ, ಪುರ ಪ್ರವೇಶ ಹಾಗೂ ಲಿಂಗಧಾರಣೆಯೊಂದಿಗೆ ಮಣ್ಣೆ ಗ್ರಾಮದ ಮಡಿಲಕ್ಕಿ ಸೇವೆ ಹಾಗೂ ಶುಕ್ರವಾರ ಅಗ್ನಿ ಕೊಂಡೋತ್ಸವ, ತಂಬಿಟ್ಟಿನ ಆರತಿ, ಅಗ್ನಿ ಕೊಂಡೋತ್ಸವ ಹಾಗೂ ಸಂಜೆ ಕುಕ್ಕಲಮ್ಮದೇವಿಗೆ ತಂಬಿಟ್ಟಿನ ಆರತಿ ಉತ್ಸವ ಜರುಗಲಿದೆ.

ಶನಿವಾರ ಗಂಗರಸರ ನಾಡಿನ ನಾಡ ದೇವತೆ ಮಣ್ಣೆಮ್ಮ ದೇವಿ ಮಹಾ ರಥೋತ್ಸವ. ಸಂಜೆ ಮಣ್ಣೆಮ್ಮ ದೇವಿ ಮಹಾತ್ಮೆ ಪೌರಾಣಿಕ ನಾಟಕ ಪ್ರದರ್ಶನ ಏರ್ಪಡಿಸಲಾಗಿದೆ. ಭಾನುವಾರ ಕಡಲೆ ಪರಿಷೆ. ಆಂಜನೇಯ ಸ್ವಾಮಿಗೆ ಬೆಲ್ಲದ ಆರತಿ ಹಾಗೂ ಮಣ್ಣೆಮ್ಮ ದೇವಿ ಸೇವೆಯೊಂದಿಗೆ ಜಾತ್ರೆ ಅಂತ್ಯಗೊಳ್ಳಲಿದೆ.

ಅವಧಿ ವಿಸ್ತರಣೆ

ಬೆಂಗಳೂರು: ಡೆಹ್ರಾಡೂನ್ ರಾಷ್ಟ್ರೀಯ ಇಂಡಿಯನ್ ಮಿಲಿಟರಿ ಕಾಲೇಜಿಗೆ 8ನೇ ತರಗತಿಗೆ ಪ್ರವೇಶ ಪಡೆಯಲು ಅರ್ಜಿ ಸಲ್ಲಿಕೆ ಅವಧಿ ಏ.15 ರವರೆಗೆ ವಿಸ್ತರಿಸಲಾಗಿದೆ. ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಬೆಂಗಳೂರು ಕೇಂದ್ರದಲ್ಲಿ ಜೂನ್ 7 ರಂದು ಪ್ರವೇಶ ಪರೀಕ್ಷೆ ನಡೆಸಲಿದೆ. ಕರ್ನಾಟಕದ ಬಾಲಕ ಮತ್ತು ಬಾಲಕಿಯರಿಗೆ ಪ್ರವೇಶ ಪರೀಕ್ಷೆಗೆ ಅರ್ಜಿ ಆಹ್ವಾನಿಸಲಾಗಿದೆ..

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ವತಿಯಿಂದ ಅಭಿನಂದನಾ ಕಾರ್ಯಕ್ರಮ

‘ನಾಯಕರನ್ನು ಬೆಳೆಸಿದ ಪಿ.ಜಿ.ಆರ್ ಸಿಂಧ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿದ್ಯಾರ್ಥಿ ದೆಸೆಯಲ್ಲಿದ್ದಾಗಲೇ ಸ್ಕೌಟ್ಸ್ ಮತ್ತು ಗೈಡ್ಸ್ ಚಟುವಟಿಕೆಗಳಲ್ಲಿ ಭಾಗವಹಿಸಿದ್ದೆ. ಇದರಿಂದಾಗಿಯೇ ರಾಜಕೀಯವಾಗಿ ಬೆಳೆದು ಸ್ಪೀಕರ್ ಹುದ್ದೆಯನ್ನು ಅಲಂಕರಿಸುವಂತಾಗಿದೆ’ ಎಂದು ವಿಧಾನ ಸಭೆಯ ಸ್ಪೀಕರ್ ಯು.ಟಿ.ಖಾದರ್ ಹೇಳಿದರು.

ನಗರದ ಕೊಂಡಜ್ಜಿ ಬಸಪ್ಪ ಸಭಾಂಗಣದಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಶುಕ್ರವಾರ ಹಮ್ಮಿಕೊಂಡಿದ್ದ ‘ಗೌರವ ಡಾಕ್ಟರೇಟ್ ಪುರಸ್ಕೃತರಾದ ಪಿ.ಜಿ.ಆರ್. ಸಿಂಧ್ಯ ಅಭಿನಂದನಾ’ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

‘1983ರಲ್ಲಿ ಸಿಂಧ್ಯ ಅವರು ಸಚಿವರಾಗಿದ್ದರು. ಆಗ ಬೆಂಗಳೂರು ಅರಮನೆ ಮೈದಾನದಲ್ಲಿ ಕಾರ್ಯಕ್ರಮ ನಡೆದಿತ್ತು. ಪಕ್ಕದಲ್ಲಿಯೇ ಸ್ಕೌಟ್ಸ್ ಶಿಬಿರ ಆಯೋಜನೆಗೊಂಡಿತ್ತು. ಅಂದು ಸಿಂಧ್ಯ ಅವರನ್ನು ನೋಡಿದ್ದೆ. ಸ್ಕೌಟ್ಸ್ ಟೆಂಟ್‌ನಲ್ಲಿ ಇದ್ದ ಖಾದರ್ ಇಂದು ಸ್ಪೀಕರ್ ಹುದ್ದೆ ಏರಲು ಅಂದಿನ ಶಿಸ್ತು ಪ್ರೇರಣೆಯಾಗಿದೆ’ ಎಂದು ತಿಳಿಸಿದರು.

‘ಸಿಂಧ್ಯ ಅವರು ಏಕಾಏಕಿ ನಾಯಕರಾದವರಲ್ಲ. ವಿದ್ಯಾರ್ಥಿ ದೆಸೆಯಿಂದಲೂ ಅವರಲ್ಲಿ ನಾಯಕತ್ವದ ಗುಣಗಳು ಇದ್ದವು. ವಿಧಾನಸಭೆಯಲ್ಲೂ ಅವರ ಭಾಷಣಗಳನ್ನು ಕೇಳಿದ್ದೇನೆ. ತಾವೊಬ್ಬರೇ ನಾಯಕರಾಗಿ ಉಳಿಯದೇ ಹಲವರನ್ನು ಬೆಳೆಸಿದರು. ಇದರಿಂದಲೇ ಅವರು ಈಗಲೂ ಜನರ ಅಭಿಮಾನದ ನಡುವೆ ಉಳಿದಿದ್ದಾರೆ’ ಎಂದರು.

ಶಾಸಕ ಎಸ್.ಸುರೇಶ್ ಕುಮಾರ್ ಮಾತನಾಡಿ, ‘ಗುಲಬರ್ಗಾ ವಿವಿ ನೀಡಿದ ಡಾಕ್ಟರೇಟ್‌ನಿಂದ ಸಿಂಧ್ಯ ಅವರು ದೊಡ್ಡವರಾಗಿಲ್ಲ. ಸಿಂಧ್ಯ ಅವರಿಂದ ಆ ಪ್ರಶಸ್ತಿಯ ಮೌಲ್ಯ, ಗೌರವ ಹೆಚ್ಚಾಗಿದೆ. ಅವರು ಸಮಾಜಕ್ಕೆ ನೀಡಿದ ಕೊಡುಗೆಗಳು ಪ್ರೇರಣದಾಯಕ. ಬಹುತೇಕರಿಗೆ ಅವರು ಈಗಲೂ ಮಾದರಿ’ ಎಂದರು.

ನಿವೃತ್ತ ಲೋಕಾಯುಕ್ತ ನ್ಯಾ. ಎನ್. ಸಂತೋಷ್ ಹೆಗ್ಡೆ ಮಾತನಾಡಿ, ‘ತುರ್ತು ಪರಿಸ್ಥಿತಿ ಕಾಲದಿಂದಲೂ ಸಿಂಧ್ಯ ಅವರನ್ನು ನೋಡಿದ್ದೇನೆ. ಅವರೊಂದಿಗಿನ ಆ ದಿನಗಳನ್ನು ಮರೆಯಲಾಗದು’ ಎಂದು ತಿಳಿಸಿದರು.

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಉಪಾಧ್ಯಕ್ಷ ಕೊಂಡಜ್ಜಿ ಬ.ಷಣ್ಮುಖಪ್ಪ, ವಿದ್ವಾಂಸ ಗೊ.ರು.ಚನ್ನಬಸಪ್ಪ ಉಪಸ್ಥಿತರಿದ್ದರು.



ಅಭಿನಂದನಾ ಸಮಾರಂಭದಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪಡೆದ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ಮುಖ್ಯ ಆಯುಕ್ತ ಪಿ.ಜಿ.ಆರ್ ಸಿಂಧ್ಯ ಜತೆಗೆ ಪತ್ನಿ ಗೀತಾ ಸಿಂಧ್ಯ ಅವರನ್ನು ಸನ್ಮಾನಿಸಲಾಯಿತು. ಎಸ್ ಸುರೇಶ್ ಕುಮಾರ್, ಗೊ. ರು. ಚನ್ನಬಸಪ್ಪ, ಕೊಂಡಜ್ಜಿ ಬ. ಷಣ್ಮುಖಪ್ಪ, ಎಂ.ಎ.ಖಲೀದ್, ಗೀತಾ ನಟರಾಜ್ ಉಪಸ್ಥಿತರಿದ್ದರು. ಪ್ರಜಾವಾಣಿ ಚಿತ್ರ

ಸಿಂಧ್ಯ ಜೀವನಗಾಥೆ ಪುಸ್ತಕ

ಗೌರವ ಸ್ವೀಕರಿಸಿ ಮಾತನಾಡಿದ ಪಿ.ಜಿ.ಆರ್.ಸಿಂಧ್ಯ, ‘ವಿಧಾನಸೌಧದ ಮೂರನೇ ಮಹಡಿ ಹತ್ತುವುದು ಸುಲಭದ ಮಾತಲ್ಲ. ಇದಕ್ಕಾಗಿ ಸಾಕಷ್ಟು ಕಷ್ಟಗಳನ್ನು ಅನುಭವಿಸಿದ್ದೇನೆ. ನನ್ನ ಜೀವನದ ಐದಾರು ಮಹತ್ತರವಾದ ಘಟನೆಗಳನ್ನು ಒಳಗೊಂಡಂತೆ ಇಲ್ಲಿಯವರೆಗಿನ ಜೀವನ ಪಯಣದ ಪುಸ್ತಕ ಬರೆಯುತ್ತಿದ್ದೇನೆ. ಸೆಪ್ಟೆಂಬರ್ ವೇಳೆಗೆ ಹೊರಬರಲಿದೆ’ ಎಂದು ತಿಳಿಸಿದರು.

‘ರೋಗಿಯ ಕಾಳಜಿಯೇ ವೈದ್ಯಧರ್ಮ’

ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಸಲಹೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೋಗಿಗಳ ಬಗ್ಗೆ ಪ್ರೀತಿ-ಕಾಳಜಿ ತೋರುವುದೇ ನಿಜವಾದ ವೈದ್ಯಧರ್ಮ. ವೈದ್ಯರಾಗುವವರು ವೈದ್ಯಕೀಯ ಪದವಿ ಪಡೆದರಷ್ಟೇ ಸಾಲದು ಪ್ರೀತಿ, ಮಾನವೀಯತೆ, ಮಮಕಾರ, ಅಕ್ಕರೆ ಹಾಗೂ ಆರೈಕೆಯ ಗುಣಗಳನ್ನು ಅಳವಡಿಸಿಕೊಳ್ಳಬೇಕು ಎಂದು ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಹೇಳಿದರು.


ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಗುರುವಾರ ಆಯೋಜಿಸಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ರೋಗಿಯ ನೋವು, ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳಲು ಹೆಣ್ಣಿನ ಮನಸ್ಸಿರಬೇಕು. ರೋಗಿಗಳಲ್ಲಿ ತಾಯಿಯ ಆತ್ಮವಿಶ್ವಾಸ ತುಂಬಬೇಕು ಎಂದರು.

ರಾಜ್ಯದಲ್ಲಿನ ಬಹುತೇಕ ಮಹಿಳೆಯರು ರಕ್ತಹೀನತೆಯಿಂದ ಬಳಲುತ್ತಿದ್ದಾರೆ. ಶೇ 67ಕ್ಕಿಂತ ಹೆಚ್ಚು ಗರ್ಭಿಣಿಯರಲ್ಲಿ ರಕ್ತಹೀನತೆ ಇರುವುದು ಆತಂಕಕಾರಿ ವಿಷಯ. ಅಂತಹ ಮಹಿಳೆಯರ, ಮಕ್ಕಳ ಆರೋಗ್ಯದ ಬಗ್ಗೆಯೂ ಗಂಭೀರವಾಗಿ ಚಿಂತಿಸಬೇಕಿದೆ. ಜೈವಿಕವಾಗಿ ಪುರುಷರಿಗಿಂತ ಹೆಚ್ಚು ಶಕ್ತಿಶಾಲಿಗಳೆಂದು ಪರಿಗಣಿಸಲ್ಪಡುವ ಮಹಿಳೆಯರು, ಬೆಳೆಯುತ್ತಾ ರಕ್ತಹೀನತೆಯಂತಹ ಗಂಭೀರ ಸಮಸ್ಯೆಗೆ ಒಳಗಾಗುತ್ತಿರುವುದು ಆತಂಕದ ವಿಷಯ. ಕೌಟುಂಬಿಕ ಹಾಗೂ ಸಾಮಾಜಿಕ ಕಾರಣಗಳೂ ಇದಕ್ಕೆ ಕಾರಣ. ದೇಶದ ಸಾಂಪ್ರದಾಯಿಕ ವೈದ್ಯ ಪದ್ಧತಿಗಳಲ್ಲಿ ಸರಳ, ಸುಲಭ ಮತ್ತು ಪರಿಣಾಮಕಾರಿಯಾಗಿ ತಡೆಗಟ್ಟುವಿಕೆ ಹಾಗೂ ಚಿಕಿತ್ಸಾ ವಿಧಾನಗಳಿವೆ. ಅವುಗಳನ್ನು ಮರೆತಿರುವುದೇ ಇಂದಿನ ಆರೋಗ್ಯ ಸಮಸ್ಯೆಗಳ ಮೂಲ ಎಂದು ಹೇಳಿದರು.

ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಡಾ.ಬಿ.ಸಿ.ಭಗವಾನ್ ಮಾತನಾಡಿ, ಮಹಿಳೆಯರು ಪರಸ್ಪರ ಸ್ಪರ್ಧಿಸುವುದಕ್ಕಿಂತ ಪರಸ್ಪರ ಪ್ರೋತ್ಸಾಹಿಸಿದಾಗ ಸಮಾಜ ಇನ್ನಷ್ಟು ಬಲಗೊಳ್ಳುತ್ತದೆ. ‘ಸೂಪರ್ ವುಮನ್’ ಎನ್ನುವುದು ಒಂದು ಭ್ರಮೆ. ಅದೊಂದು ಅಸಾಧ್ಯ ನಿರೀಕ್ಷೆಗಳ ಭಾರ. ಎಲ್ಲರಿಗೂ ತಮ್ಮದೇ ಆದ ಸಾಮರ್ಥ್ಯಗಳು ಮತ್ತು ಮಿತಿಗಳಿರುತ್ತವೆ. ಈ ಸತ್ಯವನ್ನು ಒಪ್ಪಿಕೊಂಡರೆ ಸಾಧನೆ ಸುಲಭವಾಗುತ್ತದೆ ಎಂದರು.

ವೈದ್ಯಕೀಯ ಶಿಕ್ಷಣ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಮೊಹಮ್ಮದ್ ಮೊಹ್ಸಿನ್, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯದ ನಿರ್ದೇಶಕಿ ಡಾ.ಬಿ.ಎಲ್. ಸುಜಾತಾ ರಾಥೋಡ್, ಡಾ.ಪ್ರೇಮ ಧನರಾಜ್, ಕುಲಸಚಿವ ಅರ್ಜುನ್ ಒಡೆಯರ್, ಮೌಲ್ಯಮಾಪನ ಕುಲಸಚಿವ ರಿಯಾಜ್ ಬಾಷಾ, ಹಣಕಾಸು ಅಧಿಕಾರಿ ಬಿ.ಕೆ.ಗಂಗಾಧರ ಉಪಸ್ಥಿತರಿದ್ದರು.

ವೈದ್ಯಕೀಯ ಮತ್ತು ಆರೋಗ್ಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಕಾಮಿನಿ ರಾವ್, ನಳಿನಿ, ಶೋಭಾ ರಾಣಿ, ಶೈಲಜಾ, ಸುಜಾತಾ, ವಜೀಹಾ, ಸಬೀನಾ ಅಲಿ, ಸರ್ವಮಂಗಳಾ, ವೀಣಾ, ಕಾತ್ಯಾಯಿನಿ, ಸುನಂದಾ, ಉಷಾ ಹೆಗಡೆ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.



ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಮಾತನಾಡಿದರು

‘ಇವ ನಮ್ಮವ ಬದಲು ಇವರು ನಮ್ಮವರಾಗಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮರ್ಯಾದೆಗೇಡು ಹತ್ಯೆ ತಡೆ ಕಾಯ್ದೆಗೆ ಇವ ನಮ್ಮವ ಎಂದು ಹೆಸರಿಡಲಾಗಿದೆ. ಇದು ಪುಲ್ಲಿಂಗವನ್ನಷ್ಟೇ ಸೂಚಿಸುತ್ತದೆ. ಎಲ್ಲರನ್ನು ಒಳಗೊಳ್ಳುವ ಇವರು ನಮ್ಮವರು ಎಂದು ಹೆಸರಿಡುವುದು ಸೂಕ್ತ’ ಎಂದು ರಂಗಭೂಮಿ ಕಲಾವಿದೆ ಅಶ್ವಿನಿ ಬೋಧ್ ಹೇಳಿದರು.

ಈ ಕಾಯ್ದೆ ಬಗ್ಗೆ ಅಖಿಲ ಭಾರತ ಪ್ರಗತಿಪರ ಮಹಿಳಾ ಸಂಘವು ಗುರುವಾರ ಹಮ್ಮಿಕೊಂಡಿದ್ದ ಕಾಯ್ದೆಯ ಅಗತ್ಯ ಮತ್ತು ಮುಂದಿನ ಹೆಜ್ಜೆಗಳು ಚರ್ಚೆಯಲ್ಲಿ ಅವರು ಮಾತನಾಡಿದರು.

‘ಮದುವೆ ವ್ಯವಸ್ಥೆಯೇ ಒಂದು ಸಾಂಸ್ಥಿಕ ನರಕ. ಅದರಲ್ಲಿ ತಮ್ಮ ಸಂಗಾತಿಗಳನ್ನು ಆಯ್ಕೆ ಮಾಡುವ ಅವಕಾಶ ನೀಡದೇ ಇಂಥವರನ್ನೇ ಮದುವೆಯಾಗಬೇಕು ಎಂದು ಒತ್ತಡ ಹೇರುವುದು ಇನ್ನಷ್ಟು ನರಕ. ಒತ್ತಾಯಪೂರ್ವಕ ಮದುವೆಗಳು ಜಾತಿಯ ಒಳಗೆ ನಡೆಯುತ್ತವೆ. ಇದರ ಮೂಲ ಮನುವಾದ, ಮನುಸ್ಮೃತಿಯಲ್ಲಿದೆ’ ಎಂದು ಹೇಳಿದರು.

‘ಹೆಣ್ಣುಮಕ್ಕಳನ್ನು ಹಿಡಿತದಲ್ಲಿಟ್ಟುಕೊಳ್ಳಲು, ಇತರರನ್ನು ತಮ್ಮ ಸೇವೆಗೆ ಇಟ್ಟುಕೊಳ್ಳಲು ಜಾತಿ ವ್ಯವಸ್ಥೆಯನ್ನು ತರಲಾಗಿದೆ. ಯಾರ ಅನುಕೂಲಕ್ಕಾಗಿ ತರಲಾಗಿದೆಯೋ ಅವರಷ್ಟೇ ಅಲ್ಲ, ಪಾಳೇಗಾರ ಮನಸ್ಥಿತಿಯ ಇತರ ಜಾತಿಯವರೂ ಇದನ್ನು ಪೋಷಿಸುತ್ತಿರುವುದರಿಂದ ಮರ್ಯಾದೆಗೇಡು ಹತ್ಯೆಗಳು ನಡೆಯುತ್ತವೆ. ದಲಿತರು, ಹೆಣ್ಣುಮಕ್ಕಳೇ ಬಲಿಯಾಗುವುದು ಹೆಚ್ಚು’ ಎಂದರು.

ಎಐಸಿಸಿಟಿಯು ರಾಜ್ಯ ಕಾರ್ಯದರ್ಶಿ ಮೈತ್ರೇಯಿ ಕೃಷ್ಣನ್ ಮಾತನಾಡಿ, ‘18 ವರ್ಷ ದಾಟಿದ ಹುಡುಗಿ, 21 ವರ್ಷ ದಾಟಿದ ಹುಡುಗನಿಗೆ ಸಂಗಾತಿಗಳ ಆಯ್ಕೆಯ ಹಕ್ಕನ್ನು ಸಂವಿಧಾನ ನೀಡಿದೆ ಇದರ ಉಲ್ಲಂಘನೆಯೇ ಮರ್ಯಾದೆಗೇಡು ಹತ್ಯೆ’ ಎಂದರು.

ಅಂತರ್ಜಾತಿ ವಿವಾಹಕ್ಕೆ ಪ್ರೋತ್ಸಾಹ ನೀಡಬೇಕು. ಅಂತರ್ಜಾತಿ ಮದುವೆಯಾದಾಗ ಅವರ ತಿಥಿ ಮಾಡುವುದು, ಆಸ್ತಿ ಹಕ್ಕಿನಿಂದ ಹೊರಗಿಡುವುದು ಎಲ್ಲವೂ ಕ್ರೌರ್ಯ ಎಂದು ವಿವರಿಸಿದರು.

ಪ್ರಾಧ್ಯಾಪಕ ಹುಲಿಕುಂಟೆ ಮೂರ್ತಿ ಮಾತನಾಡಿ, ‘ಅಂತರ್ಜಾತಿ ವಿವಾಹ ಎಂದಾಗಲೂ ಅದು ಯಾವ ಜಾತಿಗಳ ನಡುವೆ ಎಂಬ ಪ್ರಶ್ನೆಗಳು ಬರುತ್ತವೆ. ಕೇವಲ ಕಾಯ್ದೆಯಿಂದ ಮರ್ಯಾದೆಗೇಡು ಹತ್ಯೆ ಕೊನೆಗೊಳಿಸಲು ಸಾಧ್ಯವಿಲ್ಲ. ಕಾಯ್ದೆ ಮೂಲಕ ಜನರಿಗೆ ಸಂದೇಶ ಹೋಗುವುದು ಮುಖ್ಯ’ ಎಂದರು.

ಕಾಯ್ದೆ ಬಗ್ಗೆ ಅಖಿಲ ಭಾರತ ಪ್ರಗತಿಪರ ಮಹಿಳಾ ಸಂಘದ ರಾಜ್ಯ ಕಾರ್ಯದರ್ಶಿ ನಿರ್ಮಲಾ ಎಂ. ಸಂಯೋಜಿಸಿದರು.

ಮೈಸೂರು ಡಿ.ಸಿ ಬಂಧನಕ್ಕೆ ವಾರಂಟ್

ಮೈಸೂರು: ಭೂವ್ಯಾಜ್ಯ ಪ್ರಕರಣದಲ್ಲಿ ಕೋರ್ಟ್ ಆದೇಶ ಪಾಲಿಸದ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ಅವರ ಬಂಧನಕ್ಕೆ ಇಲ್ಲಿನ 1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಹಾಗೂ ಜೆಎಂಎಫ್‌ಸಿ ಕೋರ್ಟ್ ವಾರಂಟ್ ಜಾರಿಗೊಳಿಸಿದೆ.

ಜಿಲ್ಲಾಡಳಿತ ಸ್ವಾಧೀನಪಡಿಸಿಕೊಂಡಿದ್ದ, ಕುಂಬಾರಕೊಪ್ಪಲು ನಿವಾಸಿ ಜಯರಾಮು ಅವರ ಜಮೀನಿನ ಕುರಿತು ಕೋರ್ಟ್ ಆದೇಶವನ್ನು ಜಿಲ್ಲಾಡಳಿತ ಜಾರಿಗೊಳಿಸಿರಲಿಲ್ಲ. ಜಮೀನು ಬಿಡಿಸಿಕೊಡುವಂತೆ ಜಯರಾಮು ಮತ್ತೆ ನ್ಯಾಯಾಲಯದ ಮೆಟ್ಟಿಲೇರಿದ್ದರು. ಕೋರ್ಟ್ ಈಗ ವಾರಂಟ್ ಹೊರಡಿಸಿದ್ದು, ಏ.22ಕ್ಕೆ ವಿಚಾರಣೆ ಮುಂದೂಡಿದೆ. ಪ್ರತಿಕ್ರಿಯೆಗೆ ಜಿಲ್ಲಾಧಿಕಾರಿ ಲಭ್ಯವಾಗಲಿಲ್ಲ.

ಸಂಕ್ಷಿಪ್ತ ಸುದ್ದಿ

ಬ್ಯಾಸ್ಕೆಟ್‌ಬಾಲ್: ಫೈನಲ್‌ಗೆ ಎಂಎನ್‌ಕೆ ರಾವ್ ಪಾರ್ಕ್ ತಂಡ

ಬೆಂಗಳೂರು: ಎಂಎನ್‌ಕೆ ರಾವ್ ಪಾರ್ಕ್ ಬಿ.ಸಿ ಬಾಲಕರ ತಂಡವು ಡಿ.ಎನ್.ರಾಜಣ್ಣ ಟ್ರೋಫಿಗಾಗಿ ನಡೆಯುತ್ತಿರುವ ರಾಜ್ಯ ಜೂನಿಯರ್ ಬಾಲಕ ಮತ್ತು ಬಾಲಕಿಯರ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಫೈನಲ್ ಪ್ರವೇಶಿಸಿತು. ಪ್ರಶಸ್ತಿಗಾಗಿ ಶನಿವಾರ ಬೀಗಲ್ಸ್ ಬಿ.ಸಿ ವಿರುದ್ಧ ಸೆಣಸಲಿದೆ.

ಕಂಠೀರವ ಕ್ರೀಡಾಂಗಣದ ಬ್ಯಾಸ್ಕೆಟ್‌ಬಾಲ್ ಕೋರ್ಟ್‌ನಲ್ಲಿ ಶುಕ್ರವಾರ ನಡೆದ ಫೈನಲ್ ಲೀಗ್ ಕಮ್ ನಾಕೌಟ್ ಪಂದ್ಯದಲ್ಲಿ ಎಂಎನ್‌ಕೆ ರಾವ್ ತಂಡವು 81–65ರಿಂದ ಪಿಪಿಸಿ ತಂಡವನ್ನು ಮಣಿಸಿತು. ಎಎನ್‌ಕೆ ಪರ ಆಕಾಶ್ 24 ಮತ್ತು ವಿಜಯೇಂದ್ರ 19 ಅಂಕ ಗಳಿಸಿದರು. ಪಿಪಿಸಿ ಪರ ರಯಾನ್ ಜೋಸೆಫ್ 22, ಆದಿತ್ಯ 19 ಪಾಯಿಂಟ್ಸ್ ಕಲೆ ಹಾಕಿದರು.

ಮತ್ತೊಂದು ಪಂದ್ಯದಲ್ಲಿ ಎಚ್‌ಬಿಆರ್ ಬಿಸಿ ತಂಡವು 70–61ರಿಂದ ವಿವೇಕ್ಸ್ ಎಸ್.ಸಿ ತಂಡವನ್ನು ಸೋಲಿಸಿತು. ಎಚ್‌ಬಿಆರ್ ಪರ ರಿಶಿತ್ (19), ಸಿದ್ಧಾರ್ಥ್ (16) ಮಿಂಚಿದರು. ವಿವೇಕ್ಸ್ ಪರ ಅನ್ಮೂಲ್ 23 ಅಂಕ ಗಳಿಸಿದರು.

ಬಾಲಕಿಯರ ವಿಭಾಗದ ರೌಂಡ್ ರಾಬಿನ್ ಲೀಗ್ ಪಂದ್ಯಗಳಲ್ಲಿ ಬೆಂಗಳೂರು ವ್ಯಾನ್ಗಾರ್ಡ್ಸ್ 67–54ರಿಂದ ಬೀಗಲ್ಸ್ ಬಿ.ಸಿ ವಿರುದ್ಧ; ಡಿವೈಇಎಸ್ ವಿದ್ಯಾನಗರ ತಂಡವು 71–37ರಿಂದ ವಿವೇಕ್ಸ್ ಎಸ್.ಸಿ ವಿರುದ್ಧ; ಡಿವೈಇಎಸ್ ವಿದ್ಯಾನಗರ 76–34ರಿಂದ ಮಂಡ್ಯ ಜಿಲ್ಲೆ ವಿರುದ್ಧ; ಬೆಂಗಳೂರು ವ್ಯಾನ್ಗಾರ್ಡ್ಸ್ 73–53ರಿಂದ ವಿವೇಕ್ಸ್ ಎಸ್‌ಸಿ ವಿರುದ್ಧ ಗೆಲುವು ಸಾಧಿಸಿದವು.

ಶಿವಾಜಿನಗರ, ಆರ್.ಆರ್.ನಗರ ತಂಡಗಳು ಕ್ವಾರ್ಟರ್‌ಗೆ

ಬೆಂಗಳೂರು: ಶಿವಾಜಿನಗರ ಮತ್ತು ರಾಜರಾಜೇಶ್ವರಿನಗರ ತಂಡಗಳು ಕೆಎಸ್‌ಎಫ್‌ಎ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಕೆಎಸ್‌ಎಫ್‌ಎ ವೈಷ್ಣವಿ– ಸಿಎಂ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಕ್ವಾರ್ಟರ್ ಫೈನಲ್‌ಗೆ ಮುನ್ನಡೆದವು.



ಶುಕ್ರವಾರ ನಡೆದ ಎ ಗುಂಪಿನ ಪಂದ್ಯದಲ್ಲಿ ಶಿವಾಜಿನಗರ ತಂಡವು 3–3ರಿಂದ ಬಿಟಿಎಂ ಲೇಔಟ್ ತಂಡದೊಂದಿಗೆ ಡ್ರಾ ಸಾಧಿಸಿತು. ಶಿವಾಜಿನಗರ ಪರ ಅಭಿಷೇಕ್ ವಿ. (6ನೇ), ಎ.ಡಿ.ಕುಮಾರ್ (88ನೇ) ತಲಾ ಒಂದು ಗೋಲು ಗಳಿಸಿದರು. ಎದುರಾಳಿ ತಂಡದ ಮನುಕುಮಾರ್ (57ನೇ) ಉಡುಗೊರೆ ಗೋಲು ನೀಡಿದರು. ಬಿಟಿಎಂ ಪರ ತರುಣ್ ಎಸ್. (4ನೇ), ಜೇಸನ್ ದಿನಕರನ್ (27ನೇ) ಮತ್ತು ನಿವಾಸ್ ಎಸ್. (42ನೇ) ತಲಾ ಒಂದು ಬಾರಿ ಚೆಂಡನ್ನು ಗುರಿ ಸೇರಿಸಿದರು. ಗುಂಪು ಹಂತದಲ್ಲಿ ಗಳಿಸಿದ ಗೋಲುಗಳ ಅಂತರದಲ್ಲಿ ಶಿವಾಜಿನಗರ ತಂಡವು ಎಂಟರ ಘಟ್ಟಕ್ಕೆ ಅರ್ಹತೆ ಪಡೆಯಿತು.

ಬಿ ಗುಂಪಿನ ಪಂದ್ಯದಲ್ಲಿ ಆರ್‌ಆರ್ ನಗರ ತಂಡವು 5–0ಯಿಂದ ಗಾಂಧಿನಗರ ತಂಡವನ್ನು ಮಣಿಸಿತು. ಆರ್.ಆರ್. ನಗರ ತಂಡದ ಮೈಕೆಲ್ ಆರ್. (9ನೇ), ರಿವೊಲ್ಡೊ (34ನೇ), ಜಾಕಿ ಸುನಿಲ್ (55ನೇ), ಯೂಕ್ ಆಂಥೋನಿ (77ನೇ), ಪವನ್ ಬಿ. (90 + 1ನೇ) ತಲಾ ಒಂದು ಗೋಲು ಹೊಡೆದರು.

ಹಾಕಿ: ‘ಬೆಂಗಳೂರು ಫ್ರೆಂಡ್ಸ್’ ಜಯಭೇರಿ

ಬೆಂಗಳೂರು: ಸುರೇಶ್ (6ನೇ, 39ನೇ ಹಾಗೂ 43ನೇ ನಿ.) ಅವರ ಹ್ಯಾಟ್ರಿಕ್ ಗೋಲುಗಳ ಬಲದಿಂದ ಬೆಂಗಳೂರು ಫ್ರೆಂಡ್ಸ್ ಹಾಕಿ ಕ್ಲಬ್ ತಂಡವು ಕೆಎಸ್‌ಎಚ್‌ಎ ‘ಬಿ’ ಡಿವಿಷನ್ ಲೀಗ್ ಹಾಕಿ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ ಶುಕ್ರವಾರ 5–1ರಿಂದ ಸದರ್ನ್ ಆಲ್ಫಾ ಸ್ಪೋರ್ಟ್ಸ್ ಅಸೋಸಿಯೇಷನ್ ತಂಡವನ್ನು ಸುಲಭವಾಗಿ ಮಣಿಸಿತು.



ಇನ್ನೊಂದು ಪಂದ್ಯದಲ್ಲಿ ಧಾರವಾಡ ಜಿಲ್ಲಾ ಹಾಕಿ ಅಸೋಸಿಯೇಷನ್ ತಂಡವು 7–3ರಿಂದ ಬಾಗಲಕೋಟೆ ಜಿಲ್ಲಾ ಹಾಕಿ ಅಸೋಸಿಯೇಷನ್ ತಂಡವನ್ನು ಸೋಲಿಸಿತು.

ಪಶ್ಚಿಮ ಏಷ್ಯಾ ಸಂಘರ್ಷದಿಂದ ಕಚ್ಚಾವಸ್ತು ಪೂರೈಕೆಯಲ್ಲಿ ವ್ಯತ್ಯಯ ಆತಂಕ

ರಸಗೊಬ್ಬರ ಸಾಗಣೆ, ಸಂಗ್ರಹದ ಮೇಲೆ ನಿಗಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷದಿಂದ ರಸಗೊಬ್ಬರ ಉತ್ಪಾದನೆಗೆ ಅಗತ್ಯವಿರುವ ಕಚ್ಚಾವಸ್ತುಗಳ ಪೂರೈಕೆಯಲ್ಲಿ ವ್ಯತ್ಯಯವಾಗುವ ಆತಂಕ ಎದುರಾಗಿದ್ದು, ಗೊಬ್ಬರ ಮಾರಾಟ ಮತ್ತು ಸಾಗಣೆ ಮೇಲೆ ನಿಗಾ ಇರಿಸಲು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಸೂಚಿಸಿದ್ದಾರೆ.

ಏಪ್ರಿಲ್ 1ರ ಅಂತ್ಯಕ್ಕೆ ರಾಜ್ಯದಲ್ಲಿ 11.42 ಲಕ್ಷ ಟನ್ ರಸಗೊಬ್ಬರ ದಾಸ್ತಾನು ಇದ್ದು, ಕೃಷಿಯೇತರ ಬಳಕೆ ಮತ್ತು ಹೊರರಾಜ್ಯಕ್ಕೆ ಅಕ್ರಮ ಸಾಗಣೆ ಆಗುವುದನ್ನು ತಡೆಗಟ್ಟಲು ಕೃಷಿ ಇಲಾಖೆ ಅಧಿಕಾರಿ ಗಳ ಜತೆ ನಡೆದ ಸಭೆಯಲ್ಲಿ ಸಚಿವರು ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ. ಭಾರತಕ್ಕೆ ಯುಎಇ, ಸೌದಿ ಅರೇಬಿಯಾ, ಬಹ್ರೇನ್ ಮತ್ತು ರಷ್ಯಾದಿಂದ ರಸಗೊಬ್ಬರದ ಕಚ್ಚಾ ವಸ್ತು ಆಮದು ಮಾಡಿಕೊಳ್ಳಲಾಗುತ್ತದೆ. ಅಮೆರಿಕ– ಇಸ್ರೇಲ್ ಮತ್ತು ಇರಾನ್ ನಡುವಣ ಯುದ್ಧದ ಕಾರಣದಿಂದಾಗಿ ರಷ್ಯಾ ಹೊರತುಪಡಿಸಿ ಉಳಿದ ದೇಶಗಳಿಂದ ಕಚ್ಚಾವಸ್ತು ಪೂರೈಕೆಯಲ್ಲಿ ವ್ಯತ್ಯಯವಾಗಿದೆ. ಕೇಂದ್ರ ಸರ್ಕಾರವು ಮುಂಗಾರು ಹಂಗಾಮಿಗೆ ರಾಜ್ಯಕ್ಕೆ 30.05 ಲಕ್ಷ ಟನ್ ಗೊಬ್ಬರ ಹಂಚಿಕೆ ಮಾಡಿದೆ. ಆದರೆ, ಸಂಘರ್ಷದ ಕಾರಣದಿಂದ ಉತ್ಪಾದನೆ ಕುಸಿದರೆ. ಕೊರತೆಯಾಗುವ ಸಾಧ್ಯತೆ ಇದೆ ಎಂಬ ಅಭಿಪ್ರಾಯ ಸಭೆಯಲ್ಲಿ ವ್ಯಕ್ತವಾಗಿದೆ.

11.42 ಲಕ್ಷ ಟನ್
ರಾಜ್ಯದಲ್ಲಿ ಈಗ ಇರುವ ರಸಗೊಬ್ಬರ ದಾಸ್ತಾನು



ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳಿ (ಕೆಎಸ್‌ಸಿಎಂಎಫ್) ಮತ್ತು ಕರ್ನಾಟಕ ಬೀಜ ನಿಗಮ (ಕೆಎಸ್‌ಎಸ್‌ಸಿ) ಮುಖಾಂತರ ಕಾಪು ದಾಸ್ತಾನು ವ್ಯವಸ್ಥೆಯನ್ನು ಬಲಪಡಿಸಿದೆ. ಕಾಪು ದಾಸ್ತಾನಿನಲ್ಲಿ ಈಗ 28,224 ಟನ್ ಗೊಬ್ಬರ ಲಭ್ಯವಿದೆ.

- ಮೂರು ವರ್ಷಗಳಲ್ಲಿ ಜಿಲ್ಲಾವಾರು ಗೊಬ್ಬರ ಬಳಕೆ ಪ್ರಮಾಣದ ಸರಾಸರಿಯನ್ನು ಆಧರಿಸಿ, ಪ್ರತಿ ಜಿಲ್ಲೆಗೆ ಗೊಬ್ಬರ ಹಂಚಿಕೆಯನ್ನು ಮರುನಿರ್ಧಾರ ಮಾಡಲಾಗಿದೆ. ತಾಲ್ಲೂಕು ಮತ್ತು ಹೋಬಳಿ ಮಟ್ಟದಲ್ಲಿ ಪೂರೈಕೆಯಲ್ಲಿ ವ್ಯತ್ಯಯವಾಗದೆ ಇರುವ ರೀತಿಯಲ್ಲಿ ಕಿರು ಯೋಜನೆ ರೂಪಿಸಲಾಗಿದೆ
- ರಾಜ್ಯದಲ್ಲಿ ಯೂರಿಯಾ ಬಳಕೆ ನಿಯಂತ್ರಿಸಲು 'ಫ್ರೂಟ್ಸ್' ದತ್ತಾಂಶ ಆಧಾರದಲ್ಲಿ ‘ಯೂರಿಯಾ ವಿತರಣಾ ಅಪ್ಲಿಕೇಷನ್’ ಅನ್ನು ರೂಪಿಲಾಗಿದ್ದು, ಆಯ್ದ ಎಂಟು ಜಿಲ್ಲೆಗಳಲ್ಲಿ ಪ್ರಾಯೋಗಿಕವಾಗಿ ಜಾರಿ
- ಪ್ರತಿ ವಾರ ವಿಡಿಯೊ ಸಂವಾದ ಮತ್ತು ಸಭೆಗಳ ಮೂಲಕ ಗೊಬ್ಬರ ಪೂರೈಕೆ, ಮಾರಾಟ ಮತ್ತು ಸಂಗ್ರಹ ಸ್ಥಿತಿಯ ಮೇಲ್ವಿಚಾರಣೆ
- ಸಾವಯವ ಕೃಷಿ ಮತ್ತು ನೈಸರ್ಗಿಕ ಕೃಷಿ ಪದ್ಧತಿ ಅಳವಡಿಕೆ, ಜೈವಿಕ ಗೊಬ್ಬರ ಮತ್ತು ನೈಸರ್ಗಿಕ ಗೊಬ್ಬರ ಬಳಕೆ ಬಗ್ಗೆ ರೈತರಲ್ಲಿ ಜಾಗೃತಿ ಮೂಡಿಸಲು ಕಾರ್ಯಕ್ರಮ
- ‘ವಸುಧಾಮೃತ’ ಯೋಜನೆಯಡಿ ರೈತರಿಗೆ ರಿಯಾಯಿತಿ ದರದಲ್ಲಿ ಸಾವಯವ ಹಾಗೂ ಜೈವಿಕ ಗೊಬ್ಬರಗಳನ್ನು ಒದಗಿಸಲು ಕ್ರಮ

ಹೈದರಾಬಾದ್ ರೇಸ್

ನಾರ್ದರನ್ ವೇವ್ಸ್ ಗೆಲ್ಲುವ ನಿರೀಕ್ಷೆ

ಬ್ರೇವ್ ಡ್ಯಾನ್ಸರ್ ಪ್ಲೇಟ್ ಶನಿವಾರದ ಹೈದರಾಬಾದ್ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ನಾರ್ದರನ್ ವೇವ್ಸ್ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:55ಕ್ಕೆ ಆರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಯುವರಾಜ್ 2, ಮೈಸೂರ್ ಫಾರೋ 1, ಬೀಚ್‌ವುಡ್ 4
2ನೇ ರೇಸ್: ಆರ್ಥಿಶ 1, ಅನಲೈಸಿಸ್ 3, ಸಿಪ್ರೆಸ್ 2
3ನೇ ರೇಸ್: ಶರಂಗ 3, ಪೆಟ್ರಾ ಆಕ್ಟ್ 6, ಮಿಸ್ ಸ್ಮೈಲಿ ಏಂಜೆಲ್ 2
4ನೇ ರೇಸ್: ರೈವಲ್ 3, ಗ್ಲೋರಿಯಾ 2, ಫಸ್ಟ್ ಲೇಡಿ 13
5ನೇ ರೇಸ್: ಟೊರಿರೊ 4, ನಾರ್ದರನ್ ಸ್ಕೈ 7, ಎಕ್ಸ್‌ಕ್ಯಾಲಿಬರ್ 2
6ನೇ ರೇಸ್: ನಾರ್ದರನ್ ವೇವ್ಸ್ 10, ಡಿಯಾಬ್ಲೊ 7, ವಿವಾಲ್ಡೊ 6
7ನೇ ರೇಸ್: ಗ್ರೀಫ್ 6, ಎಮಿರಾಲ್ಡ್ ಟಚ್ 1, ಆಯುಷ್ಮಾನ್ 3
8ನೇ ರೇಸ್: ಅಮೆರಿಕನ್ ಅಫೇರ್ 1, ಲೈವ್ ಲೆಜೆಂಡ್ 2, ಬ್ಲೂ ಬ್ರಿಗೇಡ್ 12

ಉತ್ತಮ ಬೆಟ್: ಟೊರಿರೊ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
4,5,6,7,8	1,2,3	3,4,5	6,7,8

ಭೂಮಿಕಾ

ಮಹಿಳೆಯರ ಆಪ್ತ ಸಂಗಾತಿ

ಕಾಲೆಳೆಯೋಣ ಕಾಲಕ್ಕೆ ತಕ್ಕಂತೆ!

ಏಪ್ರಿಲ್ ಅನ್ನು 'ಹಾಸ್ಯದ ಮಾಸ' ಎಂದು ಪರಿಗಣಿಸಲಾಗುತ್ತದೆ. ಈ ನೆಪದಲ್ಲಿ, ಅಜ್ಜನ ಕಾಲದಿಂದಲೂ ಚಾಲ್ತಿಯಲ್ಲಿರುವ ಅವವೇ ಹಳಸಲು ಜೋಕುಗಳು ಈಗಿನ ಸಾಮಾಜಿಕ ಮಾಧ್ಯಮಗಳಲ್ಲೂ ಓಡುತ್ತಿರುತ್ತವೆ. ಗಂಡಸರು ಮನೆಗೆಲಸ ಮಾಡುವಂತಹ ಸಂಗತಿಗಳೇ ಇಲ್ಲಿ ಜೋಕಿಗೆ ವಸ್ತು! ಓಬಿರಾಯನ ಕಾಲದ ಇಂತಹ ಔಟ್‌ಡೇಟೆಡ್ ಜೋಕುಗಳನ್ನೇ ಇನ್ನೆಷ್ಟು ದಿನ ಮಾಡುತ್ತಿರುತ್ತೀರಿ ಮಾರಾಯ್ರೆ? ಪೂರ್ವಗ್ರಹಗಳಿಲ್ಲದ, ಎಲ್ಲರೂ ಮನಃಪೂರ್ವಕವಾಗಿ ನಕ್ಕುಬಿಡುವಂತೆ ಮಾಡುವ ಹೊಸ ಹಾಸ್ಯವನ್ನು ಹೊಸೆಯಬಾರದೇ? ಕಾಲೆಳೆಯುವುದರಲ್ಲೂ ಕಾಲಕ್ಕೆ ತಕ್ಕಂತೆ ಬದಲಾಗಬಾರದೇ?

• ದೀಪಾ ರವಿಶಂಕರ್



'ಹಗ್ಗ ಕೊಟ್ಟು ಕೈ ಕಟ್ಟಿಸಿಕೊಂಡರು' ಅನ್ನೋ ಗಾದೆ ಮಾತನ್ನು ಸತ್ಯ ಮಾಡಲು ನಾನು ಆಗಾಗ ಶ್ರಮ ವಹಿಸುತ್ತಿರುತ್ತೇನೆ. ಅವತ್ತೂ ಹಾಗೇ ಆಯಿತು. ಮಗಳು 'ಬಾರಮ್ಮಾ ಪಾನಿಪೂರಿ ತಿಂದ್ಕೊಂಡು ಬರೋಣ' ಅಂದಳು. ಲಕ್ಷಣವಾಗಿ ಹೋಗಿದ್ದಿದ್ದರೆ, ಉಪ್ಪು, ಹುಳಿ, ಖಾರಗಳು ನಾಲಿಗೆಯ ಮೇಲೆ ಸರಿದು ಹರಿದು ಕಚಗುಳಿ ಇಟ್ಟು, ಮಿದುಳಿಗೆ ಆನಂದವನ್ನು ನೀಡಿ, ಸುತ್ತಳತೆಗೆ ಒಂದೆರಡಿಂಚು ಕೊಟ್ಟು... ಏನೆಲ್ಲಾ ಸಂಭ್ರಮಗಳು ನಡೆದಿರುತ್ತಿದ್ದವು! ಆದರೆ ನನಗೆ ಕೈ ಕಟ್ಟಿಸಿಕೊಳ್ಳುವುದಿತ್ತಲ್ಲಾ... ನಾನು ಪಾನಿಪೂರಿ ತಿನ್ನಲು ಹೋಗದೆ ಒಂದು ಕನ್ನಡ ಸ್ಟ್ಯಾಂಡಪ್ ಕಾಮಿಡಿ ಷೋ ನೋಡಲು ಹೋದೆ.

ನಾವು ಯಾವುದಾದರೂ ಕಾಮಿಡಿ ನಾಟಕ ನೋಡಲು ಹೋದರೆ, ನಾಟಕದ ಶುರುವಿನಲ್ಲಿ ಗಂಭೀರ ಧ್ವನಿಯಲ್ಲಿ ಬರುತ್ತಲ್ಲಾ 'ನಾಟಕ ಪ್ರದರ್ಶನಕ್ಕೆ ಮುಂಚೆ ನಿಮ್ಮ ಫೋನುಗಳನ್ನು ಸ್ವಿಚ್ ಆಫ್ ಮಾಡಿ' ಅಂತ; ಅದಕ್ಕೂ ಜನ ನಗ್ತಾರೆ ಅಂತ ತಮಾಷೆ ಮಾಡಿಕೊಳ್ಳುತ್ತಿದ್ದವು. ಹಾಗೆ ಕಾಮಿಡಿ ಅಂದರೆ ನಗಲು ಸಿದ್ಧರಾಗಿಯೇ ಹೋಗಿರುತ್ತೇವೆ. ನಾನೂ ನನ್ನ ಕೆಲವು ಗೆಳತಿಯರೂ ಹೋಗಿದ್ದೆವು. ಸೀಟು ಹಿಡಿಯುವುದಕ್ಕೂ ಮೊದಲೇ ಹಲ್ಲುಕಿರಿಯುತ್ತಿದ್ದೆವು! ಶುರುವಾಯಿತು ಕಾಮಿಡಿ ಷೋ. ಒಬ್ಬ ಗಂಡ. ಅವನ ಫ್ರೆಂಡು 'ಸಿನಿಮಾಗೆ ಹೋಗೋಣ ಬಾರೋ ಮಾರ್ನಿಂಗ್ ಷೋಗೆ' ಅಂದನಂತೆ. ಅದಕ್ಕೆ ಇವನು 'ಇಲ್ಲ ಮಾರಾಯ, ನಾಳೆ ಸಂಡೇ, ಮನೆ ಕಸ ಗುಡಿಸಬೇಕು, ಬೇಕಾದ್ರೆ ಸಂಜೆ ಷೋಗೆ ಹೋಗೋಣ' ಅಂದನಂತೆ. ಅದಕ್ಕೆ ಇವನು 'ಸಂಜೆ ಆಗಲ್ಲ ಕಣೋ, ನಾನು ಬಟ್ಟೆ ಒಗೀಬೇಕು ಅಂದನಂತೆ' ಅದೇ ಹಳೆಯ ಜೋಕು! ಒಂದು ಗಂಟೆ ಮುಂಚೆಯಿಂದ ಹಲ್ಲು ಕಿರಿದು ಪ್ರ್ಯಾಕ್ಟೀಸು ಮಾಡ್ಕೊಂಡಿದ್ದೆಲ್ಲಾ ದಂಡ ಆಗುತ್ತದಲ್ಲಾ ಅಂತ ಜನ ನಕ್ಕರು.

ನೋಡಿದರೆ ಮುಂದಿನದೂ ಅದೇ, ಅದರ ಮುಂದಿನದೂ ಅದೇ! ನಾಲ್ಕನೇ ಜೋಕಿನ ಹೊತ್ತಿಗೆ ಮೆಲ್ಲನೆ ಕತ್ತು ತಿರುಗಿಸಿ ಆಚೀಚೆ ನೋಡಿದೆ. ಜನ ಶೋಕಸಭೆಯಲ್ಲಿ ಕೂತಹಾಗೆ ಮುಖ ಜೋಲು ಬಿಟ್ಟುಕೊಂಡು, ಕಣ್ಣಲ್ಲಿ ಹೇಳತೀರದ ವಿಷಾದ ಭಾವ ಸೂಸುತ್ತಾ ಕುಳಿತಿದ್ದರು! ಕರುಳು ಚುರ್ರ್ ಅಂತು.

ಒಂದು ಅಧ್ಯಯನದ ಪ್ರಕಾರ, ಬಲಶಾಲಿಗಳು ತಮ್ಮನ್ನು ತಾವು ಉದಾರವಾಗಿಯೂ ದುರ್ಬಲರನ್ನು ನಿಷ್ಠುರವಾಗಿಯೂ ಜಡ್ಜ್ ಮಾಡುತ್ತಾರಂತೆ. ದುರ್ಬಲರು ತಮ್ಮನ್ನು ತಾವು ಕಠೋರವಾಗಿಯೂ ಸಬಲರನ್ನು ಉದಾರವಾಗಿಯೂ ಪರಿಗಣಿಸುತ್ತಾರಂತೆ. ಉದಾಹರಣೆಗೆ, ಬಲಿಷ್ಠ ಮಂಗವೊಂದು ದುರ್ಬಲ ಮಂಗದ ತಲೆಗೆ ಹೊಡೆದು, ಅದು 'ತಮಾಷೆ' ಎಂದುಕೊಳ್ಳುತ್ತದೆ. ದುರ್ಬಲ ಮಂಗವೂ ಹಾಗೇ ತಿಳಿದುಕೊಳ್ಳುತ್ತದೆ. ಆದರೆ ದುರ್ಬಲ ಮಂಗವು ಬಲಿಷ್ಠ ಮಂಗದ ತಲೆಗೆ ಹೊಡೆದು 'ತಮಾಷೆಗೆ' ಎಂದುಕೊಳ್ಳುವುದು ದೂರದ ಮಾತು. ತಾನು ಹಾಗೆ ಹೊಡೆಯುವುದೇ ತಪ್ಪು ಎಂದುಕೊಳ್ಳುತ್ತದೆ.

ದುರ್ಬಲ ಮಂಗವು ಬಲಿಷ್ಠ ಮಂಗ ತನಗೆ ಹೊಡೆದದ್ದನ್ನು ಸುಲಭವಾಗಿ ಕ್ಷಮಿಸಿಬಿಡುತ್ತದೆ ಮತ್ತು ತಾನು ಪ್ರತಿಯಾಗಿ ಹೊಡೆಯದಿರುವುದೂ ಸರಿ ಎನಿಸುತ್ತಿರುತ್ತದೆ. ನಿರಂತರವಾಗಿ ದುರ್ಬಲ ಸ್ಥಾನದಲ್ಲಿ ನಿಂತ ಹೆಣ್ಣುಮಕ್ಕಳು ಈಗೀಗ ಕಳೆದ ಕೆಲವು ದಶಕಗಳಿಂದ ಹೊರಗೆ ಬರುತ್ತಿದ್ದಾರೆ. ಇಟ್ಟಿಗೆ ಹೊರುವುದರಿಂದ ಆಟೊ ಓಡಿಸುವುದರವರೆಗೆ, ಕೋಡ್ ಬರೆಯುವುದರಿಂದ ಸಿಇಒಗಳವರೆಗೆ ಎಲ್ಲಾ ಕಡೆ ನುಗ್ಗಿದ್ದಾರೆ. ಆದರೆ ಜೋಕುಗಳು ಮಾತ್ರ ಗಂಡ ಪಾತ್ರೆ ತೊಳೆಯುವ, ಹೆಂಡತಿ ಹೇಳಿದಂತೆ ಕೇಳುವ, ಮನೆಗೆಲಸ ಮಾಡುವ ವಿಷಯಗಳತ್ತಲೇ ಸುತ್ತುತ್ತಿರುತ್ತವೆ.

ಹಾರುತ್ತಿರುವ ಲಟ್ಟಣಿಗೆ, ಗಂಡನ ತಲೆಯ ಮೇಲೊಂದು ಗುಬುಟು, ಅದರ ಮೇಲೆ ಆಗಷ್ಟೇ ಉದಯಿಸುತ್ತಿರುವ ಬಾಲಸೂರ್ಯನಿಂದ ಹೊರಟ ಹಾಗಿರುವ ಕಿರಣಗಳು... ಆ ಹಳಸಲು ಜೋಕುಗಳೇ ಈಗ ಬೆಳೆದು ದೊಡ್ಡವಾಗಿ ರೀಲ್ಸುಗಳಾಗಿವೆ! ಗಂಡ ಮನೆಗೆಲಸ ಮಾಡುವುದೇ ಜೋಕು! ಇಪ್ಪತ್ತೊಂದನೆಯ ಶತಮಾನದಲ್ಲೂ?! ಎಷ್ಟೆಷ್ಟು ಹೆಲ್ತ್ ಡ್ರಿಂಕುಗಳು ಬರುತ್ತವೆ ಮಾರ್ಕೆಟ್ಟಿನಲ್ಲಿ; ಎತ್ತರ ಬೆಳೆಸಲು, ತೆಳ್ಳಗಾಗಲು, ದಪ್ಪಗಾಗಲು, ಸಕಲ ಸರ್ವಸ್ವಕ್ಕೂ. ಬುದ್ಧಿ ಬೆಳೆಯುವ, ಹೋಗಲಿ ಕನಿಷ್ಠ ಆ ಬುದ್ಧಿಯನ್ನು ಬದಲಾಗಿಸುವ ಡ್ರಿಂಕ್ ಒಂದೂ ಬಂದಿಲ್ವಲ್ಲಾ ಎಂದು ಮರುಗುತ್ತೇನೆ.

ಆ ಮನಃಸ್ಥಿತಿ ತಲತಲಾಂತರಗಳಿಂದ ಹೇಗೆ ಹರಿದುಬಂದಿದೆಯೆಂದರೆ, ಇಂಥಾ ಜೋಕುಗಳ ಮೂಲಕ ನಮ್ಮನ್ನು ನಾವು ಅವಮಾನ ಮಾಡಿಕೊಳ್ಳುತ್ತಿದ್ದೇವೆ ಎಂಬುದೂ ತಿಳಿಯದಷ್ಟು ಅವು ನಮ್ಮೊಳಗೆ ಇಳಿದುಬಿಟ್ಟಿವೆ. ದಡೂತಿ ಹೆಂಡತಿ, ನರಪೇತಲ ಗಂಡ, ಟಿ.ವಿ ನೋಡುತ್ತಿರುವ ಹೆಂಡತಿ– ಅಡುಗೆ ಮಾಡುತ್ತಿರುವ ಗಂಡ... ಅಯ್ಯಲ್ಲಪ್ಪಾ ಹಳೇ ಶಿಲಾಯುಗದಿಂದ ಇವೇ ಜೋಕುಗಳನ್ನು ನೋಡುತ್ತಾ, ಓದುತ್ತಾ ಬಂದಿದ್ದೇವೆ. ಈಗ ಆ ಎಳೇ ಕೂಸು 'ಆರ್ಟಿಫಿಷಿಯಲ್ ಇಂಟೆಲಿಜನ್ಸ್' ಬಂದು ಕೂತು ಪಿಳಿ ಪಿಳಿ ಕಣ್ಣುಬಿಡುತ್ತಾ ಲೋಕ ನೋಡುತ್ತಿದೆ. ನೀವು ಅದಕ್ಕೂ ಇದೇ ಜೋಕುಗಳನ್ನು ತುತ್ತು ಮಾಡಿ ನುಂಗಿಸಿಬಿಡಿ. ಮತ್ತೆ ಶಿಲಾಯುಗ ಬರುವವರೆಗೂ ಅದು ಅವೇ ಜೋಕುಗಳನ್ನು ವಾಂತಿ ಮಾಡುತ್ತಿರುತ್ತದೆ!

ಗಂಡ ಬಟ್ಟೆ ಒಗೆದು, ಪಾತ್ರೆ ತೊಳೆದು, ಕಸ ಗುಡಿಸಿ ಒರೆಸಿ ಅಡುಗೆ ಮಾಡಲಿ, ಆ ಸಮಯದಲ್ಲಿ ಹೆಂಡತಿ ಟಿ.ವಿ ನೋಡಲಿ ಅಥವಾ ಹೆಂಡತಿ ಅವನ್ನೆಲ್ಲಾ ಮಾಡಲಿ, ಗಂಡ ಕೂತು ಕಾಫಿ ಮಾಡಿಸಿಕೊಂಡು ಕುಡಿಯಲಿ ಅಥವಾ ನೀನೊಂದು ಕೆಲಸ, ನಾನೊಂದು ಕೆಲಸ ಎಂದು ಹಂಚಿಕೊಂಡು ಮಾಡಿ ಮುಗಿಸಿ, ಒಟ್ಟಿಗೆ ಚಹಾ ಕುಡಿಯಲಿ; ಅದು ಅವರವರಿಗೆ ಬಿಟ್ಟದ್ದು. ಆದರೆ ಗಂಡ ಕೆಲಸ ಮಾಡುವುದು 'ಜೋಕ್' ಅಲ್ಲ, ಈ ಹೊತ್ತಿನ ಅಗತ್ಯ ಎಂಬುದನ್ನು ನೆನಪಿಡಿ. ಹೊಸ ಜೋಕುಗಳನ್ನು ಹೊಸೆಯಿರಿ ಪ್ಲೀಸ್. ಏಕೆಂದರೆ ನಮ್ಮಿಬ್ಬರದೂ ಆದ ಮನೆಗೆಲಸಗಳನ್ನು ನಾನು ಮಾಡುವಾಗ ಅವನೂ, ಅವನು ಮಾಡುವಾಗ ನಾನೂ ಆ ಹೊಸ ರೀಲ್ಸುಗಳನ್ನು ನೋಡಬೇಕಿದೆ. ನೋಡುತ್ತಾ ನಗಲೂಬೇಕಿದೆ.

ಒಂದು ಹಳೆಯ ಜೋಕಿನಿಂದಲೇ ಮುಗಿಸೋಣ. ಗಂಡ ಹೇಳುತ್ತಿದ್ದನಂತೆ 'ನಮ್ಮ ಮನೆಯಲ್ಲಿ ದೊಡ್ಡ ದೊಡ್ಡ ನಿರ್ಧಾರಗಳನ್ನೆಲ್ಲಾ ನಾನು ತೆಗೆದುಕೊಳ್ಳುವುದು, ಸಣ್ಣಪುಟ್ಟದ್ದೆಲ್ಲಾ ಅವಳು. ಈಗ ಯುದ್ಧದಲ್ಲಿ ಮುಂದೆ ಯಾವ ನಡೆ ಸೂಕ್ತ? ಆರ್‌ಸಿಬಿಗೆ ಯಾವ ಯಾವ ಪ್ಲೇಯರ್ಸ್ ಇದ್ದರೆ ಕಪ್ ನಮ್ದೇ ಆಗುತ್ತೆ? ಭ್ರಷ್ಟಾಚಾರ ನಿರ್ಮೂಲನೆ ಹೇಗೆ? ಇಂಥಾ ಪ್ರಮುಖ ನಿರ್ಧಾರಗಳೆಲ್ಲಾ ನನ್ನವು. ಮಕ್ಕಳನ್ನು ಯಾವ ಸ್ಕೂಲಿಗೆ ಹಾಕಬೇಕು? ಅಕ್ಕಿಬೇಳೆ ಎಲ್ಲಿಂದ ತರಬೇಕು? ಮನೆಗೆ ಯಾವ ಹೊಸ ವಾಷಿಂಗ್ ಮಷೀನು ತರಬೇಕು? ಇಂಥ ಚಿಕ್ಕಪುಟ್ಟದ್ದನ್ನೆಲ್ಲಾ ಅವಳು ನಿರ್ಧರಿಸುತ್ತಾಳೆ...' ಯೋಚಿಸಿ. ಈ ದಿನ ಇದು 'ಜೋಕ್' ಆಗಿ ಎಲ್ಲಿ ಉಳಿದಿದೆ? ಇದೇ ಸತ್ಯವಾಗಿಲ್ಲವೇ?

ಇಂಥ ಜೋಕುಗಳನ್ನು ವಾಟ್ಸ್‌ಆ್ಯಪಿನಲ್ಲಿ ಫಾರ್ವರ್ಡು ಮಾಡುತ್ತಾ ಕುಳಿತವರ ಎದುರು ಮಹಿಳೆ ನಿಜಕ್ಕೂ ಎಲ್ಲಾ 'ಸಣ್ಣಪುಟ್ಟ' ನಿರ್ಧಾರಗಳನ್ನು ತೆಗೆದುಕೊಳ್ಳುವಷ್ಟು ಸಬಲಳಾಗಿರುವ ಹೊತ್ತಿನಲ್ಲಿಯೂ, ಹೊಸ ಹೊಸ ಕಿಟಕಿಗಳನ್ನು ತನಗಾಗಿ ತೆರೆದುಕೊಳ್ಳುತ್ತಿರುವ ಕಾಲದಲ್ಲಿಯೂ ಇಂಥ ಕಟಕಿಗಳ ಹೊಡೆತವನ್ನೂ ತಡೆಯಬೇಕಿರುವುದು ವಿಪರ್ಯಾಸವೇ ಸೈ.



ಕಲೆ: ಸಂತೋಷ್ ಸಸಿಹಿತ್ಲು



ಏನಿವರ ಬ್ಯೂಟಿ ಸೀಕ್ರೆಟ್?

ಅಕ್ಷತಾ ಪಾಂಡವಪುರ, ನಟಿ

ಬೆಳಿಗ್ಗೆ ಎದ್ದ ತಕ್ಷಣ ಉಗುರು ಬೆಚ್ಚಗಿನ ನೀರನ್ನು ಚೆನ್ನಾಗಿ ಕುಡಿಯುತ್ತೇನೆ. ದೇಹದ ತೂಕ ಕಳೆದುಕೊಳ್ಳುವ ಸಲುವಾಗಿ ಆಗಾಗ್ಗೆ ಪಂಚಕರ್ಮ ಕ್ರಿಯೆಗಳನ್ನು ಖುದ್ದು ಮಾಡಿಕೊಳ್ಳುತ್ತೇನೆ. ಅದರ ಅನುಸಾರ, ಆ ಕ್ರಿಯೆಗೆ ಸಂಬಂಧಪಟ್ಟ ಹಾಗೆ ನನ್ನ ಡಯೆಟ್ ಇರುತ್ತದೆ.

ನನ್ನ ದಿನ ಶುರುವಾಗುವುದೇ ಸಕ್ಕರೆರಹಿತ ಕಾಫಿಯಿಂದ. ಸಕ್ಕರೆಯನ್ನು ಸಂಪೂರ್ಣವಾಗಿ ತೊರೆದಿದ್ದೇನೆ. ಸಿಹಿಯ ತಹತಹ ಉಂಟಾದಾಗ ವಿರಳವಾಗಿ ಕಲ್ಲುಸಕ್ಕರೆಯನ್ನು ಬಳಸುತ್ತೇನೆ. ನನ್ನ ಪ್ರಕಾರ, ಸೌಂದರ್ಯ ಎಂಬುದು ಸಹಜವಾಗಿ ಇರುವಂತಹದ್ದು. ನಾವು ಎಷ್ಟು ಸಹಜವಾಗಿ ಇರುತ್ತೇವೆಯೋ ಅಷ್ಟರಮಟ್ಟಿಗೆ ಆರೋಗ್ಯವಾಗಿ ಇರುತ್ತೇವೆ ಎನ್ನುವ ತತ್ವದಲ್ಲಿ ನಂಬಿಕೆ ಇಟ್ಟಿದ್ದೇನೆ.

ಇನ್ನು ವ್ಯಾಯಾಮ ಎಂಬುದು ಆರೋಗ್ಯಯುತ ಜೀವನಶೈಲಿಯ ಭಾಗ. ವ್ಯಾಯಾಮ ಸರಿಯಾಗಿ ಇದ್ದಾಗಲೂ ಚರ್ಮ ಹಾಗೂ ಕೂದಲಿನ ಆರೋಗ್ಯ ಚೆನ್ನಾಗಿರುತ್ತದೆ. ಹಾಗಾಗಿ, ವ್ಯಾಯಾಮಗಳ ಸ್ವರೂಪವನ್ನು ಆಗಾಗ್ಗೆ ಬದಲಾಯಿಸಿ, ಅದಕ್ಕೆ ತಕ್ಕಂತೆ ನನ್ನನ್ನು ಒಗ್ಗಿಸಿಕೊಂಡಿದ್ದೇನೆ.

ಸಾಮಾನ್ಯವಾಗಿ 22 ದಿನಗಳ ವ್ಯಾಯಾಮ ಸ್ವರೂಪದಲ್ಲಿ ವಾರ್ಮ್ ಅಪ್‌ಗಾಗಿ ಯೋಗ ಮಾಡುತ್ತೇನೆ. ನಂತರ ಒಂದು ವಾರ ಓಟ ಇರುತ್ತದೆ. ಏಳು ದಿನಗಳಲ್ಲಿ 100 ಕಿ.ಮೀ ಎಂಬ ಸವಾಲನ್ನು ನನಗೆ ನಾನೇ ಹಾಕಿಕೊಳ್ಳುತ್ತೇನೆ. ಉಳಿದಂತೆ ಸೂರ್ಯನಮಸ್ಕಾರ, ಬೆಟ್ಟ ಹತ್ತುವುದು ಸೇರಿದಂತೆ ಹಲವು ಬಗೆಯ ವ್ಯಾಯಾಮಗಳು ಇರುತ್ತವೆ.

ಪಂಚಕರ್ಮ ಕ್ರಿಯೆ ಮಾಡುವಾಗ ಡಯೆಟ್ ಇರುತ್ತದೆ. ಉಳಿದಂತೆ ಯಾವಾಗ ಏನು ತಿನ್ನಬೇಕೋ ಅದನ್ನು ಹೊಟ್ಟೆ ತುಂಬಾ ತಿನ್ನುತ್ತೇನೆ. ಮೂರು ದಿನ ಪೂರ್ಣ ಪ್ರಮಾಣದಲ್ಲಿ ಸಲಾಡ್ ತಿನ್ನುತ್ತೇನೆ. ಸಂಪೂರ್ಣವಾಗಿ ಕಾರ್ಬೊಹೈಡ್ರೇಟ್ ಇರುವ ಆಹಾರಗಳನ್ನು ವರ್ಜಿಸುತ್ತೇನೆ. ಮೂರು ದಿನ ದ್ರವಾಹಾರ ತೆಗೆದುಕೊಳ್ಳುತ್ತೇನೆ. ಹೊಟ್ಟೆ ಶುದ್ಧಿಗಾಗಿ ಒಂದು ವಾರ ಎನಿಮಾ ಅಥವಾ ವಾಮನ ಮಾಡಿಕೊಳ್ಳುತ್ತೇನೆ. ಸಾಮಾನ್ಯವಾಗಿ ತಿಂಗಳಲ್ಲಿ ಇಪ್ಪತ್ತೈದು ದಿನಗಳನ್ನು ಪಂಚಕರ್ಮ ಕ್ರಿಯೆಗಾಗಿಯೇ ಮೀಸಲಿಡುತ್ತೇನೆ. ಇದರ ಜತೆಗೆ ಕಣ್ಣು, ಮೂಗಿನ ಶುದ್ಧೀಕರಣಕ್ಕಾಗಿ ರಬ್ಬರ್ ನೇತಿ ಹಾಗೂ ಬಟ್ಟೆ ನೇತಿ ಮಾಡಿಕೊಳ್ಳುತ್ತೇನೆ.

ಮುಖಕ್ಕೆ ಚೆನ್ನಾಗಿ ಹರಳೆಣ್ಣೆ ಹಚ್ಚಿ ಮಸಾಜ್ ಮಾಡಿಕೊಳ್ಳುತ್ತೇನೆ. ನನ್ನ ಚರ್ಮದ ಆರೋಗ್ಯಕ್ಕೆ ಹರಳೆಣ್ಣೆ ಹೊಂದುತ್ತದೆ. ವಾರಕ್ಕೆ ಮೂರರಿಂದ ನಾಲ್ಕು ಬಾರಿ ಕೊಬ್ಬರಿಎಣ್ಣೆಯನ್ನು ಕೂದಲಿಗೆ ಹಚ್ಚಿದರೆ, ಹರಳೆಣ್ಣೆಯನ್ನು ನೆತ್ತಿಗೆ ಹಾಕಿ ಚೆನ್ನಾಗಿ ಬಡಿಯುತ್ತೇನೆ. ಇದರ ಜತೆಗೆ ನಾಭಿ ಹಾಗೂ ಅಂಗಾಲಿಗೂ ಹರಳೆಣ್ಣೆಯನ್ನು ಹಚ್ಚುತ್ತೇನೆ. ಕೆಲವೊಮ್ಮೆ ಬಿಸಿನೀರಿಗೆ ಹರಳೆಣ್ಣೆಯನ್ನು ಹಾಕಿಕೊಂಡು ಕುಡಿಯುತ್ತೇನೆ. ಇದು ಬಿಟ್ಟರೆ ಮುಖಕ್ಕೆ ಫೇರ್‌ನೆಸ್ ಅಥವಾ ಫೌಂಡೇಷನ್ ಸೇರಿದಂತೆ ಯಾವುದೇ ಕ್ರೀಂ ಬಳಸುವುದಿಲ್ಲ. ಕುಂಕುಮಾದಿ ಲೇಪಂ ಎಂಬ ಕ್ರೀಂ ಅನ್ನು ಬಳಸಿದರೆ ನನ್ನ ಮೇಕಪ್ ಮುಗಿದಂತೆ.

ಕೂದಲಿನ ಆರೈಕೆಗೆ ನಿರ್ದಿಷ್ಟವಾಗಿ ಏನೂ ಮಾಡುವುದಿಲ್ಲ. ಆಗಾಗ್ಗೆ ಕೂದಲಿಗೆ ಕತ್ತರಿ ಹಾಕಿಸುತ್ತೇನೆ. ಅಭ್ಯಂಗಕ್ಕೆ ಹೆಚ್ಚು ಒತ್ತು ಕೊಡುತ್ತೇನೆ. ತಿಂಗಳಲ್ಲಿ ಒಮ್ಮೆಯಾದರೂ ಅಭ್ಯಂಗ ಇರುತ್ತದೆ.

ಸಮಯದ ಪರಿಪಾಲನೆಗೆ ಬುಲೆಟ್ ಜರ್ನಲ್

• ಹರ್ಷಾ ಕಾಮತ್

'ಬ್ಯುಸಿ ಬ್ಯುಸಿ ಬ್ಯುಸಿ, ಹೊತ್ತು ಕಳೆದುಹೋಗುವುದೇ ಗೊತ್ತಾಗುವುದಿಲ್ಲ. ಏನ್ ಮಾಡೋದು, ಟೈಮೇ ಸಿಗ್ತಾ ಇಲ್ಲ. ಯಾವಾಗ ನೋಡಿದ್ರೂ ಏನಾದರೊಂದು ಕೆಲಸ ಇದ್ದೇ ಇರುತ್ತದೆ'– ಇವು ನಮ್ಮ ಸುತ್ತಮುತ್ತ ಇರುವವರಿಂದ ಅದರಲ್ಲೂ ಹೆಚ್ಚಾಗಿ ಹೆಣ್ಣುಮಕ್ಕಳಿಂದ ಕೇಳಿಬರುವ ಮಾತುಗಳು. ಏನೇನೋ ಕೆಲಸಗಳನ್ನು ಮಾಡಬೇಕೆಂಬ ಆಕಾಂಕ್ಷೆ ಇದೆ, ಆದರೆ ಸಮಯದ ಅಭಾವ, ಏನು ಮಾಡಲಿ ಎಂಬುದು ಹಲವರ ಪ್ರಶ್ನೆ.

ಇಂತಹ ಸಂಕಷ್ಟದಿಂದ ಪಾರಾಗಿ ಸಮಯಪಾಲನೆ ಮಾಡಲು ಇರುವ ಒಳ್ಳೆಯ ಉಪಾಯ ಎಂದರೆ 'ಬುಲೆಟ್ ಜರ್ನಲ್'. ಅರೆ, ಇದೇನಿದು ಎಂದು ಕೇಳುವಿರಾ? ಇದು ಒಂದು ರೀತಿಯ ಜರ್ನಲ್ ಅಥವಾ ಪ್ಲ್ಯಾನರ್. ಯಾವ ದಿನ ಏನು ಮಾಡಬೇಕು, ಯಾವಾಗ ಮಾಡಬೇಕು, ಏನೆಲ್ಲ ತಯಾರಿ ಮಾಡಿಕೊಳ್ಳಬೇಕು ಎಂದೆಲ್ಲ ಪಟ್ಟಿ ಮಾಡುವುದು, ಚಿಕ್ಕ ಚಿಕ್ಕ ಚಿತ್ರಗಳು, ಡೂಡಲ್ಸ್, ಸ್ಟಿಕರ್ ಅಥವಾ ಬಿಲ್‌ಗಳನ್ನು ಅಂಟಿಸಿ ಆ ಪುಟ ಆಕರ್ಷಕವಾಗುವಂತೆ ಮಾಡುವುದು. ಹೀಗೆ ಮಾಡಿದಾಗ, ಆ ಪುಟವನ್ನು ನೋಡಿದ ಕೂಡಲೇ 'ನಾವು ಬರೆದ ಟೈಮ್ ಟೇಬಲ್ ಅನ್ನು ಪಾಲಿಸಬೇಕು' ಎನ್ನುವ ಸ್ಫೂರ್ತಿ ದೊರೆಯುತ್ತದೆ. ಇಷ್ಟೆಲ್ಲ ಉಪಯೋಗವಿರುವ ಜರ್ನಲ್ ಮಾಡುವುದು ಹೇಗೆ ಎಂದು ನೋಡಿಯೇಬಿಡೋಣ.

ಬೇಕಾಗುವ ಸಾಮಗ್ರಿ

ಒಂದು ಪುಸ್ತಕ, ಕಲರ್ ಪೆನ್ಸಿಲ್, ಸ್ಟಿಕರ್, ಚಿಕ್ಕ ಚಿತ್ರಗಳು

ಜರ್ನಲ್‌ನ ಪ್ರಮುಖ ಭಾಗಗಳು ಹೀಗಿರಲಿ:

- ಇಂಡೆಕ್ಸ್- ಯಾವ ಪುಟದಲ್ಲಿ ಏನಿದೆ ಎಂದು ಬರೆಯುವುದು.
- ಕ್ಯಾಲೆಂಡರ್- ಆ ವರ್ಷದ ಹಾಗೂ ತಿಂಗಳಿನ ಮುಖ್ಯ ದಿನಾಂಕಗಳನ್ನು ಮಾರ್ಕ್ ಮಾಡಿ ಇಡಬಹುದು. ಹುಟ್ಟುಹಬ್ಬ, ಹಬ್ಬಹರಿದಿನ, ಅಟೆಂಡ್ ಆಗಬೇಕಾದಂತಹ ಕಾರ್ಯಕ್ರಮಗಳು ...
- ಮಾಸಿಕ ಗುರಿ– ಆ ತಿಂಗಳಿನಲ್ಲಿ ಮಾಡಬೇಕಾದಂತಹ ಕಾರ್ಯಗಳು, ಹವ್ಯಾಸಗಳು.
- ವಾರದ ಗುರಿ– ಆಯಾ ವಾರದಲ್ಲಿ ಯಾವ ದಿನ ಏನು ಮಾಡಬೇಕು, ಯಾವ ಹೊತ್ತಿನಲ್ಲಿ ಮಾಡಬೇಕು ಎಂಬುದರ ಬಗ್ಗೆ ಬರೆದಿಡಿ.
- ದೈನಂದಿನ ಗುರಿ- ಆ ದಿನ ಮಾಡಬೇಕಾದ ಕೆಲಸಗಳ ಪಟ್ಟಿ.
  ಆ ಪಟ್ಟಿಯಲ್ಲಿ, ಮಾಡಬೇಕಾದ ಅಡುಗೆ, ಸಾಮಾನಿನ ಪಟ್ಟಿ, ಓದಬೇಕಾದ ಪುಸ್ತಕ, ನೋಡಬೇಕಾದ ಚಲನಚಿತ್ರ, ನಮ್ಮ ಬಜೆಟ್, ಆರೋಗ್ಯದ ಬಗ್ಗೆಯೂ ಬರೆಯಬಹುದು.
  ಒಳ್ಳೊಳ್ಳೆಯ ಅಭ್ಯಾಸಗಳನ್ನು ರೂಢಿಸಿಕೊಳ್ಳಲು ಹ್ಯಾಬಿಟ್ ಟ್ರ್ಯಾಕರ್ ಉಪಯುಕ್ತ. ಅಂದರೆ, ದೈನಂದಿನ ಅಭ್ಯಾಸಗಳನ್ನು ಟ್ರ್ಯಾಕ್ ಮಾಡುವುದು.
- ಮೂಡ್ ಟ್ರ್ಯಾಕರ್- ಆ ದಿನದ ನಮ್ಮ ಮನಸ್ಸು ಹಾಗೂ ಭಾವನೆಗಳ ಬಗ್ಗೆ ಬರೆಯುವುದು.
- ಸ್ಲೀಪ್ ಟ್ರ್ಯಾಕರ್- ನಮ್ಮ ನಿದ್ದೆಯ ಬಗ್ಗೆ ಬರೆಯುವುದು.
- ನೀರು, ಆಹಾರ- ಆ ದಿನ ನಾವು ಎಂತಹ ಒಳ್ಳೆಯ ಆಹಾರ ಸೇವಿಸಿದೆವು ಹಾಗೂ ಎಷ್ಟು ನೀರು ಕುಡಿದೆವು ಎಂದು ಬರೆಯುವುದು.
- ಯೋಗ, ವ್ಯಾಯಾಮ– ಅಂದು ಎಷ್ಟು ಸಮಯ ವ್ಯಾಯಾಮ ಮಾಡಿದೆವು ಎಂದು ಬರೆಯುವುದು.

ಹೀಗೆ ನಮಗೆ ಅಗತ್ಯವಿರುವ ಅನೇಕ ರೀತಿಯ ಟ್ರ್ಯಾಕರ್‌ಗಳನ್ನು ಮಾಡಬಹುದು.

ಇದನ್ನೆಲ್ಲಾ ಬರೆದ ಮೇಲೆ, ಪ್ರತಿದಿನ ಡೈರಿ ಬರೆಯಲು ಸ್ವಲ್ಪ ಜಾಗ ಮೀಸಲಿಡಿ. ಅಂದಂದು ಪ್ರಮುಖ ಎನಿಸಿದ ಘಟನೆಗಳ ಬಗ್ಗೆ ಬರೆಯಬಹುದು. ಆ ದಿನ ಕಲಿತ ವಿಷಯಗಳು, ಯಾವ ತಪ್ಪು ಮಾಡಿದೆ, ಅದನ್ನು ಹೇಗೆ ತಿದ್ದಿಕೊಂಡು ಸುಧಾರಿಸಿಕೊಳ್ಳುವುದು ಎಂದು ಬರೆದಿಟ್ಟುಕೊಳ್ಳಿ.

ಆಕರ್ಷಕ ಮಾಡುವುದು ಹೇಗೆ?

ನಿಮ್ಮ ಇಷ್ಟದ ಪ್ರಕಾರ ಚಿಕ್ಕ ಚಿಕ್ಕ ಡ್ರಾಯಿಂಗ್, ಪೇಂಟಿಂಗ್ ಮೂಲಕ ಅಲಂಕರಿಸಬಹುದು. ಇದೇ ನಿಯಮವನ್ನು ಪಾಲಿಸಬೇಕೆಂದೇನೂ ಇಲ್ಲ. ತಮ್ಮ ತಮ್ಮ ಅಭಿರುಚಿಗೆ ತಕ್ಕಂತೆ ಜರ್ನಲ್ ಅನ್ನು ರೂಪಿಸಬಹುದು. ವಾರಕ್ಕೆ ಒಂದು ದಿನ ಯಾವುದೇ ಟೈಮ್ ಟೇಬಲ್ ಬೇಡ. ಆ ದಿನವನ್ನು 'ಲೇಜಿ ಡೇ' ಎಂದು ಕರೆಯಿರಿ. ಅದು ನಮ್ಮ ಮನಸ್ಸಿನ ವಿಶ್ರಾಂತಿಗೆ ಆಗತ್ಯ. ನಮ್ಮ ಸೃಜನಾತ್ಮಕ ಬೆಳವಣಿಗೆಗೆ ಅನುವು ಮಾಡಿಕೊಡುತ್ತದೆ. ನಮ್ಮ ಕಾರ್ಯವೈಖರಿಯನ್ನು ಹೆಚ್ಚಿಸುತ್ತದೆ.

ನಾವು ಜರ್ನಲ್ ಅನ್ನು ಇಟ್ಟುಕೊಳ್ಳುವುದರಿಂದ ಶಿಸ್ತು ಹಾಗೂ ವ್ಯವಸ್ಥಿತವಾಗಿ ಇರಲು ಸಾಧ್ಯವಾಗುತ್ತದೆ. ಹಾಗೇ ಯಾವುದೇ ಕೆಲಸ ತಪ್ಪಿಹೋಗುವುದಿಲ್ಲ. ನಮ್ಮ ಸಮಯದ ಮೇಲೆ ನಮಗೆ ಹಿಡಿತ ಇರುತ್ತದೆ. ಹೀಗೆ ಹತ್ತು ಹಲವು ಉಪಯೋಗವಿರುವ 'ಬುಲೆಟ್ ಜರ್ನಲ್' ಬರೆಯುವ ಅಭ್ಯಾಸವನ್ನು ರೂಢಿಸಿಕೊಳ್ಳಿ. ಇನ್ನು ಮುಂದೆ ನಿಮಗೆ ಸಮಯದ ಚಿಂತೆ ಕಾಡುವುದಿಲ್ಲ.



ವ್ಹಾವ್ ಮಾವು ಸವಿಯೋಣ ನಾವು



• ಸುನಾದ

ರಸಾಸ್ವಾದ

ಮಾವು... ಯಾರಿಗೆ ತಾನೇ ಇಷ್ಟವಿಲ್ಲ ಹೇಳಿ? ದೊಡ್ಡವರಿರಲಿ, ಚಿಕ್ಕವರಿರಲಿ ಹಣ್ಣಿನ ಹೋಳು ಬಾಯಿಗಿಡುತ್ತಿದ್ದಂತೆ ಲಾಲಾರಸ ಗ್ರಂಥಿಗಳು ಅರಳುತ್ತವೆ. ಈಚು ಕಾಯಿಯಿಂದ ಹಿಡಿದು ಕಳಿತ ಹಣ್ಣಿನವರೆಗೂ ಭಿನ್ನ ರುಚಿಯನ್ನು ಆವಾಹಿಸಿಕೊಂಡು ತನ್ನ ಘಮಲು ಹೆಚ್ಚಿಸಿಕೊಳ್ಳುವ ಮಾವು 'ಹಣ್ಣುಗಳ ರಾಜ'ನೇ ಸರಿ. ಬೇಸಿಗೆಯ ಸುಡು ಬಿಸಿಲು ಅಡಿ ಇಡುತ್ತಿದ್ದಂತೆಯೇ ದೇಹದ ದಾಹ ತಣಿಸಲು ಹಣ್ಣುಗಳ ಭರಾಟೆಯೂ ಶುರುವಾಗುತ್ತದೆ. ಕಲ್ಲಂಗಡಿ, ಕರಬೂಜ, ಅನಾನಸ್, ಕಿತ್ತಳೆ, ದ್ರಾಕ್ಷಿ ಇವೆಲ್ಲವೂ ನೀರಿನಂಶವನ್ನೇ ಮೈದುಂಬಿಕೊಂಡು ದೇಹವನ್ನೂ ತಂಪಾಗಿಸುತ್ತವೆ. ಇವುಗಳ ಹವಾ ಕಡಿಮೆಯಾಗುತ್ತಿದ್ದಂತೆಯೇ ಮಾವಿನ ಆಧಿಪತ್ಯ ಶುರು.

ಮಾವಿನಲ್ಲಿ ಖಾದ್ಯಗಳ ವೈವಿಧ್ಯವೂ ಮೇಲ್ಮುಖವೇ. ಯುಗಾದಿ ಹಬ್ಬದ ಸಮಯದಲ್ಲಿ ಈಚು ಕಾಯಿಯೊಂದಿಗೆ ಖಾದ್ಯಗಳಿಗೆ ಮುನ್ನುಡಿ ಬರೆಯುವ ಮಾವು, ತರಹೇವಾರಿ ಖಾದ್ಯಗಳಲ್ಲಿ ತನ್ನ ಪಾರಮ್ಯ ಮೆರೆಯುತ್ತದೆ. ಮಾವು ವರ್ಷವಿಡೀ ಅಧಿಪತಿಯೇ ಎನ್ನುವುದಕ್ಕೆ ಉಪ್ಪಿನಕಾಯಿ ನಿದರ್ಶನವಾಗಿ ನಿಲ್ಲುತ್ತದೆ. ಬಹುತೇಕರ ಮನೆಗಳಲ್ಲಿ ಈಗಲೂ ವರ್ಷಕ್ಕಾಗುವಷ್ಟು ಮಾವಿನಕಾಯಿ ಉಪ್ಪಿನಕಾಯಿ ಜಾಡಿಯಲ್ಲಿ ಭದ್ರವಾಗಿ ಕುಳಿತಿರುತ್ತದೆ. ಮಲೆನಾಡಿನ ಮನೆಗಳಲ್ಲಿ ಈ ಸಮಯದಲ್ಲಿ ಮಾವಿನಮಿಡಿ ಉಪ್ಪಿನಕಾಯಿಯದ್ದೇ ಸದ್ದು. ಉಪ್ಪಿನ ನೀರು ಖಾರದಲ್ಲಿ ಕಳಿತಷ್ಟೂ ರುಚಿ ಹೆಚ್ಚು.

ವರ್ಷದ ಮಾವಿನಕಾಯಿ ಉಪ್ಪಿನಕಾಯಿ ಕೆಡದಂತೆ ಮಾಡುವುದಕ್ಕೂ ಶ್ರದ್ಧೆ ಬೇಕು. ಪದಾರ್ಥಗಳ ಪ್ರಮಾಣದಲ್ಲಿ, ಮಾಡುವ ವಿಧಾನದಲ್ಲಿ ಸ್ವಲ್ಪ ವ್ಯತ್ಯಾಸವಾದರೂ ಹೋಳು ಮೆತ್ತಗಾಗುತ್ತದೆ. ಹಿಂದೆಲ್ಲ 'ತಂಗಳುಪೆಟ್ಟಿಗೆ' ಇಲ್ಲದಿದ್ದರೂ ವರ್ಷದ ಕೊನೆಯಲ್ಲಿ ಸಹ ಉಪ್ಪಿನಕಾಯಿ ತಾಜಾ ಆಗಿಯೇ ಇರುತ್ತಿತ್ತು. ಈಗೆಲ್ಲ ಉಪ್ಪಿನಕಾಯಿ ಫ್ರಿಜ್‌ನ ಸಾಂಗತ್ಯ ಬಯಸುತ್ತದೆ.ಮಾವಿನಕಾಯಿ ಚಿತ್ರಾನ್ನ, ಗೊಜ್ಜು, ತೊಕ್ಕು, ಸಾಸಿವೆ, ತಂಬುಳಿ, ರಸಂ, ಪಾನಕ, ಸಾಲಡ್, ರಸಾಯನ, ಸೀಕರಣೆ, ಚಟ್ನಿ, ಹಲ್ವಾ, ದೋಸೆ, ಮಾವಿನ ಗುಳಂಬಾ ಇವೆಲ್ಲವೂ ಬಹು ಹಿಂದಿನಿಂದ ಅಡುಗೆ ಮನೆಯ ಖಾಯಂ ಖಾದ್ಯಗಳು. ಇವುಗಳ ಜೊತೆಗೆ ಈಗ ಡಿಸರ್ಟ್, ಪುಡ್ಡಿಂಗ್ ಯುಗ. ಮಕ್ಕಳನ್ನು ಸೆಳೆಯಲು ಆಧುನಿಕ ಅಮ್ಮಂದಿರ ಪ್ರಯೋಗಶೀಲತೆ ಮಾವಿನ ಮೇಲೆ ಢಾಳಾಗೇ ಬಿದ್ದಿದೆ. ಮಾವಿನಿಂದ ಕೇಕ್, ಐಸ್‌ಕ್ರೀಮ್, ಡಿಸರ್ಟ್‌ಗಳೂ ಜನನ ಪಡೆದಿವೆ. ಅಂತಹ ಕೆಲವು ಹೊಸ ಖಾದ್ಯಗಳ ರೆಸಿಪಿಗಳು ಇಲ್ಲಿವೆ...

ಮ್ಯಾಂಗೊ ಫಿರ್ನಿ



ಡಿಸರ್ಟ್ ಇಷ್ಟಪಡುವವರು ಮಾವಿನಹಣ್ಣಿನ ಫಿರ್ನಿ ಮಾಡಿ ಸವಿಯಬಹುದು. ಬೇಸಿಗೆ ಸಮಯದಲ್ಲಿ ದೇಹವನ್ನು ತಂಪಾಗಿಸಲು ಇದು ಉತ್ತಮ ಖಾದ್ಯ.

ಏನೇನು ಬೇಕು? ಒಂದು ಲೀಟರ್ ಹಾಲು, 2ರಿಂದ 3 ಗಂಟೆ ನೆನೆಸಿದ ಅರ್ಧ ಕಪ್ ಅಕ್ಕಿ, ಮುಕ್ಕಾಲು ಕಪ್ ಸಕ್ಕರೆ, ಕೇಸರಿ ದಳ 8– 10, 1/2 ಚಮಚ ಏಲಕ್ಕಿ ಪುಡಿ, ಒಂದು ಬಟ್ಟಲು ಮಾವಿನಹಣ್ಣಿನ ಪೇಸ್ಟ್.

ಹೀಗೆ ಮಾಡಿ: ಒಂದು ಲೀಟರ್ ಗಟ್ಟಿ ಹಾಲನ್ನು ಕುದಿಯಲು ಇಡಬೇಕು. ನೆನೆಸಿದ ಅಕ್ಕಿಯನ್ನು ಮಿಕ್ಸಿಗೆ ಹಾಕಿ ಸ್ವಲ್ಪವೇ ನೀರು ಹಾಕಿ ರವೆ ಹದಕ್ಕೆ ರುಬ್ಬಿಕೊಳ್ಳಬೇಕು. ಹಾಲು ಕುದಿಯಲು ಶುರುವಾದ ಬಳಿಕ, ರುಬ್ಬಿಕೊಂಡ ಈ ಅಕ್ಕಿತರಿಯನ್ನು ಹಾಲಿನಲ್ಲಿ ಹಾಕಿ, ಬಿಡದಂತೆ ಕೈಯಾಡಿಸಬೇಕು. ಹಾಲು ಹಾಗೂ ಅಕ್ಕಿ ಮಿಶ್ರಣ ಚೆನ್ನಾಗಿ ಬೆರೆತು ಸ್ವಲ್ಪ ಗಟ್ಟಿ ಹದಕ್ಕೆ ಬರುತ್ತದೆ. ಆಗ ಮುಕ್ಕಾಲು ಕಪ್ ಸಕ್ಕರೆ ಹಾಕಿ ಬಿಡದಂತೆ ಕೈಯಾಡಿಸಬೇಕು. ಬಳಿಕ ಕೇಸರಿ ದಳ, ಏಲಕ್ಕಿ ಪುಡಿ ಹಾಕಿ ಚೆನ್ನಾಗಿ ಮಿಕ್ಸ್ ಮಾಡಬೇಕು. ಇದಕ್ಕೆ ಮಾವಿನಹಣ್ಣಿನ ಪೇಸ್ಟ್ ಹಾಕಿ ಮಿಕ್ಸ್ ಮಾಡಬೇಕು. ಬಳಿಕ ಗ್ಯಾಸ್ ಆಫ್ ಮಾಡಿ, ಕತ್ತರಿಸಿದ ಒಣಹಣ್ಣುಗಳನ್ನು ಸೇರಿಸಿದರೆ ಮ್ಯಾಂಗೊ ಫಿರ್ನಿ ಸವಿಯಲು ಸಿದ್ಧ. 2–3 ಗಂಟೆ ಫ್ರಿಜ್‌ನಲ್ಲಿ ಇಟ್ಟು ಸವಿದರೆ ಫಿರ್ನಿ ಇನ್ನಷ್ಟು ರುಚಿಯಾಗಿರುತ್ತದೆ.

ಮ್ಯಾಂಗೊ ಮಫಿನ್ಸ್



ಕೇಕ್ ಎಂದರೆ ಸಾಕು ಮಕ್ಕಳ ಬಾಯಲ್ಲಿ ನೀರೂರುತ್ತದೆ. ಮಾಮೂಲಿ ಕೇಕ್ ತಿಂದು ಬೇಸರವೆನಿಸಿದರೆ, ಮಾವಿನಹಣ್ಣಿನಲ್ಲಿ ಮನೆಯಲ್ಲೇ ಕಪ್ ಕೇಕ್ ಮಾಡಬಹುದು.

ಏನೇನು ಬೇಕು? ಅರ್ಧ ಕಪ್ ಹಾಲು, ವಿನೆಗರ್ ಅಥವಾ ನಿಂಬೆರಸ 1 ಟೀ ಚಮಚ, ಒಂದು ಬಟ್ಟಲು ಸಿಪ್ಪೆ ತೆಗೆದ ಮಾವಿನಹಣ್ಣು, 1/2 ಕಪ್ ಸಕ್ಕರೆ, ಕಾಲು ಕಪ್ ಬೆಣ್ಣೆ (ಕರಗಿಸಿದ್ದು), ಕಾಲು ಕಪ್ ಮೈದಾಹಿಟ್ಟು, 1/2 ಟೀ ಚಮಚ ಬೇಕಿಂಗ್ ಸೋಡಾ, ಕಾಲು ಕಪ್ ಹಾಲು, ಪೇಪರ್ ಕಪ್‌ಗಳು.

ಹೀಗೆ ಮಾಡಿ: ಅರ್ಧ ಕಪ್ ಹಾಲಿಗೆ ಒಂದು ಟೀ ಚಮಚ ವಿನೆಗರ್ ಹಾಕಿ ಚೆನ್ನಾಗಿ ಮಿಕ್ಸ್ ಮಾಡಿ ಐದು ನಿಮಿಷ ಬಿಡಬೇಕು. ಒಂದು ಮಿಕ್ಸಿಯಲ್ಲಿ ಮಾವಿನಹಣ್ಣು ಹಾಗೂ ಸಕ್ಕರೆಯನ್ನು ಹಾಕಿ ರುಬ್ಬಿಕೊಳ್ಳಬೇಕು. ಬಳಿಕ ಹಾಲಿನ ಮಿಶ್ರಣಕ್ಕೆ ಕರಗಿದ ಬೆಣ್ಣೆ ಹಾಗೂ ಮಾವಿನ ಪೇಸ್ಟ್ ಹಾಕಿ 8– 10 ನಿಮಿಷ ಬಿಡದಂತೆ ಮಿಕ್ಸ್ ಮಾಡಬೇಕು. ಬಳಿಕ ಮೈದಾಹಿಟ್ಟು, ಬೇಕಿಂಗ್ ಸೋಡಾ ಸೇರಿಸಿ ಮಿಕ್ಸ್ ಮಾಡಬೇಕು. ನಂತರ ಹಾಲನ್ನು ಸ್ವಲ್ಪ ಸ್ವಲ್ಪವೇ ಹಾಕಿಕೊಳ್ಳುತ್ತ ಮಿಶ್ರ ಮಾಡುತ್ತಿದ್ದರೆ ಕೇಕ್ ಬ್ಯಾಟರ್ ಸಿದ್ಧಗೊಳ್ಳುತ್ತದೆ. ಚೆನ್ನಾಗಿ ಮಿಶ್ರ ಮಾಡಿಕೊಂಡಷ್ಟೂ ಕೇಕ್ ಪದರ ಪದರವಾಗಿ ಬರುತ್ತದೆ. ಈ ಬ್ಯಾಟರ್ ಅನ್ನು ಎಣ್ಣೆ ಸವರಿದ ಪೇಪರ್ ಕಪ್‌ಗಳ ಅರ್ಧ ಭಾಗಕ್ಕೆ ಹಾಕಿಕೊಳ್ಳಬೇಕು. ಬಳಿಕ ಒಂದು ಕುಕ್ಕರ್‌ನ ತಳಭಾಗದಲ್ಲಿ ಸಣ್ಣ ಸ್ಟ್ಯಾಂಡ್ ಇಟ್ಟು, ಮೇಲೆ ಅಗಲವಾದ ತಟ್ಟೆ ಇಡಬೇಕು. ಅದರ ಮೇಲೆ ಕೇಕ್ ಬ್ಯಾಟರ್ ಹಾಕಿದ ಪೇಪರ್ ಕಪ್‌ಗಳನ್ನು ಇಟ್ಟು 15–20 ನಿಮಿಷ ಸಣ್ಣ ಉರಿಯಲ್ಲಿ ಬೇಯಿಸಬೇಕು. ತಣ್ಣಗಾದ ಬಳಿಕ ಮ್ಯಾಂಗೊ ಮಫಿನ್ಸ್ ಸವಿಯಲು ಸಿದ್ಧ.

ಮಾನವೀಯತೆ ಮೊದಲಾಗಲಿ

• ಎನ್.ಎಸ್. ಅಶ್ವಿನಿ ನೊಣವಿನಕೆರೆ

ಭಾವಯಾನ

ಸರ್ಕಾರಿ ಬಸ್ಸು ಸಾಮಾನ್ಯವಾಗಿ ತುಂಬಾ ರಷ್ ಇರುತ್ತದೆ. ಸೀಟು ಸಿಗುವುದಂತೂ ಬಹಳ ಕಷ್ಟ. ಅದೊಂದು ಬಾರಿ ಎಲ್ಲರಂತೆ ನಾನೂ ಕಷ್ಟಪಟ್ಟು ಓಡಿಹೋಗಿ ಸೀಟು ಹಿಡಿದುಕೊಂಡು, ಬಸ್ಸಿನ 4ನೇ ಸಾಲಿನಲ್ಲಿ ಕೂತೆ. ಮೊದಲ ಸೀಟಿನ ಅಂಚಿನಲ್ಲಿ ತರುಣಿಯೊಬ್ಬಳು ಕೂತಿದ್ದಳು. ಕಾಲುನೋವಿನಿಂದ ಬಳಲುತ್ತಿದ್ದ, ವಯಸ್ಸಾಗಿದ್ದ ಮಹಿಳೆಯೊಬ್ಬರು ಕುಂಟುತ್ತಾ ಕಷ್ಟಪಟ್ಟು ಹತ್ತಿಬಂದು ಆ ತರುಣಿಯ ಪಕ್ಕದ ಸೀಟಿನಲ್ಲಿ ಕೂತರು. ಸ್ವಲ್ಪ ಹೊತ್ತಿನಲ್ಲೇ ಬಸ್ಸು ಸಂಪೂರ್ಣವಾಗಿ ತುಂಬಿ, ಕಾಲಿಡಲು ಕೂಡ ಜಾಗವಿಲ್ಲದಂತೆ ಆಗಿಹೋಯಿತು.

ಬಸ್ಸು ಇನ್ನೇನು ಹೊರಡಲು ಶುರುವಾದಾಗ, 10-15 ದಿನದ ಮಗುವನ್ನು ಎತ್ತಿಕೊಂಡಿದ್ದ ಹಸಿ ಬಾಣಂತಿ ಹಾಗೂ ಬ್ಯಾಗೊಂದನ್ನು ಹಿಡಿದಿದ್ದ ಆಕೆಯ ತಾಯಿ ಬಸ್ಸನ್ನು ಏರಿದರು. ಆ ಬಾಣಂತಿಗೆ ಯಾರೊಬ್ಬರೂ ತಕ್ಷಣಕ್ಕೆ ಸೀಟು ಬಿಟ್ಟುಕೊಡುವ ಮಾನವೀಯತೆಯಾಗಲೀ ಮನುಷ್ಯತ್ವ ಆಗಲೀ ಕಂಡುಬರಲಿಲ್ಲ. ಕಂಡಕ್ಟರ್ ಬಂದು ಆ ಬಾಣಂತಿಗೆ ಸೀಟು ಬಿಟ್ಟುಕೊಡುವಂತೆ ಮೇಲೆ ತಿಳಿಸಿದ ತರುಣಿಗೆ ಹೇಳಿದರು.

ಕೋಪಗೊಂಡ ಆಕೆ 'ಹಿಂದೆ ಬಹಳ ಜನರಿದ್ದಾರೆ, ಅವರನ್ನು ಎಬ್ಬಿಸಿ ಸೀಟು ಕೊಡಿಸಿ' ಎಂದು ಖಾರವಾಗಿ ಹೇಳಿದಳು. ಆಕೆಯ ಹಿಂಬದಿಯಲ್ಲಿ ಕೂತಿದ್ದ ಮಹಿಳೆಯೊಬ್ಬರು ಸೀಟು ಬಿಟ್ಟುಕೊಡುವಂತೆ ತರುಣಿಗೆ ದಬಾಯಿಸಿದರು. ಅದಕ್ಕೆ ಆಕೆ 'ನನಗೆ ತುಂಬಾ ಕಾಲು ನೋವಿದೆ. ನೀವೇ ಬೇಕಾದರೆ ಬಿಟ್ಟುಕೊಡಿ' ಎಂದಳು. ಅದಕ್ಕೆ ಆ ಮಹಿಳೆ 'ಅಯ್ಯೋ ನನಗೆ ಹುಷಾರಿಲ್ಲ. ಆ ಕಂಡಕ್ಟರ್ ಹೇಳಿರುವುದು ನಿನಗೆ ಕಣಮ್ಮ, ನನಗಲ್ಲ' ಎಂದು ಹೇಳಿ ಸುಮ್ಮನಾದರು.

ಕಂಡಕ್ಟರ್ ಯಾರಿಗೆ ಏನು ಹೇಳಬೇಕು ಎಂಬುದೇ ತಿಳಿಯದೆ ಮೌನವಾಗಿ ನಿಂತುಬಿಟ್ಟಿದ್ದರು. ಎಲ್ಲ ಸೀಟುಗಳಲ್ಲೂ ಮಹಿಳೆಯರೇ ಕೂತಿದ್ದರೂ ಒಬ್ಬರಾದರೂ ಆಕೆಗೆ ಸೀಟು ಬಿಟ್ಟುಕೊಡುವ ಸೌಜನ್ಯ ತೋರಿಸಲಿಲ್ಲ. ನಾನೇ ಎದ್ದು ಸೀಟು ಕೊಡಲು ಇಚ್ಛೆಪಟ್ಟರೂ ನಾನು ಮಧ್ಯದ ಸಾಲಿನಲ್ಲಿ ಇದ್ದುದರಿಂದ ಆಕೆ ನನ್ನ ಬಳಿಗೆ ತಲುಪಲಾಗದಷ್ಟು ರಷ್ ಇತ್ತು. ಕಡೆಗೆ, ಕೆಲ ಹೊತ್ತಿನ ವಾದ ವಿವಾದದ ನಂತರ, ಕುಂಟುತ್ತಾ ಬಸ್ ಹತ್ತಿ ಬಂದಿದ್ದ ಆ ಹಿರಿಯ ಮಹಿಳೆಯೇ ಮುಂದಾಗಿ ತಮ್ಮ ಸೀಟ್ ಅನ್ನು ಬಿಟ್ಟುಕೊಟ್ಟರು.

ಇದೊಂದು ಸಣ್ಣ ವಿಚಾರದಂತೆ ಕಂಡುಬಂದರೂ ಮಾನವೀಯ ಮೌಲ್ಯಗಳನ್ನು ಮರೆತವರಿಗೆ ಇತರರ ಕಷ್ಟ ಎಂದಿಗೂ ಅರ್ಥವಾಗುವುದಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ನಾವು ಎಷ್ಟೇ ಓದಿದ್ದರೂ, ಹತ್ತಾರು ಡಿಗ್ರಿಗಳನ್ನು ಪಡೆದಿದ್ದರೂ ಕಷ್ಟದಲ್ಲಿ ಇರುವವರಿಗೆ ನಮ್ಮಿಂದ ಮಾಡಬಹುದಾದ ಸಹಾಯವನ್ನೂ ಮಾಡದಿದ್ದರೆ ಅವೆಲ್ಲವೂ ವ್ಯರ್ಥವಾದಂತೆಯೇ ಸರಿ. ಸರಳತೆ ಎಂಬ ಗುಣವೇ ನಮ್ಮಲ್ಲಿ ಇಲ್ಲದಿದ್ದಾಗ, ನಾವು ಹೊಂದಿರುವುದೆಲ್ಲವೂ ನಿಷ್ಪ್ರಯೋಜಕವೇ ಹೌದು.



ಅಂಗನವಾಡಿ: 4.26 ಲಕ್ಷ ಅಪೌಷ್ಟಿಕ ಮಕ್ಕಳು

ತೀವ್ರ ಕುಂಠಿತ ಬೆಳವಣಿಗೆಯ ಮಕ್ಕಳ ಆರೈಕೆಗೆ ಪ್ರತ್ಯೇಕ ಅನುದಾನ ಇಲ್ಲ; ಮಾರ್ಗಸೂಚಿಯಂತೆ 300 ದಿನಗಳ ಪೂರಕ ಪೌಷ್ಟಿಕ ಆಹಾರ

● ರಾಜೇಶ್ ರೈ ಚಟ್ಲ

ಬೆಂಗಳೂರು: ರಾಜ್ಯದ ಅಂಗನವಾಡಿ ಕೇಂದ್ರಗಳಲ್ಲಿ ದಾಖಲಾಗಿರುವ ಆರು ವರ್ಷ ವಯಸ್ಸಿನ ಒಳಗಿನ ಒಟ್ಟು 32,75,829 ಮಕ್ಕಳ ಪೈಕಿ, 4,25,827 ಮಕ್ಕಳಲ್ಲಿ ಬೆಳವಣಿಗೆ ತೀವ್ರ ಕುಂಠಿತವಾಗಿದೆ.

ಮಹಿಳಾ ಮತ್ತು ಮಕ್ಕಳ ಇಲಾಖೆಯು ಅಂಗನವಾಡಿಗಳಲ್ಲಿ ನಡೆಸಿದ ಮಕ್ಕಳ ಆರೋಗ್ಯ ತಪಾಸಣೆಯಲ್ಲಿ ಈ ಮಾಹಿತಿ ಗೊತ್ತಾಗಿದೆ. ವಯೋಮಾನಕ್ಕೆ ತಕ್ಕ ಎತ್ತರ ಬೆಳೆಯದ ಮಕ್ಕಳ ಸಂಖ್ಯೆ ಅಂದರೆ, ಬೆಳವಣಿಗೆ ತೀವ್ರ ಕುಂಠಿತರಾಗಿರುವವರ ಪ್ರಮಾಣ ಶೇ 13.05ರಷ್ಟಿದೆ. ಬೆಳವಣಿಗೆ ಸಾಧಾರಣ ಕುಂಠಿತರಾಗಿರುವ ಮಕ್ಕಳು ಶೇ 16.93ರಷ್ಟು (5,52,606) ಇದ್ದಾರೆ.

ಬಳ್ಳಾರಿ, ಬೀದರ್, ಕಲಬುರಗಿ, ಯಾದಗಿರಿ, ಬೆಳಗಾವಿ, ರಾಯಚೂರು, ಚಿತ್ರದುರ್ಗ ಮತ್ತು ವಿಜಯನಗರ ಜಿಲ್ಲೆಯಲ್ಲಿ ಬೆಳವಣಿಗೆ ಕುಂಠಿತ ಮಕ್ಕಳ ಸಂಖ್ಯೆ ಹೆಚ್ಚು. ಈ ಜಿಲ್ಲೆಗಳಲ್ಲಿ ಮಕ್ಕಳಲ್ಲಿನ ಅಪೌಷ್ಟಿಕತೆ ನಿವಾರಿಸಲು ಸಮುದಾಯ ಆಧಾರಿತ ತೀವ್ರ ಅಪೌಷ್ಟಿಕ ಮಕ್ಕಳ ನಿರ್ವಹಣೆ ಕಾರ್ಯಕ್ರಮ 'ಚಿಗುರು' ಎಂಬ ವಿನೂತನ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ.

'ಮಕ್ಕಳ ಬೆಳವಣಿಗೆಗೆ ಕುಂಠಿತ ಹಾಗೂ ಅಪೌಷ್ಟಿಕತೆಗೆ ಸಾಮಾಜಿಕ, ಆರ್ಥಿಕ, ಆರೋಗ್ಯ, ಪೌಷ್ಟಿಕಾಂಶ, ಅನುವಂಶೀಯ ಕಾರಣಗಳಿವೆ. ಅಂಗನವಾಡಿ ಕೇಂದ್ರಗಳಲ್ಲಿ ದಾಖಲಾಗುವುದು ಆರು ವರ್ಷ ವಯಸ್ಸಿನ ಎಲ್ಲ ಮಕ್ಕಳಲ್ಲಿನ ಈ ಸಮಸ್ಯೆ ತಡೆಗಟ್ಟಲು ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಆದರೆ, ಕುಂಠಿತ ಬೆಳವಣಿಗೆಯ ಮಕ್ಕಳಿಗಾಗಿ ಪ್ರತ್ಯೇಕ ಅನುದಾನ ಮೀಸಲು ಇಟ್ಟಿಲ್ಲ' ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ ತಿಳಿಸಿದ್ದಾರೆ.

ಅಂಗನವಾಡಿ ಕೇಂದ್ರಗಳಲ್ಲಿ ದಾಖಲಾದ ಆರು ತಿಂಗಳಿನಿಂದ 6 ವರ್ಷದವರೆಗಿನ ಮಕ್ಕಳಿಗೆ ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ 300 ದಿನಗಳ ಪೂರಕ ಪೌಷ್ಟಿಕ ಆಹಾರ ನೀಡಲಾಗುತ್ತಿದೆ. ಎಲ್ಲ ಮಕ್ಕಳಿಗೆ ಪ್ರತಿದಿನ ₹8 ಮೌಲ್ಯದ ಪೂರಕ ಪೌಷ್ಟಿಕ ಆಹಾರ ನೀಡಿದರೆ, ತೀವ್ರ ಅಪೌಷ್ಟಿಕ ಮಕ್ಕಳಿಗೆ ₹12 ಮೌಲ್ಯದ ಪೌಷ್ಟಿಕ ಆಹಾರ ನೀಡಲಾಗುತ್ತಿದೆ. ಅಲ್ಲದೆ, ಅಂಗನವಾಡಿಗೆ ಹಾಜರಾಗುವ ಎಲ್ಲ ಮಕ್ಕಳಿಗೆ ವಾರದಲ್ಲಿ ಎರಡು ದಿನ ಮೊಟ್ಟೆ ನೀಡಲಾಗುತ್ತಿದೆ ಎಂದು ಅವರು ಹೇಳಿದ್ದಾರೆ.

ರಾಜ್ಯ ಸರ್ಕಾರದ ಕ್ಷೀರಭಾಗ್ಯ ಯೋಜನೆಯಡಿ ಆರು ತಿಂಗಳಿನಿಂದ ಆರು ವರ್ಷದ ಎಲ್ಲ ಅಂಗನವಾಡಿ ಮಕ್ಕಳಿಗೆ ವಾರದಲ್ಲಿ ಐದು ದಿನ 150 ಮಿ.ಲೀ ಹಾಲು (15 ಗ್ರಾಂ ಕೆನೆಭರಿತ ಹಾಲಿನಪುಡಿ, 5 ಗ್ರಾಂ ಸಕ್ಕರೆ) ನೀಡಲಾಗುತ್ತಿದೆ. ಆರು ತಿಂಗಳಿನಿಂದ ಮೂರು ವರ್ಷದವರೆಗಿನ ತೀವ್ರ, ಸಾಧಾರಣ ಅಪೌಷ್ಟಿಕ ಮಕ್ಕಳಿಗೆ ವಾರದಲ್ಲಿ 3 ದಿನ ಮೊಟ್ಟೆ ಹಾಗೂ 3 ದಿನ 20 ಗ್ರಾಂ ಹಾಲಿನ ಪುಡಿ, 3 ವರ್ಷದಿಂದ 6 ವರ್ಷದ ತೀವ್ರ, ಸಾಧಾರಣ ಅಪೌಷ್ಟಿಕ ಮಕ್ಕಳಿಗೆ ವಾರದಲ್ಲಿ ಐದು ದಿನ ಮೊಟ್ಟೆ ಹಾಗೂ 3 ದಿನ 20 ಗ್ರಾಂ ಹಾಲಿನ ಪುಡಿಯನ್ನು ಮನೆಗೆ ವಿತರಿಸಲಾಗುತ್ತಿದೆ. ಜೊತೆಗೆ, ತೀವ್ರ ಅಪೌಷ್ಟಿಕ ಮಕ್ಕಳಿಗೆ ಆರೋಗ್ಯ ಇಲಾಖೆಯ ಪೌಷ್ಟಿಕ ಪುನರ್ವಸತಿ ಕೇಂದ್ರಗಳಲ್ಲಿ (ಎನ್‌ಆರ್‌ಸಿ) ಚಿಕಿತ್ಸೆ ನೀಡಲಾಗುತ್ತಿದೆ ಎಂದೂ ಅವರು ವಿವರಿಸಿದ್ದಾರೆ.

ಆರು ವರ್ಷದ ಒಳಗಿನ ಎಲ್ಲ ಮಕ್ಕಳಿಗೆ ಆರೋಗ್ಯ ಇಲಾಖೆಯ ಸಹಯೋಗದಲ್ಲಿ ನಿಗದಿತ ಚುಚ್ಚುಮದ್ದು ಕೂಡ ನೀಡಲಾಗುತ್ತಿದೆ. ಮೂರು ತಿಂಗಳಿಗೊಮ್ಮೆ ಎಲ್ಲ ಮಕ್ಕಳ ಆರೋಗ್ಯ ತಪಾಸಣೆ ನಡೆಸಲಾಗುತ್ತಿದೆ ಎಂದೂ ಲಕ್ಷ್ಮಿ ಹೆಬ್ಬಾಳಕರ ಮಾಹಿತಿ ನೀಡಿದ್ದಾರೆ.

ಅತೀ ಹೆಚ್ಚು ಕುಬ್ಜ ಮಕ್ಕಳಿರುವ ಜಿಲ್ಲೆ

ಜಿಲ್ಲೆ	ಒಟ್ಟು ಮಕ್ಕಳು	ತೀವ್ರ ಬೆಳವಣಿಗೆ ಕುಂಠಿತರು	ಶೇ
ರಾಯಚೂರು	1,58,331	3,99,47	25.33
ಯಾದಗಿರಿ	1,10,721	27,127	24.72
ವಿಜಯಪುರ	1,93,065	45,660	23.89
ಕಲಬುರಗಿ	1,96,311	44,518	22.93
ಬೀದರ್	1,13,813	25,325	22.43
ಚಾಮರಾಜನಗರ	39,304	7,323	18.66
ಕೊಪ್ಪಳ	1,24,951	19,903	15.94
ಬಾಗಲಕೋಟೆ	1,31,515	20111	15.37
ಬಳ್ಳಾರಿ	98,538	15,017	15,36

ಏನಿದು 'ಚಿಗುರು'?

ತೀವ್ರ ಅಪೌಷ್ಟಿಕ ಮಕ್ಕಳು ಅತಿ ಹೆಚ್ಚು ಇರುವ ಜಿಲ್ಲೆಗಳಲ್ಲಿ, ಆ ಮಕ್ಕಳ ನಿರ್ವಹಣೆಗೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಆರಂಭಿಸಿರುವ ಹೊಸ ಯೋಜನೆ 'ಚಿಗುರು'.

ಯೋಜನೆಯ ಆರಂಭಿಕ ಹಂತದಲ್ಲಿ ತೀವ್ರ ಅಪೌಷ್ಟಿಕತೆ ಇರುವ ಮಕ್ಕಳನ್ನು ಗುರುತಿಸಲಾಗುತ್ತದೆ. ನಂತರ ವೈದ್ಯಕೀಯ ಸಮಸ್ಯೆಗಳಿಲ್ಲದೆ ತೀವ್ರ ಮತ್ತು ಸಾಧಾರಣ ಅಪೌಷ್ಟಿಕ ಮಕ್ಕಳಿಗೆ ವೈದ್ಯಕೀಯ ಪೋಷಕಾಂಶಗಳು ಹಾಗೂ ಹೆಚ್ಚು ಪೌಷ್ಟಿಕ ಆಹಾರ ನೀಡಲಾಗುತ್ತಿದೆ. ಆ ಮೂಲಕ, ಈ ಮಕ್ಕಳ ಪೋಷಣೆಯು ಕೇವಲ ತಾಯಿಯ ಜವಾಬ್ದಾರಿಯಷ್ಟೇ ಅಲ್ಲ, ಇಡೀ ಕುಟುಂಬದ ಜವಾಬ್ದಾರಿ ಎಂಬ ಪರಿಕಲ್ಪನೆಯಡಿ ಯೋಜನೆಯನ್ನು ರೂಪಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

'ಬಾಬೂ ಜಗಜೀವನ್ ರಾಮ್' ಪ್ರಶಸ್ತಿಗೆ ಐವರು ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರ ನೀಡುವ 2026ನೇ ಸಾಲಿನ ಬಾಬೂ ಜಗಜೀವನ್ ರಾಮ್ ಪ್ರಶಸ್ತಿಗೆ ಸಾಮಾಜಿಕ ಕಾರ್ಯಕರ್ತೆ ಬೆಂಗಳೂರಿನ ಚಂದ್ರಮ್ಮ ಸೇರಿದಂತೆ ಐವರು ಭಾಜನರಾಗಿದ್ದಾರೆ.

ರಾಯಚೂರು ಜಿಲ್ಲೆ ಆಶಾಪುರದ ಜಾನಪದ ಕಲಾವಿದ ಡಿಂಗ್ರಿ ನರಸಪ್ಪ, ಬೆಳಗಾವಿಯ ಪತ್ರಕರ್ತ ಸರಜೂ ಕಾಟ್ಕರ್, ಮೈಸೂರಿನ ಮಾಜಿ ಮೇಯರ್ ನಾರಾಯಣ, ತುಮಕೂರಿನ ನಗರಸಭೆ ಮಾಜಿ ಸದಸ್ಯ ನರಸೀಯಪ್ಪ ಪ್ರಶಸ್ತಿಗೆ ಆಯ್ಕೆಯಾಗಿದ್ದು, ಸಮಾಜ ಕಲ್ಯಾಣ ಇಲಾಖೆ ಪಟ್ಟಿಯನ್ನು ಬಿಡುಗಡೆ ಮಾಡಿದೆ.

ಪ್ರಶಸ್ತಿಯು ತಲಾ ₹5 ಲಕ್ಷ ನಗದು, 20 ಗ್ರಾಂ ಚಿನ್ನದ ಪದಕವನ್ನು ಒಳಗೊಂಡಿದೆ. ಬಾಬೂ ಜಗಜೀವನ್ ರಾಮ್ ಅವರ ಜನ್ಮದಿನವಾದ ಏ.5ರಂದು ವಿಧಾನಸೌಧದ ಆವರಣದಲ್ಲಿ ಆಯೋಜಿಸಲಾಗುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಸಮಾಜ ಕಲ್ಯಾಣ ಇಲಾಖೆ ಅಯುಕ್ತ ರಾಕೇಶ್‌ಕುಮಾರ್ ಮಾಹಿತಿ ನೀಡಿದ್ದಾರೆ.

ಪ್ರಶಸ್ತಿ ಪುರಸ್ಕೃತರ ವಿವರ


ಚಂದ್ರಮ್ಮ

ಚಂದ್ರಮ್ಮ: ಚಂದ್ರಮ್ಮ ಅವರು ಸಾವಿತ್ರಿಬಾಯಿ ಫುಲೆ ಸಂಘದ ಅಧ್ಯಕ್ಷರಾಗಿದ್ದು, ಬೆಂಗಳೂರಿನ ಹಕ್ಕಿ- ಪಿಕ್ಕಿ ಜನಾಂಗದ ಕೊಳೆಗೇರಿಗಳಲ್ಲಿ ವಾಸಿಸುವ ದಲಿತ ಮಹಿಳೆಯರಿಗೆ ಭೂಮಿ, ಮನೆಗಳನ್ನು ಮಂಜೂರು ಮಾಡಿಸುವುದು, ಮಕ್ಕಳ ವಿದ್ಯಾಭ್ಯಾಸಕ್ಕೆ ಸಹಾಯ ಮಾಡುವುದು. ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡುವ ಮೂಲಕ ದಲಿತ ಕುಟುಂಬಗಳಿಗೆ ಸೇವೆ ಮಾಡುತ್ತಾ ಬಂದಿದ್ದಾರೆ.


ಡಿಂಗ್ರಿ ನರಸಪ್ಪ

ಡಿಂಗ್ರಿ ನರಸಪ್ಪ: ಡಿಂಗ್ರಿ ನರಸಪ್ಪ ಅವರು 18ನೇ ವಯಸ್ಸಿಗೇ ದಲಿತ ಚಳವಳಿಗೆ ದುಮುಕಿದವರು. ತಮಟೆ ವಾದ್ಯದಲ್ಲಿ ರಾಜ್ಯದಲ್ಲೇ ಪ್ರಸಿದ್ಧಿ ಪಡೆದಿರುವ ಅವರು ಶ್ರುತಿ ಸಂಸ್ಕೃತಿ ಸಂಸ್ಥೆ ಕಟ್ಟಿ ಕಿಶೋರಿಯರಿಗೆ ತಮಟೆ, ಹಾಡುಗಾರಿಕೆ ಹಾಗೂ ಬೀದಿನಾಟಕ ಕಲಿಕಾ ತರಬೇತಿ ಕಾರ್ಯಾಗಾರಗಳನ್ನು 40 ವರ್ಷಗಳಿಂದ ನಿರ್ವಹಿಸುತ್ತಿದ್ದಾರೆ.


ಸರಜೂ ಕಾಟ್ಕರ್

ಸರಜೂ ಕಾಟ್ಕರ್: ಸರಜೂ ಕಾಟ್ಕರ್ ಅವರು ದಲಿತ ಬಂಡಾಯ ಸಾಹಿತ್ಯ ಸಂಘಟನೆ ಹಾಗೂ ಚಳವಳಿಗಳಲ್ಲಿ ತೊಡಗಿಸಿಕೊಂಡು ಸಾಮಾಜಿಕ ನ್ಯಾಯಕ್ಕಾಗಿ ದುಡಿದಿದ್ದಾರೆ. ಪತ್ರಕರ್ತರಾಗಿ ಅಂಬೇಡ್ಕರ್ ಚಿಂತನೆಗಳನ್ನು ಪ್ರಸಾರ ಮಾಡಿದ್ದಾರೆ. ವಿದ್ಯಾರ್ಥಿ ದೆಸೆಯಿಂದಲೇ ಶೋಷಿತರ ಪರ ಧ್ವನಿ ಎತ್ತಿದ್ದಾರೆ.


ನಾರಾಯಣ

ನಾರಾಯಣ: ನಾರಾಯಣ ಅವರು ಪೌರಕಾರ್ಮಿಕ ಸಮುದಾಯ ಅನುಭವಿಸುತ್ತಿದ್ದ ಕಷ್ಟ ಕಾರ್ಪಣ್ಯಗಳನ್ನು ಕಣ್ಣಾರೆ ಕಂಡವರು. ಪೌರ ಕಾರ್ಮಿಕರಾಗಿ ವೃತ್ತಿಜೀವನ ಆರಂಭಿಸಿದ್ದ ಅವರು ದೌರ್ಜನ್ಯ ಮತ್ತು ದಬ್ಬಾಳಿಕೆಯ ವಿರುದ್ಧ ನ್ಯಾಯಯುತ ಹಕ್ಕುಗಳಿಗಾಗಿ ಹೋರಾಟ ಮಾಡುತ್ತಾ ಬಂದಿದ್ದಾರೆ. ವಸತಿರಹಿತರಿಗೆ ಸೂರು ಕಲ್ಪಿಸಲು ಶ್ರಮಿಸಿದ್ದಾರೆ. ಮೈಸೂರು ಮಹಾನಗರ ಪಾಲಿಕೆಯ ಸದಸ್ಯ, ಮೇಯರ್ ಆಗಿ, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ.


ನರಸೀಯಪ್ಪ

ನರಸೀಯಪ್ಪ: ನರಸೀಯಪ್ಪ ಅವರು ಬಡತನ ಮತ್ತು ಅಸ್ಪೃಶ್ಯತೆ ಕಾರಣಕ್ಕೆ ವಿದ್ಯಾಭ್ಯಾಸವನ್ನು ಅರ್ಧದಲ್ಲಿಯೇ ತೊರೆದಿದ್ದರು. ಮೂಟೆ ಹೊರುವ ಹಮಾಲಿಯಾಗಿ ದುಡಿಮೆ ಆರಂಭಿಸಿದ್ದ ಅವರು ಅನುಭವಿಸಿದ ಅವಮಾನ, ಸಂಕಟ ಮತ್ತು ನೋವುಗಳನ್ನೇ ಸಾಧನಗಳನ್ನಾಗಿ ಮಾಡಿಕೊಂಡು ನಾಯಕತ್ವದ ಗುಣ ಬೆಳೆಸಿಕೊಂಡಿದ್ದರು. ಹಮಾಲಿಗಳ ಬದುಕನ್ನು ಹಸನುಗೊಳಿಸಲು ಹಮಾಲಿಗಳ ಸಂಘ ಸ್ಥಾಪಿಸಿ ಹೋರಾಟ ಮಾಡಿದ್ದರು. ಕರ್ನಾಟಕದ ಸಾಮಾಜಿಕ ಚಳವಳಿ, ದಲಿತ ಸಂಘರ್ಷ ಸಮಿತಿಯ ಬೆಳವಣಿಗೆಗೆ ಶ್ರಮಿಸಿದ್ದಾರೆ.

'ಪಿಯುಸಿ ನಂತರ ಮುಂದೇನು' ಎಂಬ ವಿದ್ಯಾರ್ಥಿಗಳು– ಪಾಲಕರ ಪ್ರಶ್ನೆಗೆ ಸಿಗಲಿದೆ ಉತ್ತರ

ಶೈಕ್ಷಣಿಕ ದಿಕ್ಸೂಚಿ ಮೇಳ ಇಂದಿನಿಂದ

ಪ್ರಜಾವಾಣಿ ವಾರ್ತೆ

ಎಡ್ಯುವರ್ಸ್ ಪ್ರಿಮಿಯರ್ ಎಜುಕೇಶನ್ ಎಕ್ಸ್‌ಪೋ

ಬೆಂಗಳೂರು: ಶಿಕ್ಷಣ ಮತ್ತು ವೃತ್ತಿ ಮಾರ್ಗದರ್ಶನದ ಪ್ರಮುಖ ಪ್ರದರ್ಶನವಾದ 'ಎಡ್ಯುವರ್ಸ್' ಮೇಳವನ್ನು 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ವತಿಯಿಂದ ಏಪ್ರಿಲ್ 4 ಮತ್ತು 5ರಂದು ಇಲ್ಲಿನ ಅರಮನೆ ಮೈದಾನದ ಗಾಯತ್ರಿ ವಿಹಾರ್‌ನಲ್ಲಿ (ಗೇಟ್ ನಂಬರ್ 4) ಆಯೋಜಿಸಲಾಗಿದೆ.

'ಪಿಯುಸಿ ನಂತರ ಮುಂದೇನು?' ಎಂಬ ಪ್ರಶ್ನೆಗೆ ವಿದ್ಯಾರ್ಥಿಗಳು ಹಾಗೂ ಪೋಷಕರು ಮೇಳದಲ್ಲಿ ಭಾಗವಹಿಸುವ ಮೂಲಕ ಸರಿಯಾದ ಉತ್ತರ ಪಡೆಯಬಹುದು. ಎರಡೂ ದಿನ ಬೆಳಿಗ್ಗೆ 9 ರಿಂದ ಸಂಜೆ 6ರವರೆಗೆ ಮೇಳ ನಡೆಯಲಿದ್ದು, ಎಲ್ಲರಿಗೂ ಮುಕ್ತ ಪ್ರವೇಶವಿದೆ.

ಪಾಲ್ಗೊಳ್ಳುವ ಸಂಸ್ಥೆಗಳು: ರಾಮಯ್ಯ ಅನ್ವಯಿಕ ವಿಜ್ಞಾನ ವಿಶ್ವವಿದ್ಯಾಲಯ, ರೇವಾ ವಿಶ್ವವಿದ್ಯಾಲಯ, ಪ್ರೆಸಿಡೆನ್ಸಿ ವಿಶ್ವವಿದ್ಯಾಲಯ, ದಯಾನಂದ ಸಾಗರ್ ವಿಶ್ವವಿದ್ಯಾಲಯ, ಸಿಎಂಆರ್ ವಿಶ್ವವಿದ್ಯಾಲಯ, ಗಾರ್ಡನ್ ಸಿಟಿ ವಿಶ್ವವಿದ್ಯಾಲಯ, ಮಣಿಪಾಲ್ ಅಕಾಡೆಮಿ ಆಫ್ ಹೈಯರ್ ಎಜುಕೇಶನ್ (ಮಾಹೆ)– ಬೆಂಗಳೂರು, ಶಿವ ನಾಡಾರ್ ವಿಶ್ವವಿದ್ಯಾಲಯ, ಚಾಣಕ್ಯ ವಿಶ್ವವಿದ್ಯಾಲಯ, ಎಸ್‌ಆರ್‌ಎಂ ವಿಶ್ವವಿದ್ಯಾಲಯ.

ಐಸಿಎಫ್ಎಐ ಫೌಂಡೇಶನ್ ಫಾರ್ ಹೈಯರ್ ಎಜುಕೇಶನ್, ಸಿಐಟಿ– ಕೇಂಬ್ರಿಜ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಕೆಎಲ್‌ಇ ವೈದ್ಯಕೀಯ ವಿಶ್ವವಿದ್ಯಾಲಯ, ಕೆಎಲ್‌ಇ ತಾಂತ್ರಿಂಕ ವಿಶ್ವವಿದ್ಯಾಲಯ, ಗೀತಂ ಡೀಮ್ಡ್ ವಿಶ್ವವಿದ್ಯಾಲಯ, ಸಪ್ತಗಿರಿ ಎನ್‌ಪಿಎಸ್ ವಿಶ್ವವಿದ್ಯಾಲಯ, ವೆಲ್ಲೂರು ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಪರುಲ್ ವಿಶ್ವವಿದ್ಯಾಲಯ, ಈಸ್ಟ್ ಪಾಯಿಂಟ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್, ಆರ್.ವಿ. ವಿಶ್ವವಿದ್ಯಾಲಯ, ಕಮ್ಮವರಿ ಸಂಘಮ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್, ಎಸ್‌ಡಿಎಂ ಎಜುಕೇಶನ್ ಸೊಸೈಟಿ-ಉಜಿರೆ, ದಿ ಆಕ್ಸ್‌ಫರ್ಡ್ ಎಜುಕೇಶನ್ ಇನ್‌ಸ್ಟಿಟ್ಯೂಷನ್ಸ್, ಕೃಪಾನಿಧಿ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್, ಆರ್‌ಆರ್ ಸಂಸ್ಥೆಗಳು– ಬೆಂಗಳೂರು, ಏಟ್ರಿಯಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಬಿರ್ಲಾ ಗ್ಲೋಬಲ್ ವಿಶ್ವವಿದ್ಯಾಲಯ, ಸಂಭ್ರಮ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್, ಎಂ.ಎಸ್. ಎಂಜಿನಿಯರಿಂಗ್ ಕಾಲೇಜು, ರಾಜರಾಜೇಶ್ವರಿ ಕಾಲೇಜು ಆಫ್ ಎಂಜಿನಿಯರಿಂಗ್, ಈಸ್ಟ್ ವೆಸ್ಟ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್.

ಆಚಾರ್ಯ ಬೆಂಗಳೂರು ಬಿ-ಸ್ಕೂಲ್, ಕಲಬುರಗಿಯ ಖಾಜಾ ಬಂದೇನವಾಜ್ ವಿಶ್ವವಿದ್ಯಾಲಯ, ಎಸ್.ಇ.ಎ. ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್, ಫಿಸಿಕ್ಸ್‌ವಾಲಾ, ವಿಷನ್ ಪಿ.ಯು. ಕಾಲೇಜು, ಏಟ್ರಿಯಾ ವಿಶ್ವವಿದ್ಯಾಲಯ, ವೈದೇಹಿ/ವ್ಯಮಕ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್, ಸಾಯಿ ವಿದ್ಯಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ-ಯಲಹಂಕ, ಅಮೃತ ವಿಶ್ವ ವಿದ್ಯಾಪೀಠಂ, ಎಸಿಎಸ್ ಕಾಲೇಜ್ ಆಫ್ ಎಂಜಿನಿಯರಿಂಗ್, ಎಐಎಂಎಸ್ ಇನ್‌ಸ್ಟಿಟ್ಯೂಟ್ಸ್, ಎಂಐಟಿ ವರ್ಲ್ಡ್ ಪೀಸ್ ವಿಶ್ವವಿದ್ಯಾಲಯ– ಪುಣೆ, ಅಮಿಟಿ ವಿಶ್ವವಿದ್ಯಾಲಯ, ಯೂನಿವರ್ಸಲ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್, ಎಚ್‌ಕೆಬಿಕೆ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್, ಡೆಕ್ಕನ್ ಪಿಯು ಕಾಲೇಜು– ಬೆಂಗಳೂರು, ಪಿಇಎಸ್ ವಿಶ್ವವಿದ್ಯಾಲಯ, ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕಾ ವಿಜ್ಞಾನ ವಿಶ್ವವಿದ್ಯಾಲಯ– ಇರುವಕ್ಕಿ, ರಾಮಯ್ಯ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು, ಎಸ್-ವ್ಯಾಸ ಸ್ಕೂಲ್ ಆಫ್ ಅಡ್ವಾನ್ಸ್ ಸ್ಟಡೀಸ್, ಶೇಷಾದ್ರಿಪುರಂ ಕಾಲೇಜು, ಐಎಎಸ್ ಬಾಬಾ, ವಂಡರ್ ಸ್ಪೇಸಸ್, ಸಂಜಯ್ ಗೋದಾವತ್ ವಿಶ್ವವಿದ್ಯಾಲಯ–ಕೊಲ್ಲಾಪುರ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಭಾರತೀಯ ಕಂಪನಿ ಕಾರ್ಯದರ್ಶಿಗಳ ಸಂಸ್ಥೆ (ಐಸಿಎಸ್‌ಐ), ಐಎಸ್‌ಬಿ ಆ್ಯಂಡ್ ಎಂ, ಎಸ್‌ಆರ್‌ಎನ್ ಆದರ್ಶ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್, ಜನತಾ ಶಿಕ್ಷಣ ಸಂಘ ಕರ್ನಾಟಕ ರಾಜ್ಯ ಡಾ. ಗಂಗೂಭಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶನ ಕಲೆಗಳ ವಿಶ್ವವಿದ್ಯಾಲಯ ಮೈಸೂರು, ಎಂಐಟಿಎಸ್ ಮದನಪಲ್ಲಿ ತಂತ್ರಜ್ಞಾನ ಮತ್ತು ವಿಜ್ಞಾನ ಸಂಸ್ಥೆ, ವಿದ್ಯಾವರ್ಧಕ ಎಂಜಿನಿಯರಿಂಗ್ ಕಾಲೇಜು-ಮೈಸೂರು, ಕನಕಪುರ ಗ್ರಾಮೀಣ ಶಿಕ್ಷಣ ಸಂಘ (ಆರ್.) ಸಂಸ್ಥೆಗಳು ಸಹಿತ ಅನೇಕ ವಿದ್ಯಾಸಂಸ್ಥೆಗಳು ಪಾಲ್ಗೊಳ್ಳಲಿವೆ.

ಕಾರ್ಯಕ್ರಮಗಳು

ಏ.4ರಂದು ಬೆಳಿಗ್ಗೆ 9ರಿಂದ 10ರ ವರೆಗೆ ನೋಂದಣಿ ನಡೆಯಲಿದೆ. ಬೆಳಿಗ್ಗೆ 11ಕ್ಕೆ ಉದ್ಘಾಟನಾ ಕಾರ್ಯಕ್ರಮ ನಡೆಯಲಿದ್ದು, ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಪ್ರಸನ್ನ ಎಚ್., ಭಾಗವಹಿಸಲಿದ್ದಾರೆ. 'ಉನ್ನತ ಶಿಕ್ಷಣದಲ್ಲಿ ಎಐ' ಗೋಷ್ಠಿಯಲ್ಲಿ ರೇವಾ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಜೆ.ಬಿ. ಸಿಂಹ ಅವರು ಮಾತನಾಡಲಿದ್ದಾರೆ. 'ಸಿಇಟಿ/ನೀಟ್ ಮತ್ತು ಕಾಮೆಡ್-ಕೆ ಕೌನ್ಸೆಲಿಂಗ್' ಬಗ್ಗೆ ರವಿ ಎ.ಎಸ್. ಮಾತನಾಡಲಿದ್ದಾರೆ.


ಪ್ರಸನ್ನ

ಏ.5ರ ಕಾರ್ಯಕ್ರಮದಲ್ಲಿ ನಟ ಧ್ರುವ ಸರ್ಜಾ ಭಾಗವಹಿಸಲಿದ್ದಾರೆ. ಎಚ್.ಆರ್. ವೃತ್ತಿ ಜೀವನದ ಅಗತ್ಯದ ಬಗ್ಗೆ ಎನ್‌ಎಚ್‌ಆರ್‌ಡಿ ಕಾರ್ಯದರ್ಶಿ ನಾಗನಗೌಡ ಎಸ್.ಜೆ. ಹಾಗೂ 'ವಿನ್ಯಾಸ ಚಿಂತನೆ ಮತ್ತು ತಂತ್ರಜ್ಞಾನ ಆಧಾರಿತ ನಾವೀನ್ಯತೆ' ಬಗ್ಗೆ ರೇವಾ ವಿಶ್ವವಿದ್ಯಾಲಯದ ಸಹ ಕುಲಪತಿ ಡಾ.ಪ್ರಮೋದ್ ಆರ್ ಕುಲಕರ್ಣಿ ಮಾತನಾಡಲಿದ್ದಾರೆ.

ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ ಮಳಿಗೆ ಆರಂಭಿಸಿದ್ದು, ಸಿಇಟಿ ಬರೆಯುವ ವಿದ್ಯಾರ್ಥಿಗಳು ಕೋರ್ಸ್‌ಗಳ ಆಯ್ಕೆ, ಪರೀಕ್ಷಾ ವಿಧಾನ ಇತ್ಯಾದಿಗಳ ಬಗ್ಗೆ ಸ್ಥಳದಲ್ಲೇ ಮಾಹಿತಿ ಪಡೆಯಬಹುದು.

ಹೆಜ್ಜೇನು ದಾಳಿ 40 ಜನರಿಗೆ ಗಾಯ

ಶಿವಮೊಗ್ಗ: ಇಲ್ಲಿನ ಬಿ.ಎಚ್. ರಸ್ತೆಯ ಸೇಕ್ರೆಡ್ ಹಾರ್ಟ್ ಪ್ರಧಾನ ಚರ್ಚ್‌ನ ಆವರಣದಲ್ಲಿ ಶುಭ ಶುಕ್ರವಾರದ (ಗುಡ್ ಫ್ರೈಡೇ) ವಿಶೇಷ ಪ್ರಾರ್ಥನೆ ವೇಳೆ ಹೆಜ್ಜೇನುಗಳು ದಾಳಿ ನಡೆಸಿದ್ದು, 40 ಜನರು ಗಾಯಗೊಂಡಿದ್ದಾರೆ.

ಫಾದರ್ ಸ್ಟ್ಯಾನಿ ಡಿಸೋಜಾ ನೇತೃತ್ವದಲ್ಲಿ ಚರ್ಚ್‌ನ ಆವರಣದ ಶಿಲುಬೆಯ ಹಾದಿಯಲ್ಲಿ ಮಧ್ಯಾಹ್ನ 3 ಗಂಟೆಗೆ ವಿಶೇಷ ಪ್ರಾರ್ಥನೆ ನಡೆಯುವಾಗ ಜೇನ್ನೊಣಗಳು ದಾಳಿ ನಡೆಸಿವೆ.

800ಕ್ಕೂ ಅಧಿಕ ಮಂದಿ ಪ್ರಾರ್ಥನೆಯಲ್ಲಿ ಪಾಲ್ಗೊಂಡಿದ್ದರು. ಹೆಚ್ಚು ಜನರು ಜೇನು ಕಡಿತಕ್ಕೆ ತುತ್ತಾಗಿದ್ದಾರೆ. ಜೇನು ಕಡಿತದಿಂದ ಪಾರಾಗಲು ಬಹಳಷ್ಟು ಮಂದಿ ಚರ್ಚ್‌ನ ಪ್ರಾರ್ಥನಾ ಹಾಲ್ ಹಾಗೂ ಕೊಠಡಿಗಳ ಒಳಗೆ ಆಶ್ರಯ ಪಡೆದರು.

ಬಸವರಾಜ ಆಚಾರ್‌ಗೆ 'ಪ್ರಿಂಟ್ ಬಿನಾಲೆ ಇಂಡಿಯಾ' ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾಸನ ಜಿಲ್ಲೆಯ ಕಲಾವಿದ ಕೆ.ಆರ್.ಬಸವರಾಜ ಆಚಾರ್ ಅವರಿಗೆ ಕೇಂದ್ರ ಲಲಿತಕಲಾ ಅಕಾಡೆಮಿ ಕೊಡುವ ಅಂತರರಾಷ್ಟ್ರೀಯ ಮಟ್ಟದ 'ಪ್ರಿಂಟ್ ಬಿನಾಲೆ ಇಂಡಿಯಾ' ಪ್ರಶಸ್ತಿ ಲಭಿಸಿದೆ. ಪ್ರಶಸ್ತಿ ಮೊತ್ತ ₹2 ಲಕ್ಷ ನಗದು, ಪಾರಿತೋಷಕ ಹಾಗೂ ಪ್ರಮಾಣಪತ್ರ ಒಳಗೊಂಡಿದೆ.


ಬಸವರಾಜ ಆಚಾರ್

ಮುದ್ರಣ ಮಾಧ್ಯಮದ ಕಲೆ ಉತ್ತೇಜಿಸುವ ದೃಷ್ಟಿಯಿಂದ ಪ್ರಪಂಚದಾದ್ಯಂತ ಇರುವ ವೃತ್ತಿಪರ ಐವರು ಕಲಾವಿದರನ್ನು ಗುರುತಿಸಿ ಪ್ರಶಸ್ತಿ ಕೊಡಲಾಗುತ್ತದೆ. ಇದರಲ್ಲಿ ಭಾರತಕ್ಕೆ ಎರಡು ಪ್ರಶಸ್ತಿ ಬಂದಿದೆ. ಬಸವರಾಜ ಆಚಾರ್ ಜೊತೆಗೆ, ಮಧ್ಯಪ್ರದೇಶದ ಭೋಪಾಲ್‌ನ ರವೀಂದ್ರ ರಾಯ್ ಅವರಿಗೆ ಪ್ರಶಸ್ತಿ ಲಭಿಸಿದೆ.

ಜೊತೆಗೆ ಫ್ರಾನ್ಸ್, ಪೋಲೆಂಡ್, ಕೊರಿಯಾ ದೇಶದ ತಲಾ ಒಬ್ಬೊಬ್ಬರು ಕಲಾವಿದರು ಈ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಭಾರತ ಹಾಗೂ ಇತರೆ 34 ದೇಶಗಳಿಂದ ಸುಮಾರು 1449 ಪ್ರವೇಶಗಳು ಬಂದಿದ್ದವು.


ಬೆಂಗಳೂರಿನ ಜೆ.ಸಿ.ರಸ್ತೆಯಲ್ಲಿರುವ ಸೇಂಟ್ ತೆರಸಾ ಚರ್ಚ್‌ನ ಸಮುದಾಯ ಭವನದಲ್ಲಿ ಗುಡ್‌ಫ್ರೈಡೇ ಅಂಗವಾಗಿ ಕ್ರೈಸ್ತ ಧರ್ಮೀಯರು ಯೇಸುಕ್ರಿಸ್ತನನ್ನು ಶಿಲುಬೆಗೇರಿಸುವ ರೂಪಕ ಪ್ರದರ್ಶಿಸಿದರು ಪ್ರಜಾವಾಣಿ ಚಿತ್ರ

ಕುಸಿದು ಬಿದ್ದ ಸಂತೋಷ್ ಹೆಗ್ಡೆ

ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ, ಸಂಜೆ ಹೊತ್ತಿಗೆ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆ ಅವರು ಕಾರ್ಯಕ್ರಮವೊಂದರಲ್ಲಿ ಕುಸಿದು ಬಿದ್ದಿದ್ದು, ತಕ್ಷಣವೇ ಅವರನ್ನು ಆಸ್ಪತ್ರೆಗೆ ದಾಖಲಿಸಲಾಯಿತು.

ನಗರದ ಕೊಂಡಜಿ ಬಸಪ್ಪ ಸಭಾಂಗಣದಲ್ಲಿ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಶುಕ್ರವಾರ ಮಾಜಿ ಸಚಿವ ಪಿ.ಜಿ. ಆರ್.ಸಿಂಧ್ಯ ಅವರಿಗೆ ಏರ್ಪಡಿಸಿದ್ದ ಸನ್ಮಾನದ ಕಾರ್ಯಕ್ರಮದಲ್ಲಿ ಸಂತೋಷ್ ಹೆಗ್ಡೆ ಅವರು ಏಕಾಏಕಿ ಕುಸಿದು ಬಿದ್ದಿದ್ದರಿಂದ ಆತಂಕ ಉಂಟಾಯಿತು.

ಸಿಂಧ್ಯ ಅವರೊಂದಿಗೆ ಕುಳಿತು ಮಾತನಾಡುತ್ತಿದ್ದ ಹೆಗ್ಡೆ ಅವರಿಗೆ ತಲೆ ಸುತ್ತು ಬಂದ ಹಾಗೆ ಆಯಿತು. ವಾಂತಿ ಕೂಡ ಆಯಿತು. ಕುಳಿತಿದ್ದವರು ಎದ್ದು ಹೊರಡುವ ಹೊತ್ತಿಗೆ ಅಲ್ಲಿಯೇ ಕುಸಿದು ಬಿದ್ದರು.

ಕಾರ್ಯಕ್ರಮಕ್ಕೆ ಬಂದಿದ್ದ ವೈದ್ಯರೊಬ್ಬರು ಪ್ರಥಮ ಚಿಕಿತ್ಸೆ ನೀಡಿದರು. ನೀರು ಕುಡಿಸಿದರೂ ಚೇತರಿಕೆ ಕಾಣಲಿಲ್ಲ.

ಕಾರ್ಯಕ್ರಮದಲ್ಲಿ ಹಾಜರಿದ್ದ ವಿಧಾನಸಭೆಯ ಸ್ಪೀಕರ್ ಯು.ಟಿ. ಖಾದರ್ ಅವರ ಸರ್ಕಾರಿ ವಾಹನದಲ್ಲಿ ತಕ್ಷಣವೇ ಸಂತೋಷ್ ಹೆಗ್ಡೆ ಅವರನ್ನು ಮಿಲ್ಲರ್ಸ್ ರಸ್ತೆಯ ಮಣಿಪಾಲ ಆಸ್ಪತ್ರೆಗೆ ಕರೆದೊಯ್ಯಲಾಯಿತು.

'ಏಕಾಏಕಿ ರಕ್ತದ ಸಕ್ಕರೆ ಅಂಶದಲ್ಲಿ ವ್ಯತ್ಯಾಸ ಉಂಟಾಗಿದ್ದರಿಂದ ಈ ರೀತಿ ಆಗಿರಬಹುದು. ಚಿಕಿತ್ಸೆಗೆ ಸ್ಪಂದಿಸಿದರು. ಸಂಜೆ ಹೊತ್ತಿಗೆ ಆಸ್ಪತ್ರೆಯಿಂದ ಬಿಡುಗಡೆ ಮಾಡಲಾಗಿದೆ' ಎಂದು ಮಣಿಪಾಲ ಆಸ್ಪತ್ರೆ ವೈದ್ಯರು ತಿಳಿಸಿದರು.

ಚಾರಣಕ್ಕೆ ತೆರಳಿದ್ದ ಮಹಿಳೆ ನಾಪತ್ತೆ

ಮಡಿಕೇರಿ: ತಾಲ್ಲೂಕಿನ ತಡಿಯಂಡ ಮೋಳ್ ಬೆಟ್ಟಕ್ಕೆ ಚಾರಣಕ್ಕಾಗಿ ತೆರಳಿದ್ದ ಕೇರಳದ ಕೊಯಿಕ್ಕೋಡ್‌ನ ಶರಣ್ಯ (35) ಕಾಡಿನೊಳಗೆ ನಾಪತ್ತೆಯಾಗಿದ್ದಾರೆ. ಚಾರಣಕ್ಕೆ ಆನ್‌ಲೈನ್‌ನಲ್ಲಿ ನೋಂದಣಿ ಮಾಡಿಸಿದ್ದರು.

ಕೇರಳದಿಂದ ಒಬ್ಬರೇ ಬಂದಿದ್ದು, ಯವಕಪಾಡಿಯ ಗ್ರಾಮದ ಹೋಂಸ್ಟೇಯಲ್ಲಿ ತಂಗಿದ್ದರು. ವನ್ಯಜೀವಿಗಳು ಇರುವ ಕಾರಣ ಚಾರಣಕ್ಕೆ ಒಬ್ಬರನ್ನೇ ಬಿಡಲಾಗದು ಎಂದು ಹೇಳಿದ್ದ ಅರಣ್ಯ ಇಲಾಖೆ ಸಿಬ್ಬಂದಿ, ಇತರೆ ಪ್ರವಾಸಿಗರೊಂದಿಗೆ ಕಳುಹಿಸಿದ್ದರು. ಆದರೆ, ಮಹಿಳೆ ವಾಪಸು ಬಂದಿಲ್ಲ.

ಫೋನ್ ಸ್ವಿಚ್ಡ್ ಆಫ್ ಆಗಿದೆ. ಅವರ ಸಹೋದರನಿಗೆ ಮಾಹಿತಿ ನೀಡಲಾಗಿದೆ' ಎಂದು ಡಿಸಿಎಫ್ ಅಭಿಷೇಕ್ 'ಪ್ರಜಾವಾಣಿ'ಗೆ ತಿಳಿಸಿದರು.

'ಬಸ್ ಪ್ರಯಾಣ ದರ ಹೆಚ್ಚಳವಿಲ್ಲ'

ಬಾಗಲಕೋಟೆ: 'ಸಾರಿಗೆ ಇಲಾಖೆಗೆ ಡೀಸೆಲ್ ಕೊರತೆ ಎದುರಾಗಿಲ್ಲ. ಬಸ್ ದರ ಹೆಚ್ಚಳ ಮಾಡಲ್ಲ' ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

'ಶಕ್ತಿ ಯೋಜನೆಯಿಂದ ಕೆಲ ಕಡೆ ವಿದ್ಯಾರ್ಥಿಗಳಿಗೆ ತೊಂದರೆ ಆಗಿರುವುದು ನಿಜ. ಹೆಚ್ಚಿನ ಬಸ್ ಓಡಿಸಿ, ಸಮಸ್ಯೆ ನಿವಾರಿಸಲಾಗುವುದು' ಎಂದು ಅವರು ತಿಳಿಸಿದರು.

ಪೋಕ್ಸೊ ಪ್ರಕರಣ: ಖಾಸಗಿ ಆಸ್ಪತ್ರೆಗಳಿಗೂ ವರದಿ ಕಡ್ಡಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಲ ಗರ್ಭಿಣಿ ಪ್ರಕರಣಗಳ ವಿವರವನ್ನು ಖಾಸಗಿ ಆಸ್ಪತ್ರೆಗಳೂ ಕಡ್ಡಾಯವಾಗಿ ಪೋಕ್ಸೊ ಕಾಯ್ದೆಯಡಿ ವರದಿ ಮಾಡಬೇಕು ಎಂದು ಸೂಚಿಸಿರುವ ಆರೋಗ್ಯ ಇಲಾಖೆ, ಒಂದು ವೇಳೆ ವರದಿ ಮಾಡಲು ವಿಫಲವಾದಲ್ಲಿ ವೈದ್ಯರು ಮತ್ತು ಆಸ್ಪತ್ರೆಗಳ ವಿರುದ್ಧ ಕಾನೂನಿನಡಿ ಕ್ರಮಕೈಗೊಳ್ಳಲಾಗುವುದು ಎಂದು ಎಚ್ಚರಿಸಿದೆ.

ಪೋಕ್ಸೊ ಕಾಯ್ದೆ ಅನ್ವಯ 18 ವರ್ಷಕ್ಕಿಂತ ಕಡಿಮೆ ವಯಸ್ಸಿನ, ಬಾಲ ಗರ್ಭಿಣಿ ಪ್ರಕರಣಗಳ ವಿವರವನ್ನು ಕಾನೂನುಬದ್ಧವಾಗಿ ವರದಿ ಮಾಡಬೇಕಿದೆ. ಯಾವುದೇ ಬಾಲ ಗರ್ಭಿಣಿ ಖಾಸಗಿ ಆಸ್ಪತ್ರೆಗೆ ದಾಖಲಾದಲ್ಲಿ ಸಂಬಂಧಿತ ವೈದ್ಯರು ತಕ್ಷಣ ಸಮೀಪದ ವಿಶೇಷ ಬಾಲ ನ್ಯಾಯ ಪೊಲೀಸ್ ಘಟಕ ಅಥವಾ ಪೊಲೀಸ್ ಠಾಣೆಗೆ ಕಡ್ಡಾಯವಾಗಿ ಮಾಹಿತಿ ನೀಡಬೇಕು ಎಂದು ತಿಳಿಸಿದೆ.

ಇಂತಹ ಪ್ರಕರಣಗಳು ದಾಖಲಾದ ಸಂದರ್ಭದಲ್ಲಿ ತಕ್ಷಣವೇ ಮಕ್ಕಳ ಸಹಾಯವಾಣಿ ಸಂಖ್ಯೆ 1098 ಕ್ಕೆ ಕರೆ ಮಾಡಿ, ಮಾಹಿತಿ ನೀಡಬೇಕು. ಇದರಿಂದ ರಕ್ಷಣಾತ್ಮಕ ಮತ್ತು ಪುನರ್ವಸತಿ ಕ್ರಮಗಳನ್ನು ಕೈಗೊಳ್ಳಲು ಸಾಧ್ಯವಾಗುತ್ತದೆ ಎಂದು ಹೇಳಿದೆ.

ಖಾಸಗಿ ಆಸ್ಪತ್ರೆಗಳು ಪೋಕ್ಸೊ ಪ್ರಕರಣದ ವಿವರಗಳನ್ನು ಸೂಕ್ತವಾಗಿ ದಾಖಲಿಸಬೇಕು. ವೈದ್ಯಕೀಯ ದಾಖಲೆಗಳನ್ನು ಕಾನೂನುಬದ್ಧವಾಗಿ ಸಂಗ್ರಹಿಸಬೇಕು. ರೋಗಿಯ ಗೋಪ್ಯತೆಯನ್ನು ಕಾಪಾಡಬೇಕು. ತನಿಖಾ ಅಧಿಕಾರಿಗೆ ಅಗತ್ಯ ಸಹಕಾರ ನೀಡಬೇಕು. ಎಲ್ಲ ಖಾಸಗಿ ಆಸ್ಪತ್ರೆಗಳು ತಮ್ಮ ವೈದ್ಯರು ಹಾಗೂ ಸಿಬ್ಬಂದಿಗೆ ಪೋಕ್ಸೊ ಕಾಯ್ದೆಯ ವಿಧಿನಿಯಮಗಳ ಬಗ್ಗೆ ಜಾಗೃತಿ ಮೂಡಿಸಬೇಕು ಎಂದು ಸೂಚಿಸಲಾಗಿದೆ.

'ನಾಗಾರ್ಜುನ ಸಾಗರ ರೇಸರ್' ಹಾವು ಪತ್ತೆ

ತುಮಕೂರು: ಅಪರೂಪದ 'ನಾಗಾರ್ಜುನ ಸಾಗರ ರೇಸರ್' ಹಾವು ಮಧುಗಿರಿ ಬೆಟ್ಟದ ಇಳಿಜಾರಿನ ಕಲ್ಲು ಬಂಡೆ ಬುಡದಲ್ಲಿ ಕಾಣಿಸಿಕೊಂಡಿದೆ.

'ಇದು, 'ರಸೆಲ್ಸ್ ಕುಕ್ರಿ' ಹಾವು ಹೋಲುತ್ತದೆ. ಮೊನಚು ತಲೆ, ದೇಹದ ಮೇಲಿನ ಹುರುಪೆಗಳು, ಬಣ್ಣದಿಂದ ವ್ಯತ್ಯಾಸ ತಿಳಿಯಬಹುದು' ಎಂದು ವನ್ಯಜೀವಿ ಜಾಗೃತಿ ನಿಸರ್ಗ ಸಂಸ್ಥೆ ಅಧ್ಯಕ್ಷ ಬಿ.ವಿ.ಗುಂಡಪ್ಪ ತಿಳಿಸಿದರು.

ನೀಳದೇಹದ ಮೇಲೆ ಹುರುಪೆಗಳು, ಬೂದು ಬಣ್ಣದ ಉಂಗುರಾಕಾರದ ರಚನೆಗಳಿವೆ. ದೇಹದ ನಡುಭಾಗದಿಂದ ಬಾಲದ ತುದಿವರೆಗೆ ಉಂಗುರಾಕಾರದ ರಚನೆಗಳು ಕಂಡು ಬರುವುದಿಲ್ಲ ಎಂದು ಮಾಹಿತಿ ನೀಡಿದರು.


ಮಧುಗಿರಿ ಬೆಟ್ಟದಲ್ಲಿ ಪತ್ತೆಯಾದ 'ನಾಗಾರ್ಜುನ ಸಾಗರ ರೇಸರ್' ಹಾವು

ಅನುಭವ– ಅನುಕಂಪದ ಜಿದ್ದಾಜಿದ್ದಿ

• ಬಸವರಾಜ ಹವಾಲ್ದಾರ

ಬಾಗಲಕೋಟೆ: ಬಾಗಲಕೋಟೆ ವಿಧಾನ ಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ನೇರ ಸ್ಪರ್ಧೆ ಏರ್ಪಟ್ಟಿದೆ. ಎರಡೂ ಪಕ್ಷಗಳಿಗೆ ಅವುಗಳದ್ದೇ ಆದ ಸಕಾರಾತ್ಮಕ ಮತ್ತು ನಕಾರಾತ್ಮಕ ಅಂಶಗಳಿವೆ.

ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಹಾಗೂ ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ ತಮ್ಮದೇ ಆದ ಸಾಮರ್ಥ್ಯ, ವೈಫಲ್ಯಗಳನ್ನು ಹೊಂದಿದ್ದಾರೆ. ಅವು ಮತದಾರರ ಮೇಲೆ ಎಷ್ಟು ಪರಿಣಾಮ ಬೀರಲಿವೆ ಎಂಬುದರ ಮೇಲೆ ಫಲಿತಾಂಶ ನಿರ್ಧಾರವಾಗಲಿದೆ.

ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಅವರು, ಬಾಗಲಕೋಟೆ ವಿಧಾನಸಭಾ ಕ್ಷೇತ್ರದಿಂದ ಐದು ಬಾರಿ ಸ್ಪರ್ಧಿಸಿದ್ದು, ಮೂರು ಬಾರಿ ಶಾಸಕರಾಗಿದ್ದಾರೆ. ಆಡಳಿತದ ಅನುಭವ ಹೊಂದಿದ್ದಾರೆ. ನೇರ ಮತ್ತು ನಿಷ್ಠುರ ಮಾತುಗಳನ್ನು ಬಹುತೇಕರು ಮೆಚ್ಚಿದರೂ, ಕೆಲವರಿಗೆ ಅದು ಅಪಥ್ಯ ಆಗಿರುವುದೂ ಇದೆ. ಅದೇ ಕಾರಣಕ್ಕೆ ಅವರ ಜೊತೆಗಿದ್ದ ಹಲವರು ದೂರವಾಗಿದ್ದಾರೆ.

ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದಾರೆ. ಸರಳತೆ, ಶಿಸ್ತು, ಸಮಯಪಾಲನೆ, ಹಿಡಿದ ಕೆಲಸವನ್ನು ಮಾಡುವವರೆಗೂ ಬಿಡದ ಛಲದ ಬಗ್ಗೆ ಕ್ಷೇತ್ರದಲ್ಲಿ ಮೆಚ್ಚುಗೆ ಇದೆ. ಬಸವೇಶ್ವರ ವೀರಶೈವ ಲಿಂಗಾಯತ ವಿದ್ಯಾವರ್ಧಕ ಸಂಘಕ್ಕೆ ಹಲವು ದಶಕಗಳಿಂದ ಕಾರ್ಯಾಧ್ಯಕ್ಷರಾಗಿದ್ದು, ಸಂಸ್ಥೆಯನ್ನು ದೊಡ್ಡ ಪ್ರಮಾಣದಲ್ಲಿ ಬೆಳೆಸಿದ್ದಾರೆ.

ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ, ಜನಪ್ರತಿನಿಧಿಯಾಗಿ ಅನುಭವ ಹೊಂದಿಲ್ಲ. ಆದರೆ, ತಂದೆ ಎಚ್.ವೈ. ಮೇಟಿ ಅವರ ಚುನಾವಣೆಯಲ್ಲಿ ಪ್ರಚಾರ ಮಾಡುವ ಮೂಲಕ ಚುನಾವಣಾ ರಾಜಕೀಯದ ಅನುಭವ ಹೊಂದಿದ್ದಾರೆ. ಆಗಿನಿಂದ ಕ್ಷೇತ್ರದ ಮತದಾರರ ಜೊತೆ ಒಡನಾಟವಿದೆ. ಸೌಮ್ಯ ವ್ಯಕ್ತಿತ್ವ, ಮೆದು ಮಾತುಗಳ ಮೂಲಕ ಗ್ರಾಮೀಣ ಪ್ರದೇಶದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದಾರೆ.

ಎಚ್.ವೈ.ಮೇಟಿ ಅವರ ಆತಿಥ್ಯ, ಸೌಮ್ಯತೆ, ಎಲ್ಲರೊಂದಿಗೆ ಬೆರೆಯುವ ಹಲವು ಗುಣಗಳನ್ನು ಅಭಿಮಾನಿಗಳು ಉಮೇಶ ಅವರಲ್ಲಿ ಕಾಣುತ್ತಿದ್ದಾರೆ. ಟಿಕೆಟ್ ಕೇಳಿದ್ದ ಕುಟುಂಬದ ಸದಸ್ಯರೆಲ್ಲರೂ ತಮ್ಮ ಬೆನ್ನಿಗೆ ನಿಲ್ಲುವಂತೆ ಮಾಡಿಕೊಳ್ಳುವಷ್ಟು, ಕಾಂಗ್ರೆಸ್ ನಾಯಕರೊಂದಿಗೆ ಸಮನ್ವಯತೆ ಸಾಧಿಸುವ ಚಾಣಾಕ್ಷತನ ಹೊಂದಿದ್ದಾರೆ.

ಇಬ್ಬರೂ ಅಭ್ಯರ್ಥಿಗಳು ಹಾಗೂ ಪಕ್ಷದ ಸಾಧನೆ ನೋಡಿ ಮತದಾರ ಯಾರಿಗೆ ಒಲವು ವ್ಯಕ್ತಪಡಿಸುತ್ತಾನೆ ನೋಡಬೇಕಿದೆ.

ಬಿಜೆಪಿ ಪ್ಲಸ್


ವೀರಣ್ಣ ಚರಂತಿಮಠ

- ಹಿಂದುತ್ವ ಮತ್ತು ಆರ್‌ಎಸ್‌ಎಸ್‌ನ ಗಟ್ಟಿ ನೆಲೆ
- ಶಾಸಕರಾಗಿ ಆಡಳಿತದ ಅನುಭವ, ಸಮಯಪಾಲನೆ
- ಒಳಮೀಸಲಾತಿ ವಿಷಯ ಲಾಭ ನೀಡುವ ನಿರೀಕ್ಷೆ
- ಕಾಂಗ್ರೆಸ್‌ನಿಂದ ಆಗದ ಅಭಿವೃದ್ಧಿ ಬಗ್ಗೆ ಟೀಕೆ
- ಪ್ರಚಾರದಲ್ಲಿ ನಾಯಕರ ಒಗ್ಗಟ್ಟಿನ ಬಲ ಪ್ರದರ್ಶನ

ಬಿಜೆಪಿ ಮೈನಸ್

- ನಗರ ಪ್ರದೇಶದ ಮತದಾರರನ್ನೇ ಹೆಚ್ಚು ನೆಚ್ಚಿಕೊಂಡಿರುವುದು
- ಕ್ಷೇತ್ರದಲ್ಲಿನ ನಾಯಕರ ನಡುವಿನ ಭಿನ್ನಾಭಿಪ್ರಾಯದ ಗುಸುಗುಸು
- ಕಳೆದ ಸಲ ಪಕ್ಷೇತರರಾಗಿ ಸ್ಪರ್ಧಿಸಿದ್ದ ಸಹೋದರ ಮಲ್ಲಿಕಾರ್ಜುನ ಚರಂತಿಮಠ ಕಾಂಗ್ರೆಸ್ ಸೇರಿದ್ದು
- ವೈಯಕ್ತಿಕ ಕಾರಣಗಳಿಗೆ ಪಕ್ಷದ ಒಳಗೆ, ಹೊರಗೆ ಮನಸ್ತಾಪದ ಆರೋಪ
- ಗ್ಯಾರಂಟಿ ಯೋಜನೆ ಹಾಗೂ ಸತೀಶ ಜಾರಕಿಹೊಳಿ ಚುನಾವಣಾ ತಂತ್ರ

ಕಾಂಗ್ರೆಸ್ ಪ್ಲಸ್


ಉಮೇಶ ಮೇಟಿ

- ಎಚ್.ವೈ.ಮೇಟಿ ನಿಧನದ ಅನುಕಂಪದ ಅಲೆಯ ಲಾಭದ ನಿರೀಕ್ಷೆ
- ಗ್ಯಾರಂಟಿ ಯೋಜನೆಗಳು ಕೈಹಿಡಿಯಲಿವೆ ಎಂಬ ಭರವಸೆ
- ಅಹಿಂದ ಮತಗಳ ಜೊತೆಗೆ ಲಿಂಗಾಯತ ಮತಗಳನ್ನು ಸೆಳೆಯಲು ಯತ್ನ
- ಕೆಪಿಸಿಸಿ ಹಾಗೂ ಸಚಿವ ಸತೀಶ ಜಾರಕಿಹೊಳಿ ತಂಡದಿಂದ ಉತ್ತಮ ಪೂರ್ವಸಿದ್ಧತೆ

ಕಾಂಗ್ರೆಸ್ ಮೈನಸ್

- ಒಳಮೀಸಲಾತಿ ಗೊಂದಲದಿಂದ ಮತ ನಷ್ಟದ ಆತಂಕ
- ಅಭ್ಯರ್ಥಿಗೆ ಆಡಳಿತ ಅನುಭವದ ಕೊರತೆ
- ಯುಕೆಪಿಗೆ ಘೋಷಿಸಿದಷ್ಟು ಅನುದಾನ ನೀಡಿಲ್ಲ ಎಂಬ ಆರೋಪ
- ಗ್ರಾಮೀಣ ಭಾಗವನ್ನೇ ನೆಚ್ಚಿಕೊಂಡಿರುವುದು
- ಬಿಟಿಡಿಎ ಅಧ್ಯಕ್ಷರ ನೇಮಕಾತಿ, ಮಲ್ಲಿಕಾರ್ಜುನ ಮೇಟಿಗೆ ಟಿಕೆಟ್ ನೀಡದ್ದಕ್ಕೆ ಕೆಲವರಲ್ಲಿ ಬೇಸರ

> **ಸಿದ್ದರಾಮಯ್ಯ ಸರ್ಕಾರ ನುಡಿದಂತೆ ನಡೆದಿದೆ. ಪಂಚ ಗ್ಯಾರಂಟಿಗಳನ್ನು ಜಾರಿಗೊಳಿಸಿದೆ. ಮಹಿಳೆಯರ ಸಬಲೀಕರಣ ಆಗಿದೆ. ದಲಿತರು ಸೇರಿ ಎಲ್ಲಾ ವರ್ಗದವರಿಗೆ ಯೋಜನೆಗಳಿಂದ ನೆರವಾಗಿದೆ**
> **ಉಮೇಶ ಮೇಟಿ,** ಕಾಂಗ್ರೆಸ್ ಅಭ್ಯರ್ಥಿ

> **ಕಾಂಗ್ರೆಸ್ ಸರ್ಕಾರದ ವೈಫಲ್ಯವೇ ಬಿಜೆಪಿಗೆ ವರವಾಗಲಿದೆ. ಮುಖ್ಯಮಂತ್ರಿ ಹುದ್ದೆ ಕಿತ್ತಾಟದಿಂದ ಆಡಳಿತ ಹಳಿ ತಪ್ಪಿದೆ. ಸಿದ್ದರಾಮಯ್ಯ ಅವರ ಸರ್ಕಾರದಲ್ಲಿ ಭ್ರಷ್ಟಾಚಾರ ಮಿತಿ ಮೀರಿದೆ**
> **ವೀರಣ್ಣ ಚರಂತಿಮಠ,** ಬಿಜೆಪಿ ಅಭ್ಯರ್ಥಿ

ಉಪ ಚುನಾವಣೆ ಕ್ಷೇತ್ರ ನೋಟ

ಕೌತುಕ ಮೂಡಿಸಿದ ಮುಸ್ಲಿಮರ ನಡೆ

• ಜಿ.ಬಿ.ನಾಗರಾಜ್

ದಾವಣಗೆರೆ: ದಕ್ಷಿಣ ವಿಧಾನಸಭಾ ಕ್ಷೇತ್ರಕ್ಕೆ ನಡೆಯುತ್ತಿರುವ ಉಪಚುನಾವಣೆಯಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ನೇರ ಪೈಪೋಟಿ ಇದ್ದರೂ, ಸೋಷಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ (ಎಸ್‌ಡಿಪಿಐ) ಹಾಗೂ ಮುಸ್ಲಿಂ ಸಮುದಾಯದ ಪಕ್ಷೇತರರು ‘ಕೈ’ ಅಭ್ಯರ್ಥಿಗೆ ಒಳ ಏಟು ನೀಡಬಹುದೇ ಎಂಬ ಕುತೂಹಲ ಮನೆಮಾಡಿದೆ.

ಕಾಂಗ್ರೆಸ್ ಅಭ್ಯರ್ಥಿಯಾಗಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಸಂಸದೆ ಡಾ.ಪ್ರಭಾ ದಂಪತಿಯ ಪುತ್ರ ಸಮರ್ಥ್ ಶಾಮನೂರು ಹಾಗೂ ಬಿಜೆಪಿ ಅಭ್ಯರ್ಥಿಯಾಗಿ ಟಿ.ಶ್ರೀನಿವಾಸ ದಾಸ ಕರಿಯಪ್ಪ ಕಣದಲ್ಲಿದ್ದಾರೆ. ಎಸ್‌ಡಿಪಿಐನಿಂದ ಅಫ್ಸರ್ ಕೊಡ್ಲಿಪೇಟೆ, ಪಕ್ಷೇತರ ಅಭ್ಯರ್ಥಿ ಖಾದರ್ ಆದಿಲ್ ಬಾಷಾ ಸೇರಿದಂತೆ ಮುಸ್ಲಿಂ ಸಮುದಾಯದ 14 ಅಭ್ಯರ್ಥಿಗಳು ಕಣದಲ್ಲಿದ್ದಾರೆ. ಕಾಂಗ್ರೆಸ್ ಬಂಡಾಯ ಅಭ್ಯರ್ಥಿ ಸಾದಿಕ್ ಪೈಲ್ವಾನ್ ಕಣದಿಂದ ನಿವೃತ್ತಿ ಘೋಷಿಸಿದ್ದಾರೆ.

ಮುಸ್ಲಿಂ ಸಮುದಾಯದ ವಿರೋಧದ ನಡುವೆಯೂ ಶಾಮನೂರು ಶಿವಶಂಕರಪ್ಪ ಅವರ ಮೊಮ್ಮಗ ಸಮರ್ಥ್ ಅವರನ್ನು ಕಾಂಗ್ರೆಸ್ ಕಣಕ್ಕೆ ಇಳಿಸಿದೆ. ಬಿಜೆಪಿ ಎಸ್‌ಟಿ ಮೋರ್ಚಾ ಉಪಾಧ್ಯಕ್ಷ ಟಿ.ಶ್ರೀನಿವಾಸ ದಾಸಕರಿಯಪ್ಪ ‘ಕಮಲ’ ಪಡೆಯ ಹುರಿಯಾಳು. ಇಬ್ಬರಿಗೂ ಇದು ಮೊದಲ ಚುನಾವಣೆ.

ವಿದೇಶದಲ್ಲಿ ಪದವಿ ವ್ಯಾಸಂಗ ಮಾಡಿರುವ 27 ವರ್ಷದ ಸಮರ್ಥ್ ಶಾಮನೂರು 2023ರಿಂದ ಕ್ಷೇತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. 2024ರ ಲೋಕಸಭಾ ಚುನಾವಣೆಯಲ್ಲಿ ತಾಯಿ, ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್ ಗೆಲುವಿಗೆ ಬಿರಿಗಾಲಲ್ಲಿ ಪ್ರಚಾರ ನಡೆಸಿ ಗಮನ ಸೆಳೆದಿದ್ದರು. ತಾತ ಶಿವಶಂಕರಪ್ಪ ಬಗೆಗಿನ ಅಭಿಮಾನ, ತಂದೆ ಎಸ್.ಎಸ್.ಮಲ್ಲಿಕಾರ್ಜುನ್ ರಾಜಕೀಯ ಅನುಭವ ಜೊತೆಗಿದೆ. ತಾತನ ದಾರಿಯಲ್ಲಿ ಸಾಗಲು ಮತದಾರರು ಅವಕಾಶ ಮಾಡಿಕೊಡುತ್ತಾರೆ ಎಂಬುದು ಇವರ ನಂಬಿಕೆ.

45 ವರ್ಷ ವಯಸ್ಸಿನ ಟಿ.ಶ್ರೀನಿವಾಸ ಕ್ಷೇತ್ರಕ್ಕೆ ಚಿರಪರಿಚಿತರು. ದಾವಣಗೆರೆ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿದ್ದ ತಂದೆ ದಾಸಕರಿಯಪ್ಪ ಮಾಡಿದ ಕೆಲಸ, ರಾಜಕೀಯ ಅನುಭವ ಬೆನ್ನಿಗಿದೆ. ಹಮಾಲಿ ಕುಟುಂಬದಿಂದ ಮೇಲೆ ಬಂದ ದಾಸಕರಿಯಪ್ಪ ಬಗೆಗೆ ಕಾರ್ಮಿಕರಲ್ಲಿ ಅಭಿಮಾನವಿದೆ. ಮತದಾರರು ಶ್ರೀಮಂತ ಕುಟುಂಬದ ಎದುರು ಶ್ರೀಸಾಮಾನ್ಯನ ಕೈಹಿಡಿಯಬಲ್ಲರು ಎಂಬುದು ಶ್ರೀನಿವಾಸ ಅವರ ಬಲವಾದ ನಂಬಿಕೆ. ಮುಸ್ಲಿಂ ಸಮುದಾಯವೂ ಸೇರಿದಂತೆ ಕ್ಷೇತ್ರದ ಎಲ್ಲ ಮತದಾರರ ಮನಗೆಲ್ಲುವ ಪ್ರಯತ್ನ ಮಾಡುತ್ತಿದ್ದಾರೆ.

ಬಿಜೆಪಿ ಪ್ಲಸ್


ಟಿ.ಶ್ರೀನಿವಾಸ ದಾಸಕರಿಯಪ್ಪ

- ಕಾಂಗ್ರೆಸ್ ಮೇಲೆ ಮುಸ್ಲಿಮರ ಅಸಹನೆಯ ಲಾಭದ ನಿರೀಕ್ಷೆ
- ಮತದಾರರ ಜೊತೆಗೆ ಅಭ್ಯರ್ಥಿ ಹೊಂದಿರುವ ಆತ್ಮೀಯ ಒಡನಾಟ
- ಪರಿಶಿಷ್ಟ ಜಾತಿ, ಪಂಗಡ, ಹಿಂದುಳಿದ ವರ್ಗಗಳ ಮತ ಕ್ರೋಡೀಕರಣ ಸಾಧ್ಯತೆ
- ಬಣ ಮರೆತು ಅಭ್ಯರ್ಥಿ ಬೆನ್ನಿಗೆ ನಿಂತ ಮುಖಂಡರು
- ಜೆಡಿಎಸ್ ಜೊತೆಗಿನ ಮೈತ್ರಿ

ಬಿಜೆಪಿ ಮೈನಸ್

- ಮುಸ್ಲಿಂ ಬಾಹುಳ್ಯದ ಕ್ಷೇತ್ರದಲ್ಲಿ ಬಿಜೆಪಿ ಬಗೆಗಿನ ಅಪನಂಬಿಕೆ
- ಸಾಮಾನ್ಯ ಕ್ಷೇತ್ರದಲ್ಲಿ ಎಸ್‌ಟಿಗೆ ಟಿಕೆಟ್ ನೀಡಿದ್ದರಿಂದ ವೀರಶೈವ, ಲಿಂಗಾಯತರ ಮತ ಕೈತಪ್ಪುವ ಭೀತಿ
- 284 ಮತಗಟ್ಟೆಗಳ ಪೈಕಿ 62 ಮತಗಟ್ಟೆಗಳಲ್ಲಿ ಇಲ್ಲ ಬೂತ್ ಮಟ್ಟದ ಕಾರ್ಯಕರ್ತರು
- ಮುಸ್ಲಿಂ ಸಮುದಾಯದ ಬಂಡಾಯ ಶಮನಕ್ಕೆ ಕಾಂಗ್ರೆಸ್ ನಿರಂತರ ಪ್ರಯತ್ನ
- ಕ್ಷೇತ್ರ ಪುನರ್ ವಿಂಗಡಣೆಯ ಬಳಿಕವೂ ದಕ್ಕದ ಗೆಲುವು

ಕಾಂಗ್ರೆಸ್ ಪ್ಲಸ್


ಸಮರ್ಥ್ ಶಾಮನೂರು

- ಶಾಮನೂರು ಶಿವಶಂಕರಪ್ಪ ಸಾವಿನ ಅನುಕಂಪದ ಅಲೆ
- ಎಸ್.ಎಸ್. ಮಲ್ಲಿಕಾರ್ಜುನ್ ಸಚಿವ, ಡಾ.ಪ್ರಭಾ ಸಂಸದೆ
- ಸಾದಿಕ್ ಪೈಲ್ವಾನ್ ಕಣದಿಂದ ನಿವೃತ್ತಿ ಹೊಂದಿರುವುದು
- ಕ್ಷೇತ್ರದಲ್ಲಿ ಶಾಮನೂರು ಕುಟುಂಬದ ಬಿಗಿ ಹಿಡಿತ

ಕಾಂಗ್ರೆಸ್ ಮೈನಸ್

- ಮುಸ್ಲಿಮರಲ್ಲಿ ಭುಗಿಲೆದ್ದ ಅಸಮಾಧಾನ
- ಕುಟುಂಬ ರಾಜಕಾರಣದ ವಿರುದ್ಧ ಮತದಾರರಲ್ಲಿರುವ ಅಸಹನೆ
- ಮುಸ್ಲಿಂ ಸಮುದಾಯದ 13 ಅಭ್ಯರ್ಥಿಗಳು ಕಣದಲ್ಲಿರುವುದರಿಂದ ಮತ ಚದುರುವ ಭೀತಿ
- ಸಚಿವ ಜಮೀರ್ ಅಹ್ಮದ್ ಖಾನ್, ಪರಿಷತ್ ಸದಸ್ಯ ಅಬ್ದುಲ್ ಜಬ್ಬಾರ್ ಮತ್ತಿತರರು ಪ್ರಚಾರಕ್ಕೆ ಗೈರು.
- ‘ಜೆನ್–ಝಿ’ ತಲೆಮಾರಿನ ಅಭ್ಯರ್ಥಿಗೆ ರಾಜಕೀಯ ಅನುಭವದ ಕೊರತೆ

> **ಇಷ್ಟು ವರ್ಷಗಳಿಂದ ಕ್ಷೇತ್ರ ಅಭಿವೃದ್ಧಿ ಕಂಡಿಲ್ಲ. ಇಲ್ಲಿ ಬಡವರು, ಕಾರ್ಮಿಕರು, ರೈತರೇ ಅಧಿಕ ಸಂಖ್ಯೆಯಲ್ಲಿದ್ದು, ಈ ಬಾರಿ ಬದಲಾವಣೆ ಬಯಸಿ ಬಿಜೆಪಿಯ ಕೈಹಿಡಿಯಲಿದ್ದಾರೆ**
> **ಶ್ರೀನಿವಾಸ ದಾಸಕರಿಯಪ್ಪ,** ಬಿಜೆಪಿ ಅಭ್ಯರ್ಥಿ

> **ಶಾಮನೂರು ಶಿವಶಂಕರಪ್ಪ ಅವರು ಮಧ್ಯ ಕರ್ನಾಟಕದಲ್ಲಿ ಕಾಂಗ್ರೆಸ್ ಕಟ್ಟಿ ಬೆಳೆಸಿದ್ದಾರೆ. ಕ್ಷೇತ್ರದಲ್ಲಿ ಹೆಜ್ಜೆಗುರುತು ಮೂಡಿಸಿದ್ದಾರೆ. ಮತದಾರರು ಕೈಹಿಡಿಯುವ ವಿಶ್ವಾಸವಿದೆ**
> **ಸಮರ್ಥ್ ಶಾಮನೂರು,** ಕಾಂಗ್ರೆಸ್ ಅಭ್ಯರ್ಥಿ

2028ರಲ್ಲೂ ಗೆಲ್ಲುತ್ತೇವೆ: ಸಿ.ಎಂ

‘ಹಿಂದೆ 3 ಉಪ ಚುನಾವಣೆ ಗೆದ್ದಿದ್ದೇವೆ, ಈಗಲೂ ಗೆಲ್ತೇವೆ’

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: ‘ಬಿಜೆಪಿಯವರ ಸುಳ್ಳು ಜನರಿಗೆ ಗೊತ್ತಾಗುತ್ತಿದೆ. ಹಿಂದೆ ನಡೆದಿದ್ದ ಮೂರು ಉಪ ಚುನಾವಣೆಗಳಲ್ಲಿ ನಾವು ಗೆದ್ದಿದ್ದೇವೆ. ಈಗಲೂ ಎರಡೂ ಕ್ಷೇತ್ರಗಳಲ್ಲಿ ಗೆಲ್ಲುತ್ತೇವೆ. 2028ಕ್ಕೂ ನಾವೇ ಗೆಲ್ಲುತ್ತೇವೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಲ್ಲಿ ಪ್ರತಿಪಾದಿಸಿದರು.

ಶುಕ್ರವಾರ ತಾಲ್ಲೂಕಿನ ಬೇವಿನ ಮಟ್ಟಿಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ ಪರವಾಗಿ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ‘ಕಾಂಗ್ರೆಸ್‌ನವರು ಸಾಲ ಮಾಡಿದ್ದಾರೆ. ಖಜಾನೆ ಖಾಲಿಯಾಗಿದೆ. ಅಭಿವೃದ್ಧಿ ಕೆಲಸ ಮಾಡುತ್ತಿಲ್ಲ ಎಂದು ಬಿಜೆಪಿಯವರು ಹೇಳುತ್ತಿರುವುದೆಲ್ಲವೂ ಸುಳ್ಳು’ ಎಂದರು. ‘ಬಿಜೆಪಿ ಹಿಂದೆ ಒಂಬತ್ತು ವರ್ಷ ಅಧಿಕಾರದಲ್ಲಿದ್ದಾಗ ರೈತರು, ದಲಿತರು, ಬಡವರಿಗೆ ಏನು ಮಾಡಿದ್ದೇವೆ ಎಂದು ತಿಳಿಸಿ ಮತ ಕೇಳಬೇಕಿತ್ತು. ಏನೂ ಮಾಡದ್ದರಿಂದಲೇ ಈಗ ಸುಳ್ಳು ಹೇಳುತ್ತಿದ್ದಾರೆ’ ಎಂದರು.

‘ಸಾಲದ ಪ್ರಮಾಣ, ವಿತ್ತೀಯ ಕೊರತೆ ಕಾಯ್ದೆ ಪ್ರಕಾರ ಇದೆ. ಆದಾಯ ಸರ್‌ಪ್ಲಸ್ ಇಲ್ಲ ಎಂದು ಒಪ್ಪುತ್ತೇನೆ. ಏಕೆ ಆಗಿಲ್ಲವೆಂದರೆ ಬಿಹಾರ ಚುನಾವಣೆಗೆ ಜಿಎಸ್‌ಟಿ ಕಡಿಮೆ ಮಾಡಿದ್ದರಿಂದ ತೆರಿಗೆ ಸಂಗ್ರಹದಲ್ಲಿ ₹10 ಸಾವಿರ ಕೋಟಿ ಕಡಿಮೆಯಾಯಿತು. ಜಲಜೀವನ್ ಮಿಷನ್ ಯೋಜನೆಗೆ ನೀಡಬೇಕಿದ್ದ ₹15 ಸಾವಿರ ಕೋಟಿ ಕೊಡಲಿಲ್ಲ. ಜಿಎಸ್‌ಟಿ ಪರಿಹಾರ ನಿಲ್ಲಿಸಿದ್ದರಿಂದ ವಿತ್ತೀಯ ಕೊರತೆಯಾಗಿದೆ’ ಎಂದು ಸಮರ್ಥಿಸಿಕೊಂಡರು.

‘ನುಡಿದಂತೆ ನಡೆದ ಪಕ್ಷ ಕಾಂಗ್ರೆಸ್ ಮಾತ್ರ. ಯಾವ ಕಾರಣಕ್ಕೂ ಬಿಜೆಪಿ ಮತ ಹಾಕಬೇಡಿ. ಅವರು ಕೆಲಸ ಮಾಡುವುದಿಲ್ಲ. ಕೆಲಸ ಮಾಡುವವರನ್ನು ಕಂಡರೆ ಅವರಿಗೆ ಹೊಟ್ಟೆಕಿಚ್ಚು’ ಎಂದು ಟೀಕಿಸಿದರು.

ಇದಕ್ಕೂ ಮೊದಲು ಸುದ್ದಿಗಾರರೊಂದಿಗೆ ಮಾತನಾಡಿ, ‘ಬಿಜೆಪಿಯವರಿಗೆ ಸೋಲಿನ ಭಯ ಶುರುವಾಗಿದೆ. ಅದಕ್ಕೆ ಉಚ್ಚಾಟಿತ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರನ್ನು ಪ್ರಚಾರಕ್ಕೆ ಕರೆಯಿಸಿದ್ದಾರೆ’ ಎಂದರು.

‘ಕೇಂದ್ರ ಸರ್ಕಾರ ಎಲ್‌ಪಿಜಿ, ಸಿಎನ್‌ಜಿ ಕೊಡಬೇಕು. ಆದರೆ, ಅವರು ಕೊಡುತ್ತಿಲ್ಲ. ಆದ್ದರಿಂದ ಸಚಿವ ಮುನಿಯಪ್ಪ ಅವರ ಮನೆ ಬದಲು, ಪ್ರಧಾನಿ ನರೇಂದ್ರ ಮೋದಿ ಅವರ ಮನೆಗೆ ಘೇರಾವ್ ಹಾಕಲಿ’ ಎಂದರು.


ಬಾಗಲಕೋಟೆಯ ಮುಚಖಂಡಿಯ ವೀರಭದ್ರೇಶ್ವರ ದೇವಸ್ಥಾನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಆರತಿ ಬೆಳಗಿದರು. ಜಿಲ್ಲಾ ಪ್ರಚಾರ ಸಮಿತಿ ಅಧ್ಯಕ್ಷ ನಾಗರಾಜ ಹದ್ಲಿ, ಅಭ್ಯರ್ಥಿ ಉಮೇಶ ಮೇಟಿ ಪಾಲ್ಗೊಂಡಿದ್ದರು

> **ಉಪ ಚುನಾವಣೆಯಲ್ಲಿ ಎರಡು ವರ್ಷಗಳಿಗೆ ಉಮೇಶ ಮೇಟಿ ಅವರನ್ನು ಗೆಲ್ಲಿಸಿ. 2028ಕ್ಕೂ ಉಮೇಶ ಅವರಿಗೇ ಟಿಕೆಟ್ ಕೊಡ್ತೀವಿ**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

ನ್ಯಾಯಾಂಗದ ಅಧಿಕಾರಿಗಳನ್ನು ಕೂಡಿಹಾಕಿದ ಪ್ರಕರಣ • ಪಲಾಯನಕ್ಕೆ ಯತ್ನಿಸಿದ್ದ ಆರೋಪಿ

ಮಾಲ್ಡಾ: ಪ್ರಮುಖ ‘ಸೂತ್ರಧಾರನ’ ಬಂಧನ

ಕೋಲ್ಕತ್ತ (ಪಿಟಿಐ): ಮಾಲ್ಡಾ ಜಿಲ್ಲೆಯಲ್ಲಿ ನ್ಯಾಯಾಂಗದ ಏಳು ಅಧಿಕಾರಿಗಳನ್ನು ಕೂಡಿಹಾಕಿದ ಪ್ರಕರಣದ ಪ್ರಮುಖ ‘ಸೂತ್ರಧಾರ’ ಸೇರಿದಂತೆ ಇಬ್ಬರನ್ನು ಪಶ್ಚಿಮ ಬಂಗಾಳ ಪೊಲೀಸರು ಶುಕ್ರವಾರ ಸಿಲಿಗುರಿಯ ಬಾಗ್ಡೋಗ್ರಾ ವಿಮಾನ ನಿಲ್ದಾಣದಲ್ಲಿ ಬಂಧಿಸಿದ್ದಾರೆ.

ಪ್ರಮುಖ ಆರೋಪಿ ಮೊಫಕ್ಕರುಲ್ ಇಸ್ಲಾಂ ಎಂಬ ವಕೀಲನನ್ನು ವಿಮಾನ ಏರಲು ಮುಂದಾಗಿದ್ದಾಗ ಬಂಧಿಸಲಾಯಿತು ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ಮೊಫಕ್ಕರುಲ್ ಬುಧವಾರ ರಾತ್ರಿ ಕಾಲಿಯಾಚಕ್ ತಾಲ್ಲೂಕು ಕಚೇರಿಯೊಳಗೆ ನ್ಯಾಯಾಂಗದ ಏಳು ಅಧಿಕಾರಿಗಳನ್ನು ಹಲವು ಗಂಟೆ ಘೇರಾವ್ ಮಾಡಿದ ಘಟನೆಯ ಹಿಂದಿನ ಶಂಕಿತ ಸೂತ್ರಧಾರ ಆಗಿದ್ದಾನೆ. ಆತ ವಿಮಾನದ ಮೂಲಕ ರಾಜ್ಯದಿಂದ ಪಲಾಯನ ಮಾಡಲು ಮುಂದಾಗಿದ್ದ’ ಎಂದಿದ್ದಾರೆ.

‘ಉತ್ತರ ದಿನಾಜ್‌ಪುರ ಜಿಲ್ಲೆಯ ಇತಾಹರ್ ನಿವಾಸಿಯಾಗಿರುವ ಮೊಫಕ್ಕರುಲ್, ಪ್ರಸ್ತುತ ಕೋಲ್ಕತ್ತದಲ್ಲಿ ನೆಲಸಿದ್ದಾನೆ’ ಎಂದು ಎಡಿಜಿ (ಉತ್ತರ ಬಂಗಾಳ) ಕೆ.ಜಯರಾಮನ್ ಸುದ್ದಿಗಾರರಿಗೆ ತಿಳಿಸಿದರು.

ಬುಧವಾರ ಭಾಷಣದ ಮೂಲಕ ಸ್ಥಳೀಯರನ್ನು ‘ಪ್ರಚೋದನೆ’ ಮಾಡಿದ ಆರೋಪದ ಮೇಲೆ ಆತನ ವಿರುದ್ಧ ಕಲಿಯಾಚಕ್ ಪೊಲೀಸ್ ಠಾಣೆಯಲ್ಲಿ ಮೂರು ಪ್ರಕರಣಗಳನ್ನು ದಾಖಲಿಸಲಾಗಿದೆ. ಪ್ರಚೋದನಕಾರಿ ಭಾಷಣದ ಬೆನ್ನಲ್ಲೇ ಜನರ ಗುಂಪು ನ್ಯಾಯಾಂಗದ ಅಧಿಕಾರಿಗಳನ್ನು ಘೇರಾವ್ ಮಾಡಿದೆ ಎಂದಿದ್ದಾರೆ.

‘ಘಟನೆಯ ಬೆನ್ನಲ್ಲೇ ನಾವು ಮೊಫಕ್ಕರುಲ್ ಇಸ್ಲಾಂನ ಪತ್ತೆಗೆ ಕಾರ್ಯಾಚರಣೆ ಆರಂಭಿಸಿದೆವು. ಪಶ್ಚಿಮ ಬಂಗಾಳದ ಸಿಐಡಿ ಮತ್ತು ಸಿಲಿಗುರಿ ಪೊಲೀಸರ ಸಹಾಯದಿಂದ ಆತ ಮತ್ತು ಸಹಚರನನ್ನು ಬಂಧಿಸಿದ್ದೇವೆ’ ಎಂದು ಮಾಹಿತಿ ನೀಡಿದ್ದಾರೆ.

ರಾಷ್ಟ್ರೀಯ ತನಿಖಾ ದಳವು (ಎನ್‌ಐಎ) ಪ್ರಕರಣದ ತನಿಖೆಯನ್ನು ವಹಿಸಿಕೊಂಡಿದ್ದರೂ, ಈ ಘಟನೆಯು ‘ಪೂರ್ವಯೋಜಿತವೇ’ ಮತ್ತು ಇದರ ಹಿಂದೆ ಹೆಚ್ಚಿನ ಜನರು ಭಾಗಿಯಾಗಿದ್ದಾರೆಯೇ ಎಂಬುದನ್ನು ಪತ್ತೆಹಚ್ಚಲು ಪಶ್ಚಿಮ ಬಂಗಾಳ ಪೊಲೀಸರು ತಮ್ಮ ತನಿಖೆಯನ್ನು ಮುಂದುವರಿಸುವರು ಎಂದಿದ್ದಾರೆ.

ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಪ್ರಕ್ರಿಯೆಯಲ್ಲಿ ತೊಡಗಿದ್ದ ಅಧಿಕಾರಿಗಳನ್ನು ಕೂಡಿಹಾಕಿದ ಘಟನೆ ಮಾಲ್ಡಾ ಜಿಲ್ಲೆಯಲ್ಲಿ ಬುಧವಾರ ನಡೆದಿತ್ತು. ಈ ಘಟನೆಗೆ ಸಂಬಂಧಿಸಿದಂತೆ ನಿಷ್ಕ್ರಿಯತೆ ತೋರಿದ ಪಶ್ಚಿಮ ಬಂಗಾಳ ಸರ್ಕಾರವನ್ನು ಸುಪ್ರೀಂ ಕೋರ್ಟ್ ಗುರುವಾರ ತೀವ್ರ ತರಾಟೆಗೆ ತೆಗೆದುಕೊಂಡಿದೆ.

> **ನೀವು 365 ದಿನಗಳವರೆಗೆ ಪಶ್ಚಿಮ ಬಂಗಾಳದಲ್ಲಿ ವಾಸ್ತವ್ಯ ಹೂಡಬಹುದು. ಆದರೆ, ಅದರಿಂದ ಬಂಗಾಳದಲ್ಲಿ ಬದಲಾವಣೆ ತರಲು ಸಾಧ್ಯವಿಲ್ಲ**
> **ಮಮತಾ ಬ್ಯಾನರ್ಜಿ,** ಮುಖ್ಯಮಂತ್ರಿ
> (ಬಂಗಾಳದಲ್ಲಿ 15 ದಿನ ವಾಸ್ತವ್ಯ ಹೂಡುವೆ ಎಂದು ಅಮಿತ್ ಶಾ ಹೇಳಿದ್ದಕ್ಕೆ ಪ್ರತಿಕ್ರಿಯೆ)

ಎಐಎಂಐಎಂ, ಐಎಸ್‌ಎಫ್ ದೂಷಿಸಿದ ಮಮತಾ

ಹರಿರಾಂಪುರ (ಪಶ್ಚಿಮ ಬಂಗಾಳ): ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಮಾಲ್ಡಾ ಘಟನೆಗೆ ಎಐಎಂಐಎಂ ಮತ್ತು ಇಂಡಿಯನ್ ಸೆಕ್ಯುಲರ್ ಫ್ರಂಟ್ (ಐಎಸ್‌ಎಫ್) ಪಕ್ಷಗಳನ್ನು ದೂಷಿಸಿದ್ದಾರೆ. ಕಾಂಗ್ರೆಸ್ ಮತ್ತು ಬಿಜೆಪಿ ಕೂಡ ಸ್ಥಳೀಯರಿಗೆ ಪ್ರಚೋದನೆ ನೀಡಿದೆ ಎಂದು ಆರೋಪಿಸಿದರು.

ಘಟನೆಯ ಹಿಂದಿನ ಸೂತ್ರಧಾರನನ್ನು ಬಂಧಿಸಿರುವುದನ್ನು ಉಲ್ಲೇಖಿಸಿದ ಅವರು, ಪೊಲೀಸ್ ಇಲಾಖೆಯು ಇನ್ನೂ ತಮ್ಮ ನಿಯಂತ್ರಣದಲ್ಲಿದೆಯೇ ಹೊರತು ಚುನಾವಣಾ ಆಯೋಗದ ನಿಯಂತ್ರಣದಲ್ಲಿಲ್ಲ ಎಂದು ಪ್ರತಿಪಾದಿಸಿದರು.

ದಕ್ಷಿಣ ದಿನಾಜ್‌ಪುರ ಜಿಲ್ಲೆಯ ಹರಿರಾಂಪುರದಲ್ಲಿ ಚುನಾವಣಾ ರ‍್ಯಾಲಿಯನ್ನುದ್ದೇಶಿಸಿ ಮಾತನಾಡಿದ ಅವರು, ‘ಬಿಜೆಪಿಯು ಆರೋಪಿಯನ್ನು ಎಐಎಂಐಎಂನಿಂದ ಎರವಲು ಪಡೆದು ಇಲ್ಲಿಗೆ ಕರೆತಂದಿದೆ’ ಎಂದು ಆರೋಪಿಸಿದರು.

‘ಐಎಸ್‌ಎಫ್ ಕೂಡ ಅವರೊಂದಿಗೆ ಕೈಜೋಡಿಸಿದೆ. ಚುನಾವಣೆಗೆ ಸಜ್ಜಾಗುತ್ತಿರುವ ಪಶ್ಚಿಮ ಬಂಗಾಳದಲ್ಲಿ ಅಶಾಂತಿ ಸೃಷ್ಟಿಸಲು ಹೊರಗಿನಿಂದ ಗೂಂಡಾಗಳನ್ನು ಕರೆತರಲಾಗುತ್ತಿದೆ. ಅವರು ನ್ಯಾಯಾಂಗದ ಅಧಿಕಾರಿಗಳನ್ನೂ ಸುಮ್ಮನೆ ಬಿಡುವುದಿಲ್ಲ’ ಎಂದು ದೂರಿದರು.

ಮಾಲ್ಡಾಗೆ ಭೇಟಿ ನೀಡಿದ ಎನ್‌ಐಎ ತಂಡ

ಘಟನೆಯ ತನಿಖೆಗಾಗಿ ಎನ್‌ಐಎ ಅಧಿಕಾರಿಗಳ ತಂಡ ಗುರುವಾರ ಮಾಲ್ಡಾದ ಮೊಥಾಬಾರೀ ಮತ್ತು ಕಾಲಿಯಾಚಕ್ ಪೊಲೀಸ್ ಠಾಣೆಗಳಿಗೆ ಭೇಟಿ ನೀಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಘಟನೆಯ ಬಗ್ಗೆ ಸಿಬಿಐ ಅಥವಾ ಎನ್‌ಐಎಯಿಂದ ತನಿಖೆ ನಡೆಸುವಂತೆ ಸುಪ್ರೀಂ ಕೋರ್ಟ್ ನಿರ್ದೇಶಿಸಿತ್ತು. ಇದರ ಬೆನ್ನಲ್ಲೇ ಚುನಾವಣಾ ಆಯೋಗವು ತನಿಖೆಯ ಜವಾಬ್ದಾರಿಯನ್ನು ಎನ್‌ಐಎಗೆ ವಹಿಸಿತ್ತು.

ಡಿಐಜಿ ಶ್ರೇಣಿಯ ಅಧಿಕಾರಿಯ ನೇತೃತ್ವದ 24 ಸದಸ್ಯರ ತಂಡವು ಮೊಥಾಬಾರೀಯಲ್ಲಿ ಪೊಲೀಸರು ಮತ್ತು ಇತರ ಅಧಿಕಾರಿಗಳಿಂದ ಮಾಹಿತಿ ಕಲೆಹಾಕಿದೆ. ಘೇರಾವ್ ಹಾಕಿದ ಸ್ಥಳ ಮತ್ತು ಅಧಿಕಾರಿಗಳ ವಾಹನಗಳ ಮೇಲೆ ಕಲ್ಲು ಹಾಗೂ ಇಟ್ಟಿಗೆಗಳನ್ನು ಎಸೆದ ಸ್ಥಳದಿಂದ ಸಾಕ್ಷ್ಯಗಳನ್ನು ಸಂಗ್ರಹಿಸಿದೆ ಎಂದು ಮೂಲಗಳು ತಿಳಿಸಿವೆ.

ಘಟನೆಗೆ ಸಂಬಂಧಿಸಿದಂತೆ ಮೊಥಾಬಾರೀ ಮತ್ತು ಕಾಲಿಯಾಚಕ್ ಠಾಣೆಗಳಲ್ಲಿ ಒಟ್ಟು 19 ಪ್ರಕರಣಗಳು ದಾಖಲಾಗಿದ್ದು, 35 ಮಂದಿಯನ್ನು ಬಂಧಿಸಲಾಗಿದೆ.

ದಾವಣಗೆರೆ ದಕ್ಷಿಣ: ಉಭಯ ಪಕ್ಷಗಳ ನಾಯಕರಿಂದ ಭರ್ಜರಿ ಪ್ರಚಾರ

ಕ್ಷೇತ್ರದಲ್ಲೇ ಬೀಡುಬಿಟ್ಟ ರಾಜಕಾರಣಿಗಳು

ಪ್ರಜಾವಾಣಿ ವಾರ್ತೆ

ದಾವಣಗೆರೆ: ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣಾ ಕಣದಲ್ಲಿ ಮತದಾರರನ್ನು ಸೆಳೆಯಲು ಕಾಂಗ್ರೆಸ್ ಮತ್ತು ಬಿಜೆಪಿ ಅವಿರತವಾಗಿ ಶ್ರಮಿಸುತ್ತಿವೆ. ಸಚಿವರು, ಶಾಸಕರು ಹಾಗೂ ಮಾಜಿ ಸಚಿವರು ತಮ್ಮ ಪಕ್ಷದ ಅಭ್ಯರ್ಥಿ ಪರವಾಗಿ ಕ್ಷೇತ್ರ ವ್ಯಾಪ್ತಿಯ ಗಲ್ಲಿಗಲ್ಲಿಗಳಲ್ಲಿ ಶುಕ್ರವಾರ ಮತಯಾಚನೆ ಮಾಡಿದರು.

ಎರಡು ದಿನ ಕ್ಷೇತ್ರದಲ್ಲಿ ರೋಡ್ ಶೋ ಹಾಗೂ ಬಹಿರಂಗ ಸಭೆ ನಡೆಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶುಕ್ರವಾರ ಮಧ್ಯಾಹ್ನ ಬಾಗಲಕೋಟೆ ಯತ್ತ ಮುಖ ಮಾಡಿದರು.

ಗೃಹ ಸಚಿವ ಜಿ. ಪರಮೇಶ್ವರ ಹಾಗೂ ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ.ಮಹದೇವಪ್ಪ ಕ್ಷೇತ್ರ ಪ್ರವೇಶಿಸಿದರು. ಅರಣ್ಯ ಸಚಿವ ಈಶ್ವರ್ ಖಂಡ್ರೆ ಕಾರ್ಯಕರ್ತರೊಂದಿಗೆ ಸುಡು ಬಿಸಿಲಿನಲ್ಲಿ ಬೀದಿ ಸುತ್ತಿದರು.

ಬಿಜೆಪಿ ನಾಯಕರು ಕ್ಷೇತ್ರದಲ್ಲಿಯೇ ಬೀಡುಬಿಟ್ಟಿದ್ದು, ಕಾರ್ಯಕರ್ತರೊಂದಿಗೆ ಮನೆ–ಮನೆಗಳಿಗೆ ಭೇಟಿ ನೀಡಿದರು. ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ, ವಿಧಾನಪರಿಷತ್ ಸದಸ್ಯರಾದ ಸಿ.ಟಿ.ರವಿ, ಎಚ್.ವಿಶ್ವನಾಥ್, ಮಾಜಿ ಸಚಿವರಾದ ಬಿ.ಶ್ರೀರಾಮುಲು, ಅರವಿಂದ ಲಿಂಬಾವಳಿ, ಮಾಜಿ ಮುಖ್ಯಮಂತ್ರಿ ಡಿ.ವಿ. ಸದಾನಂದಗೌಡ ಸೇರಿ ಅನೇಕರು ರೋಡ್ ಶೋ ನಡೆಸಿ, ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದರು.

> **ರಾಜ್ಯಗಳು ಪಡೆಯುವ ಸಾಲದ ಮೊತ್ತವನ್ನು ನಿಗದಪಡಿಸುವುದು ಕೇಂದ್ರ ಸರ್ಕಾರ. ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ನಿಗದಿಪಡಿಸಿದಷ್ಟೇ ಸಾಲವನ್ನು ರಾಜ್ಯ ಸರ್ಕಾರ ಮಾಡಿದೆ**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

> **ರಾಜ್ಯದಲ್ಲಿ 30 ವರ್ಷಗಳಲ್ಲಿ 22 ವರ್ಷ ಆಡಳಿತ ನಡೆಸಿದ ಮುಖ್ಯಮಂತ್ರಿಗಳಿಗಿಂತ 8 ವರ್ಷ ಅಧಿಕಾರ ನಡೆಸಿದ ಸಿದ್ದರಾಮಯ್ಯ ಅವರು ಮಾಡಿದ ಸಾಲವೇ ಹೆಚ್ಚು**
> **ಸಿ.ಟಿ.ರವಿ,** ವಿಧಾನಪರಿಷತ್ ಸದಸ್ಯ

ಪ್ರಧಾನಿ ಸಾಲ ಮಾಡಿಲ್ಲವೇ? –ಡಿಕೆಶಿ

ದಾವಣಗೆರೆ: ‘ಬೆಲೆ ಏರಿಕೆ ಮೂಲಕ ಕೇಂದ್ರ ಸರ್ಕಾರ ಜನರ ಮೇಲೆ ಹೇರಿರುವ ಆರ್ಥಿಕ ಹೊರೆ ತಗ್ಗಿಸಲು ರಾಜ್ಯ ಸರ್ಕಾರ ಸಾಲ ಮಾಡಿದ್ದು ನಿಜ. ಜನಕಲ್ಯಾಣ ಯೋಜನೆಗಳನ್ನು ನೀಡದಿದ್ದರೂ ಪ್ರಧಾನಿ ನರೇಂದ್ರ ಮೋದಿ ಸಾಲ ಮಾಡಿಲ್ಲವೇ?’ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಲ್ಲಿ ಪ್ರಶ್ನಿಸಿದರು.

‘ಬೆಲೆ ಏರಿಕೆಯಿಂದ ಜನರ ಪಾರು ಮಾಡಲು ರಾಜ್ಯ ಸರ್ಕಾರ ‘ಗ್ಯಾರಂಟಿ’ ಯೋಜನೆಗಳ ಮೂಲಕ ಹಣ ನೀಡುತ್ತಿದೆ. ಜನರ ಬಗ್ಗೆ ಕಾಳಜಿ ಹೊಂದಿದ್ದರೆ ಕೇಂದ್ರವೂ ಇಂತಹ ಯೋಜನೆ ರೂಪಿಸಲಿ. ಜನರ ಬ್ಯಾಂಕ್ ಖಾತೆಗಳಿಗೆ ತಿಂಗಳಿಗೆ ₹10,000 ಆರ್ಥಿಕ ನೆರವು ನೀಡಲಿ’ ಎಂದು ಕೋರಿದರು.

‘ಅನ್ನರಾಮಯ್ಯ ಅಲ್ಲ ಕನ್ನರಾಮಯ್ಯ’

‘ಅನ್ನಭಾಗ್ಯ ಯೋಜನೆಯಡಿ ರಾಜ್ಯ ಸರ್ಕಾರ ನೀಡುತ್ತಿರುವ ಅಕ್ಕಿ ಕೇಂದ್ರ ಸರ್ಕಾರದ್ದು. ಚೀಲ ಮಾತ್ರ ಕೊಟ್ಟು ಯೋಜನೆ ತಮ್ಮದೇ ಎಂದು ಹೇಳುತ್ತಿರುವ ಸಿದ್ದರಾಮಯ್ಯ ಅವರು ‘ಅನ್ನ ರಾಮಯ್ಯ’ ಅಲ್ಲ. ‘ಕನ್ನರಾಮಯ್ಯ’ ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ ವ್ಯಂಗ್ಯವಾಡಿದರು.

‘ಅಭಿವೃದ್ಧಿಗೆ ಹಣ ನೀಡದೇ, ಗ್ಯಾರಂಟಿಗಳನ್ನು ಸರಿಯಾಗಿ ಅನುಷ್ಠಾನಗೊಳಿಸದೇ ಸಿದ್ದರಾಮಯ್ಯ ಸುಳ್ಳು ಹೇಳುತ್ತಿದ್ದಾರೆ. ಗ್ಯಾರಂಟಿಗಳ ವಿಚಾರದಲ್ಲಿಯೂ ಅವರು ಸುಳ್ಳಿನ ಪುಂಗಿ ಊದುತ್ತಿದ್ದಾರೆ’ ಎಂದು ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ದೂರಿದರು.

‘ಸಿದ್ದರಾಮಯ್ಯ ಕುಟುಂಬ ರಾಜಕಾರಣ ಮಾಡುತ್ತಿಲ್ಲವೇ?’

ಪ್ರಜಾವಾಣಿ ವಾರ್ತೆ

ಮಂಡ್ಯ: ‘ದೇವೇಗೌಡರು, ಕುಮಾರಸ್ವಾಮಿ ಅವರದು ಕುಟುಂಬ ರಾಜಕಾರಣ ಎಂದು ಟೀಕಿಸುವ ಸಿದ್ದರಾಮಯ್ಯ ಅವರು, ಕುಟುಂಬ ರಾಜಕಾರಣ ಮಾಡುತ್ತಿಲ್ಲವೇ’ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಇಲ್ಲಿ ಪ್ರಶ್ನಿಸಿದರು.

ಜಿಲ್ಲೆಯ ಪಾಂಡವಪುರ ತಾಲ್ಲೂಕಿನ ಟಿ.ಎಸ್. ಛತ್ರದಲ್ಲಿ ಶುಕ್ರವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ‘ಸಿದ್ದರಾಮಯ್ಯ ತಮ್ಮ ಮೊದಲ ಮಗನನ್ನು ರಾಜಕಾರಣದಲ್ಲಿ ಬೆಳೆಸಲು ಯೋಜಿಸಿದ್ದರು. ಆತ (ರಾಕೇಶ್) ಅಕಾಲಿಕ ಮರಣ ಹೊಂದಿದ್ದರಿಂದ ಆಗಲಿಲ್ಲ. ವೈದ್ಯನಾಗಿದ್ದ 2ನೇ ಮಗ ಯತೀಂದ್ರರನ್ನು ರಾಜಕಾರಣಕ್ಕೆ ಕರೆತಂದಿದ್ದಾರೆ. ಪರಿಷತ್ ಸದಸ್ಯರಾಗಿಸಿ, ಜೊತೆಗೆ ಇಟ್ಟುಕೊಂಡು ಓಡಾಡುತ್ತಿದ್ದಾರೆ’ ಎಂದು ಟೀಕಿಸಿದರು. ‘ಯತೀಂದ್ರ ಅವರನ್ನು ರಾಜಕಾರಣಕ್ಕೆ ಕರೆತಂದಿದ್ದೇ ವಸೂಲಿಗಾಗಿ ಎನ್ನುವುದು ತಿಳಿದಿದೆ. ‘ಕುಟುಂಬ ರಾಜಕಾರಣದ ಬಗ್ಗೆ ಟೀಕೆಯನ್ನು ಅವರು ಮೊದಲು ಬಿಡಲಿ. ಡಿ.ಕೆ.ಶಿವಕುಮಾರ್ ಕುಟುಂಬದಲ್ಲಿ ಎಷ್ಟು ಜನ ರಾಜಕೀಯದಲ್ಲಿದ್ದಾರೆ ಎಂಬುದನ್ನೂ ಹೇಳಲಿ’ ಎಂದರು.

‘ನಮ್ಮ ಬಗ್ಗೆ ಮಾತನಾಡಲು ಸಿದ್ದರಾಮಯ್ಯ ಅವರಿಗೆ ಯಾವ ನೈತಿಕತೆಯೂ ಇಲ್ಲ. 2013ರಲ್ಲಿ ಇದೇ ನನ್ನ ಕೊನೆ ಚುನಾವಣೆ ಎಂದಿದ್ದರು, ಅಧಿಕಾರದ ರುಚಿ ನೋಡಿದ ಮೇಲೆ ಈಗ 2028ಕ್ಕೆ ನಾನೇ ಮುಖ್ಯಮಂತ್ರಿ ಎನ್ನುತ್ತಿದ್ದಾರೆ’ ಎಂದು ವ್ಯಂಗ್ಯವಾಡಿದರು.

ಎಲ್‌ಡಿಎಫ್ ಅಭ್ಯರ್ಥಿಗೆ ನೋಟಿಸ್

ಕೋಯಿಕ್ಕೋಡ್ (ಪಿಟಿಐ): ಪೇರಂಬ್ರಾ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿರುವ ಎಲ್‌ಡಿಎಫ್ ಸಂಚಾಲಕ ಟಿ.ಪಿ. ರಾಮಕೃಷ್ಣನ್ ಅವರಿಗೆ ಚುನಾವಣಾ ಆಯೋಗ ನೋಟಿಸ್ ಜಾರಿಗೊಳಿಸಿದೆ. ತಹಲಿಯಾದಲ್ಲಿ ಚುನಾವಣಾ ಪ್ರಚಾರ ನಡೆಸುವಾಗ, ಕೋಮು ಆಧಾರಿತವಾಗಿ ಮತ ಯಾಚಿಸಲಾಗುತ್ತಿದೆ ಎಂದು ಯುಡಿಎಫ್‌ನ ಪ್ರಮುಖ ಘಟಕವಾದ ಐಯುಎಂಎಲ್ ದೂರು ನೀಡಿತ್ತು.

ಸಚಿವ ಮುರುಗನ್‌ಗೆ ಟಿಕೆಟ್

ನವದೆಹಲಿ (ಪಿಟಿಐ): ತಮಿಳುನಾಡು ವಿಧಾನಸಭಾ ಚುನಾವಣೆಗೆ 27 ಅಭ್ಯರ್ಥಿಗಳ ಪಟ್ಟಿಯನ್ನು ಬಿಜೆಪಿ ಶುಕ್ರವಾರ ಬಿಡುಗಡೆ ಮಾಡಿದೆ.

ಕೇಂದ್ರ ಸಚಿವ ಎಲ್. ಮುರುಗನ್ ಅವರು ಅವನಾಶಿ ಕ್ಷೇತ್ರದಿಂದ ಹಾಗೂ ತೆಲಂಗಾಣದ ಮಾಜಿ ರಾಜ್ಯಪಾಲರಾದ ತಮಿಳಿಸೈ ಸೌಂದರರಾಜನ್ ಅವರನ್ನು ಮೈಲಾಪುರ ವಿಧಾನಸಭಾ ಕ್ಷೇತ್ರದಿಂದ ಕಣಕ್ಕಿಳಿಸಿದೆ.

ಮಹಿಳಾ ಮೋರ್ಚಾ ರಾಷ್ಟ್ರೀಯ ಅಧ್ಯಕ್ಷೆ ವನತಿ ಶ್ರೀನಿವಾಸನ್ ಅವರು ಕೊಯಮತ್ತೂರು (ಉತ್ತರ) ಕ್ಷೇತ್ರದಿಂದ ಕಣಕ್ಕಿಳಿಯಲಿದ್ದಾರೆ ಎಂದು ಪಕ್ಷದ ಪ್ರಕಟಣೆ ತಿಳಿಸಿದೆ.

ಮೊಡಕ್ಕುರಿಚಿ ಕ್ಷೇತ್ರದಿಂದ ಕೀರ್ತಿಕಾ ಶಿವಕುಮಾರ್, ವಿಲವಂಕೋಡ್ ಕ್ಷೇತ್ರದಿಂದ ಎಸ್. ವಿಜಯ ಧಾರಣಿ ಹಾಗೂ ತಳ್ಳಿ ಕ್ಷೇತ್ರದಿಂದ ನಾಗೇಶ್ ಕುಮಾರ್ ಅಖಾಡಕ್ಕಿಳಿಯಲಿದ್ದಾರೆ.

ತಮಿಳುನಾಡು ಬಿಜೆಪಿ ಮುಖ್ಯಸ್ಥರಾಗಿ ಈ ಹಿಂದೆ ಸುದ್ದಿಯಲ್ಲಿದ್ದ ಕೆ. ಅಣ್ಣಾಮಲೈ ಅವರು ಚುನಾವಣೆಯಲ್ಲಿ ತಾವು ಸ್ಪರ್ಧಿಸದೆ, ಎನ್‌ಡಿಎ ಪರವಾಗಿ ಪ್ರಚಾರ ಮಾಡಲು ನಿರ್ಧರಿಸಿರುವುದರಿಂದ ಅವರ ಹೆಸರು ಚುನಾವಣಾ ಅಭ್ಯರ್ಥಿಗಳ ಪಟ್ಟಿಯಲ್ಲಿ ಇಲ್ಲ.

‘ಸೀಟು ಹಂಚಿಕೆ–ಸಣ್ಣ ಹಿನ್ನಡೆ’

ಪುದುಚೆರಿ (ಪಿಟಿಐ): ‘ಸೀಟು ಹಂಚಿಕೆ ಕುರಿತ ಗೊಂದಲಕ್ಕೆ ನಮ್ಮ ಪಕ್ಷ ಹಾಗೂ ಡಿಎಂಕೆ ಕಾರಣ’ ಎಂದು ಕಾಂಗ್ರೆಸ್‌ನ ಹಿರಿಯ ಮುಖಂಡ ವಿ. ನಾರಾಯಣಸ್ವಾಮಿ ಹೇಳಿದ್ದಾರೆ.

‘ಮೈತ್ರಿಯಲ್ಲಿನ ಸೀಟು ಹಂಚಿಕೆಯ ಗೊಂದಲ ಸಣ್ಣ ಹಿನ್ನಡೆಯಷ್ಟೇ. ಜನರು ಬಿಜೆಪಿ ನೇತೃತ್ವದ ಸರ್ಕಾರವನ್ನು ಈ ಚುನಾವಣೆಯಲ್ಲಿ ತಿರಸ್ಕರಿಸಲಿದ್ದಾರೆ’ ಎಂದು ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ತಿಳಿಸಿದ್ದಾರೆ. ಸೀಟು ಹಂಚಿಕೆಯ ಮಾತುಕತೆ ಸಮಯದಲ್ಲಿ ಎದುರಾದ ಅಡೆತಡೆಗಳಿಂದಾಗಿ, ಆರು ಕ್ಷೇತ್ರಗಳಲ್ಲಿ ಎರಡೂ ಪಕ್ಷಗಳ ಅಭ್ಯರ್ಥಿಗಳು ಸ್ಪರ್ಧಿಸಿದ್ದಾರೆ ಎಂದು ಹೇಳಿದ್ದಾರೆ.

‘ಡಿಎಂಕೆಯು ನಮ್ಮ ಮನವಿಗೆ ಕಿವಿಗೊಡಲಿಲ್ಲ. ಕಾಂಗ್ರೆಸ್ ಸಹ ಆರು ಕ್ಷೇತ್ರಗಳಲ್ಲಿ ತನ್ನ ಅಭ್ಯರ್ಥಿಗಳನ್ನು ಕಣಕ್ಕಿಳಿಸುವ ಮೂಲಕ ದೊಡ್ಡ ತಪ್ಪು ಮಾಡಿದೆ’ ಎಂದಿದ್ದಾರೆ. ‘ಎಐಎನ್‌ಆರ್‌ಸಿ– ಬಿಜೆಪಿ ನೇತೃತ್ವದ ಮೈತ್ರಿ ಸರ್ಕಾರವು ಪುದುಚೆರಿ ಜನರಿಗೆ ದ್ರೋಹ ಎಸಗಿದೆ. ಜನರು ಬದಲಾವಣೆ ಬಯಸಿದ್ದಾರೆ’ ಎಂದಿದ್ದಾರೆ.

ಅತಿಕ್ರಮಣಕಾರರಿಂದ 1.50 ಲಕ್ಷ ಎಕರೆ ಮುಕ್ತ: ಅಮಿತ್ ಶಾ

‘ಬುಡಕಟ್ಟು ಅಭಿವೃದ್ಧಿಗೆ ಯೋಜನೆ’

ದುಧನೋಹಿ/ಪಲಾಶಬರಿ (ಪಿಟಿಐ): ಬುಡಕಟ್ಟು ಅಭಿವೃದ್ಧಿಗಾಗಿ ಪ್ರಧಾನಿ ನರೇಂದ್ರ ಮೋದಿ ಮತ್ತು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಅವರು ಮಾರ್ಗಸೂಚಿ ಸಿದ್ಧಪಡಿಸಿದ್ದಾರೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಶುಕ್ರವಾರ ಹೇಳಿದರು.

ಗೋಲ್ಪಾರ ಜಿಲ್ಲೆಯ ದುಧನೋಹಿಯಲ್ಲಿ ನಡೆದ ಚುನಾವಣಾ ರ‍್ಯಾಲಿಯಲ್ಲಿ ಮಾತನಾಡಿದ ಅವರು, ‘ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಮರಳಲಿದ್ದು, ಅದರ ಅನುಷ್ಠಾನವನ್ನು ಖಚಿತಪಡಿಸಲಿದೆ’ ಎಂದರು.

‘ಕಾಂಗ್ರೆಸ್ ಎಂದೆಂದೂ ಆದಿವಾಸಿ ಮಹಿಳೆಯನ್ನು ದೇಶದ ರಾಷ್ಟ್ರಪತಿಯನ್ನಾಗಿ ಮಾಡಿಲ್ಲ. ಆದರೆ ಮೋದಿ ನೇತೃತ್ವದ ಸರ್ಕಾರವು ದ್ರೌಪದಿ ಮುರ್ಮು ಅವರನ್ನು ದೇಶದ ಮೊದಲ ಪ್ರಜೆಯನ್ನಾಗಿ ಮಾಡಿತು’ ಎಂದರು.

ಕಾಮರೂಪ ಜಿಲ್ಲೆಯ ಪಲಾಶಬರಿಯಲ್ಲಿ ನಡೆದ ರ‍್ಯಾಲಿಯಲ್ಲಿ ಮಾತನಾಡಿದ ಅವರು, ‘ಅಸ್ಸಾಂ ಕಾಂಗ್ರೆಸ್ ಅಧ್ಯಕ್ಷರ ವಿರುದ್ಧ ದೇಶದ ಶತ್ರು ರಾಷ್ಟ್ರದೊಂದಿಗೆ ಸಂಪರ್ಕ ಹೊಂದಿದ್ದಾರೆ ಎಂಬ ಆರೋಪಗಳಿವೆ’ ಎಂದರು.

ಪಲಾಶಬರಿಯಲ್ಲಿ ಐಐಎಂ ಸ್ಥಾಪಿಸುವ ಮಸೂದೆ ತಡೆಯಲು ಕಾಂಗ್ರೆಸ್ ಯತ್ನಿಸುತ್ತಿದೆ . ಬಿಜೆಪಿಯು ಶಿಕ್ಷಣ ಕೇಂದ್ರವನ್ನಾಗಿ ರೂಪಿಸಲು ಬದ್ಧವಾಗಿದೆ. ಆ ನಿಟ್ಟಿನಲ್ಲಿ ಕೆಲಸ ಮಾಡಲಿದೆ ಎಂದು ಹೇಳಿದರು.


ಪುದುಚೆರಿಯಲ್ಲಿ ರೋಡ್ ಶೋನಲ್ಲಿ ಪಾಲ್ಗೊಂಡ ಪ್ರಧಾನಿ ನರೇಂದ್ರ ಮೋದಿ ಅವರು ಬೆಂಬಲಿಗರತ್ತ ಕೈಬೀಸಿದರು. ಪುದುಚೇರಿ ಮುಖ್ಯಮಂತ್ರಿ ರಂಗಸ್ವಾಮಿ, ಗೃಹ ಸಚಿವ ಅರ್ಮುಗಂ ನಮಃಶಿವಾಯಂ ಪಾಲ್ಗೊಂಡರು –ಪಿಟಿಐ ಚಿತ್ರ

‘ಎನ್‌ಡಿಎಯಿಂದ ಸಂಸ್ಕೃತಿ ರಕ್ಷಣೆ’


ಬಾರ್‌ಪೇಟಾ/ಬರಚಲ್ಲಾ: ‘ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಮಾತ್ರ ಅಸ್ಸಾಂನ ಸಂಸ್ಕೃತಿಯನ್ನು ರಕ್ಷಿಸಲು ಸಾಧ್ಯ’ ಎಂದು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ಶುಕ್ರವಾರ ಇಲ್ಲಿ ಹೇಳಿದರು.

‘ಅಸ್ಸಾಂ ಅನ್ನು ನುಸುಳುಕೋರರಿಂದ ಮುಕ್ತಗೊಳಿಸುವ ಹಾಗೂ ತೀವ್ರಗತಿಯಲ್ಲಿ ಬದಲಾಗುತ್ತಿರುವ ಜನಸಂಖ್ಯಾ ಸ್ವರೂಪವನ್ನು ನಿಯಂತ್ರಿಸುವ ಸಾಮರ್ಥ್ಯ ಇರುವುದು ಬಿಜೆಪಿಗೆ ಮಾತ್ರ’ ಎಂದು ಬಾರ್‌ಪೇಟಾ ಮತ್ತು ಬರಚಲ್ಲಾದಲ್ಲಿ ನಡೆದ ಚುನಾವಣಾ ರ‍್ಯಾಲಿಯಲ್ಲಿ ತಿಳಿಸಿದರು.

‘ಸರಕು ಸಾಗಣೆಗೆ ನೌಕಾಪಡೆ ರಕ್ಷಣೆ’

ಸುಗಮ ಸಂಚಾರ ಖಚಿತಪಡಿಸಿಕೊಳ್ಳಲು ಕ್ರಮ– ರಾಜನಾಥ ಸಿಂಗ್

ವಿಶಾಖಪಟ್ಟಣ (ಪಿಟಿಐ): ಇಂಧನ ಪೂರೈಕೆ ಸೇರಿದಂತೆ ದೇಶದ ಶೇ 95ರಷ್ಟು ವ್ಯಾಪಾರವು ಸಮುದ್ರ ಮಾರ್ಗದ ಮೂಲಕವೇ ನಡೆಯುತ್ತದೆ. ಬಿಕ್ಕಟ್ಟಿನ ಸಂದರ್ಭದಲ್ಲಿ, ತೈಲ ಟ್ಯಾಂಕರ್ ಹಾಗೂ ಸರಕು ಸಾಗಣೆಗೆ ರಕ್ಷಣೆ ನೀಡುವಲ್ಲಿ ಭಾರತೀಯ ನೌಕಾಪಡೆಯು ಮಹತ್ವದ ಪಾತ್ರ ವಹಿಸಿದೆ ಎಂದು ರಕ್ಷಣಾ ಸಚಿವ ರಾಜನಾಥ ಸಿಂಗ್ ಶುಕ್ರವಾರ ಹೇಳಿದರು.



ರಾಜನಾಥ ಸಿಂಗ್

ಭಾರತೀಯ ನೌಕಾಪಡೆಯ ಪ್ರಾಜೆಕ್ಟ್–17 ಯೋಜನೆಯ ಮೂರನೇ ಯುದ್ಧನೌಕೆ ‘ತಾರಾಗಿರಿ’ಯನ್ನು ನೌಕಾಪಡೆಗೆ ನಿಯೋಜಿಸುವ ಕಾರ್ಯಕ್ರಮದಲ್ಲಿ ರಾಜನಾಥ ಮಾತನಾಡಿದರು. ‘ಸಮರ್ಥ ನೌಕಾಪಡೆಯು ದೇಶಕ್ಕೆ ಆಯ್ಕೆಯಲ್ಲ, ಬದಲಿಗೆ ಅವಶ್ಯಕತೆಯಾಗಿದೆ’ ಎಂದರು.

‘ಪರ್ಷಿಯನ್ ಕೊಲ್ಲಿಯಾಗಲೀ ಅಥವಾ ಮಲಕ್ಕಾ ಜಲಸಂಧಿಯಾಗಲಿ ಭಾರತೀಯ ನೌಕಾಪಡೆಯು ಹಿಂದೂ ಮಹಾಸಾಗರದಲ್ಲಿ ನಿರಂತರವಾಗಿ ತನ್ನ ಉಪಸ್ಥಿತಿಯನ್ನು ಕಾಯ್ದುಕೊಳ್ಳುತ್ತದೆ’ ಎಂದರು.

‘ಸರಕುಗಳ ಸುಗಮ ಪೂರೈಕೆಯನ್ನು ಖಚಿತಪಡಿಸಿಕೊಳ್ಳಲು ನಮ್ಮ ನೌಕಾಪಡೆಯು ನಿರಂತರವಾಗಿ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತದೆ. ತಾನು ದೇಶದ ಹಿತಾಸಕ್ತಿಯನ್ನು ಕಾಪಾಡಬಲ್ಲ ಸಾಮರ್ಥ್ಯ ಹೊಂದಿದೆ ಎಂಬುದನ್ನು ತಿಳಿಸಿದೆ. ಅಗತ್ಯವಿದ್ದರೆ ದೇಶದ ನಾಗರಿಕರ ಸುರಕ್ಷತೆಗೂ ಅದು ಮುಂದಾಗುತ್ತದೆ’ ಎಂದು ಹೇಳಿದರು.

ಮುಖ್ಯಾಂಶಗಳು

- ಸಮರ್ಥ ನೌಕಾಪಡೆಯು ದೇಶಕ್ಕೆ ಆಯ್ಕೆಯಲ್ಲ, ಬದಲಿಗೆ ಅವಶ್ಯಕತೆ
- ದೇಶದ ಹಿತಾಸಕ್ತಿ ಕಾಪಾಡಲು ನೌಕಾಪಡೆ ಸಮರ್ಥ



ಸೇನೆಗೆ ಸೇರ್ಪಡೆಯಾದ ಜಲಾಂತರ್ಗಾಮಿ ಐಎನ್‌ಎಸ್ ಅರಿದಮನ್

‘ಅರಿದಮನ್ ನಿಯೋಜನೆ’

ನವದೆಹಲಿ: ದೇಶೀಯವಾಗಿ ನಿರ್ಮಿಸಲಾಗಿರುವ ಜಲಾಂತರ್ಗಾಮಿ ನೌಕೆ ಐಎನ್‌ಎಸ್ ಅರಿದಮನ್ ಅನ್ನು ನೌಕಾಪಡೆಯಲ್ಲಿ ನಿಯೋಜಿಸಲಾಯಿತು. ಕೇರಳದ ನೌಕಾನೆಲೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಅರಿದಮನ್ ಸೇವೆಗೆ ನಿಯೋಜನೆಗೊಂಡಿತು. ರಾಜನಾಥ ಸಿಂಗ್ ಅವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಭಾರತದ ಪರಮಾಣು–ಚಾಲಿತ ಬ್ಯಾಲಿಸ್ಟಿಕ್ ಕ್ಷಿಪಣಿ ಜಲಾಂತರ್ಗಾಮಿ ನೌಕೆ (ಎಸ್‌ಎಸ್‌ಬಿಎನ್) ಯೋಜನೆಯಡಿ ಅರಿದಮನ್ ಅನ್ನು ನಿರ್ಮಿಸಲಾಗಿದೆ. ಇದು ಸಮುದ್ರದಲ್ಲಿ ಹಲವು ತಿಂಗಳು ಅಭ್ಯಾಸ ನಡೆಸಿದೆ.

ಐಎನ್‌ಎಸ್ ಅರಿಹಂತ್ (ಸ್ವದೇಶಿ ನಿರ್ಮಿತ ಮೊದಲ ಪರಮಾಣು ಚಾಲಿತ ನೌಕೆ) ಹಾಗೂ ಐಎನ್‌ಎಸ್ ಅರಿಘಾಟ್ ಅನ್ನೂ ಎಸ್‌ಎಸ್‌ಬಿಎನ್ ಅಡಿ ನಿರ್ಮಿಸಲಾಗಿದೆ.

ಭಾರತವನ್ನು ಹೊರತುಪಡಿಸಿದರೆ ಅಮೆರಿಕ, ರಷ್ಯಾ, ಫ್ರಾನ್ಸ್, ಇಂಗ್ಲೆಂಡ್ ಹಾಗೂ ಚೀನಾ ದೇಶಗಳು ಪರಮಾಣು ಚಾಲಿತ ಜಲಾಂತರ್ಗಾಮಿ ನೌಕೆಗಳನ್ನು ಹೊಂದಿವೆ.

ಭಾರತಕ್ಕೆ ಬರುತ್ತಿದ್ದ ತೈಲ ಟ್ಯಾಂಕರ್ ಚೀನಾದತ್ತ ಪ್ರಯಾಣ

ನವದೆಹಲಿ: ಇರಾನ್‌ನ ಕಚ್ಚಾ ತೈಲ ತುಂಬಿಕೊಂಡು ಭಾರತಕ್ಕೆ ಬರುತ್ತಿದ್ದ ಅಮೆರಿಕ ಅನುಮೋದಿತ ತೈಲ ಟ್ಯಾಂಕರ್, ಹಣ ಪಾವತಿಯಲ್ಲಿನ ವ್ಯತ್ಯಯದ ಕಾರಣಕ್ಕೆ ಚೀನಾದ ಕಡೆಗೆ ತೆರಳಿದೆ.

6 ಲಕ್ಷ ಬ್ಯಾರಲ್ ಕಚ್ಚಾ ತೈಲವಿದ್ದ ಪಿಂಗ್ ಶುನ್ ಟ್ಯಾಂಕರ್ ಖಾರ್ಗ್ ದ್ವೀಪದಿಂದ ಮಾರ್ಚ್ 4ರಂದು ಹೊರಟಿತ್ತು. ಏಪ್ರಿಲ್ 4ರಂದು ಗುಜರಾತ್‌ನ ವಾಡಿನಾರ್ ಬಂದರಿಗೆ ಬರಬೇಕಾಗಿತ್ತು.

‘ಆದರೆ ಇದೀಗ ಆ ಟ್ಯಾಂಕರ್ ಚೀನಾದ ಕಡೆಗೆ ಪ್ರಯಾಣಿಸುತ್ತಿದೆ’ ಎಂದು ನೌಕೆಗಳ ಚಲನವಲನ ದಾಖಲಿಸುವ ಸಂಸ್ಥೆ ಕೆಪಿಲೆರ್ ತಿಳಿಸಿದೆ.ಮಾರಾಟಗಾರರು ಪಾವತಿ ವಿಧಾನವನ್ನು ಬದಲಾಯಿಸಿರುವುದರಿಂದ ವ್ಯವಹಾರದಲ್ಲಿ ವ್ಯತ್ಯಾಸವಾಗಿದೆ ಎಂದು ಹೇಳಲಾಗುತ್ತಿದೆ.

ವಿಶ್ವಸಂಸ್ಥೆ: ಹೊರ್ಮುಜ್ ತೆರೆಸುವ ಪ್ರಸ್ತಾವ ಮತಕ್ಕೆ

ವಿಶ್ವಸಂಸ್ಥೆ (ಎಪಿ): ಸೇನಾ ಶಕ್ತಿ ಬಳಸಿ ಹೊರ್ಮುಜ್ ಜಲಸಂಧಿಯನ್ನು ಜಾಗತಿಕ ಹಡಗುಗಳ ಸಂಚಾರಕ್ಕೆ ಮುಕ್ತಗೊಳಿಸುವ ಪ್ರಸ್ತಾವವನ್ನು ರಷ್ಯಾ ಮತ್ತು ಚೀನಾ ವಿರೋಧದ ಮಧ್ಯೆಯೂ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಮತಕ್ಕೆ ಹಾಕಲು ನಿರ್ಧರಿಸಲಾಗಿದೆ.

ಪಶ್ಚಿಮ ಏಷ್ಯಾದಲ್ಲಿ ಸಂಘರ್ಷ ಸೃಷ್ಟಿಯಾದ ನಂತರ ಹೊರ್ಮುಜ್ ಜಲಸಂಧಿಯನ್ನು ಇರಾನ್ ಮುಚ್ಚಿದೆ. ವಿಶ್ವದ ಐದನೇ ಒಂದರಷ್ಟು ತೈಲ ಈ ಮಾರ್ಗದಿಂದ ಸಾಗಣೆಯಾಗುತ್ತದೆ. ಹಡಗು ಸಂಚಾರಕ್ಕೆ ಆದ ಅಡ್ಡಿಯ ಪರಿಣಾಮ ಜಾಗತಿಕವಾಗಿ ತೈಲ ಬೆಲೆಯು ಭಾರಿ ಏರಿಕೆ ಮತ್ತು ಆರ್ಥಿಕತೆಯ ಕುಸಿತಕ್ಕೆ ಕಾರಣವಾಗಿದೆ.

ಹೊರ್ಮುಜ್ ಜಲಸಂಧಿಯನ್ನು ಸೇನಾ ಪಡೆ ಬಳಸಿ ಮುಕ್ತಗೊಳಿಸುವ ಪ್ರಸ್ತಾವ ಇದಾಗಿದೆ. ಆದರೆ ಭದ್ರತಾ ಮಂಡಳಿಯಲ್ಲಿ ವಿಟೋ ಅಧಿಕಾರ ಹೊಂದಿರುವ 5 ಸದಸ್ಯ ರಾಷ್ಟ್ರಗಳ ಪೈಕಿ ಚೀನಾ ಮತ್ತು ರಷ್ಯಾ ಸೇನಾ ಬಲ ಬಳಕೆಗೆ ವಿರೋಧ ವ್ಯಕ್ತಪಡಿಸಿವೆ. ಇದರ ಮಧ್ಯೆಯೂ ‘ಬಹರೇನ್ ಪ್ರಸ್ತಾವ’ದ ಕರಡು ಅಂತಿಮಗೊಂಡಿದೆ.

ಯಾವುದೇ ಹಾನಿ ಮಾಡದೇ ರಕ್ಷಣಾತ್ಮಕವಾಗಿ ಪಡೆಗಳನ್ನು ಬಳಸಬೇಕು ಎಂಬ ಅಂಶ ಪ್ರಸ್ತಾವದಲ್ಲಿದೆ. ಬಹುರಾಷ್ಟ್ರೀಯ ನೌಕಾ ಪಾಲುದಾರಿಕೆ ಹೊಂದಿರುವ ದೇಶಗಳು ‘ಹೊರ್ಮುಜ್ ಜಲಸಂಧಿ, ಕೊಲ್ಲಿ ಮತ್ತು ಗಲ್ಫ್ ಆಫ್ ಒಮನ್’ನಲ್ಲಿ ಹಡಗುಗಳ ಮುಕ್ತ ಸಂಚಾರಕ್ಕೆ ‘ಎಲ್ಲ ಅಗತ್ಯ ವಿಧಾನ ಅನುಸರಿಸಲು ಅವಕಾಶ ಕಲ್ಪಿಸುತ್ತದೆ’. ವಿಶ್ವಸಂಸ್ಥೆ ಪ್ರಕಾರ ಸೇನಾ ಕಾರ್ಯಾಚರಣೆಯು ಸಾಧ್ಯತೆಯೂ ಇದರಲ್ಲಿದೆ.

ಕನಿಷ್ಠ ಆರು ತಿಂಗಳವರೆಗಾದರೂ ಈ ಮಾರ್ಗವನ್ನು ಅಂತರರಾಷ್ಟ್ರೀಯ ಹಡಗು ಸಂಚಾರಕ್ಕೆ ಸುರಕ್ಷಿತಗೊಳಿಸಲು ಹೇಗೆ ಹೊಣೆ ರಾಷ್ಟ್ರಗಳು ಎಲ್ಲ ರೀತಿಯ ರಕ್ಷಣಾತ್ಮಕ ಕ್ರಮ ಕೈಗೊಳ್ಳಬಹುದು. ಈ ಬಗ್ಗೆ ‘ಮುಂಚಿತವಾಗಿ ಭದ್ರತಾ ಮಂಡಳಿಯ ಗಮನಕ್ಕೆ ತರಬೇಕು’ ಎಂಬ ಅಂಶ ಪ್ರಸ್ತಾವದಲ್ಲಿದೆ.

ಕೊರಿಯಾ, ಫ್ರಾನ್ಸ್ ಕಡೆಯಿಂದ ಯತ್ನ

ದುಬೈ: ಹೊರ್ಮುಜ್ ಜಲಸಂಧಿಯನ್ನು ಮುಕ್ತಗೊಳಿಸಲು ಪ್ರಯತ್ನಿಸುವುದಾಗಿ ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರನ್ ಹಾಗೂ ದಕ್ಷಿಣ ಕೊರಿಯಾ ಅಧ್ಯಕ್ಷ ಲೀ ಜೆ ಮ್ಯುಂಗ್ ಹೇಳಿದ್ದಾರೆ. ದಕ್ಷಿಣ ಕೊರಿಯಾದ ಸೋಲ್‌ನಲ್ಲಿ ನಡೆದ ಸಭೆಯ ಬಳಿಕ ಅವರು ಈ ವಿಷಯ ತಿಳಿಸಿದ್ದಾರೆ.

ಹೊರ್ಮುಜ್ ಜಲಸಂಧಿಯನ್ನು ಸಹಕಾರ ಮತ್ತು ಸಮನ್ವಯ ವಿಧಾನದ ಮೂಲಕ ತೆರವುಗೊಳಿಸಲು ಯತ್ನಿಸುವುದಾಗಿ ಅವರು ಹೇಳಿದ್ದಾರೆ.

‘ಸೇನಾ ಕಾರ್ಯಾಚರಣೆ ಮೂಲಕ ಜಲಸಂಧಿಯನ್ನು ವಶಕ್ಕೆ ಪಡೆಯುವುದು ಸೂಕ್ತವಲ್ಲ. ಅದರಿಂದ ಮುಂದೆ ಸಾಕಷ್ಟು ಸಮಸ್ಯೆಗಳು ಎದುರಾಗಬಹುದು. ಈ ಮಾರ್ಗದಲ್ಲಿ ಸಾಗುವ ಹಡಗುಗಳಿಗೆ ಇರಾನ್‌ನ ರೆವಲ್ಯೂಷನರಿ ಗಾರ್ಡ್ ಕಡೆಯಿಂದ ಬೆದರಿಕೆಗಳು ಬರಬಹುದು. ಹೀಗಾಗಿ ಇರಾನ್ ಜತೆಗೆ ಸಮನ್ವಯ ಸಾಧಿಸುವ ಮೂಲಕವೇ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವುದು ಸೂಕ್ತ’ ಎಂದು ಮ್ಯಾಕ್ರನ್ ಅಭಿಪ್ರಾಯಪಟ್ಟಿದ್ದಾರೆ.

ಇಟಲಿ ಪ್ರಧಾನಿ ಸೌದಿ ಭೇಟಿ

ರೋಮ್ (ಎಎಫ್‌ಪಿ): ಹೆಚ್ಚುತ್ತಿರುವ ಇಂಧನ ಸಮಸ್ಯೆ ಕುರಿತು ಚರ್ಚಿಸಲು ಇಟಲಿಯ ಪ್ರಧಾನಿ ಜಾರ್ಜಿಯಾ ಮೆಲೋನಿ ಶುಕ್ರವಾರ ಸೌದಿ ಅರೇಬಿಯಾ ಪ್ರವಾಸ ಕೈಗೊಂಡಿದ್ದಾರೆ.

ಪಶ್ಚಿಮ ಏಷ್ಯಾದಲ್ಲಿ ಸಂಘರ್ಷ ಆರಂಭವಾದ ಬಳಿಕ ಆ ಪ್ರದೇಶಕ್ಕೆ ಭೇಟಿ ನೀಡಿರುವ ಐರೋಪ್ಯ ಒಕ್ಕೂಟ ಅಥವಾ ನ್ಯಾಟೊ ದೇಶಗಳ ಮೊದಲ ನಾಯಕಿ ಆಗಿದ್ದಾರೆ. ಮೆಲೋನಿ ಅವರು ಸೌದಿ ಅರೇಬಿಯಾ, ಕತಾರ್, ಯುಎಇ ನಾಯಕರ ಜತೆ ಮಾತುಕತೆ ನಡೆಸಲಿದ್ದಾರೆ.

ನಕ್ಸಲ್ ನಾಯಕ ಪ್ರಶಾಂತ್ ಬೋಸ್ ನಿಧನ

ರಾಂಚಿ(ಪಿಟಿಐ): ನಾಲ್ಕು ವರ್ಷಗಳಿಂದ ಜಾರ್ಖಂಡ್‌ನ ಬಿರ್ಸಾ ಮುಂಡಾ ಜೈಲಿನಲ್ಲಿದ್ದ ನಕ್ಸಲ್ ನಾಯಕ ಪ್ರಶಾಂತ್ ಬೋಸ್ (80) ಇಲ್ಲಿನ ರಾಜೇಂದ್ರ ವೈದ್ಯಕೀಯ ವಿಜ್ಞಾನಿಗಳ ಸಂಸ್ಥೆಯಲ್ಲಿ ಶುಕ್ರವಾರ ನಿಧನರಾದರು ಎಂದು ಪೊಲೀಸರು ತಿಳಿಸಿದರು.

ಪ್ರಶಾಂತ್ ಅವರು, ಕಿಶನ್ ದಾ ಎಂಬ ಹೆಸರಿನಿಂದಲೇ ಗುರುತಿಸಿಕೊಂಡಿದ್ದರು. ಜೈಲಿನಲ್ಲಿದ್ದ ಅವರ ಆರೋಗ್ಯ ಶುಕ್ರವಾರ ಬೆಳಿಗ್ಗೆ ಹದಗೆಟ್ಟಿತ್ತು. ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅಲ್ಲಿ ಅವರು ನಿಧನರಾದರು’ ಎಂದು ರಾಂಚಿ ಎಸ್‌ಎಸ್‌ಪಿ ರಾಕೇಶ್ ರಂಜನ್ ತಿಳಿಸಿದ್ದಾರೆ.

'ಮನೀಶ್' ಮತ್ತು 'ಬುದ್ಧ' ಎಂಬ ಅಡ್ಡ ಹೆಸರುಗಳಿಂದಲೂ ಬೋಸ್ ಅವರನ್ನು ಕರೆಯಲಾಗುತ್ತಿತ್ತು. ನವೆಂಬರ್ 12, 2021ರಂದು ಸೆರೈಕೆಲಾ-ಖರ್ಸಾವಾಂ ಜಿಲ್ಲೆಯಲ್ಲಿ ಪತ್ನಿ ಶೀಲಾ ಮರಾಂಡಿ ಅವರ ಜತೆಗೆ ಬಂಧಿಸಲಾಗಿತ್ತು. ಬಂಧನಕ್ಕೂ ಮುನ್ನ ಅವರನ್ನು ಹಿಡಿದುಕೊಟ್ಟವರಿಗೆ ತಲಾ ₹1 ಕೋಟಿ ಬಹುಮಾನ ಘೋಷಿಸಲಾಗಿತ್ತು.

ಇರಾನ್ ಸೇತುವೆ ಮೇಲೆ ಅಮೆರಿಕ ದಾಳಿ

ಒಂದನೇ ಪುಟದಿಂದ...

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಇರಾನ್ ಮೇಲೆ ದಾಳಿಯನ್ನು ತೀವ್ರಗೊಳಿಸಿ, ಅದನ್ನು ಶಿಲಾಯುಗದ ಸ್ಥಿತಿಗೆ ಕಳುಹಿಸುವುದಾಗಿ ಪುನರುಚ್ಚರಿಸಿದ ಬೆನ್ನಲ್ಲೇ ಈ ದಾಳಿ ನಡೆದಿದೆ.

ಈ ಸೇತುವೆಯ ಪ್ರಮುಖ ಭಾಗಗಳು ಕುಸಿದು ಬೀಳುತ್ತಿರುವುದನ್ನು ತೋರಿಸುವ ವಿಡಿಯೊಗಳು ಸಾಮಾಜಿಕ ಮಾಧ್ಯಮಗಳಲ್ಲಿ ಬಿತ್ತರವಾಗಿವೆ. ಅಲ್ಲದೆ, ಈ ಸೇತುವೆಯಿಂದ ಹೊಗೆ ಬರುತ್ತಿರುವ ದೃಶ್ಯಗಳನ್ನು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸಹ ಪೋಸ್ಟ್ ಮಾಡಿದ್ದು, ಯುದ್ಧ ಕೊನೆಗೊಳಿಸಲು ಇರಾನ್ ಮಾತುಕತೆಗೆ ಬರದಿದ್ದರೆ ಇನ್ನಷ್ಟು ವಿನಾಶ ಸಂಭವಿಸುತ್ತದೆ ಎಂದು ಎಚ್ಚರಿಕೆ ನೀಡಿದ್ದಾರೆ.

‘ಇರಾನ್‌ನ ಅತಿದೊಡ್ಡ ಸೇತುವೆ ಉರುಳಿದೆ, ಅದನ್ನು ಮತ್ತೆಂದೂ ಬಳಸಲಾಗದು. ಮುಂದೆ ಇನ್ನೂ ಹೆಚ್ಚಿನ ಹಾನಿ ಆಗಲಿದೆ. ಇನ್ನಷ್ಟು ಸೇತುವೆಗಳು, ವಿದ್ಯುತ್ ಸ್ಥಾವರಗಳು ಗುರಿಯಾಗಲಿವೆ. ಹೀಗಾಗಿ ಮತ್ತಷ್ಟು ತಡವಾಗುವ ಮೊದಲು ಇರಾನ್ ಒಪ್ಪಂದಕ್ಕೆ ಬರುವುದು ಸೂಕ್ತ. ಅದಕ್ಕೆ ಇದು ಸರಿಯಾದ ಸಮಯ’ ಎಂದು ಟ್ರಂಪ್ ಪೋಸ್ಟ್‌ನಲ್ಲಿ ಉಲ್ಲೇಖಿಸಿದ್ದಾರೆ.



ಇರಾನ್‌ನ ಕರಾಜ್ ನಗರದಲ್ಲಿರುವ ಎತ್ತರದ ಸೇತುವೆ ಮೇಲೆ ಅಮೆರಿಕ ಮತ್ತು ಇಸ್ರೇಲ್ ವೈಮಾನಿಕ ದಾಳಿ ನಡೆಸಿದ್ದು, ಸೇತುವೆ ಭಾಗಶಃ ನಾಶವಾಗಿದೆ –ಎಪಿ

‘8 ಸೇತುವೆಗಳನ್ನೂ ಗುರಿಯಾಗಿಸುತ್ತೇವೆ’: ಅಮೆರಿಕ, ಇಸ್ರೇಲ್ ದಾಳಿಗೆ ಪ್ರತೀಕಾರವಾಗಿ ಕುವೈತ್‌ನ ಶೇಖ್ ಜಾಬರ್ ಅಲ್–ಅಹ್ಮದ್ ಅಲ್–ಸಬಾ ಸಮುದ್ರ ಸೇತುವೆ; ಯುಎಇ ಅಲ್ಲಿರುವ ಶೇಖ್ ಜಾಯೆದ್ ಸೇತುವೆ, ಅಲ್ ಮಕ್ತಾ ಸೇತುವೆ ಮತ್ತು ಶೇಖ್ ಖಲೀಫಾ ಸೇತುವೆ; ಸೌದಿ ಅರೇಬಿಯಾವನ್ನು ಬಹರೇನ್‌ಗೆ ಸಂಪರ್ಕಿಸುವ ಕಿಂಗ್ ಫಹದ್ ಕಾಸ್‌ವೇ; ಜೋರ್ಡಾನ್‌ನಲ್ಲಿರುವ ಕಿಂಗ್ ಹುಸೇನ್ ಸೇತುವೆ, ಡಾಮಿಯಾ ಸೇತುವೆ ಮತ್ತು ಅಬ್ದೌನ್ ಸೇತುವೆಗಳನ್ನು ಗುರಿಯಾಗಿಸಲಿದ್ದೇವೆ ಎಂದು ಇರಾನ್ ಹೇಳಿದೆ.

‘ಅಪೂರ್ಣ ಸೇತುವೆಗಳು ಸೇರಿದಂತೆ ನಾಗರಿಕರ ಸೌಲಭ್ಯಗಳನ್ನು ಹೊಡೆದು, ಇರಾನಿಯರನ್ನು ಶರಣಾಗುವಂತೆ ಮಾಡುತ್ತೇವೆ ಎಂಬುದೆಲ್ಲ ಅವರ ಭ್ರಮೆ. ಇದು ಗೊಂದಲದಲ್ಲಿರುವ ಶತ್ರುವಿನ ಸೋಲು ಮತ್ತು ನೈತಿಕ ಕುಸಿತವನ್ನು ತೋರಿಸುತ್ತದೆ’ ಎಂದು ಇರಾನ್‌ನ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಪೋಸ್ಟ್‌ನಲ್ಲಿ ಹೇಳಿದ್ದಾರೆ.

ಕುವೈತ್ ತೈಲ ಘಟಕದ ಮೇಲೆ ದಾಳಿ: ಅಮೆರಿಕಕ್ಕೆ ನೆರವು ನೀಡುತ್ತಿರುವ ಆರೋಪದ ಮೇಲೆ ಪಶ್ಚಿಮ ಏಷ್ಯಾ ಮತ್ತು ಕೊಲ್ಲಿಯಲ್ಲಿನ ಅದರ ಮಿತ್ರ ದೇಶಗಳ ಮೇಲೆ ಇರಾನ್ ಶುಕ್ರವಾರ ದಾಳಿಯನ್ನು ತೀವ್ರಗೊಳಿಸಿದ್ದು, ಕುವೈತ್‌ನ ತೈಲ ಸಂಸ್ಕರಣಾಗಾರದ ಮೇಲೆ ಡ್ರೋನ್‌ಗಳ ದಾಳಿ ನಡೆಸಿದೆ.

ಕುವೈತ್‌ನ ಮಿನಾ ಅಲ್– ಅಹ್ಮದಿ ತೈಲ ಸಂಸ್ಕರಣಾಗಾರದ ಮೇಲೆ ಶುಕ್ರವಾರ ಮುಂಜಾನೆ ಇರಾನ್ ಡ್ರೋನ್‌ಗಳ ಮೂಲಕ ದಾಳಿ ನಡೆಸಿದೆ. ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸುವ ಕಾರ್ಯದಲ್ಲಿ ತೊಡಗಿದ್ದಾರೆ. ಯಾವುದೇ ಸಾವು, ನೋವಿನ ವರದಿಯಾಗಿಲ್ಲ.

ಇರಾನ್ ಪ್ರತಿಪಾದನೆ ಅಲ್ಲಗಳೆದ ಅಮೆರಿಕ: ಅಮೆರಿಕದ ಬಲಿಷ್ಠವಾದ ಎರಡು ಎಫ್–35 ಸ್ಟೆಲ್ತ್ ಫೈಟರ್ ಜೆಟ್‌ಗಳನ್ನು ಇರಾನ್‌ನ ಐಆರ್‌ಜಿಸಿ 24 ಗಂಟೆಗಳಲ್ಲಿ ಹೊಡೆದುರುಳಿಸಿದೆ ಎಂದು ಇರಾನ್‌ನ ಮಾಧ್ಯಮಗಳು ವರದಿ ಮಾಡಿವೆ. ವಿಮಾನದ ಅವಶೇಷಗಳ ಚಿತ್ರಗಳನ್ನು ತಸ್ನಿಮ್ ಸುದ್ದಿಸಂಸ್ಥೆ ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಂಡಿದೆ.

ಆದರೆ ಈ ಕುರಿತ ವರದಿಗಳನ್ನು ಅಲ್ಲಗಳೆದಿರುವ ಅಮೆರಿಕದ ಸೆಂಟ್ರಲ್ ಕಮಾಂಡ್, ‘ಇರಾನ್‌ನ ಐಆರ್‌ಜಿಸಿ ಈ ರೀತಿ ಅರ್ಧ ಡಜನ್‌ಗೂ ಹೆಚ್ಚು ಸುಳ್ಳು ಹೇಳಿಕೆಗಳನ್ನು ನೀಡಿದೆ’ ಎಂದಿದೆ.

‘ನೈರುತ್ಯ ಇರಾನ್‌ನಲ್ಲಿ ಅಮೆರಿಕದ ಯುದ್ಧ ವಿಮಾನದ (ಎಫ್–15) ಪೈಲಟ್ ವಿಮಾನದಿಂದ ಜಿಗಿದಿದ್ದಾರೆ. ಅವರನ್ನು ಸೆರೆ ಹಿಡಿದು ಪೊಲೀಸ್ ಅಥವಾ ಸೇನಾ ಪಡೆಗಳಿಗೆ ಜೀವಂತವಾಗಿ ಒಪ್ಪಿಸಿದರೆ, ಬಹುಮಾನ ದೊರೆಯಲಿದೆ’ ಎಂದು ಇರಾನ್‌ನ ಸ್ಥಳೀಯ ಮಾಧ್ಯಮದ ನಿರೂಪಕರೊಬ್ಬರು ಪ್ರಕಟಿಸಿದ್ದಾರೆ. ಇದರ ಬೆನ್ನಲ್ಲೇ ಒಬ್ಬ ಪೈಲಟ್ ಅನ್ನು ರಕ್ಷಿಸಲಾಗಿದ್ದು, ಇನ್ನೊಬ್ಬರ ಪತ್ತೆ ಶೋಧ ಮುಂದುವರಿದೆ ಎಂದು ಅಮೆರಿಕದ ಅಧಿಕಾರಿಗಳು ತಿಳಿಸಿದ್ದಾರೆ.

‘ರಾಜಕೀಯ ಲಾಭಕ್ಕಾಗಿ ವಿಶೇಷ ಅಧಿವೇಶನ’

ನವದೆಹಲಿ (ಪಿಟಿಐ): ‘ಮಹಿಳಾ ಮೀಸಲಾತಿ ಹಾಗೂ ಕ್ಷೇತ್ರಗಳ ಪುನರ್ ವಿಂಗಡಣೆಗೆ ಸಂಬಂಧಿಸಿ ಕಾನೂನಿಗೆ ತಿದ್ದುಪಡಿ ತರಲು ಕೇಂದ್ರ ಸರ್ಕಾರವು ವಿಶೇಷ ಅಧಿವೇಶನ ಕರೆಯುವ ಮೂಲಕ ಪಶ್ಚಿಮ ಬಂಗಾಳ, ತಮಿಳುನಾಡು ವಿಧಾನಸಭಾ ಚುನಾವಣೆಯಲ್ಲಿ ರಾಜಕೀಯ ಲಾಭ ಪಡೆಯಲು ಯತ್ನಿಸುತ್ತಿದೆ. ಇದು ಚುನಾವಣಾ ನೀತಿ ಸಂಹಿತೆಯ ಸ್ಪಷ್ಟ ಉಲ್ಲಂಘನೆಯಾಗಿದೆ’ ಎಂದು ಕಾಂಗ್ರೆಸ್ ಆರೋಪಿಸಿದೆ.



ಜೈರಾಮ್ ರಮೇಶ್

‘ಸರ್ಕಾರ ಆತುರವಾಗಿ ಕ್ಷೇತ್ರ ಪುನರ್ ವಿಂಗಡಣೆ ಮಾಡುವಲ್ಲಿ ಹೊರಟರೆ ಗಂಭೀರ ಪರಿಣಾಮ ಉಂಟುಮಾಡಲಿದೆ. ಈಗಿನ ವ್ಯವಸ್ಥೆಗೆ ಯಾವುದೇ ಅಡೆತಡೆ ಉಂಟು ಮಾಡಬಾರದು’ ಎಂದು ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ತಿಳಿಸಿದ್ದಾರೆ.

‘2023ರ ‘ನಾರಿ ಶಕ್ತಿ ವಂದನಾ ಕಾಯ್ದೆ’ (ಮಹಿಳಾ ಮೀಸಲಾತಿ ಕಾಯ್ದೆ) ಜಾರಿಗೆ ತಂದಿದ್ದ ಕೇಂದ್ರ ಸರ್ಕಾರ 30 ತಿಂಗಳು ನಿದ್ದೆಗೆ ಜಾರಿತ್ತು. ಚುನಾವಣಾ ಸಂದರ್ಭದಲ್ಲಿ ‘ದುಪ್ಪಟ್ಟು ಶ್ರೇಯ’ ಪಡೆಯುವ ಉದ್ದೇಶದಿಂದ ತಿದ್ದುಪಡಿ ತರಲು ಮುಂದಾಗಿದೆ. ಕ್ಷೇತ್ರ ಪುನರ್ ವಿಂಗಡಣೆಗೆ ಸಂಬಂಧಿಸಿದಂತೆ, ಅಧಿಕೃತವಾಗಿ ಯಾವುದೇ ಮಾಹಿತಿ ಹಾಗೂ ಪ್ರಸ್ತಾವ ತಲುಪಿಲ್ಲ’ ಎಂದು ತಿಳಿಸಿದ್ದಾರೆ.

‘ಆದಾಗ್ಯೂ, ಲೋಕಸಭೆಯಲ್ಲಿ ಕ್ಷೇತ್ರಗಳ ಸಂಖ್ಯೆಯೂ ಹೆಚ್ಚಾಗುವ ಸಾಧ್ಯತೆಯಿದೆ ಎಂದು ನಮಗೆ ತಿಳಿದುಬಂದಿದೆ’ ಎಂದು ಪತ್ರಿಕಾಗೋಷ್ಠಿಯಲ್ಲಿ ದೂರಿದ್ದಾರೆ.

‘ಕ್ಷೇತ್ರಗಳ ಪುನರ್ ವಿಂಗಡಣೆಯಾದರೆ, ವಾಸ್ತವದಲ್ಲಿ ದಕ್ಷಿಣ, ಈಶಾನ್ಯ ಹಾಗೂ ಪಶ್ಚಿಮದ ರಾಜ್ಯಗಳು ಹಾಗೂ ಸಣ್ಣ ರಾಜ್ಯಗಳು ತೀವ್ರ ತೊಂದರೆಗೆ ಒಳಗಾಗಲಿವೆ. ಉತ್ತರ ಪ್ರದೇಶದಲ್ಲಿ ಲೋಕಸಭೆಯ ಸಂಸದರ ಸಂಖ್ಯೆ 120ಕ್ಕೆ ಏರಿಕೆಯಾಗಲಿದ್ದು, ಕೇರಳದಲ್ಲಿ ಹೆಚ್ಚೆಂದರೆ 40ಕ್ಕೆ ಏರಿಕೆಯಾಗಬಹುದು. ನಾವು ಇದುವರೆಗೂ ಅನಧಿಕೃತವಾಗಿ ಕೇಳಿದ ಮಾಹಿತಿಯೂ ಹಲವು ರಾಜ್ಯಗಳ ಮೇಲೆ ಗಂಭೀರ ಪರಿಣಾಮ ಬೀರಲಿದೆ’ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

‘ಸರ್ಕಾರವು ಈ ವಿಚಾರದಲ್ಲಿ ಆತುರದ ನಿರ್ಧಾರ ತೆಗೆದುಕೊಳ್ಳಬಾರದು. ಏಪ್ರಿಲ್ 29ರ ನಂತರ ಸರ್ವಪಕ್ಷಗಳ ಸಭೆ ಕರೆದು ಚರ್ಚೆ ನಡೆಸಬೇಕು’ ಎಂದು ಆಗ್ರಹಿಸಿದ್ದಾರೆ.

ಕ್ಷೇತ್ರ ಮರುವಿಂಗಡಣೆಗೆ 2027ರ ಜನಗಣತಿ ಆಗುವವರೆಗೂ ಕಾಯದೆ, 2011ರ ಜನಗಣತಿಯ ಆಧಾರದಲ್ಲೇ ಮಾಡಲಾಗುತ್ತಿದೆ ಮತ್ತು ಮಹಿಳೆಯರಿಗೆ ಶೇ 33ರಷ್ಟು ಮೀಸಲಾತಿ ಕಲ್ಪಿಸುವ ಮಸೂದೆ ತರಲು ಸರ್ಕಾರ ಈ ತಿಂಗಳ ಎರಡನೇ ವಾರದಲ್ಲಿ ವಿಶೇಷ ಅಧಿವೇಶನ ಕರೆಯಲು ನಿರ್ಧರಿಸಿದೆ.

ಏ.9ರಂದು ಸಂಸದರ ಸಭೆ

ಎರಡು ವಿಚಾರಗಳಿಗೆ ಸಂಬಂಧಿಸಿ ಚರ್ಚಿಸಿ, ನಿರ್ಧಾರ ಕೈಗೊಳ್ಳುವ ನಿಟ್ಟಿನಲ್ಲಿ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಏಪ್ರಿಲ್ 9ರಂದು ಪಕ್ಷದ ಹಿರಿಯ ಸಂಸದರ ಸಭೆ ಕರೆದಿದ್ದಾರೆ.

ಏಪ್ರಿಲ್ 16ರಂದು ಸಂಸತ್ ಅಧಿವೇಶನ ನಡೆಯುವ ಮುನ್ನ ವಿರೋಧ ಪಕ್ಷಗಳ ನಾಯಕರ ಜೊತೆಗೂ ಚರ್ಚೆ ನಡೆಸಲಿದ್ದಾರೆ.

‘ಏಪ್ರಿಲ್ 29ರಂದು ಐದು ರಾಜ್ಯಗಳ ಚುನಾವಣೆ ಮುಗಿದ ನಂತರವೇ ಸರ್ವಪಕ್ಷಗಳ ಸಭೆ ಕರೆಯುವಂತೆ ವಿರೋಧ ಪಕ್ಷಗಳು ಸರ್ವಾನುಮತದಿಂದ ತಿಳಿಸಿದ್ದವು. ಆದರೆ, ಕೇಂದ್ರ ಸರ್ಕಾರವು ಈ ವಿಚಾರದಲ್ಲಿ ಶ್ರೇಯ ಪಡೆದುಕೊಳ್ಳಲು ಮುಂಚಿತವಾಗಿ ಅಧಿವೇಶನ ನಡೆಸಿ, ಏಕಪಕ್ಷೀಯ ನಿರ್ಧಾರ ತೆಗೆದುಕೊಂಡಿದೆ’ ಎಂದು ಜೈರಾಮ್ ರಮೇಶ್ ದೂರಿದ್ದಾರೆ.

ಲಖನೌ: ನಾಲ್ವರು ಶಂಕಿತ ಉಗ್ರರ ಬಂಧನ

ಲಖನೌ (ಪಿಟಿಐ): ರೈಲ್ವೆ ಮೂಲಸೌಕರ್ಯ ಸೇರಿದಂತೆ ದೇಶದ ಪ್ರಮುಖ ತಾಣಗಳ ಮೇಲೆ ದಾಳಿಗೆ ಯೋಜನೆ ರೂಪಿಸಿದ ಆರೋಪದಲ್ಲಿ ಶಂಕಿತ ಭಯೋತ್ಪಾದನಾ ಜಾಲದ ನಾಲ್ವರನ್ನು ಉತ್ತರ ಪ್ರದೇಶದ ಭಯೋತ್ಪಾದಕ ನಿಗ್ರಹ ದಳ (ಎಟಿಎಸ್) ಶುಕ್ರವಾರ ಬಂಧಿಸಿದೆ.

ಪಾಕಿಸ್ತಾನದ ಹ್ಯಾಂಡ್ಲರ್‌ಗಳ ಸೂಚನೆಯ ಮೇರೆಗೆ ಕಾರ್ಯಾಚರಿಸುತ್ತಿರುವ ಜಾಲದ ಸದಸ್ಯರನ್ನು ಗುಪ್ತಚರ ಮಾಹಿತಿಯ ಆಧಾರದಲ್ಲಿ ಬಂಧಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮೀರತ್‌ನ ನಿವಾಸಿಗಳಾದ ಸಾಕಿಬ್ ಅಲಿಯಾಸ್ ‘ಡೆವಿಲ್’ (25) ಹಾಗೂ ಅರ್ಬಾಬ್ (20), ಗೌತಮ ಬುದ್ಧ ನಗರದ ನಿವಾಸಿಗಳಾದ ವಿಕಾಸ್ ಗೆಹಲೋತ್ ಅಲಿಯಾಸ್ ರೌನಕ್ (27) ಮತ್ತು ಲೋಕೇಶ್ ಅಲಿಯಾಸ್ ಪಪ್ಪಾ ಪಂಡಿತ್ (19) ಬಂಧಿತರು.

ಶಬರಿಮಲೆ: ‘ಸುಪ್ರೀಂ’ ಮಧ್ಯಸ್ಥಿಕೆಗೆ ಮನವಿ

ನವದೆಹಲಿ (ಪಿಟಿಐ): ಧಾರ್ಮಿಕ ಆಚರಣೆಯು ಅನುಯಾಯಿಗಳ ನಂಬಿಕೆಯ ವಿಚಾರ. ಹೀಗಾಗಿ ಈ ಬಗ್ಗೆ ನ್ಯಾಯಾಲಯಗಳು ನಿರ್ಧರಿಸಬಾರದು ಎಂದು ಅಖಿಲ ಭಾರತೀಯ ಸಂತ ಸಮಿತಿಯು ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ. ಇದೇ ವೇಳೆ ಶಬರಿಮಲೆ ಪರಿಶೀಲನಾ ಪ್ರಕ್ರಿಯೆಯಲ್ಲಿ ಮಧ್ಯಸ್ಥಿಕೆ ವಹಿಸುವಂತೆ ಅದು ಮನವಿ ಮಾಡಿದೆ.

ಧಾರ್ಮಿಕ ವಿಚಾರಗಳಲ್ಲಿ ‘ಪರಿಣತಿಯಿಂದ’ ಕಾರ್ಯನಿರ್ವಹಿಸಲು ನ್ಯಾಯಾಲಯಗಳನ್ನು ಅಣಿಗೊಳಿಸಿಲ್ಲ. ಧಾರ್ಮಿಕ ಆಚರಣೆಯ ಹಕ್ಕನ್ನು ಹತ್ತಿಕ್ಕಲು ಸಮಾನತೆಯ ಹಕ್ಕನ್ನು ಬಳಕೆ ಮಾಡಬಾರದು ಎಂದು ಅದು ಪ್ರತಿಪಾದಿಸಿದೆ.

‘ತರಬೇತಿಯಲ್ಲಿ ಅಂಗವೈಕಲ್ಯಕ್ಕೆ ಒಳಗಾದವರಿಗೆ ಮಾಜಿ ಸೈನಿಕರ ಸ್ಥಾನಮಾನ ನೀಡಬಹುದೆ?’

ಅಂಗವಿಕಲ ಕೆಡೆಟ್‌ಗಳಿಗೆ ಉದ್ಯೋಗ– ‘ಸುಪ್ರೀಂ’ ಒಲವು

ನವದೆಹಲಿ (ಪಿಟಿಐ): ‘ತರಬೇತಿಯ ಸಮಯದಲ್ಲಿ ಅಂಗವೈಕಲ್ಯಕ್ಕೆ ಒಳಗಾಗುವ ಸೇನಾ ಕಲಿಕಾರ್ಥಿಗಳಿಗೆ ಮಾಜಿ ಸೈನಿಕರ ಸ್ಥಾನಮಾನ ನೀಡಬಹುದೇ?’ ಎಂದು ಕೇಂದ್ರ ಸರ್ಕಾರವನ್ನು ಸುಪ್ರೀಂ ಕೋರ್ಟ್ ಕೇಳಿದೆ.

ಈ ಕುರಿತು ಸ್ವಯಂಪ್ರೇರಿತ ಅರ್ಜಿ ವಿಚಾರಣೆ ನಡೆಸಿದ ಬಿ.ವಿ.ನಾಗರತ್ನ ಹಾಗೂ ಉಜ್ಜಲ್ ಭುಯಾನ್ ನೇತೃತ್ವದ ನ್ಯಾಯಪೀಠ, ‘ಅಂಗವೈಕಲ್ಯಕ್ಕೆ ಒಳಗಾಗುವ ಸೇನಾ ಕೆಡೆಟ್‌ಗಳು 30 ವರ್ಷದ ಒಳಗಿನವರಾಗಿರುತ್ತಾರೆ. ಅವರಿಗೆ ಉದ್ಯೋಗದ ಅವಶ್ಯಕತೆಯಿದೆ. ಮಾಜಿ ಸೈನಿಕರ ಸ್ಥಾನಮಾನ ನೀಡಿದರೆ, ಸರ್ಕಾರಿ, ಅರೆ ಸರ್ಕಾರಿ ಉದ್ಯೋಗಗಳಲ್ಲಿರುವ ಲಭ್ಯವಿರುವ ಮೀಸಲಾತಿ ಪಡೆಯಲು ಅರ್ಹರಾಗುತ್ತಾರೆ’ ಎಂದು ತಿಳಿಸಿದೆ.



ತರಬೇತಿ ಅವಧಿಯಲ್ಲಿ ಅಂಗವೈಕಲ್ಯತೆಗೆ ಒಳಗಾದ ಕೆಡೆಟ್‌ಗಳ ವೈದ್ಯಕೀಯ ವೆಚ್ಚಕ್ಕಾಗಿ ಈಗ ನೀಡುವ ₹40 ಸಾವಿರ ಮೊತ್ತವನ್ನು ಹೆಚ್ಚಿಸುವ ಕುರಿತಂತೆ ಚಿಂತನೆ ನಡೆಸಬೇಕು. ಅಂಗವೈಕಲ್ಯತೆಗೆ ಒಳಗಾದ ಸೈನಿಕರಿಗೆ ಚಿಕಿತ್ಸೆ ಮುಗಿದ ಬಳಿಕ ಇಲಾಖೆಯ ಇತರೆ ಕೆಲಸಗಳಲ್ಲಿ ಪುನರ್‌ವಸತಿ ಕಲ್ಪಿಸುವ ಯೋಜನೆ ಜಾರಿಗೆ ತರುವಂತೆಯೂ ಕೇಂದ್ರ ಸರ್ಕಾರಕ್ಕೆ ಸೂಚನೆ ನೀಡಿದೆ.

ಕೇಂದ್ರ ಸರ್ಕಾರದ ಪರ ಹಾಜರಾದ ಹೆಚ್ಚುವರಿ ಸಾಲಿಸಿಟರ್ ಜನರಲ್ ಎನ್. ವೆಂಕಟರಾಮನ್, ‘ಈ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರದ ಜೊತೆ ಚರ್ಚಿಸಿ, ಸಮಗ್ರ ಉತ್ತರ ನೀಡಲಾಗುವುದು’ ಎಂದು ತಿಳಿಸಿದ್ದಾರೆ.

‘ಸಜ್ಜಾದಾನಶೀನ್’ ವಕ್ಫ್‌ನ ಆಧ್ಯಾತ್ಮಿಕ ಮುಖ್ಯಸ್ಥ: ‘ಸುಪ್ರೀಂ’

ನವದೆಹಲಿ: ‘ಸಜ್ಜಾದಾನಶೀನ್’ ವಕ್ಫ್‌ನ ಆಧ್ಯಾತ್ಮಿಕ ಮುಖ್ಯಸ್ಥರಾಗಿರುವರು ಮತ್ತು ‘ಸಜ್ಜಾದಾನಶೀನ್’ ನೇಮಕವು ಧಾರ್ಮಿಕ ವಿಷಯವಾಗಿದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

‘ಮುತವಲ್ಲಿ’ ಅವರ ಪಾತ್ರವು ವಕ್ಫ್‌ನ ಆಡಳಿತ ಮತ್ತು ನಿರ್ವಹಣೆಗೆ ಮಾತ್ರ ಸಂಬಂಧಿಸಿದ್ದಾಗಿದೆ ಎಂದು ನ್ಯಾಯಮೂರ್ತಿಗಳಾದ ಎಂ.ಎಂ.ಸುಂದರೇಶ್ ಮತ್ತು ವಿಪುಲ್ ಎಂ.ಪಂಚೋಲಿ ಅವರ ಪೀಠವು ತಿಳಿಸಿದೆ.

1995ರ ವಕ್ಫ್ ಕಾಯ್ದೆಯ ಸೆಕ್ಷನ್ 32(2)(ಜಿ) ಅಡಿಯಲ್ಲಿ ನೇಮಕಗೊಳ್ಳುವ ‘ಸಜ್ಜಾದಾನಶೀನ್’, ‘ಮುತವಲ್ಲಿ’ಯ ಕಾರ್ಯವನ್ನು ನಿರ್ವಹಿಸಬಹುದು. ಆದರೆ, ಸೆಕ್ಷನ್ 32(2)(ಜಿ) ಅಡಿಯಲ್ಲಿ ನೇಮಕಗೊಳ್ಳುವ ‘ಮುತವಲ್ಲಿ’, ‘ಸಜ್ಜಾದಾನಶೀನ್’ ಆಗಿ ಕಾರ್ಯನಿರ್ವಹಿಸಲು ಸಾಧ್ಯವಿಲ್ಲ. ಕಾಯ್ದೆ ಮತ್ತು ನಿಯಮಗಳ ಅಡಿಯಲ್ಲಿ ಸೂಚಿಸಲಾದ ಕರ್ತವ್ಯಗಳನ್ನು ಮಾತ್ರ ನಿರ್ವಹಿಸಬಹುದು ಎಂಬುದನ್ನು ಪೀಠವು ಗಮನಿಸಿತು.

‘ಸಜ್ಜಾದಾನಶೀನ್’ ಮತ್ತು ‘ಮುತವಲ್ಲಿ’ ಹುದ್ದೆಗಳು ಒಂದೇ ಎನ್ನಲಾಗದು ಎಂಬುದನ್ನು ಒತ್ತಿ ಹೇಳಿದ ಪೀಠ, ‘ಮುಸ್ಲಿಮರ ಕಾನೂನು ಪ್ರಕಾರ, ‘ಸಜ್ಜಾದಾನಶೀನ್’ ವಿಶೇಷತೆಯೆಂದರೆ ಈ ಹುದ್ದೆಯಲ್ಲಿರುವ ವ್ಯಕ್ತಿ ತನ್ನ ಉತ್ತರಾಧಿಕಾರಿಯನ್ನು ಆಯ್ಕೆ ಮಾಡುವ ಹಕ್ಕನ್ನು ಹೊಂದಿರುತ್ತಾನೆ. ಬಹುತೇಕ ಪ್ರಕರಣಗಳಲ್ಲಿ ಈ ಹುದ್ದೆ ವಂಶಪಾರಂಪರ್ಯವಾಗಿ ಬರುತ್ತದೆ ಎಂಬುದು ಸ್ಪಷ್ಟವಾಗಿದೆ’ ಎಂದು ಹೇಳಿತು.

ರಾಮನಗರ ಜಿಲ್ಲೆಯ ಚನ್ನಪಟ್ಟಣದಲ್ಲಿರುವ ಹಜರತ್ ಅಖೀಲ್ ಶಾ ಖಾದ್ರಿ ದರ್ಗಾದ ‘ಸಜ್ಜಾದಾನಶೀನ್’ ಹುದ್ದೆಗೆ ಸಂಬಂಧಿಸಿದ ಪ್ರಕರಣದ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ನಡೆಸಿತು.

ಕರ್ನಾಟಕ ಹೈಕೋರ್ಟ್‌ನ 2024ರ ಏಪ್ರಿಲ್ 16ರ ತೀರ್ಪನ್ನು ಪ್ರಶ್ನಿಸಿ ಸೈಯದ್ ಮೊಹಮ್ಮದ್ ಆದಿಲ್ ಪಾಷಾ ಖಾದ್ರಿ ಸಲ್ಲಿಸಿದ್ದ ಮೇಲ್ಮನವಿಯನ್ನು ಕೋರ್ಟ್ ಭಾಗಶಃ ಅಂಗೀಕರಿಸಿತು.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮಾ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಮಿತಿ ಮೀರಿದ ದೇಶಾಭಿಮಾನ ಮೃಗೀಯತೆಗೆ ಸಮಾನ.

–ಕೆ.ಎಸ್. ನಿಸಾರ್ ಅಹಮದ್

ಸಂಪಾದಕೀಯ

ನಕ್ಸಲ್ ಚಳವಳಿಯ ಅಂತ್ಯ 'ಶಾಶ್ವತ ಶಾಂತಿ'ಗೆ ಅವಕಾಶ

'2026ರ ಮಾರ್ಚ್ 31ರೊಳಗೆ ಭಾರತವನ್ನು ನಕ್ಸಲ್ ಮುಕ್ತಗೊಳಿಸಲಾಗುವುದು' ಎಂದು ಎನ್‌ಡಿಎ ನೇತೃತ್ವದ ಕೇಂದ್ರ ಸರ್ಕಾರ ಈ ಹಿಂದೆ ಘೋಷಿಸಿತ್ತು. ಗಡುವು ಕೊನೆಗೊಳ್ಳಲು ಒಂದು ದಿನ ಬಾಕಿ ಇರುವಾಗಲೇ 'ಭಾರತ ಈಗ ನಕ್ಸಲ್ ಮುಕ್ತವಾಗಿದೆ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಲೋಕಸಭೆಯಲ್ಲಿ ಪ್ರಕಟಿಸಿದ್ದಾರೆ. ಇದು, ಬಹುಪಾಲು ನಿಜವೂ ಹೌದು. ಛತ್ತೀಸಗಢ, ತೆಲಂಗಾಣ, ಆಂಧ್ರಪ್ರದೇಶ, ಒಡಿಶಾ, ಮಹಾರಾಷ್ಟ್ರ, ಮಧ್ಯಪ್ರದೇಶ, ಜಾರ್ಖಂಡ್ ಮತ್ತು ಬಿಹಾರ ರಾಜ್ಯಗಳ 200ಕ್ಕೂ ಅಧಿಕ ಜಿಲ್ಲೆಗಳಲ್ಲಿ ನಕ್ಸಲ್ ಚಳವಳಿ ಹಬ್ಬಿತ್ತು. ಶಾ ಅವರ ಹೇಳಿಕೆ ಪ್ರಕಾರ, 'ಕೆಂಪು ಕಾರಿಡಾರ್' ಈಗ ಎರಡು ಜಿಲ್ಲೆಗಳಿಗಷ್ಟೇ ಸೀಮಿತವಾಗಿದೆ. 'ನಕ್ಸಲ್ ಚಳವಳಿಯ ನಿರ್ಣಾಯಕ ಸ್ಥಾನದಲ್ಲಿದ್ದ ಅಗ್ರ 21 ನಾಯಕರಲ್ಲಿ 20 ಮಂದಿಯನ್ನು ತಟಸ್ಥಗೊಳಿಸಲಾಗಿದೆ. 12 ಮಂದಿಯನ್ನು ಹತ್ಯೆ ಮಾಡಲಾಗಿದ್ದರೆ, ಏಳು ಜನ ಶರಣಾಗಿದ್ದಾರೆ. ಮತ್ತೊಬ್ಬರನ್ನು ಬಂಧಿಸಲಾಗಿದೆ' ಎಂದು ಸರ್ಕಾರ ಹೇಳಿಕೊಂಡಿದೆ. ಭದ್ರತಾ ಪಡೆಗಳ ನಿರಂತರ ಶಕ್ತಿ ಪ್ರಯೋಗದ ಪರಿಣಾಮ ನಕ್ಸಲ್ ಚಳವಳಿಯ ಎಲ್ಲ ಹಂತಗಳ ನಾಯಕತ್ವವೂ ಸಂಪೂರ್ಣವಾಗಿ ನೆಲಕಚ್ಚಿದೆ. ಇತ್ತೀಚಿನ ತಿಂಗಳುಗಳಲ್ಲಿ ಯಾವುದೇ ಪ್ರಮುಖ ನಕ್ಸಲ್ ಚಟುವಟಿಕೆಯೂ ವರದಿಯಾಗಿಲ್ಲ.

ನಕ್ಸಲ್‌ವಾದವು ಈಗ ದೇಶದಲ್ಲಿ ಮೊದಲಿನಂತೆ ರಾಜಕೀಯ ಇಲ್ಲವೆ ರಾಷ್ಟ್ರೀಯ ಭದ್ರತಾ ಬೆದರಿಕೆಯಾಗಿ ಉಳಿದಿಲ್ಲ. ಅದರ ಶಕ್ತಿಯಲ್ಲಿ ಆಗಿರುವ ಈ ಪಲ್ಲಟಕ್ಕೆ ಹಲವು ಕಾರಣಗಳಿವೆ. ಮಧ್ಯ ಮತ್ತು ಪೂರ್ವ ಭಾರತದ ಅರಣ್ಯ ಪ್ರದೇಶಗಳಲ್ಲಿ ಬಡತನ, ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆಗಳು ಕೆಲವು ದಶಕಗಳ ಹಿಂದೆ ಇದ್ದಷ್ಟು ಈಗ ತೀವ್ರವಾಗಿಲ್ಲ. ಸರ್ಕಾರದ ಕಲ್ಯಾಣ ಯೋಜನೆಗಳು ಅಂಚಿನಲ್ಲಿರುವ ಬಹುತೇಕ ಸಮುದಾಯಗಳನ್ನು ತಲುಪಿರುವುದು ಕೂಡ ನಿಜ. 'ನಕ್ಸಲ್ ಸಾಮ್ರಾಜ್ಯ'ದ ಬಹುಪಾಲು ಪ್ರದೇಶಗಳಲ್ಲಿ ರಸ್ತೆ ಮತ್ತು ಸಂಪರ್ಕ ಜಾಲ ಸೇರಿದಂತೆ ಮೂಲಸೌಕರ್ಯಗಳಲ್ಲಿ ಸಾಕಷ್ಟು ಸುಧಾರಣೆಗಳು ಆಗಿವೆ. ಈ ಬದಲಾವಣೆಗಳ ಪರಿಣಾಮ, ನಕ್ಸಲ್ ಪೀಡಿತ ಪ್ರದೇಶಗಳು ಮುಖ್ಯವಾಹಿನಿಯೊಂದಿಗೆ ಸಾಮಾಜಿಕ-ಆರ್ಥಿಕ ಸಂಬಂಧಗಳನ್ನು ಸಾಧಿಸುವಂತಾಗಿದೆ. ಹೆಚ್ಚಿದ ಮೂಲಸೌಕರ್ಯಗಳಿಂದಾಗಿ ಭದ್ರತಾ ಪಡೆಗಳು ಹೆಚ್ಚು ಪರಿಣಾಮಕಾರಿಯಾಗಿ ಕಾರ್ಯಾಚರಣೆ ನಡೆಸಲು ಸಾಧ್ಯವಾಗಿದೆ. ಚಳವಳಿಯ ಧ್ವನಿ ಕಳೆದುಕೊಳ್ಳಲು ಹೀಗೆ ಹಲವು ಕಾರಣಗಳನ್ನು ಪಟ್ಟಿ ಮಾಡಬಹುದು. ನಕ್ಸಲ್ ಚಳವಳಿಯು ಇನ್ನುಮುಂದೆ ಸಂಘಟಿತ ಬಂಡುಕೋರ ಶಕ್ತಿಯಾಗಿ ಉಳಿಯದೇ ಇರಬಹುದು. ಆದರೆ, ಚಳವಳಿಯನ್ನು ಸಂಪೂರ್ಣವಾಗಿ ಸೋಲಿಸಲಾಗಿದೆ ಎಂದು ಈಗಲೇ ಘೋಷಿಸುವುದು ಆತುರದ ಕ್ರಮವಾಗಬಹುದು. ಭೂಕಬಳಿಕೆ, ಶೋಷಣೆ, ಆಡಳಿತ ಮತ್ತು ಜನರ ನಡುವಿನ ಅಂತರಗಳು ಭಾರತದಲ್ಲಿ ಇಂದಿಗೂ ವಾಸ್ತವವಾಗಿಯೇ ಉಳಿದಿವೆ. ನಕ್ಸಲ್‌ವಾದದ ಉದಯಕ್ಕೆ ಕಾರಣವಾದ ಸಂದರ್ಭಗಳು ಯಾವುದಾದರೂ ರೂಪದಲ್ಲಿ ಇರುವವರೆಗೆ, ಆ ಸಿದ್ಧಾಂತವು ಚಿಕ್ಕದಾಗಿಯಾದರೂ ಅಸ್ತಿತ್ವದಲ್ಲಿ ಇದ್ದೇ ಇರುತ್ತದೆ.



'ಭಾರತ ಈಗ ನಕ್ಸಲ್ ಮುಕ್ತವಾಗಿದೆ'ಯೆಂದು ಕೇಂದ್ರ ಸರ್ಕಾರ ತಿಳಿಸಿದೆ. ನಕ್ಸಲ್‌ಪೀಡಿತ ಪ್ರದೇಶಗಳ ಜನರಿಗೆ ಯೋಜನೆಗಳ ಸೌಲಭ್ಯ ತಲುಪಿಸುವುದು ಸರ್ಕಾರದ ಹೊಣೆಗಾರಿಕೆಯಾಗಿದೆ.

'ಭಾರತ ಈಗ ನಕ್ಸಲ್ ಮುಕ್ತ' ಘೋಷಣೆಯ ಸಂದರ್ಭವನ್ನು ಶಾ ಅವರು ಎದುರಾಳಿ ಕಾಂಗ್ರೆಸ್ ಪಕ್ಷ, ಮಾಜಿ ಪ್ರಧಾನಿ ಇಂದಿರಾ ಗಾಂಧಿ ಹಾಗೂ ಲೋಕಸಭೆಯ ವಿರೋಧಪಕ್ಷದ ನಾಯಕ ರಾಹುಲ್ ಗಾಂಧಿ ವಿರುದ್ಧ ರಾಜಕೀಯವಾದ ದಾಳಿ ನಡೆಸಲೂ ಬಳಸಿಕೊಂಡಿದ್ದಾರೆ. ಕಾಂಗ್ರೆಸ್ ನೇತೃತ್ವದ ಸರ್ಕಾರಗಳು ನಕ್ಸಲ್ ಚಳವಳಿಯನ್ನು ಬೆಂಬಲಿಸಿದ್ದವು ಎಂಬ ಅವರ ಆರೋಪದಲ್ಲಿ ಸೂಕ್ತ ಸಮರ್ಥನೆಗಳಿಲ್ಲ. 2006ರಲ್ಲಿ, ಅಂದಿನ ಪ್ರಧಾನಿ ಮನಮೋಹನ್ ಸಿಂಗ್ ಅವರು, 'ಕಾಶ್ಮೀರ ಮತ್ತು ಈಶಾನ್ಯ ರಾಜ್ಯಗಳ ಸಮಸ್ಯೆಗಳಿಗಿಂತಲೂ ನಕ್ಸಲ್‌ವಾದವೇ ದೇಶದ ಭದ್ರತೆಗೆ ದೊಡ್ಡ ಸವಾಲು' ಎಂದು ಹೇಳಿದ್ದರು. ಇದುವರೆಗೆ ಆಡಳಿತ ನಡೆಸಿದ ಎಲ್ಲಾ ಸರ್ಕಾರಗಳು ನಕ್ಸಲ್ ಸಿದ್ಧಾಂತದ ವಿರುದ್ಧ, ಅದರ ಸಶಸ್ತ್ರ ಚಳವಳಿಯ ವಿರುದ್ಧ ಹೋರಾಡಿವೆ. ಪ್ರಸ್ತುತ ಸರ್ಕಾರವು, ನಕ್ಸಲ್ ಚಳವಳಿ ವಿರುದ್ಧ ಮಿಲಿಟರಿ ಮತ್ತು ಕಾರ್ಯತಂತ್ರದ ಮೂಲಕ ಮೇಲುಗೈ ಸಾಧಿಸಿದೆ. ಅದರ ಕೆಲವು ವಿಧಾನಗಳ ವಿಷಯವಾಗಿ ಗಂಭೀರವಾದ ಪ್ರಶ್ನೆಗಳನ್ನೂ ಎತ್ತಲಾಗಿದೆ ಎಂಬುದನ್ನು ಮರೆಯುವಂತಿಲ್ಲ. ನಕ್ಸಲ್‌ಪೀಡಿತ ಪ್ರದೇಶಗಳ ಜನರಿಗೆ ಯೋಜನೆಗಳ ಪ್ರಯೋಜನ ಸಮರ್ಪಕವಾಗಿ ಸಿಗುವಂತೆ ಮಾಡುವುದು, ದೇಶದ ಅಭಿವೃದ್ಧಿಯ ಚಕ್ರವು ಅವರನ್ನೂ ಒಳಗೊಳ್ಳುವುದು ಮತ್ತು ಪ್ರಜಾಪ್ರಭುತ್ವದಲ್ಲಿ ತಮಗಿರುವ ಹಕ್ಕುಗಳನ್ನು ಅರಿತುಕೊಳ್ಳಲು ಅವರಿಗೆ ಅನುವು ಮಾಡಿಕೊಡುವುದು ಸದ್ಯ ಮುಂದಿರುವ ದೊಡ್ಡ ಸವಾಲು. ನಕ್ಸಲ್ ಚಳವಳಿಯ ವಿರುದ್ಧದ ನಿರ್ಣಾಯಕ ಹೋರಾಟವೆಂದರೆ ಇದೇ ಆಗಿದೆ.

ಕೇರಳ: ಲೆಕ್ಕ ಬದಲಾದೀತೆ?



ವಿಶ್ಲೇಷಣೆ

ಬಿ.ಎಸ್. ಅರುಣ್

ಸತತ ಎರಡು ಅವಧಿ ಸರ್ಕಾರ ನಡೆಸಿರುವ 'ಎಲ್‌ಡಿಎಫ್' ಮೂರನೇ ಬಾರಿ ಅಧಿಕಾರದ ಗದ್ದುಗೆ ಹಿಡಿಯುವ ತವಕದಲ್ಲಿದ್ದರೆ, ಪುಟಿದೆದ್ದಿರುವ ಕಾಂಗ್ರೆಸ್ 'ದೇವರನಾಡಿ'ನ ಮತದಾರರ ಮನಸ್ಸು ಗೆಲ್ಲುವ ವಿಶ್ವಾಸದಲ್ಲಿದೆ. ಇತ್ತೀಚಿನ ದಿನಗಳಲ್ಲಿ ತನ್ನ ಶಕ್ತಿ ವೃದ್ಧಿಸಿಕೊಂಡಿರುವ ಬಿಜೆಪಿ ಕೂಡ ಪ್ರಸಕ್ತ ಚುನಾವಣೆಯಲ್ಲಿ ಗಣನೀಯ ಸಾಧನೆ ಮಾಡುವ ನಿರೀಕ್ಷೆಯಲ್ಲಿದೆ.

'ದೇವರ ನಾಡು' ಎಂದು ಪ್ರಸಿದ್ಧವಾದ ಕೇರಳದಲ್ಲಿ ಬೇಸಿಗೆ ಧಗೆಯ ಜೊತೆಗೆ ಚುನಾವಣೆಯ ಕಾವು ಕೂಡ ಏರುತ್ತಿದೆ. ಏಪ್ರಿಲ್ 9ರಂದು ನಡೆಯುವ ವಿಧಾನಸಭಾ ಚುನಾವಣೆಯ ಹಣಾಹಣಿ ಮುಖ್ಯವಾಗಿ ಆಡಳಿತಾರೂಢ ಸಿಪಿಐ(ಎಂ) ನೇತೃತ್ವದ 'ಎಲ್‌ಡಿಎಫ್' ಹಾಗೂ ಕಾಂಗ್ರೆಸ್ ನೇತೃತ್ವದ 'ಯುಡಿಎಫ್' ಕೂಟಗಳ ನಡುವೆ ಇದ್ದರೂ, ಕಣದಲ್ಲಿ ಬಿಜೆಪಿಯೂ ಇರುವುದರಿಂದ ಕದನ ರಂಗೇರಿದೆ. ಪಿಣರಾಯಿ ವಿಜಯನ್ ನಾಯಕತ್ವದ ಎಲ್‌ಡಿಎಫ್ ಸತತ ಮೂರನೇ ಬಾರಿಗೆ ವಿಜಯಮಾಲೆ ಧರಿಸಲು ಕಾತರದಿಂದಿದೆ. ಆದರೆ, ಕಳೆದ 10 ವರ್ಷಗಳಿಂದ ವಿರೋಧಪಕ್ಷವಾಗಿರುವ ಯುಡಿಎಫ್ ಈ ಬಾರಿ ಅಧಿಕಾರದ ಗದ್ದುಗೆಗೇರಲು ಎಲ್ಲ ತಂತ್ರಗಳನ್ನು ಪ್ರಯೋಗಿಸುತ್ತಿದೆ.

ಕೇರಳದ ಮತದಾರ ಬೇರೆ ರಾಜ್ಯದ ಮತದಾರನಿಗಿಂತ ಭಿನ್ನ. ರಾಜ್ಯ ಪುನರ್ ವಿಂಗಡಣೆಯ ನಂತರ 1957ರಲ್ಲಿ ನಡೆದ ಮೊಟ್ಟ ಮೊದಲ ಚುನಾವಣೆಯಲ್ಲಿ ಆತ ಭಾರತೀಯ ಕಮ್ಯುನಿಸ್ಟ್ ಪಕ್ಷವನ್ನು ಗೆಲ್ಲಿಸಿದ. ಅದು ಭಾರತದ ಮೊದಲ ಕಮ್ಯುನಿಸ್ಟ್ ಸರ್ಕಾರ! ರಾಜ್ಯದಲ್ಲಿ 1977ರಿಂದ 2021ರವರೆಗೂ ಯಾವುದೇ ಪಕ್ಷ (ಒಕ್ಕೂಟ) ಸತತವಾಗಿ ಮರು ಆಯ್ಕೆ ಆಗಿರಲಿಲ್ಲ. ಎಲ್‌ಡಿಎಫ್ 2016 ಹಾಗೂ 2021ರಲ್ಲಿ ಗೆದ್ದು, ವಿಜಯನ್ ಸತತ ಎರಡು ಬಾರಿಗೆ ಮುಖ್ಯಮಂತ್ರಿಯಾದರು, ಕೇರಳದ ರಾಜಕೀಯ ಇತಿಹಾಸದಲ್ಲಿ ದಾಖಲೆ ಬರೆದರು.

140 ಸದಸ್ಯ ಬಲವಿರುವ ಕೇರಳ ಅಸೆಂಬ್ಲಿಯಲ್ಲಿ ಎಡರಂಗದ ಮೈತ್ರಿಕೂಟ 2006ರಿಂದೀಚೆಗೆ ಜಯಗಳಿಸಿದಾಗಲೆಲ್ಲ ಭಾರೀ ಅಂತರದಿಂದ ಗೆಲುವು ಸಾಧಿಸಿದೆ –2006ರಲ್ಲಿ 98, 2016ರಲ್ಲಿ 91 ಮತ್ತು 2021ರಲ್ಲಿ 99 ಸ್ಥಾನ ಗಳಿಸಿದೆ. ಇದಕ್ಕೆ ವಿರುದ್ಧವಾಗಿ ಯುಡಿಎಫ್ ಸೋತಾಗ ಭಾರೀ ಸೋಲು ಅನುಭವಿಸುತ್ತಾ ಬಂದಿದೆ. 2006ರಲ್ಲಿ ಅದು ಗಳಿಸಿದ್ದು 42, 2016ರಲ್ಲಿ 47 ಹಾಗೂ 2021ರಲ್ಲಿ 41 ಸ್ಥಾನ. ಈ ಕೂಟ 2011ರಲ್ಲಿ ಬರೀ 2 ಸ್ಥಾನಗಳಿಂದ ಗೆದ್ದಿತ್ತು ಮತ್ತು ಎಡರಂಗ 2 ಸ್ಥಾನಗಳಿಂದ ಸೋತಿತ್ತು. ಆದರೆ, ಇತ್ತೀಚಿನ ಲೋಕಸಭೆ ಚುನಾವಣೆಗಳಲ್ಲಿ ಕಾಂಗ್ರೆಸ್ ಮೈತ್ರಿಕೂಟ ಭಾರೀ ಜಯಗಳಿಸುತ್ತಾ ಬಂದಿದೆ.

2021ರಲ್ಲಿ ಎಡರಂಗ ಶೇ 45.43, ಯುಡಿಎಫ್ ಶೇ 39.47 ಹಾಗೂ ಬಿಜೆಪಿ ನೇತೃತ್ವದ ಎನ್‌ಡಿಎ ಶೇ 12.41ರಷ್ಟು ಮತಗಳಿಸಿದ್ದವು. ಬಹಳ ಹಿಂದೆಯೇ ಶೇ 100ರಷ್ಟು ಸಾಕ್ಷರತೆ ಹೊಂದಿದ್ದ ಈ ರಾಜ್ಯದ ಹಿಂದಿನ ಚುನಾವಣೆಗಳಲ್ಲಿ ಹೆಚ್ಚಿನ ಮಟ್ಟಿಗೆ ಅಲ್ಪ ಪ್ರಮಾಣದ ಅಂತರದಲ್ಲಿ ಸೋಲು– ಗೆಲುವಿನ ನಿರ್ಧಾರವಾಗಿತ್ತು. ಶೇ 1ರಷ್ಟು ಅಂತರದಲ್ಲಿ ಅನೇಕ ಸ್ಥಾನಗಳ ಫಲಿತಾಂಶ ನಿರ್ಣಯವಾಗಿತ್ತು. ಈ ಬಾರಿಯೂ ಇದೇ ಪ್ರವೃತ್ತಿ ಮುಂದುವರಿಯಬಹುದು.

ಎಡಪಕ್ಷಗಳ ದಶಕದ ಆಡಳಿತದ ನಂತರ ಕಾಂಗ್ರೆಸ್ ಅಧಿಕಾರದ ಚುಕ್ಕಾಣಿ ಹಿಡಿಯುವ ತವಕದಲ್ಲಿದೆ. ಕಳೆದ ಲೋಕಸಭೆ ಹಾಗೂ 2025ರ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಭಾರೀ ಜಯಗಳಿಸಿದ ನಂತರ ಪಕ್ಷ ಸಹಜವಾಗಿ ಹುಮ್ಮಸ್ಸಿನಲ್ಲಿದೆ. ಇದಕ್ಕೆ ಪ್ರತಿಯಾಗಿ ಎಲ್‌ಡಿಎಫ್ ತಾನು ನೀಡಿದ ಉತ್ತಮ, ಭ್ರಷ್ಟಾಚಾರರಹಿತ ಆಡಳಿತ ಹಾಗೂ ಅಭಿವೃದ್ಧಿ ಕಾರ್ಯಕ್ರಮಗಳು ತನ್ನ ಕೈಬಿಡುವುದಿಲ್ಲ ಎಂಬ ನಿರೀಕ್ಷೆಯಲ್ಲಿದೆ.

ಈ ದಕ್ಷಿಣದ ರಾಜ್ಯದಲ್ಲಿ 2011ರ ಜನಗಣತಿಯ ಪ್ರಕಾರ, ಹಿಂದೂಗಳು ಶೇ 54.6ರಷ್ಟು ಇದ್ದಾರೆ. ಮುಸ್ಲಿಮರು ಶೇ 26.6 ಹಾಗೂ ಕ್ರೈಸ್ತರು ಶೇ 18.4 ರಷ್ಟಿದ್ದಾರೆ. ಮುಸ್ಲಿಮರ ಸಂಖ್ಯೆ ಉತ್ತರ ಕೇರಳದಲ್ಲಿ (ಮಲ್ಲಾಪುರಂ, ಕಣ್ಣೂರು, ಕಾಸರಗೋಡು) ಹೆಚ್ಚಿದ್ದರೆ, ಕ್ರೈಸ್ತರ ಸಂಖ್ಯೆ ಮಧ್ಯ ಭಾಗದಲ್ಲಿ (ಪಾಲಕ್ಕಾಡ್, ತ್ರಿಶ್ಶೂರ್, ಎರ್ನಾಕುಲಂ) ಹೆಚ್ಚಿದೆ. ಮುಸ್ಲಿಮರ ಮತ ಹೆಚ್ಚು ಪಾಲು ಯುಡಿಎಫ್‌ಗೆ ಹೋಗುವುದು ನಿಶ್ಚಿತ. ಆದರೆ, ಕ್ರೈಸ್ತರ ಮತ ನಿರ್ಣಾಯಕವೆಂದು ಹೇಳಲಾಗುತ್ತಿದೆ. ಬಿಜೆಪಿ ಕ್ರೈಸ್ತರ ಮತಬುಟ್ಟಿಗೆ ಕೈಹಾಕಿದೆ. ಆದರೆ, ಕ್ರೈಸ್ತರ ಮೇಲಿನ ದಾಳಿಗಳು ಹಾಗೂ ವಿದೇಶಿ ದೇಣಿಗೆ ನಿಯಂತ್ರಣ ಕಾಯ್ದೆಗೆ ತಿದ್ದುಪಡಿ ತರುವ ಕೇಂದ್ರ ಸರ್ಕಾರದ ಪ್ರಯತ್ನ ಬಿಜೆಪಿಗೆ ಪೂರಕವಾಗಿಲ್ಲ. ಕಳೆದ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಗೂ ಹೋಗಿದ್ದ ಕ್ರೈಸ್ತ ಮತಗಳು ಈ ಬಾರಿ ಕಾಂಗ್ರೆಸ್‌ಗೆ ಮರಳಬಹುದು. ಕ್ರೈಸ್ತರು, ಮಧ್ಯ ಮತ್ತು ದಕ್ಷಿಣ ಭಾಗದ ಮತದಾರರು ಯಾರ ಪರವಾಗಿದ್ದಾರೆ ಎನ್ನುವುದರ ಮೇಲೆ ಕೇರಳದ ಫಲಿತಾಂಶ ಹಿಂದಿನಿಂದಲೂ ನಿಂತಿದೆ.

ಹಿಂದೂಗಳಲ್ಲಿ ಸುಮಾರು ಶೇ 22ರಷ್ಟು ಜನಸಂಖ್ಯೆ ಇದೆ ಎನ್ನಲಾದ ಈಳವ (ಈಡಿಗ) ಸಮುದಾಯ ಎಡರಂಗದ ಪರವಾಗಿರುವುದೇ ಹೆಚ್ಚು. ಆದರೆ, ಕೆಲವು ವರ್ಷಗಳಿಂದ ಈ ಸಮುದಾಯ ಸ್ವಲ್ಪಮಟ್ಟಿಗೆ ಬಿಜೆಪಿ ಪರವಾಗಿದೆ ಎನ್ನಲಾಗಿದೆ. ಹಾಗೆಯೇ, ಸುಮಾರು ಶೇ 12ರಷ್ಟಿರುವ ನಾಯರ್ ಸಮುದಾಯ ಕಾಂಗ್ರೆಸ್ ಬೆಂಬಲಿಗರಾಗಿದ್ದರೂ, ಇತ್ತೀಚೆಗೆ ಬಿಜೆಪಿ ಬಗ್ಗೆ ಮೃದುಧೋರಣೆ ಹೊಂದಿದೆ ಎನ್ನಲಾಗುತ್ತಿದೆ. ರಾಜ್ಯದ 14 ಜಿಲ್ಲೆಗಳ ಪೈಕಿ 13ರಲ್ಲಿ ಹಿಂದೂಗಳು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಉತ್ತರದ ಮಲಬಾರ್ ಪ್ರದೇಶದಲ್ಲಿ ಮುಸ್ಲಿಮರ ಸಂಖ್ಯೆ ಗಣನೀಯವಾಗಿದೆ; ಮಲ್ಲಾಪುರಂನಲ್ಲಿ ಹಿಂದೂಗಳಿಗಿಂತ ಹೆಚ್ಚಿದೆ. ಕಣ್ಣೂರ್ ಜಿಲ್ಲೆ ಬಹಳಷ್ಟು ಮತೀಯ ಸಂಘರ್ಷಗಳನ್ನು ಕಂಡಿದೆ. ಶಬರಿಮಲೆಯ ಅಯ್ಯಪ್ಪ ದೇವಸ್ಥಾನಕ್ಕೆ ಮಹಿಳೆಯರ ಪ್ರವೇಶ ನಿಷೇಧ ಹಾಗೂ ಅಲ್ಲಿನ ಚಿನ್ನದ ಕಳವು ವಿಚಾರದಲ್ಲಿ ಎಡಪಕ್ಷಗಳಿಗೆ ಹಿನ್ನಡೆ ಉಂಟಾಗಿದೆ ಎಂದು ವಿಶ್ಲೇಷಿಸಲಾಗಿದೆ. ಇದರ ಲಾಭ ಕಾಂಗ್ರೆಸ್‌ಗೆ ದಕ್ಕಬಹುದು.

ಕೇರಳದಲ್ಲಿ ಚುನಾವಣಾ ಸಭೆಯನ್ನುದ್ದೇಶಿಸಿ ಮಾತನಾಡುತ್ತಿದ್ದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಪ್ರಧಾನಿ ನರೇಂದ್ರ ಮೋದಿ ಶಬರಿಮಲೆ ವಿಷಯದ ಬಗ್ಗೆ ಏಕೆ ಮಾತನಾಡುತ್ತಿಲ್ಲವೆಂದು ಪ್ರಶ್ನಿಸಿದ್ದರು; ಎಡರಂಗದ ಬಗ್ಗೆ ಬಿಜೆಪಿ ಮೃದುಧೋರಣೆ ಹೊಂದಿದೆ ಎಂದು ಆರೋಪಿಸಿದ್ದರು. ಎಡಪಂಥೀಯ ಗುಂಪು 'ಬಿಜೆಪಿಯ ಬಿ ಟೀಮ್' ಎಂದೂ ಜರಿದಿದ್ದರು. ಈಗಾಗಲೇ, ಕರ್ನಾಟಕ ಹಾಗೂ ತೆಲಂಗಾಣದಲ್ಲಿ ಸರ್ಕಾರ ರಚಿಸಿರುವ ಕಾಂಗ್ರೆಸ್ ಕೇರಳದಲ್ಲೂ ಮುನ್ನಡೆ ಸಾಧಿಸುವುದನ್ನು ತಡೆಯಲು ಬಿಜೆಪಿ ಪ್ರಯತ್ನಿಸುತ್ತಿದೆ. ಬಿಜೆಪಿ ವಿರೋಧಿ ರಾಷ್ಟ್ರಮಟ್ಟದ 'ಇಂಡಿಯಾ' ಗುಂಪಿನಲ್ಲಿ ಜೊತೆಯಾಗಿರುವ ಕಾಂಗ್ರೆಸ್ ಮತ್ತು ಎಡಪಕ್ಷಗಳು ಕೇರಳದಲ್ಲಿ ಹೇಗೆ ಪ್ರತಿಸ್ಪರ್ಧಿಗಳಾಗಲು ಸಾಧ್ಯ ಎಂದು ಕೇಸರಿ ಬಣ ಗೇಲಿ ಮಾಡಿದೆ.

ಎಲ್ಲಾ ಚುನಾವಣೆಗಳಂತೆ ಇಲ್ಲೂ ರಾಜಕೀಯ ಪಕ್ಷಗಳು ರಾಶಿ ಭರವಸೆಗಳನ್ನು ನೀಡಿವೆ. ಕರ್ನಾಟಕದಂತೆ ಕೇರಳದಲ್ಲೂ ಕಾಂಗ್ರೆಸ್ ಐದು 'ಗ್ಯಾರಂಟಿ'ಗಳ ಪಟ್ಟಿ ಬಿಡುಗಡೆ ಮಾಡಿದೆ. ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ, ಬಾಲಕಿಯರಿಗೆ ಮಾಸಿಕ ಸ್ಟೈಪೆಂಡ್, ಆರೋಗ್ಯ ವಿಮೆ ಆ ಗ್ಯಾರಂಟಿಗಳಲ್ಲಿದೆ. ಬಿಜೆಪಿ ಏಮ್ಸ್ ಮಾದರಿಯ ಆಸ್ಪತ್ರೆ, ವರ್ಷಕ್ಕೆ ಎರಡು ಉಚಿತ ಗ್ಯಾಸ್ ಸಿಲಿಂಡರ್, ಮಹಿಳಾ ಪೆನ್ಷನ್ ಸೇರಿದಂತೆ ಭರವಸೆಗಳ ಮಹಾಪೂರವನ್ನೇ ಹರಿಸಿದೆ. ಎಡರಂಗ ಹೆಚ್ಚಿನ ಘೋಷಣೆಗಳನ್ನು ಮಾಡಿಲ್ಲ. ತಾನು ಜಾರಿಗೊಳಿಸಿದ ಕಾರ್ಯಕ್ರಮಗಳು ಹಾಗೂ ನೀಡಿದ ಒಳ್ಳೆಯ ಆಡಳಿತ ತನ್ನ ಕೈಬಿಡುವುದಿಲ್ಲ ಎಂಬುದು ಈ ಕೂಟದ ನಂಬಿಕೆ.

ಹೆಚ್ಚುಕಡಿಮೆ ತನ್ನ ಎಲ್ಲಾ ಶಾಸಕರಿಗೆ ಟಿಕೆಟ್ ಕೊಟ್ಟಿದ್ದರೂ, ಸಿಪಿಐ(ಎಂ)ನಲ್ಲಿ ಅಪಸ್ವರಕ್ಕೇನೂ ಕೊರತೆಯಿಲ್ಲ. ಕೆಲವು ಕಡೆ ಪಕ್ಷದ ಭಿನ್ನಮತೀಯರು ಕಣದಲ್ಲಿದ್ದಾರೆ. ಕೆಲವರು ಕಾಂಗ್ರೆಸ್ ಸೇರಿದ್ದಾರೆ. 80 ವರ್ಷದ ವಿಜಯನ್ ಅವರಿಗೆ ಪಕ್ಷದೊಳಗಿನ ಪ್ರತಿಸ್ಪರ್ಧಿ ಎಂದೇ ಪ್ರಖ್ಯಾತರಾಗಿರುವ ಕೆ.ಕೆ. ಶೈಲಜಾ ಅವರಿಗೆ ಅವರ ಎಂದಿನ ಕ್ಷೇತ್ರ ತಪ್ಪಿಸಿ, ಕಷ್ಟವೇ ಎನ್ನಬಹುದಾದ ಕಣ್ಣೂರಿನ ಪೆರವೂರ್ ಕ್ಷೇತ್ರದ ಟಿಕೆಟ್ ಕೊಡಲಾಗಿದೆ. ಇದು ಕಾಂಗ್ರೆಸ್‌ನ ಭದ್ರಕೋಟೆ. ಅಲ್ಲಿ ಅವರ ಪ್ರತಿಸ್ಪರ್ಧಿ, ಐದನೇ ಬಾರಿಗೆ ಗೆಲುವು ನಿರೀಕ್ಷಿಸುತ್ತಿರುವ, ರಾಜ್ಯ ಕಾಂಗ್ರೆಸ್ ಘಟಕದ ಅಧ್ಯಕ್ಷ ಸನ್ನಿ ಜೋಸೆಫ್.

ಯುಡಿಎಫ್ ಮುಖ್ಯ ಅಂಗ ಕಾಂಗ್ರೆಸ್ ಅನೇಕ ಸವಾಲುಗಳನ್ನು ಎದುರಿಸುತ್ತಿದೆ. ಅದರಲ್ಲಿ ಪ್ರಮುಖವಾಗಿರುವುದು ಪಕ್ಷದ ಆಂತರಿಕ ಕಲಹ. ಅಸೆಂಬ್ಲಿಯ ಪ್ರತಿಪಕ್ಷದ ನಾಯಕ ವಿ.ಡಿ. ಸತೀಶನ್, ಹಿರಿಯ ನಾಯಕ ರಮೇಶ ಚೆನ್ನಿತಾಲ, ಸಂಸದ ಕೆ.ಸಿ. ವೇಣುಗೋಪಾಲ್ ಕಾಂಗ್ರೆಸ್ ಒಳಗಿನ ಬಣಗಳ ನಾಯಕರು. ಇನ್ನೊಂದು ಮುಖ್ಯ ಅಂಶ, ವಿಜಯನ್ ಅವರಂತಹ 'ಮಾಸ್ ಲೀಡರ್' ಕಾಂಗ್ರೆಸ್‌ನಲ್ಲಿ ಇಲ್ಲದಿರುವುದು. ಕೆ. ಕರುಣಾಕರನ್, ಎ.ಕೆ. ಆಂಟನಿ, ಉಮನ್ ಚಾಂಡಿ ಅವರಂತಹ ಸಮೂಹವನ್ನು ಆಕರ್ಷಿಸುವ ಜನನಾಯಕರ ಕೊರತೆ ಪಕ್ಷದಲ್ಲಿ ಎದ್ದು ಕಾಣುತ್ತಿದೆ.

ಈ ಎರಡು ಕೂಟಗಳ ಮಧ್ಯೆ ತೃತೀಯ ಶಕ್ತಿಯಾಗಿ ಹೊರಹೊಮ್ಮಲು ಪ್ರಯತ್ನಿಸುತ್ತಿರುವುದು ಬಿಜೆಪಿ ನಾಯಕತ್ವದ ಎನ್‌ಡಿಎ. 2021ರ ಅಸೆಂಬ್ಲಿ ಕದನದಲ್ಲಿ ನೆಲ ಕಚ್ಚಿದ್ದರೂ, 2024ರ ಲೋಕಸಭೆಯಲ್ಲಿ ತ್ರಿಶ್ಶೂರ್‌ನಲ್ಲಿ ಹಾಗೂ 2025ರ ಸ್ಥಳೀಯ ಸಂಸ್ಥೆ ಚುನಾವಣೆಯ ತಿರುವನಂತಪುರಂ ಮುನಿಸಿಪಲ್ ಕಾರ್ಪೊರೇಷನ್‌ನಲ್ಲಿ ಜಯಗಳಿಸಿ ಬಿಜೆಪಿ ಮತ್ತೆ ತನ್ನ ಅದೃಷ್ಟವನ್ನು ಪರೀಕ್ಷಿಸುತ್ತಿದೆ. ಬಿಜೆಪಿಯ ಪ್ರಭಾವ ಇರುವ ಕ್ಷೇತ್ರಗಳಲ್ಲಿ ಕುತೂಹಲಕಾರಿ ತ್ರಿಕೋನ ಸ್ಪರ್ಧೆ ಏರ್ಪಟ್ಟಿದೆ.

ಲೇಖಕ: ಹಿರಿಯ ಪತ್ರಕರ್ತ



ವಾಚಕರ ವಾಣಿ

ಸಸ್ಯಕ್ಷೇತ್ರ: ಸಸಿಗಳ ದಾಸ್ತಾನು ಕೊರತೆ

ರಾಜ್ಯದಲ್ಲಿ ಅರಣ್ಯ ಇಲಾಖೆಯ ಸುಪರ್ದಿಯಲ್ಲಿರುವ ಸಸ್ಯಪಾಲನಾ ಕ್ಷೇತ್ರಗಳಲ್ಲಿ ಇತ್ತೀಚೆಗೆ ಸಾರ್ವಜನಿಕರಿಗೆ ವಿತರಿಸಲು ಸಸಿಗಳ ಕೊರತೆ ಕಂಡುಬರುತ್ತಿದೆ. ಸಸಿಗಳನ್ನು ಬೆಳೆಸಲು ಸರ್ಕಾರ ಇಲಾಖೆಗೆ ಹೆಚ್ಚಿನ ಅನುದಾನ ನೀಡದಿರುವುದೇ ಇದಕ್ಕೆ ಕಾರಣ. ಮರಗಳನ್ನು ಬೆಳೆಸಿದರಷ್ಟೇ ವಾತಾವರಣದಲ್ಲಿ ಇಂಗಾಲದ ಪ್ರಮಾಣವನ್ನು ಕಡಿಮೆ ಮಾಡಲು ಸಾಧ್ಯ. ಜಿಲ್ಲಾವಾರು ಇರುವ ಸಸ್ಯಕ್ಷೇತ್ರಗಳಲ್ಲಿ ಬೇಡಿಕೆ ಇರುವ ಸಸಿಗಳನ್ನು ಬೆಳೆಸಿ ಸಾರ್ವಜನಿಕರು ಮತ್ತು ರೈತರಿಗೆ ವಿತರಿಸಲು ಆದ್ಯತೆ ನೀಡಬೇಕು. ಜೊತೆಗೆ, ಸ್ಥಳೀಯ ಪಾರಂಪರಿಕ ಗಿಡಗಳನ್ನು ಬೆಳೆಸಲು ಒತ್ತು ನೀಡಬೇಕಿದೆ. ಈ ಕುರಿತು ಗ್ರಾಮಗಳಲ್ಲಿ ಪ್ರಚಾರ ಮಾಡಬೇಕಿದೆ. ಮಳೆಗಾಲದಲ್ಲಿ ಸಸಿಗಳನ್ನು ವಿತರಿಸಿದರೆ ಹೆಚ್ಚು ಅನುಕೂಲ.

ಎಸ್.ಎನ್. ಅಮೃತ, ಪುತ್ತೂರು

ಕೆಪಿಎಸ್‌ಸಿ: ಕನಸುಗಳ ಕೊಲ್ಲುವ ಕೂಟ

ಕೆಪಿಎಸ್‌ಸಿ ಭ್ರಷ್ಟಾಚಾರ ಕುರಿತಂತೆ ಪ್ರಕಟವಾಗಿರುವ ವರದಿಗಳು (ಅನುಭವ ಮಂಟಪ, ಪ್ರ.ವಾ., ಏ. 3) ಸತ್ಯಕ್ಕೆ ಹತ್ತಿರವಾಗಿವೆ. ಭ್ರಷ್ಟಾಚಾರದಲ್ಲಿಯೇ ಉಸಿರಾಡುತ್ತಿರುವ ಆಯೋಗಕ್ಕೆ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸುವ ಜವಾಬ್ದಾರಿಯನ್ನು ಏಕೆ ನೀಡಬೇಕು ಎಂಬ ಪ್ರಶ್ನೆ ಸಾರ್ವಜನಿಕರಿಗೆ ಕಾಡದಿರದು. ಈ ಸಂಸ್ಥೆಯು ಉದ್ಯೋಗಾಕಾಂಕ್ಷಿಗಳನ್ನು ಬೌದ್ಧಿಕವಾಗಿ ಶೋಷಿಸುತ್ತಿದೆ. ಇದೊಂದು ಕನಸುಗಳನ್ನು ಕೊಲ್ಲುವ ಉಳ್ಳವರ ಮತ್ತು ಭ್ರಷ್ಟಾಚಾರಿಗಳ ಪ್ರಾಯೋಜಿತ ಸಂಸ್ಥೆ. ಇದನ್ನು ರದ್ದುಪಡಿಸುವುದೇ ಒಳ್ಳೆಯದು; ಇದರಿಂದ ಸಾವಿರಾರು ಅಭ್ಯರ್ಥಿಗಳಿಗೆ ಪ್ರಯೋಜನವಾಗುತ್ತದೆ. ಸರ್ಕಾರ ಈ ದಿಸೆಯಲ್ಲಿ ಕ್ರಮವಹಿಸುವುದು ಒಳಿತು.

ಸುಮಾ ವೀಣಾ, ಹಾಸನ

ಜನಸಂಖ್ಯೆ ಹೆಚ್ಚಳ: ಅಭಿವೃದ್ಧಿಗೆ ಪೆಟ್ಟು

ದೇಶದಲ್ಲಿ ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಜನಸಂಖ್ಯೆಯು ಅಭಿವೃದ್ಧಿಯ ವೇಗಕ್ಕೆ ಅಡ್ಡಿಯಾಗುತ್ತಿದೆ. ಉದ್ಯೋಗಾವಕಾಶಗಳ ಕೊರತೆ, ಶಿಕ್ಷಣದ ಅಸಮಾನತೆ ಹಾಗೂ ಸಂಪನ್ಮೂಲಗಳ ಅಭಾವವು ಗಂಭೀರ ಸಮಸ್ಯೆಗಳಾಗಿ ಪರಿಣಮಿಸುತ್ತಿವೆ. ಯುವಜನತೆ ದೇಶದ ಪ್ರಬಲವಾದ ಶಕ್ತಿಯಾಗಬಹುದಾದರೂ, ಸರಿಯಾದ ಮಾರ್ಗದರ್ಶನ ಮತ್ತು ಯೋಜನೆಗಳಿಲ್ಲದೆ ಅದು ಭಾರವಾಗುವ ಅಪಾಯವಿದೆ. ಸರ್ಕಾರದ ಪರಿಣಾಮಕಾರಿ ಕ್ರಮಗಳ ಜೊತೆ ಜನರ ಜವಾಬ್ದಾರಿಯುತ ಮನೋಭಾವವೂ ಮುಖ್ಯ. ಜನಸಂಖ್ಯೆ ನಿಯಂತ್ರಣದ ಬಗ್ಗೆ ಜಾಗೃತಿ ಮೂಡಿಸಿ, ಸಮತೋಲಿತ ಸಮಾಜ ನಿರ್ಮಾಣದ ಕಡೆಗೆ ಎಲ್ಲರೂ ಕೈಜೋಡಿಸಬೇಕು. ಇದೇ ದೇಶದ ಭವಿಷ್ಯವನ್ನು ಸುರಕ್ಷಿತಗೊಳಿಸುವ ಏಕೈಕ ಮಾರ್ಗ.

ಉಮರ್ ಅಲಿ, ಕಲಬುರಗಿ

ವಿರೂಪಾಕ್ಷ ದರ್ಶನ ಗೊಂದಲದ ಗೂಡು

ಹಂಪಿಯ ವಿರೂಪಾಕ್ಷ ದೇವಾಲಯದಲ್ಲಿನ ದರ್ಶನ ವ್ಯವಸ್ಥೆಯು ಗೊಂದಲದ ಗೂಡಾಗಿದೆ. ಉಚಿತ ದರ್ಶನ ಹಾಗೂ ₹25ಕ್ಕೆ ವಿಶೇಷ ದರ್ಶನದ ಸಾಲುಗಳು ಸಮನಾಂತರವಾಗಿ ಸಾಗಿ ದೇವಾಲಯದ ಪ್ರವೇಶದ್ವಾರದಲ್ಲಿ ಒಂದಾಗುತ್ತಿವೆ. ವಿಶೇಷ ದರ್ಶನಕ್ಕೆ ಯಾವುದೇ ಪ್ರತ್ಯೇಕ ಸೌಲಭ್ಯವಿಲ್ಲ. ಇದಕ್ಕೂ ಮೊದಲು ವಿಶೇಷ ಟಿಕೆಟ್ ಪಡೆದವರಿಗೆ ಗರ್ಭಗುಡಿಯ ಸಮೀಪ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿತ್ತು. ಈಗ ಸಭಾ ಮಂಟಪದ ಪ್ರವೇಶಕ್ಕೆ ನಿರ್ಬಂಧ ವಿಧಿಸಲಾಗಿದೆ. ಇದರಿಂದ ಕಂಬಗಳ ಕೆತ್ತನೆಗಳು ಹಾಗೂ ಚಾವಣಿಯ ಚಿತ್ರಗಳನ್ನು ವೀಕ್ಷಿಸಲು ಪ್ರವಾಸಿಗರು ವಂಚಿತರಾಗುತ್ತಿದ್ದಾರೆ. ದರ್ಶನದ ಬಳಿಕ ಉತ್ತರ ದ್ವಾರದಿಂದ ಹೊರಗೆ ಕಳುಹಿಸಲಾಗುತ್ತಿದೆ. ಕೇವಲ ವಿಶೇಷ ದಿನಗಳಲ್ಲಿ ಮಾತ್ರವೇ ದೀಪಗಳನ್ನು ಹಚ್ಚಲು ಮತ್ತು ಭಜನೆ ಮಾಡುವುದಕ್ಕೆ ಅಂಗಳದೊಳಗೆ ಪ್ರವೇಶಿಸಲು ಅನುಮತಿ ನೀಡಲಾಗುತ್ತಿದೆ. ಹಿಂದೆ ಇದ್ದ ದರ್ಶನ ವ್ಯವಸ್ಥೆಯನ್ನೇ ಮುಂದುವರಿಸಿದರೆ ಅನುಕೂಲವಾಗಲಿದೆ.

ಜಿ. ನಾಗೇಂದ್ರ ಕಾವೂರು, ಸಂಡೂರು

ತೈಲ ಸಮಸ್ಯೆ: ಸ್ವಯಂ ನಿಯಂತ್ರಣ ಮದ್ದು

ಕೊಲ್ಲಿ ಯುದ್ಧದ ದುಷ್ಪರಿಣಾಮವು ದೇಶದ ಸಾಮಾನ್ಯ ಜನಜೀವನವನ್ನು ಕ್ರಮೇಣ ತಲ್ಲಣಗೊಳಿಸುತ್ತಿದೆ. ಪೆಟ್ರೋಲ್, ಡೀಸೆಲ್, ಎಲ್‌ಪಿಜಿ ಸಿಲಿಂಡರ್ ಮತ್ತಿತರ ಅಗತ್ಯ ವಸ್ತುಗಳ ಕೊರತೆಯ ಜೊತೆಗೆ ಬೆಲೆ ಏರಿಕೆ ಬಿಸಿಯೂ ತಟ್ಟುತ್ತಿದೆ. ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಸಮಸ್ಯೆಗಳು ಉಲ್ಬಣಿಸುತ್ತಿವೆ. ಇಂತಹ ಸಂಕ್ರಮಣದ ಸ್ಥಿತಿಯಲ್ಲಿ ಲಭ್ಯವಾಗುವ ಪೆಟ್ರೋಲಿಯಂ ಉತ್ಪನ್ನಗಳನ್ನು ಜಾಗರೂಕತೆಯಿಂದ ಬಳಸುವುದು ಎಲ್ಲರ ಹೊಣೆಗಾರಿಕೆ. ಸಾಧ್ಯವಾದಷ್ಟೂ ಹೆಚ್ಚುಕಾಲ ಬರುವಂತೆ ಮತ್ತು ಜನಜೀವನಕ್ಕೆ ತೀರಾ ಅಗತ್ಯವಿರುವ ಹಾಗೂ ಅನಿವಾರ್ಯವಿರುವ ಉದ್ದೇಶಗಳಿಗೆ ಮಾತ್ರ ಉಪಯೋಗಿಸಬೇಕಿದೆ. ಅತಿಹೆಚ್ಚು ಜನ ಸೇರುವ ಕಾರ್ಯಕ್ರಮಗಳು, ಅನಾವಶ್ಯಕ ಸಂಚಾರ ಮೊದಲಾದವನ್ನು ಈ ಸಂಕಟದ ಹೊತ್ತಿನಲ್ಲಾದರೂ ಜನರು ಸ್ವಯಂ ನಿಯಂತ್ರಣಗೊಳಿಸಿಕೊಳ್ಳಬೇಕು.

ಆರ್.ಎಸ್. ಅಯ್ಯರ್, ತುಮಕೂರು

ಜನತಂತ್ರ ಮತ್ತು ಕುಟುಂಬ ರಾಜಕಾರಣ

'ದಾವಣಗೆರೆಯ ದುರಂತ ನೋಡಾ' ಲೇಖನವು (ಅನುರಣನ: ನಾರಾಯಣ ಎ., ಪ್ರ.ವಾ., ಏ. 3) ಭಾರತದ ಪ್ರಜಾತಾಂತ್ರಿಕ ಗಣರಾಜ್ಯವು ಪ್ರಬಲ ಜಾತಿ ಹಾಗೂ ಕುಟುಂಬಗಳಿಗೆ ಸೀಮಿತವಾಗಿರುವ ಸತ್ಯಾಸತ್ಯತೆಯನ್ನು ತೆರೆದಿಟ್ಟಿದೆ. ಪ್ರಜಾಪ್ರಭುತ್ವದಲ್ಲಿ ರಾಜಕೀಯ ಅಪರಾಧೀಕರಣದ ಜೊತೆಯಲ್ಲಿಯೇ ಕುಟುಂಬ ರಾಜಕಾರಣವು ಪೈಪೋಟಿಗಿಳಿದಿದೆ. ರಾಜಕೀಯ ಚಿಂತಕ ಥಾಮಸ್ ಹಾಬ್ಸ್ ಹೇಳಿರುವ 'ಸಾಮಾಜಿಕ ಒಪ್ಪಂದ'ದಂತೆ, ಜನರು ತಮ್ಮ ಹಕ್ಕುಗಳನ್ನು ಸಾರ್ವಭೌಮನಿಗೆ ಬಿಟ್ಟುಕೊಟ್ಟಂತೆ, ರಾಜಕೀಯ ಪಕ್ಷಗಳ ಕಾರ್ಯಕರ್ತರು ಸಹ ಚುನಾವಣೆಗೆ ಸ್ಪರ್ಧಿಸುವ ತಮ್ಮ ಹಕ್ಕುಗಳನ್ನು ಹೈಕಮಾಂಡ್‌ಗೆ ಬಿಟ್ಟು ಕೊಟ್ಟಿರುವುದು ದುರದೃಷ್ಟಕರ.

ನಾಗರಾಜ ಸನದಿ, ಅಥಣಿ

ಚಾಟಿ

ಶಿಕ್ಷಣ ತಜ್ಞರ ಅರಣ್ಯರೋದನ



ಕನ್ನಡ ಒಂದೇ ಕಲಿತರೆ ಭವಿಷ್ಯವೇ ಇಲ್ಲ ಎಂದು ಪೋಷಕರು ನಿರ್ಧರಿಸಿ ಆಗಿದೆ. ಇಲ್ಲಿ ಭಾಷೆಯನ್ನು ಆಯ್ಕೆ ಮಾಡುವುದು ಪೋಷಕರೇ ಹೊರತು ಅದನ್ನು ಕಲಿಯುವ ಮಕ್ಕಳಲ್ಲ! ಶಿಕ್ಷಣ ತಜ್ಞರದ್ದೇನಿದ್ದರೂ ಅರಣ್ಯರೋದನ.

ಸವಿತಾ ನಾಗಭೂಷಣ, ಕವಯಿತ್ರಿ, 'ಫೇಸ್‌ಬುಕ್'ನಿಂದ

ಕಿಡಿನುಡಿ



ಬಿಜೆಪಿಯು ಅಕ್ಕಿಗೆ ಅರಿಸಿನ ಬೆರೆಸಿ ಅಯೋಧ್ಯೆಯಿಂದ ತಂದಿರುವಂತೆ ಬಿಂಬಿಸಿಕೊಂಡಿದೆ. ಇದರ ವಿಡಿಯೊಗಳು ನಮ್ಮ ಬಳಿಯಿವೆ. ಅಕ್ಷತೆಯನ್ನು ಮನೆ ಮನೆಗೆ ತಲುಪಿಸಿದ ರೀತಿಯಲ್ಲಿಯೇ ಎಲ್‌ಪಿಜಿ ಸಿಲಿಂಡರ್‌ಗಳನ್ನು ಏಕೆ ಪೂರೈಸಬಾರದು?

ಡಿ.ಕೆ. ಶಿವಕುಮಾರ್, ಉಪಮುಖ್ಯಮಂತ್ರಿ

25 ವರ್ಷಗಳ ಹಿಂದೆ

ಬುಧವಾರ, 4-4-2001

• **ಲೋಕಾಯುಕ್ತ ದಾಳಿ: 1 ಕೋಟಿ ಮೌಲ್ಯದ ಆಸ್ತಿಪಾಸ್ತಿ ಪತ್ತೆ**

ತುಮಕೂರು, ಏ. 3– ಜಿಲ್ಲೆಯ ಆಹಾರ ಇಲಾಖೆಯ ಉಪ ನಿರ್ದೇಶಕ ಎ. ಮರಿಗೌಡ ಅವರ ನಿವಾಸಗಳ ಮೇಲೆ ಲೋಕಾಯುಕ್ತ ಪೊಲೀಸರು ಇಂದು ಮಿಂಚಿನ ದಾಳಿ ನಡೆಸಿ ಸುಮಾರು ಒಂದು ಕೋಟಿ ರೂಪಾಯಿ ಮೌಲ್ಯದ ವಸ್ತುಗಳು ಮತ್ತು ದಾಖಲೆ ಪತ್ರಗಳನ್ನು ವಶಪಡಿಸಿಕೊಂಡಿದ್ದಾರೆ.

ಬೆಂಗಳೂರು, ಮೈಸೂರು ಹಾಗೂ ತುಮಕೂರು ನಿವಾಸಗಳ ಮೇಲೆ ಇಂದು ಮುಂಜಾನೆಯಿಂದ ಸಂಜೆಯವರೆಗೂ ದಾಳಿ ನಡೆದಿದೆ. ಮೈಸೂರು ನಿವಾಸದಲ್ಲಿ ಹಲವಾರು ಕಾಗದ ಪತ್ರಗಳು ಲಭ್ಯವಾಗಿವೆ ಎನ್ನಲಾಗಿದ್ದು, ಈ ಬಗ್ಗೆ ವಿವರ ತಿಳಿದುಬಂದಿಲ್ಲ.

• **ಮಿನಿ ಸಂಪುಟ ಸಭೆ ನಾಳೆ**

ಬೆಂಗಳೂರು, ಏ. 3– ಗಿರಿಜನರ ಸಮಸ್ಯೆಗಳನ್ನು ವಿವರವಾಗಿ ಚರ್ಚಿಸಿ ಅವುಗಳಿಗೆ ಸ್ಥಳದಲ್ಲೇ ಪರಿಹಾರ ಕಂಡುಹಿಡಿಯುವ ಮಹತ್ವದ ಸಭೆಯೊಂದು ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರ ನೇತೃತ್ವದಲ್ಲಿ ಗಿರಿಜನರ ಹಾಡಿಗಳಿರುವ ಮೈಸೂರು ಸಮೀಪದ ಹೆಗ್ಗಡದೇವನಕೋಟೆಯಲ್ಲಿ ನಾಳೆ ನಡೆಯಲಿದೆ.

75 ವರ್ಷಗಳ ಹಿಂದೆ

ಬುಧವಾರ, 4-4-1951

• **ಅಸ್ಸಾಂ 'ಶಕುಂತಲೆಯ' ಮತ್ಸ್ಯಮುದ್ರಿಕಾ ಪ್ರಸಂಗ**

ಷಿಲಾಂಗ್, ಏ. 2– ಷಿಲಾಂಗಿನ 'ವಾರ್ಡ್ ಲೇಕ್' ಸರೋವರದ ನೀರನ್ನು ಹೊರತೆಗೆಯುವುದರ ಬಗ್ಗೆ ಪತ್ರಿಕೆಗಳಲ್ಲಿ ಪ್ರಕಟವಾದ ವರದಿಗಳು 'ಅತಿ ಉತ್ಪ್ರೇಕ್ಷಾಪೂರಿತ'ವಾದುದೆಂದು ಅಸ್ಸಾಂ ಸರ್ಕಾರದ ಪತ್ರಿಕಾ ಪ್ರಕಟಣೆಯೊಂದು ತಿಳಿಸಿದೆ.

ಅಸ್ಸಾಮಿನ ಗವರ್ನರ್ ಆದ ಜೈರಾಂ ದಾಸ್ ದೌಲತರಾಮ್‌ರ ಮಗಳು ಸರೋವರದ ಮೀನುಗಳಿಗೆ 'ಆಹಾರ ಕೊಡುತ್ತಿದ್ದಾಗ, ಆಕೆಯ ಕೈಯಿಂದ ವಜ್ರದ ಉಂಗುರವೊಂದು ಜಾರಿ ನೀರಿನಲ್ಲಿ ಬಿದ್ದು ಹೋಯಿತು. ಆಗಿನಿಂದ ಉಂಗುರವನ್ನು ಹೊರತೆಗೆಯಲು ಪ್ರಯತ್ನಗಳು ನಡೆದಿದ್ದವು. ಇದಕ್ಕೆ ಸರಿಯಾಗಿ ಕೊಳವನ್ನೂ ರಿಪೇರಿ ಮಾಡಿ, ಚೊಕ್ಕಟ ಮಾಡುವ ಕಾಲ ವೊದಗಿದ್ದರಿಂದ ಕೊಳದ ನೀರನ್ನು ನಿರ್ದಿಷ್ಟ ಮಟ್ಟದವರೆಗೆ ಹೊರತೆಗೆಯಲಾಯಿತು.

ಚುರುಮುರಿ



ತರಾ'ವರಿ'!

• ತುರುವೇಕೆರೆ ಪ್ರಸಾದ್

'ಎಲ್ರಿಗೂ ಒಂದಿಲ್ಲೊಂದು ವರಿ ಅಟಕಾಯಿಸ್ಕಂಡ್ ಬುಟ್ಟದೆ ಕಣ್ರಲಾ' ತಲೆ ಕೆರ್ಕಂಡ ಗುದ್ಲಿಂಗ.

'ಊ ಕಣ್ಲಾ! ಫೆಬ್ರು'ವರಿ'ಲಿ ಇದ್ದ ವಾರ್‌ವರಿ ಏಪ್ರಿಲ್‌ಗೂ ಬಂತು ಕುಂತೈತೆ' ಎಂದ ಮಾಲಿಂಗ.

'ಅದ್ರ ಜೊತ್ಗೆ ಎಲ್ಲಾ ಕಡೆ ಒತ್ತುವರಿ ಕಾಟ! ಅಲ್ಲಿ ಟ್ರಂಪು, ಚೀನಾ ಇದ್‌ಬದ್ ದೇಶ ಎಲ್ಲಾ ನುಂಗ್ ನೊಣೆಬೇಕು ಅಂತ ಒತ್ತುವರಿ ಹಠಕ್ಕೆ ಬಿದ್ದವ್ರೆ. ಇನ್ನು ನಮ್ ನಾಡಲ್ಲಿ ಚಿಕ್ಕೋರದ್ದು ಒತ್ತುಮೋರಿ! ದೊಡ್ ದೊಡ್ ಕುಳಗಳೆಲ್ಲಾ ಕೆರೆ, ಕಾಡ್ನೆಲ್ಲಾ ಸೊಯ್ ಟಪಕ್ ಅಂತ ನುಂಗಿ ಒತ್ತುವರಿ ಮಾಡ್ಕಂಡವ್ರೆ!' ಎಂದ ಕಲ್ಲೇಶಿ.

'ಗ್ಯಾರಂಟಿಯಿಂದ ಅಭಿವೃದ್ಧಿ ಒತ್ತುವರಿ ಅಂತ ಕಮಲ್ದೋರು ಕಿರುಚ್ತಾವ್ರೆ'

'ತಮಿಳು ಮರಾಠಿಯೋರ್ ಒತ್ತುವರಿ ಜೊತ್ಗೆ ಮೇಲಿಂದ ನಮ್ ದಕ್ಷಿಣ ಭಾಷೆಗಳನ್ನ ಹಿಂದಿ ಒತ್ತುವರಿ ಮಾಡ್ತಾಯ್ತಲ್ಲ'

'ಅದು ಒತ್ತುವರಿ ಅಲ್ಲ ಕಣ್ಲಾ, ಒತ್ತು 'ಹೇರಿ'! ನಮ್ ರೈತರದ್ದು ಗೊಬ್ರ ಇದ್ರೆ ಮಳೆ ಇಲ್ಲ, ಮಳೆ ಇದ್ರೆ ಬೆಲೆ ಇಲ್ಲ ಅಂತ ಸದಾ 'ಉತ್ತುವರಿ'!

'ಅವರದ್ದು ಅಂಗಾದ್ರೆ ಅಧಿಕಾರಿಗಳು ಅವರಿವರದ್ದು ಕಿತ್ತು ಗಂಟು ಮಾಡಿಟ್ಕಂಡು ಎಲ್ಲಿ ಯಾವಾಗ ತಗಲಾಕ್ಕತೀವ್ರೋ ಅನ್ನೋ 'ಕಿತ್ತುವರಿ'ಲಿ ನರಳ್ತಾವ್ರೆ'.

'ನಮ್ ರಾಜಕೀಯದೋರು ಮಾತ್ರ ಕೊಲ್ಲಿ ಹೊತ್ತಿ ಉರಿಬೇಕಾದ್ರೆ ಗದ್ದುಗೆ ಎಲ್ಲಿ? ಅಂತ 'ಹತ್ತೋವರಿ'ಲಿ ಪರದಾಡ್ತಾವ್ರೆ! ಮಿನಿಕದನದಲ್ಲಿ ಓಟು ಎಂಗೆ ಒತ್ತುತಾರೋ ಅನ್ನೋ 'ಒತ್ತುವರಿ'ಲವ್ರೆ. ಲೋ ಪರಮಿ, ತೆಪ್ಪಗ್ ಕೂತಿದ್ಯಲ್ಲ, ನಿಂದೇನೋವರಿ?'

'ಅಯ್ಯೋ, ನಂದು ಹೆತ್ತುವರಿ, ಮಕ್ಕಳು ನನ್ ಪಾಲಿನ ಆಸ್ತಿನೂ ಒತ್ತುವರಿ ಮಾಡ್ಕಂಡವ್ರೆ. 'ಸಾಯ್ತೀನಿ, ತುಂಬಾ ನೋವು, ಜೀವನ ಬೋರು' ಅಂದೆ. ಹೇಗ್ ಬೇಕಾದ್ರೂ ಸಾಯ್ರಿ, ಆದ್ರೆ ಮುಟ್ಟಬೇಡಿ ಸ್ಟವ್ವು, ಸಿಲಿಂಡ್ರು ಅಂದ್ಲು ಹೆಂಡ್ತಿ' ಎಂದ ಪರ್ಮೇಶಿ.

ಮಿಕ್ಕವರು ಅಳ್ಬೇಕೋ, ನಗ್ಬೇಕೋ ಗೊತ್ತಾಗದೆ ಮುಖ ಮುಖ ನೋಡ್ಕಂಡ್ರು.

ಸಂಗತ

ಚಿಣ್ಣರಿಗೆ ಸೆರೆಮನೆ ಆಗದಿರಲಿ 'ಬೇಸಿಗೆ ಶಿಬಿರ'

ಬೇಸಿಗೆ ಶಿಬಿರಗಳೀಗ ಟ್ಯುಟೋರಿಯಲ್‌ಗಳಾಗಿ ಬದಲಾಗಿವೆ. ಮಕ್ಕಳಿಗೆ ಹೊಸ ಹುರುಪು ತುಂಬಬೇಕಾದ ಶಿಬಿರಗಳು, 'ಮಿನಿ ಶಾಲೆ'ಗಳ ಸ್ವರೂಪ ಪಡೆದುಕೊಂಡಿವೆ.

• ರಾಜಕುಮಾರ ಕುಲಕರ್ಣಿ

ಹಿಂದೆಲ್ಲ ಶಾಲಾ ಪರೀಕ್ಷೆಗಳು ಮುಗಿಯುತ್ತಿದ್ದಂತೆ ಮಕ್ಕಳು ಅಜ್ಜಿಮನೆಗೆ ದಾಂಗುಡಿ ಇಡುತ್ತಿದ್ದರು. ಬೇಸಿಗೆ ರಜೆಯ ಎರಡು ತಿಂಗಳುಗಳಲ್ಲಿ ಈಜು, ಆಟ, ತೋಟದಲ್ಲಿ ಸುತ್ತಾಟ ಎಂದು ಸಮಯ ಕಳೆದುಹೋದದ್ದೇ ತಿಳಿಯುತ್ತಿರಲಿಲ್ಲ. ರಜೆಯಿಂದ ದೊರೆತ ಹೊಸ ಹುರುಪು, ಚೈತನ್ಯದೊಂದಿಗೆ ಮಕ್ಕಳು ಶಾಲೆಗಳಿಗೆ ಮರಳುತ್ತಿದ್ದರು. ಈಗ ಕಾಲ ಬದಲಾಗಿದೆ. ಪರೀಕ್ಷೆ ಮುಗಿದು ರಜೆ ಆರಂಭವಾಗುತ್ತಿದ್ದಂತೆ ಮಕ್ಕಳನ್ನು 'ಕಲಿಕೆಯ ಹೆಸರಿನ' ಬೇಸಿಗೆ ಶಿಬಿರಗಳಿಗೆ ಸೇರಿಸುವ ಧಾವಂತ ಪಾಲಕರಲ್ಲಿ ಶುರುವಾಗುತ್ತದೆ. ರಜೆಯ ನಂತರವೂ ಪಠ್ಯಪುಸ್ತಕಗಳನ್ನು ಓದಬೇಕಾದ ಸಜೆ ಮಕ್ಕಳಿಗೆ.

ಪಾಲಕರ ಮನೋಭಾವವನ್ನು ಬಂಡವಾಳ ಆಗಿಸಿಕೊಳ್ಳುತ್ತಿರುವ ಬೇಸಿಗೆ ಶಿಬಿರಗಳು ಈಗ ಉದ್ಯಮವಾಗಿ ಬೆಳೆದು ನಿಂತಿವೆ. ವರ್ಷಪೂರ್ತಿ ಬೋಧಿಸುವುದನ್ನು ಎರಡು ತಿಂಗಳುಗಳ ಕಾಲಾವಧಿಯಲ್ಲಿ ಬೋಧಿಸಲಾಗುತ್ತಿದೆ. ಜೊತೆಗೆ ವಾರದ ಕೊನೆಯ ದಿನ ಮಕ್ಕಳು ಪರೀಕ್ಷೆಗೆ ಸಿದ್ಧರಾಗಬೇಕು. ಕಡಿಮೆ ಅವಧಿಯಲ್ಲಿ ಹೆಚ್ಚಿನ ವಿಷಯ–ವಸ್ತುವನ್ನು ಅಧ್ಯಯನ ಮಾಡಬೇಕಾದ ಒತ್ತಡ.

ವರ್ಷಪೂರ್ತಿ ಓದು, ಪರೀಕ್ಷೆ ಎಂದು ಮಾನಸಿಕ ಶ್ರಮದಿಂದ ಬಸವಳಿಯುವ ಮಕ್ಕಳಿಗೆ ಬೇಸಿಗೆ ರಜೆಯ ವಿರಾಮ ಸಮಯವನ್ನು ಒದಗಿಸಲು ಪಾಲಕರು ಸಿದ್ಧರಿಲ್ಲ. ಪ್ರಾಥಮಿಕ ಶಿಕ್ಷಣದಿಂದಲೇ ಮಕ್ಕಳನ್ನು ಭವಿಷ್ಯದಲ್ಲಿ ವೈದ್ಯ, ಎಂಜಿನಿಯರ್, ಉನ್ನತ ಅಧಿಕಾರಿ ಆಗಿಸುವ ಪ್ರಯತ್ನ ಆರಂಭಗೊಳ್ಳುತ್ತದೆ. ನಿರಂತರ ಮಾನಸಿಕ ಶ್ರಮ ಮಕ್ಕಳ ಮನಸ್ಸು ಮತ್ತು ದೇಹದ ಮೇಲೆ ಪರಿಣಾಮ ಬೀರುತ್ತಿದೆ. ಮಕ್ಕಳ ಬೌದ್ಧಿಕ ಬೆಳವಣಿಗೆಯಷ್ಟೇ ಅವರ ದೈಹಿಕ ಆರೋಗ್ಯಕ್ಕೂ ಆದ್ಯತೆ ನೀಡಬೇಕು. ಇಂದಿನ ಅದೆಷ್ಟೋ ಶಾಲೆ- ಕಾಲೇಜುಗಳಲ್ಲಿ ಆಟದ ಮೈದಾನಗಳಿಲ್ಲ. ವಿದ್ಯಾರ್ಥಿಗಳು ತಮ್ಮ ದಿನದ ಹೆಚ್ಚಿನ ಸಮಯವನ್ನು ತರಗತಿಯ ನಾಲ್ಕು ಗೋಡೆಗಳ ನಡುವೆಯೇ ಕಳೆಯುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ, ಬೇಸಿಗೆ ರಜೆಯಲ್ಲೂ ಮಕ್ಕಳನ್ನು ಮತ್ತದೇ ಶೈಕ್ಷಣಿಕ ವಾತಾವರಣದಲ್ಲಿಯೇ ಸಮಯ ಕಳೆಯುವಂತಹ ಶಿಕ್ಷೆಗೆ ಗುರಿಪಡಿಸುವುದು ಸರಿಯಲ್ಲ.



ಬೇಸಿಗೆಯ ರಜೆ ಎನ್ನುವುದು ವರ್ಷಪೂರ್ತಿ ಓದಿ ಹೈರಾಣಾದ ಮಕ್ಕಳು ಒಂದಿಷ್ಟು ಮನರಂಜನೆ ಮತ್ತು ಕ್ರಿಯಾತ್ಮಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ದೊರೆಯುವ ಉತ್ತಮ ಅವಕಾಶ. ಪ್ರವಾಸ, ಮನೆಯ ಸದಸ್ಯರೊಡನೆ ಸಲ್ಲಾಪ, ಹಳ್ಳಿಯಲ್ಲಿರುವ ಅಜ್ಜ–ಅಜ್ಜಿಯ ಮನೆಗೆ ಭೇಟಿ, ಗೆಳೆಯರೊಡನೆ ಆಟೋಟ, ಪಠ್ಯಪುಸ್ತಕಗಳನ್ನು ಹೊರತುಪಡಿಸಿ ಇಷ್ಟದ ಪುಸ್ತಕಗಳ ಓದು, ಹೊಲ–ತೋಟದಲ್ಲೊಂದು ಸುತ್ತು, ಚಿತ್ರಕಲೆ–ಸಂಗೀತ–ಸಾಹಿತ್ಯದ ಅಭಿರುಚಿ ಬೆಳೆಸಿಕೊಳ್ಳುವುದು, ಇತ್ಯಾದಿ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವ ಮೂಲಕ ದೈಹಿಕ ಮತ್ತು ಮಾನಸಿಕ ಸದೃಢತೆಯನ್ನು ಮಕ್ಕಳು ಹೊಂದಬೇಕು. ಇಂತಹ ಚಟುವಟಿಕೆಗಳು ಮಕ್ಕಳ ಶೈಕ್ಷಣಿಕ ಪ್ರಗತಿಗೂ ಸಹಾಯಕ.

ಈ ಮೊದಲು ಬೇಸಿಗೆ ಶಿಬಿರಗಳಲ್ಲಿ ಚಾರಣ, ಕ್ರೀಡೆ, ನಾಟಕಗಳನ್ನಾಡಿಸುವುದು, ಚಿತ್ರಬಿಡಿಸುವುದು, ಕಥೆಗಳನ್ನು ಹೇಳುವುದು ಇತ್ಯಾದಿ ಚಟುವಟಿಕೆಗಳು ನಡೆಯುತ್ತಿದ್ದವು. ಆದರೆ, ಈಗ ಹೆಚ್ಚಿನ ಬೇಸಿಗೆ ಶಿಬಿರಗಳು ಟ್ಯುಟೋರಿಯಲ್‌ಗಳಾಗಿ ರೂಪಾಂತರಗೊಂಡಿವೆ. ವರ್ಷಪೂರ್ತಿ ಶಾಲೆಯ ನಾಲ್ಕು ಗೋಡೆಗಳ ತರಗತಿಯಲ್ಲಿ ಕಲಿಯಬೇಕಾದದ್ದನ್ನು ಮಕ್ಕಳು ಬೇಸಿಗೆ ಶಿಬಿರಗಳಲ್ಲಿ ಕಲಿಯುತ್ತಿದ್ದಾರೆ. ಮಕ್ಕಳ ಮಾನಸಿಕ ಉಲ್ಲಾಸಕ್ಕೆ ಕಾರಣವಾಗುವ ಚಟುವಟಿಕೆಗಳನ್ನು ಶಿಬಿರಗಳಲ್ಲಿ ಸ್ಥಗಿತಗೊಳಿಸಲಾಗಿದೆ.

ನ್ಯೂಕ್ಲಿಯರ್ ಕುಟುಂಬಗಳು ಸೃಷ್ಟಿಯಾಗಿರುವ ಈ ದಿನಗಳಲ್ಲಿ ಮಕ್ಕಳನ್ನು ವಸತಿಶಾಲೆಗಳಿಗೆ ಸೇರಿಸಿ ಓದಿಸುವ ಪ್ರವೃತ್ತಿ ಪಾಲಕರಲ್ಲಿ ಹೆಚ್ಚುತ್ತಿದೆ. ಶೈಕ್ಷಣಿಕ ವರ್ಷದುದ್ದಕ್ಕೂ ವಸತಿಶಾಲೆಗಳಲ್ಲಿರುವ ಮಕ್ಕಳಿಗೆ ಪರೀಕ್ಷೆ ನಂತರದ ರಜಾದಿನಗಳಲ್ಲಾದರೂ ಪಾಲಕರ ಸಾಂಗತ್ಯ ಅಗತ್ಯವಾಗಿರುತ್ತದೆ. ವಿಪರ್ಯಾಸವೆಂದರೆ, ಉದ್ಯೋಗದ ಕಾರಣದಿಂದ ಪಾಲಕರಿಗೆ ಬೇಸಿಗೆಯ ರಜಾದಿನಗಳಲ್ಲೂ ಮಕ್ಕಳೊಂದಿಗೆ ಸಮಯ ಕಳೆಯಲು ಸಾಧ್ಯವಾಗುತ್ತಿಲ್ಲ. ಪರಿಣಾಮವಾಗಿ ಪಾಲಕರು ಬೇಸಿಗೆ ಶಿಬಿರಗಳ ಮೊರೆ ಹೋಗುತ್ತಿದ್ದಾರೆ. ಮಕ್ಕಳನ್ನು ಒಂದು ಸುರಕ್ಷಿತ ವಲಯದೊಳಗೆ ಸೇರಿಸುವ ಧಾವಂತದಲ್ಲಿ ಅವರನ್ನು ಮತ್ತದೇ ಅಸಹನೀಯ ಎನಿಸುವ ಶೈಕ್ಷಣಿಕ ವಾತಾವರಣಕ್ಕೆ ದೂಡುತ್ತಿದ್ದಾರೆ.

ಬೇಸಿಗೆ ಶಿಬಿರಗಳಲ್ಲಿ ಪಠ್ಯೇತರ ಚಟುವಟಿಕೆಗಳಿಗೆ ಆದ್ಯತೆ ನೀಡುವುದು ಅಗತ್ಯವಾಗಿದೆ. ಯೋಗ, ಬರವಣಿಗೆ, ಚಿತ್ರಕಲೆ, ಸಂಗೀತ, ನಾಟಕ ಇತ್ಯಾದಿ ವಿಷಯಗಳಲ್ಲಿ ತರಬೇತಿ ನೀಡುವುದು ಉತ್ತಮ ವಿಧಾನ. ಕಥಾಕಮ್ಮಟವನ್ನು ಆಯೋಜಿಸಿ ಮಕ್ಕಳಲ್ಲಿ ಕಥೆ ಹೇಳುವ ಮತ್ತು ಕೇಳುವ ಪ್ರವೃತ್ತಿಗೆ ಉತ್ತೇಜನ ನೀಡಬೇಕು. ಕ್ರೀಡೆಯ ಮೂಲಕ ಸಹಬಾಳ್ವೆಯ ಅರಿವು ಮೂಡಿಸಬೇಕು. ದುರಂತವೆಂದರೆ, ಹೆಚ್ಚಿನ ಪಾಲಕರು ಬೇಸಿಗೆ ಶಿಬಿರಗಳ ಸೃಜನಾತ್ಮಕ ಚಟುವಟಿಕೆಗಳಲ್ಲಿ ತಮ್ಮ ಮಕ್ಕಳು ತೊಡಗಿಸಿಕೊಳ್ಳುವುದನ್ನು ಇಷ್ಟಪಡುವುದಿಲ್ಲ. ಶಿಬಿರಗಳಲ್ಲೂ ಮಕ್ಕಳು ಪಠ್ಯಪುಸ್ತಕಗಳನ್ನೇ ಓದಬೇಕೆನ್ನುವ ಹಟ ಅವರದು. ಬೇಸಿಗೆ ಶಿಬಿರಗಳು ರಿಯಾಲಿಟಿ ಶೋಗಳಲ್ಲ ಮತ್ತು ಮಕ್ಕಳು ಸ್ಪರ್ಧಿಗಳಲ್ಲ ಎನ್ನುವುದನ್ನು ಪಾಲಕರು ಹಾಗೂ ಶಿಬಿರಗಳ ಆಯೋಜಕರು ಅರ್ಥಮಾಡಿಕೊಳ್ಳಬೇಕಿದೆ.

ಇತ್ತೀಚಿನ ದಿನಗಳಲ್ಲಿ ಮಕ್ಕಳಿಂದ ಹಿಂಸಾತ್ಮಕ ಕೃತ್ಯಗಳು ಘಟಿಸುತ್ತಿವೆ. ಮಕ್ಕಳಲ್ಲಿ ಹೆಚ್ಚುತ್ತಿರುವ ಹಿಂಸಾತ್ಮಕ ಪ್ರವೃತ್ತಿಗೆ ನೈತಿಕತೆಯ ಕೊರತೆಯೇ ಕಾರಣವಾಗಿದೆ. ನೈತಿಕ ಅಧಃಪತನ ಭವಿಷ್ಯದ ನಾಗರಿಕರೆಂದು ಕರೆಸಿಕೊಳ್ಳುವ ಮಕ್ಕಳಿಂದ ಶುರುವಾಗುತ್ತಿರುವುದು ಆತಂಕದ ಸಂಗತಿಯಾಗಿದೆ.

ಶಿಕ್ಷಣ ವ್ಯವಸ್ಥೆ ವಾಣಿಜ್ಯೀಕರಣಗೊಂಡಿರುವ ಸದ್ಯದ ಸಂದರ್ಭದಲ್ಲಿ ಶಾಲೆಗಳಲ್ಲಿ ನೈತಿಕ ಬೋಧನೆ ಮರೀಚಿಕೆಯಾಗಿದೆ. ಇಂಥ ಸಂದಿಗ್ಧ ಸನ್ನಿವೇಶದಲ್ಲಿ ಬೇಸಿಗೆ ಶಿಬಿರಗಳೂ ಸೃಜನಶೀಲತೆಗೆ ಬೆನ್ನುಹಾಕಿದರೆ ಮಕ್ಕಳಲ್ಲಿ ನೈತಿಕ ಅಧಃಪತನ ಮತ್ತಷ್ಟು ಹೆಚ್ಚುವ ಅಪಾಯದ ಸಾಧ್ಯತೆಯಿದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ರಾಜ್ಯ ಲೋಕಸೇವಾ ಆಯೋಗಗಳು: ಪ್ರಶ್ನೆಪತ್ರಿಕೆ ಸೋರಿಕೆ, ವಿಳಂಬ ಫಲಿತಾಂಶ, ಪರೀಕ್ಷೆ ರದ್ದು

ಕರಗುತ್ತಿದೆ ನೌಕರಿ ಕನಸು

● ಸೂರ್ಯನಾರಾಯಣ ವಿ., ಬಿ.ವಿ.ಶ್ರೀನಾಥ್

ಭಾರತ ಸರ್ಕಾರದ ಕಾಯ್ದೆ–1935 ಅಡಿಯಲ್ಲಿ ದೇಶದಲ್ಲಿ ಪ್ರತಿಯೊಂದು ರಾಜ್ಯದಲ್ಲಿಯೂ ಲೋಕಸೇವಾ ಆಯೋಗವನ್ನು (ಪಿಎಸ್‌ಸಿ) ಸ್ಥಾಪನೆ ಮಾಡಲಾಗಿದೆ. ಆಯಾ ರಾಜ್ಯಗಳ ವಿವಿಧ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳುವ ಸಂಬಂಧ ಅಧಿಸೂಚನೆ ಹೊರಡಿಸುವುದು, ಪರೀಕ್ಷೆಗಳನ್ನು ನಡೆಸುವುದು, ಉತ್ತರ ಪತ್ರಿಕೆಗಳ ಮೌಲ್ಯಮಾಪನ ಮಾಡಿ ಫಲಿತಾಂಶ ಪ್ರಕಟಿಸುವುದು ಅವುಗಳ ಕೆಲಸವಾಗಿದೆ. ಆದರೆ, ದೇಶದಲ್ಲಿ ಎಷ್ಟು ಲೋಕಸೇವಾ ಆಯೋಗಗಳು ಈ ಕೆಲಸವನ್ನು ಪಾರದರ್ಶಕವಾಗಿ, ವಿವಾದಕ್ಕೆ ಆಸ್ಪದವಿಲ್ಲದಂತೆ ಮಾಡುತ್ತಿವೆ ಎನ್ನುವುದನ್ನು ಪರಿಶೀಲಿಸಿದರೆ, ಸಿಗುವ ಚಿತ್ರಣವು ಅತ್ಯಂತ ನಿರಾಶಾದಾಯಕವಾಗಿದೆ.

ದೊಡ್ಡ ಪ್ರಮಾಣದಲ್ಲಿ ಸಿಬ್ಬಂದಿ ಅಗತ್ಯವಿಲ್ಲದಿರುವುದು, ಆರ್ಥಿಕ ಸಮಸ್ಯೆ ಇತ್ಯಾದಿ ಕಾರಣಗಳಿಂದ ಪಿಎಸ್‌ಸಿಗಳು ನಿಯಮಿತವಾಗಿ ನೇಮಕಾತಿ ಮಾಡಿಕೊಳ್ಳುವುದಿಲ್ಲ. ಆದರೆ, ಬಹುತೇಕ ಪಿಎಸ್‌ಸಿಗಳಲ್ಲಿ ಅವು ನಡೆಸುವ ಪ್ರತಿಯೊಂದು ಪರೀಕ್ಷೆಯಲ್ಲೂ ಅಕ್ರಮಗಳು, ಭ್ರಷ್ಟಾಚಾರ, ಸ್ವಜನಪಕ್ಷಪಾತದಂಥ ಆರೋಪಗಳು ಕೇಳಿಬರುವುದು ಸಾಮಾನ್ಯವಾಗಿಬಿಟ್ಟಿದೆ. ಹಾಗೆಯೇ ಪರೀಕ್ಷೆಗೂ ಮುಂಚೆಯೇ ಪ್ರಶ್ನೆಪತ್ರಿಕೆ ಬಹಿರಂಗವಾಗುವುದು, ಪರೀಕ್ಷೆ ರದ್ದು, ಮುಂದೂಡಿಕೆ, ಫಲಿತಾಂಶ ವಿಳಂಬ, ಫಲಿತಾಂಶ ತಡೆಹಿಡಿಯುವುದು ಕೂಡ ಸಾಮಾನ್ಯ ವಿದ್ಯಮಾನಗಳಾಗಿವೆ.

ಅಕ್ರಮ, ಅವ್ಯವಹಾರಗಳಿಗೆ ಜಾರ್ಖಂಡ್ ಲೋಕಸೇವಾ ಆಯೋಗವು ದೇಶದಲ್ಲಿಯೇ ಕುಖ್ಯಾತಿ ಗಳಿಸಿದೆ. 2006ರಲ್ಲಿ ಅಲ್ಲಿ ನಡೆದಿದ್ದ 'ಎ' ಶ್ರೇಣಿಯ ಹುದ್ದೆಗಳ ನೇಮಕಾತಿ ಪರೀಕ್ಷೆಯ ಫಲಿತಾಂಶವು ಹಲವು ರೀತಿಯ ಅಕ್ರಮಗಳ ಆರೋಪದಿಂದಾಗಿ ವಿಳಂಬವಾಗಿ, ಕೊನೆಗೆ 15 ವರ್ಷಗಳ ನಂತರ ಪ್ರಕಟವಾಗಿತ್ತು. ಹರಿಯಾಣ, ಛತ್ತೀಸಗಢ, ಉತ್ತರಾಖಂಡ ಪಿಎಸ್‌ಸಿಗಳದ್ದೂ ಇದೇ ಕಥೆ. ಮಧ್ಯಪ್ರದೇಶದ 60 ಅಭ್ಯರ್ಥಿಗಳು ಗೆಜೆಟೆಡ್ ಹುದ್ದೆಗಳ ಪರೀಕ್ಷೆಗೆ ಸಂಬಂಧಿಸಿದ ಅಲ್ಲಿನ ಲೋಕಸವಾ ಆಯೋಗದ ಮೌಲ್ಯಮಾಪನದಲ್ಲಿ ತಮಗೆ ಅನ್ಯಾಯ ಮಾಡಲಾಗಿದೆ ಎಂದು ಕೋರ್ಟ್ ಮೊರೆ ಹೋಗಿದ್ದರು. ಅವರಿಗೆ ಮುಂದಿನ ಹಂತದ ಪರೀಕ್ಷೆ ಬರೆಯಲು ಅನುಮತಿ ನೀಡುವಂತೆ ಕೋರ್ಟ್ ಆದೇಶಿಸಿತ್ತು. ಬಿಹಾರದಲ್ಲಿ 2017ರಲ್ಲಿ ಗೆಜೆಟೆಡ್ ಹುದ್ದೆಗಳ ನೇಮಕಾತಿ ಪರೀಕ್ಷೆಯ ಪ್ರಶ್ನೆಪತ್ರಿಕೆಗಳು ಸೋರಿಕೆಯಾಗಿದ್ದವು. ಕೆಲವು ಅಭ್ಯರ್ಥಿಗಳಿಗೆ ಪ್ರತ್ಯೇಕ ಕೊಠಡಿಗಳಲ್ಲಿ ಪ್ರಶ್ನೆಪತ್ರಿಕೆ ಒದಗಿಸಿ, ಪರೀಕ್ಷೆ ಬರೆಯುವಂತೆ ಮಾಡಿದ ಘಟನೆಯೂ ಬಿಹಾರದಲ್ಲಿ ನಡೆದಿತ್ತು. ರಾಜಸ್ಥಾನದಲ್ಲಿ ಪ್ರಶ್ನೆಪತ್ರಿಕೆ ಸೋರಿಕೆ ಸಂಬಂಧ ಕಳೆದ ವರ್ಷ ಪಿಎಸ್‌ಸಿ ಸದಸ್ಯರೊಬ್ಬನನ್ನು ಬಂಧಿಸಲಾಗಿತ್ತು.

ಗುಜರಾತ್ ಲೋಕಸೇವಾ ಆಯೋಗವು ನೇಮಕಾತಿಗಳಿಗೆ ಸಂಬಂಧಿಸಿ ಹಲವು ಬಾರಿ ವಿವಾದಕ್ಕೆ ಗುರಿಯಾಗಿದೆ. ಉದ್ಯೋಗಾಕಾಂಕ್ಷಿಗಳಿಗೆ ಕೋಚಿಂಗ್ ನೀಡುವ ಸರ್ಕಾರೇತರ ಸಂಸ್ಥೆಯೊಂದರಲ್ಲಿ ಅಣಕು ಸಂದರ್ಶನ



ಅಸ್ಸಾಂನ ಗುವಾಹಟಿಯಲ್ಲಿ 2022ರ ಆಗಸ್ಟ್ 21ರಂದು ನಡೆದಿದ್ದ ನೇಮಕಾತಿ ಪರೀಕ್ಷೆ ಬರೆಯಲು ಪರೀಕ್ಷಾ ಕೇಂದ್ರದ ಎದುರು ನೆರೆದಿದ್ದ ಉದ್ಯೋಗಾಕಾಂಕ್ಷಿಗಳು ಸಂಗ್ರಹ ಚಿತ್ರ

ನಡೆಸುವ ಒಬ್ಬ ಅಧಿಕಾರಿಯೇ ವಾಸ್ತವವಾಗಿ ಲೋಕಸೇವಾ ಆಯೋಗದಲ್ಲಿಯೂ ಸಂದರ್ಶನಗಳನ್ನು ಮಾಡುವ ಸಮಿತಿಯಲ್ಲಿದ್ದುದನ್ನು (2025 ಮೇ) ಆಮ್ ಆದ್ಮಿ ಪಕ್ಷದ ಮುಖಂಡರೊಬ್ಬರು ಬಹಿರಂಗಪಡಿಸಿದ್ದರು. ಗುಜರಾತ್ ಲೋಕಸೇವಾ ಆಯೋಗ ನಡೆಸಿದ್ದ ಪರೀಕ್ಷೆಯಲ್ಲಿ ಅತ್ಯಂತ ಕಡಿಮೆ ಅಂಕ ಪಡೆದು ವಿಫಲವಾಗಿದ್ದ ಯುವಕನೊಬ್ಬ ಯುಪಿಎಸ್‌ಸಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದನ್ನು ಪ್ರಸ್ತಾಪಿಸಿದ್ದ ಬಿಜೆಪಿ ಮುಖಂಡರೊಬ್ಬರು, ಗುಜರಾತ್ ಲೋಕಸೇವಾ ಆಯೋಗದಲ್ಲಿ ಪ್ರಬಲ ಜಾತಿಯ ಅಭ್ಯರ್ಥಿಗಳ ಪರವಾಗಿ ಪಕ್ಷಪಾತ ಮಾಡಲಾಗುತ್ತಿದೆ; ಎಸ್‌ಸಿ, ಎಸ್‌ಟಿ, ಒಬಿಸಿ ಅಭ್ಯರ್ಥಿಗಳಿಗೆ ಅನ್ಯಾಯವಾಗುತ್ತಿದೆ ಎಂದು ಕಳೆದ ವರ್ಷ ಆರೋಪಿಸಿದ್ದು ವಿವಾದವಾಗಿತ್ತು.

ಬಹುತೇಕ ಎಲ್ಲ ರಾಜ್ಯಗಳ ಪಿಎಸ್‌ಸಿಗಳಲ್ಲೂ ಇಂಥವೇ ಸಮಸ್ಯೆಗಳು. ಕಳೆದ ಐದು ವರ್ಷಗಳಲ್ಲಿ ವಿವಿಧ ರಾಜ್ಯಗಳ ಪಿಎಸ್‌ಸಿಗಳು ನಡೆಸುವ 40 ಪರೀಕ್ಷೆಗಳಿಗೆ ಸಂಬಂಧಿಸಿದ ಪ್ರಶ್ನೆಪತ್ರಿಕೆಗಳು ಸೋರಿಕೆಯಾಗಿದ್ದು, ಇದು ಸುಮಾರು 50 ಲಕ್ಷ ಉದ್ಯೋಗಾಕಾಂಕ್ಷಿಗಳ ಮೇಲೆ ಪರಿಣಾಮ ಬೀರಿದೆ ಎಂದು ವರದಿಯೊಂದು ತಿಳಿಸಿದೆ. ಪಿಎಸ್‌ಸಿಗಳ ರಾಜಕೀಯ, ಭ್ರಷ್ಟಾಚಾರ, ಸ್ವಜನಪಕ್ಷಪಾತಗಳಿಂದ ಕೋಟ್ಯಂತರ ಯುವಜನರ ಉದ್ಯೋಗದ ಕನಸು ಕಮರುತ್ತಲೇ ಇದೆ.

ಪಿಎಸ್‌ಸಿಗಳ ಸಮಸ್ಯೆಗಳೇನು?


ಪಿಎಸ್‌ಸಿಗಳ ಒಟ್ಟಾರೆ ಸ್ವರೂಪ ಮತ್ತು ಪ್ರಕ್ರಿಯೆಗಳಲ್ಲಿಯೇ ಹಲವು ರೀತಿಯ ಸಮಸ್ಯೆಗಳಿವೆ

- ರಾಜಕೀಯ ಪಕ್ಷಗಳ ಕಾರ್ಯಕರ್ತರು, ಮುಖಂಡರು, ವಕ್ತಾರರನ್ನು ಪಿಎಸ್‌ಸಿ ಅಧ್ಯಕ್ಷರು, ಸದಸ್ಯರನ್ನಾಗಿ ನೇಮಕ ಮಾಡುವುದು ಬಹುತೇಕ ಸಮಸ್ಯೆಗಳ ಮೂಲವಾಗಿದೆ. ಅಧ್ಯಕ್ಷರು, ಸದಸ್ಯರ ನೇಮಕಾತಿಯಲ್ಲಿ ರಾಜಕೀಯ ಹಿತಾಸಕ್ತಿ, ವ್ಯಾಪಕ ಭ್ರಷ್ಟಾಚಾರ ನಡೆಯುತ್ತಿದೆ
- ಯುಪಿಎಸ್‌ಸಿಯಂತೆ ತಜ್ಞರ ಸಮಿತಿಗಳನ್ನು ನೇಮಿಸಿ, ಅವುಗಳ ಶಿಫಾರಸಿನ ಆಧಾರದಲ್ಲಿ ಹೊಸ ಪಠ್ಯಕ್ರಮವನ್ನು ರೂಪಿಸುವ ಪರಿಪಾಟ ಪಿಎಸ್‌ಸಿಗಳಲ್ಲಿ ಇಲ್ಲ. ಅವುಗಳನ್ನು ಗೋಪ್ಯವಾಗಿ, ಪ್ರಭಾವಕ್ಕೆ ಮಣಿಯದಂತೆ ಮೌಲ್ಯಮಾಪನ ಮಾಡುವ ಪದ್ಧತಿಯೂ ಇಲ್ಲ
- ನಿಗದಿತವಾಗಿ ಮತ್ತು ಕಾಲಮಿತಿಯಲ್ಲಿ ಪರೀಕ್ಷೆಗಳನ್ನು ನಡೆಸಿ, ಫಲಿತಾಂಶ ಪ್ರಕಟ ಮಾಡುವ ವ್ಯವಸ್ಥೆ ಇಲ್ಲ
- ಸಂವಿಧಾನದ 41ನೇ ತಿದ್ದುಪಡಿ ಅನ್ವಯ ಪಿಎಸ್‌ಸಿಗಳ ಸದಸ್ಯರ ಗರಿಷ್ಠ ವಯಸ್ಸನ್ನು 62 ವರ್ಷಕ್ಕೆ ಹೆಚ್ಚಿಸಲಾಗಿದೆ. ಪಿಎಸ್‌ಸಿಗಳ ಸದಸ್ಯರ ಕನಿಷ್ಠ ವಯಸ್ಸನ್ನು 55 ವರ್ಷಕ್ಕೆ, ಗರಿಷ್ಠ ವಯಸ್ಸನ್ನು 65 ವರ್ಷಕ್ಕೆ ಹೆಚ್ಚಿಸಬೇಕು ಎಂದು ತಜ್ಞರು ಸಲಹೆ ನೀಡಿದ್ದರೂ, ಅದು ಪಾಲನೆಯಾಗಿಲ್ಲ
- ತಂತ್ರಜ್ಞಾನ ಅಭಿವೃದ್ಧಿ ಹೊಂದಿದ್ದರೂ, ಅದನ್ನು ಬಳಸಿಕೊಂಡು ಪರೀಕ್ಷೆಗಳಲ್ಲಿ ಅಕ್ರಮ, ನಕಲು ತಡೆಯುವಲ್ಲಿ ಪಿಎಸ್‌ಸಿಗಳು ವಿಫಲವಾಗಿವೆ

ನೆರೆ ರಾಜ್ಯಗಳಲ್ಲೂ ಇದೇ ಕಥೆ

ಕರ್ನಾಟಕದ ನೆರೆಹೊರೆಯ ರಾಜ್ಯಗಳ ಲೋಕಸೇವಾ ಆಯೋಗಗಳ ಕಥೆಯೂ ಭಿನ್ನವಾಗಿಲ್ಲ. ತಮಿಳುನಾಡು, ತೆಲಂಗಾಣ, ಆಂಧ್ರ ಪ್ರದೇಶ, ಮಹಾರಾಷ್ಟ್ರ ಗಳ ಆಯೋಗಗಳು ನಡೆಸುವ ನೇಮಕಾತಿ ಪ್ರಕ್ರಿಯೆಗಳೂ ಒಂದಿಲ್ಲೊಂದು ವಿವಾದಕ್ಕೆ ಸಿಲುಕುತ್ತಲೇ ಇವೆ. ಪ್ರಶ್ನೆಪತ್ರಿಕೆ ಸೋರಿಕೆ, ನೇಮಕಾತಿಗೆ ಲಂಚ, ರಾಜಕೀಯ ನೇಮಕಾತಿ, ಸ್ವಜನಪಕ್ಷಪಾತ ಮುಂದಾದ ಅಕ್ರಮಗಳು ನಡೆಯುತ್ತಲೇ ಇವೆ. ಅಭ್ಯರ್ಥಿಗಳ ಆಕ್ರೋಶ, ಪ್ರತಿಭಟನೆ, ತನಿಖೆ, ನ್ಯಾಯಾಲಯದಲ್ಲಿ ಹೋರಾಟ... ಹೀಗೆ ಕರ್ನಾಟಕದ ಕೆಪಿಎಸ್‌ಸಿಯಲ್ಲಿ ನಡೆಯುತ್ತಿರುವ ಘಟನೆಗಳು ಅಲ್ಲಿಯೂ ವರದಿಯಾಗಿವೆ.

ಎರಡೂವರೆ ದಶಕಗಳ ಹಿಂದೆ ನಡೆದ ಅಕ್ರಮದ ತನಿಖೆ ಇನ್ನೂ ಪೂರ್ಣಗೊಳ್ಳದ ಉದಾಹರಣೆಯೂ ಇದೆ. ಈ ಆಯೋಗಗಳ ಕಾರ್ಯನಿರ್ವಹಣೆಯು ರಾಜಕೀಯ ಜಟಾಪಟಿಗೂ ಕಾರಣವಾಗಿದೆ. ಅಕ್ರಮಗಳು ವರದಿಯಾದ ಸಂದರ್ಭದಲ್ಲಿ ವಿರೋಧ ಪಕ್ಷಗಳು ಆಡಳಿತಾರೂಢ ಪಕ್ಷಗಳ ಮೇಲೆ ಟೀಕೆ ನಡೆಸುವುದು ಅಲ್ಲೂ ನಡೆದೇ ಇದೆ.



ತಮಿಳುನಾಡು

- ತಮಿಳುನಾಡು ಲೋಕಸೇವಾ ಆಯೋಗವು ಈ ವರ್ಷದ ಫೆಬ್ರುವರಿಯಲ್ಲಿ ನಡೆಸಬೇಕಾಗಿದ್ದ 'ಎ' ಶ್ರೇಣಿ ಮತ್ತು 2ಎ ಶ್ರೇಣಿ ಹುದ್ದೆಗಳ ನೇಮಕಾತಿ ಪರೀಕ್ಷೆಯನ್ನು ಕೊನೆಗಳಿಗೆಯಲ್ಲಿ ಮುಂದೂಡಿದ್ದು ಸುದ್ದಿಯಾಗಿತ್ತು. ಪ್ರವೇಶ ಪತ್ರ ವಿತರಣೆಯಲ್ಲಿ ಆದ ದೋಷದಿಂದ ಪರೀಕ್ಷೆ ಮುಂದೂಡಬೇಕಾಯಿತು ಎಂದು ಟಿಪಿಎಸ್‌ಸಿ ಹೇಳಿತ್ತು. ಇದನ್ನು ಮುಂದಿಟ್ಟುಕೊಂಡು ವಿರೋಧ ಪಕ್ಷಗಳು ಆಯೋಗದ ಕಾರ್ಯನಿರ್ವಹಣೆ ಮತ್ತು ರಾಜ್ಯ ಸರ್ಕಾರದ ವಿರುದ್ಧ ಟೀಕಾ ಪ್ರಹಾರವನ್ನೇ ನಡೆಸಿದ್ದವು.
- ಡಿ ಗ್ರೂಪ್ ನೌಕರರ ನೇಮಕಾತಿಗಾಗಿ ಟಿಪಿಎಸ್‌ಸಿಯು 2019ರ ಸೆಪ್ಟೆಂಬರ್ 1ರಂದು ನಡೆಸಿದ್ದ ಪರೀಕ್ಷೆಯಲ್ಲಿ ಅಕ್ರಮ ನಡೆದಿತ್ತು. 99 ಮಂದಿ ಅಭ್ಯರ್ಥಿಗಳು ಅವ್ಯವಹಾರದಲ್ಲಿ ತೊಡಗಿದ್ದು ತನಿಖೆಯಲ್ಲಿ ಗೊತ್ತಾಗಿತ್ತು. ಇವರು ಜೀವನ ಪರ್ಯಂತ ಸ್ಪರ್ಧಾತ್ಮಕ ಪರೀಕ್ಷೆ ಬರೆಯುವುದನ್ನು ಆಯೋಗ ನಿಷೇಧಿಸಿತ್ತು. ಈ ಅಭ್ಯರ್ಥಿಗಳು ಮೊದಲು ಉತ್ತರ ಬರೆಯಲು ಬೇಗ ಆವಿಯಾಗುವ ಶಾಯಿಯನ್ನು ಬಳಸಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿತ್ತು. 2012ರಲ್ಲಿ 'ಬಿ' ಶ್ರೇಣಿಯ ಹುದ್ದೆಗಳ ನೇಮಕಾತಿಗಾಗಿ ನಡೆದ ಪರೀಕ್ಷೆಯ ಪ್ರಶ್ನೆಪತ್ರಿಕೆ ಸೋರಿಕೆಯಾಗಿತ್ತು.

ತೆಲಂಗಾಣ

- ತೆಲಂಗಾಣ ಲೋಕಸೇವಾ ಆಯೋಗವು 2023ರ ಮಾರ್ಚ್‌ನಲ್ಲಿ ಸಹಾಯಕ ಎಂಜಿನಿಯರ್‌ಗಳ ನೇಮಕಾತಿಗಾಗಿ ನಡೆಸಲು ಉದ್ದೇಶಿಸಿದ್ದ ಪರೀಕ್ಷೆಯ ಪ್ರಶ್ನೆಪತ್ರಿಕೆ ಸೋರಿಕೆಯಾಗಿತ್ತು. ಹಾಗಾಗಿ ಪರೀಕ್ಷೆಯನ್ನು ರದ್ದುಪಡಿಸಲಾಗಿತ್ತು. ಪ್ರಕರಣದ ತನಿಖೆ ನಡೆಸುವಾಗ, ಆಯೋಗದಲ್ಲೇ ಕೆಲಸ ಮಾಡುತ್ತಿದ್ದ ಉದ್ಯೋಗಿಯೊಬ್ಬರು ವರ್ಷದಲ್ಲಿ ವಿವಿಧ 15 ಪರೀಕ್ಷೆಗಳ ಪ್ರಶ್ನೆಪತ್ರಿಕೆಗಳನ್ನು ಸೋರಿಕೆ ಮಾಡಿದ್ದು ಗೊತ್ತಾಗಿತ್ತು
- 2024ರಲ್ಲಿ ನಡೆದ 563 'ಎ' ಹುದ್ದೆಗಳ ನೇಮಕಾತಿ ಪ್ರಕ್ರಿಯೆ ವಿವಾದಕ್ಕೆ ಗುರಿಯಾಗಿತ್ತು. ಆಯೋಗವು ಅನುಸರಿಸಿದ ಕೆಲವು ಮಾನದಂಡಗಳು ಮತ್ತು ಕೆಲವು ಅಭ್ಯರ್ಥಿಗಳು ಗಳಿಸಿದ ಅಂಕಗಳ ಕುರಿತಾಗಿ ಅನುಮಾನ ವ್ಯಕ್ತಪಡಿಸಿ ಆಯ್ಕೆಯಾಗದ ಕೆಲವು ಅಭ್ಯರ್ಥಿಗಳು ಹೈಕೋರ್ಟ್ ಮೆಟ್ಟಿಲೇರಿದ್ದರು. ಏಕಸದಸ್ಯಪೀಠ ನೇಮಕಾತಿ ಪ್ರಕ್ರಿಯೆಗೆ ತಡೆ ಕೊಟ್ಟಿತ್ತು. ಆದರೆ, ವಿಭಾಗೀಯ ಪೀಠವು ಈ ವರ್ಷದ ಫೆಬ್ರುವರಿಯಲ್ಲಿ ನೇಮಕಾತಿ ಪ್ರಕ್ರಿಯೆ ಸರಿಯಾಗಿ ನಡೆದಿದೆ ಎಂದು ಹೇಳಿತ್ತು. ಇದರ ವಿರುದ್ಧ ಕೆಲವು ಅಭ್ಯರ್ಥಿಗಳು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು. ಈಗ ಸುಪ್ರೀಂ ಕೋರ್ಟ್ ಹೈಕೋರ್ಟ್‌ನ ತೀರ್ಪನ್ನು ಎತ್ತಿ ಹಿಡಿದಿದ್ದು, ಆಯ್ಕೆಯಾದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ಪತ್ರ ನೀಡುವಂತೆ ಸೂಚಿಸಿದೆ

ಆಂಧ್ರ ಪ್ರದೇಶ

- ಆಂಧ್ರಪ್ರದೇಶ ಲೋಕಸೇವಾ ಆಯೋಗವು 170 'ಎ' ಶ್ರೇಣಿಯ ಅಧಿಕಾರಿಗಳ ನೇಮಕಾತಿಗಾಗಿ 2020ರಲ್ಲಿ ನಡೆಸಿದ್ದ ಪರೀಕ್ಷೆಯ (2018ರಲ್ಲಿ ಅಧಿಸೂಚನೆ ಹೊರಡಿಸಲಾಗಿತ್ತು) ಉತ್ತರ ಪತ್ರಿಕೆಗಳ ಮೌಲ್ಯಮಾಪನದಲ್ಲಿ ಅಕ್ರಮಗಳು ನಡೆದಿವೆ ಎಂಬ ಆರೋಪಗಳು ಕೇಳಿಬಂದಿದ್ದು, ಪ್ರಕರಣ ಈಗ ನ್ಯಾಯಾಲಯದಲ್ಲಿದೆ. ಆಂಧ್ರ ಸರ್ಕಾರವು ಪ್ರಕರಣದ ತನಿಖೆಗೆ ಇತ್ತೀಚೆಗೆ ಎಸ್‌ಐಟಿಯನ್ನೂ ರಚಿಸಿದೆ

ಮಹಾರಾಷ್ಟ್ರ

- ಮಹಾರಾಷ್ಟ್ರದ ಲೋಕಸೇವಾ ಆಯೋಗವು 1999ರಲ್ಲಿ ಸಚಿವಾಲಯದ ಸಹಾಯಕರು, ಮಾರಾಟ ತೆರಿಗೆ ಇನ್‌ಸ್ಪೆಕ್ಟರ್‌ಗಳು, ಸಬ್‌ಇನ್‌ಸ್ಪೆಕ್ಟರ್‌ಗಳ ನೇಮಕಾತಿಗಾಗಿ ನಡೆದ ಪರೀಕ್ಷೆಯಲ್ಲಿ ಅಕ್ರಮ ನಡೆದಿತ್ತು. ಅದರ ತನಿಖೆ ಈಗಲೂ ನಡೆಯುತ್ತಿದೆ
- 2011ರಿಂದ 2025ರ ನಡುವೆ ಆಯೋಗ ನಡೆಸಿದ್ದ ಪರೀಕ್ಷೆಯಲ್ಲಿ ಅಕ್ರಮದಲ್ಲಿ ತೊಡಗಿದ್ದ 90 ಮಂದಿ ಅಭ್ಯರ್ಥಿಗಳು ಭವಿಷ್ಯದಲ್ಲಿ ಪರೀಕ್ಷೆಗಳನ್ನು ಬಳಸುವುದಕ್ಕೆ ನಿರ್ಬಂಧ ಹೇರಿ 2025ರ ಸೆಪ್ಟೆಂಬರ್‌ನಲ್ಲಿ ಆದೇಶ ಹೊರಡಿಸಿತ್ತು
- 2024ರಲ್ಲಿ ಪೂಜಾ ಖೇಡ್ಕರ್ ಪ್ರಕರಣ ವರದಿಯಾದ ಬೆನ್ನಲ್ಲೇ, ರಾಜ್ಯದಲ್ಲಿ ನಡೆಯುವ ಸ್ಪರ್ಧಾತ್ಮಕ ಪರೀಕ್ಷೆಗಳ ಅಕ್ರಮ ಎಸಗುವವರಿಗೆ ಕಠಿಣ ಶಿಕ್ಷೆ ನೀಡುವ (3ರಿಂದ 5 ವರ್ಷ ಜೈಲು ಶಿಕ್ಷೆ, ₹10 ಲಕ್ಷದವರೆಗೆ ದಂಡ) ನಿಯಮಗಳನ್ನು ಸರ್ಕಾರ ಜಾರಿಗೆ ತಂದಿತ್ತು

ಕೆಪಿಎಸ್‌ಸಿ ಆಂತರಿಕ ಕಚ್ಚಾಟ ಅಧೋಗತಿಗೆ ವಿಶ್ವಾಸಾರ್ಹತೆ

● ರಾಜೇಶ್ ರೈ ಚಟ್ಲ

ಅಧ್ಯಕ್ಷ–ಸದಸ್ಯರ ನಡುವಿನ ಆಂತರಿಕ ತಿಕ್ಕಾಟ, ಸ್ವಹಿತಾಸಕ್ತಿ, ಸ್ವಜನ ಪಕ್ಷಪಾತ, ಅವರ ಧನದಾಹವು ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) 'ವಿಶ್ವಾಸಾರ್ಹತೆ' ಕಳೆದುಕೊಂಡು ಅಧೋಗತಿಗಿಳಿಯಲು ಕಾರಣ ಎನ್ನುವುದು ಅಲ್ಲಿ ಕೆಲಸ ಮಾಡಿರುವವರ ಅನಿಸಿಕೆ.

ಕೆಪಿಎಸ್‌ಸಿ ಸಭೆ ಪ್ರತಿ ಮಂಗಳವಾರ ನಡೆಯುವುದು ವಾಡಿಕೆ. ರಾಜ್ಯ ಸರ್ಕಾರದಿಂದ ಬಂದ ನೇಮಕಾತಿ ಪ್ರಸ್ತಾವಗಳನ್ನು ಮಂಡಿಸಿ ಅಧಿಸೂಚನೆ ಹೊರಡಿಸುವುದು, ಆಯ್ಕೆ ಪಟ್ಟಿಗೆ ಅನುಮೋದನೆ ನೀಡುವುದು ಸೇರಿದಂತೆ ಮಹತ್ವದ ನಿರ್ಣಯಗಳನ್ನು ಈ ಸಭೆಗಳಲ್ಲಿ ಕೈಗೊಳ್ಳಲಾಗುತ್ತಿದೆ. ಆದರೆ, ಎರಡು ಮೂರು ವರ್ಷಗಳಿಂದ ಈ ಸಭೆ ನಿಯಮಿತವಾಗಿ ನಡೆಯುತ್ತಿಲ್ಲ. ಅಧ್ಯಕ್ಷ–ಸದಸ್ಯರ ನಡುವಿನ ಸಂಬಂಧ ಹದಗೆಟ್ಟಿರುವುದು, ಆಂತರಿಕ ಭಿನ್ನಮತವೂ ಇದಕ್ಕೆ ಕಾರಣ. 'ವಾರಕ್ಕೊಮ್ಮೆ ಆಯೋಗದ ಸಭೆ ನಡೆಸುವ ಬಗ್ಗೆ ಸೂಕ್ತ ಕ್ರಮ ವಹಿಸಬೇಕು' ಎಂದು ಸದಸ್ಯರು ಅಧ್ಯಕ್ಷರಿಗೆ ಮನವಿ ಮಾಡಿದ್ದ ಪ್ರಸಂಗವೂ ನಡೆದಿತ್ತು.

ಆಯೋಗದ ದೈನಂದಿನ ಕಾರ್ಯನಿರ್ವಹಣೆಯಲ್ಲಿ ಸದಸ್ಯರ ಸಕ್ರಿಯ ಭಾಗವಹಿಸುವಿಕೆಯ ಕುರಿತಂತೆ ಕೆಪಿಎಸ್‌ಸಿ ಹಾಲಿ ಅಧ್ಯಕ್ಷ ಶಿವಶಂಕರಪ್ಪ ಎಸ್. ಸಾಹುಕಾರ್, 'ಸದಸ್ಯರು ಕಚೇರಿಗೆ ಪ್ರತಿದಿನ ಹಾಜರಾಗಬೇಕು. ಆದರೆ, ಕೆಲವರು ನಿಯಮಿತವಾಗಿ ಹಾಜರಾಗುವುದಿಲ್ಲ ಅಥವಾ ಹಾಜರಾದರೂ ಮಾಹಿತಿ ನೀಡುವುದಿಲ್ಲ. ಕೆಲವರು ಸಭೆಗಳಿಗೂ ನಿಯಮಿತವಾಗಿ ಹಾಜರಾಗುವುದಿಲ್ಲ ಅಥವಾ ಹಾಜರಾಗಲು ಸಾಧ್ಯವಿಲ್ಲ ಎಂಬ ಮಾಹಿತಿಯನ್ನೂ ನೀಡುವುದಿಲ್ಲ. ಇದು ಅಪೇಕ್ಷಣೀಯವಾದುದಲ್ಲ' ಎಂದು ಆಕ್ಷೇಪ ವ್ಯಕ್ತಪಡಿಸಿ ಸದಸ್ಯರಿಗೆ ಜ್ಞಾಪನಾ ಪತ್ರ ಕಳುಹಿಸಿದ್ದರು. ಈ ಪತ್ರವು ಸದಸ್ಯರನ್ನು ಕೆರಳಿಸಿತ್ತು. ಸದಸ್ಯರೊಬ್ಬರು ಆ ಪತ್ರವನ್ನು ಆಯೋಗದ ಸಭೆಯಲ್ಲಿಯೇ ಹರಿದುಹಾಕಿದ್ದರು. ಅಷ್ಟೇ ಅಲ್ಲ, 'ಅಧ್ಯಕ್ಷರು ಆಯೋಗದ ಸಭೆಗಳನ್ನೇ ಕರೆಯುವುದಿಲ್ಲ. ಅದರ ಬದಲು ಈ ಜ್ಞಾಪನಾ ಪತ್ರ ನೀಡಿದ್ದಾರೆ. ಈ ರೀತಿ ಜ್ಞಾಪನಾ ಪತ್ರ ನೀಡಲು ಅಧ್ಯಕ್ಷರಿಗೆ ಅಧಿಕಾರವೇ ಇಲ್ಲ' ಎಂದು ಹೈಕೋರ್ಟ್‌ನಲ್ಲಿ ದಾವೆಯನ್ನೂ ಹೂಡಿದ್ದರು!

ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ಅನ್ವಯಿಸದೇ, 'ವಿಶೇಷ ಪ್ರಕರಣ'ವೆಂದು ಪರಿಗಣಿಸಿ ಮೋಟಾರು ವಾಹನ ನಿರೀಕ್ಷಕ ಮತ್ತು ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಹುದ್ದೆಗಳ ನೇಮಕಾತಿ ಮುಂದುವರಿಸುವ ವಿಚಾರದಲ್ಲಿ ಅಧ್ಯಕ್ಷ–ಸದಸ್ಯರ ನಡುವೆ ನಡೆದ ತಿಕ್ಕಾಟ ತೀರಾ ಇತ್ತೀಚಿನ ಸಂಗತಿ. ಒಳ ಮೀಸಲಾತಿ ಜಾರಿಗೂ ಮೊದಲೇ ಹೊರಡಿಸಿದ್ದ ಅಧಿಸೂಚನೆಯಂತೆಯೇ ನೇಮಕಾತಿ ಪ್ರಕ್ರಿಯೆ ನಡೆಸಿಯೇ ತೀರುವ ಹಟಕ್ಕೆ ಬಿದ್ದ ಅಧ್ಯಕ್ಷರನ್ನು ಆಯೋಗದ ಸಭೆ ನಡೆಯುತ್ತಿದ್ದಾಗಲೇ ಇತರ ಸದಸ್ಯರು ಸಭಾ ಕೊಠಡಿಯಲ್ಲಿ ದಿಗ್ಬಂಧನ ಹಾಕಿದ ಪ್ರಸಂಗ ನಡೆದಿತ್ತು. ಈ ನೇಮಕಾತಿ ಪ್ರಕ್ರಿಯೆ ಮುಂದುವರಿಸುವುದಕ್ಕೆ ಯಾವುದೇ ಕಾರಣಕ್ಕೂ ಅವಕಾಶ ನೀಡುವುದಿಲ್ಲವೆಂದು ಬಹುತೇಕ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದ ಕಾರಣ, ಮಧ್ಯಪ್ರವೇಶಿಸಿದ ಸರ್ಕಾರ ಎರಡೂ ಅಧಿಸೂಚನೆಗಳನ್ನು ರದ್ದುಪಡಿಸಿತ್ತು.

ಈ ತಾಳ–ಮೇಳದ ಕೊರತೆ ಕೆಪಿಎಸ್‌ಸಿಯ ಕಾರ್ಯವೈಖರಿಯನ್ನೇ ಹಳ್ಳ ಹಿಡಿಸಿದೆ. ವಿವಿಧ ಇಲಾಖೆಗಳ ಖಾಲಿ ಹುದ್ದೆಗೆ ಅಧಿಸೂಚನೆ ಹೊರಡಿಸುವುದು, ಸ್ಪರ್ಧಾತ್ಮಕ ಪರೀಕ್ಷೆ ನಡೆಸುವುದು, ಮೌಲ್ಯಮಾಪನ ನಡೆಸಿ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಿಸುವುದು, ಅಂತಿಮ ಆಯ್ಕೆ ಪಟ್ಟಿಗೆ ಮುದ್ರೆ ಒತ್ತುವುದು... ಹೀಗೆ ನೇಮಕಾತಿ ಪ್ರಕ್ರಿಯೆಯ ಪ್ರತಿ ಹಂತಕ್ಕೂ ಗ್ರಹಣ ಬಡಿಯುವಂತೆ ಮಾಡಿದೆ. ಅಷ್ಟೇ ಅಲ್ಲ, ಕೆಲವು ನೇಮಕಾತಿ ಪ್ರಕ್ರಿಯೆಗಳು 2–3 ವರ್ಷ ಕಳೆದರೂ ಪೂರ್ಣಗೊಳ್ಳುವುದೇ ಇಲ್ಲ. ಕೆಪಿಎಸ್‌ಸಿಯಲ್ಲಿನ ಈ ಬೆಳವಣಿಗೆ, ನಡೆಗೆ ಸರ್ಕಾರದ್ದು ಮೌನ. ಹತಾಶ ಅಭ್ಯರ್ಥಿಗಳದ್ದು ಏನೂ ಮಾಡಲಾಗದ ಸ್ಥಿತಿ.

ಇತ್ತೀಚೆಗೆ ವಿವಿಧ ಹುದ್ದೆಗಳ ನೇಮಕಾತಿಗೆ ಕೆಪಿಎಸ್‌ಸಿ ನಡೆಸಿದ ಪರೀಕ್ಷೆಯ ಫಲಿತಾಂಶ ಹೊರಬರುವ ಮೊದಲೇ ಸೋರಿಕೆ ಆಗುತ್ತಿದೆ. 2024ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿಯ ಸಂದರ್ಶನ ವೇಳಾಪಟ್ಟಿ ಕೆಪಿಎಸ್‌ಸಿಯ ವೆಬ್‌ಸೈಟ್‌ನಲ್ಲಿ ಅಧಿಕೃತವಾಗಿ ಪ್ರಕಟವಾಗುವ ಮೊದಲೇ, ಆ ಪಟ್ಟಿ ಅಭ್ಯರ್ಥಿಗಳ ಕೈ ಸೇರಿ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು. ಕೆಪಿಎಸ್‌ಸಿಯಲ್ಲಿ ಈಗ ಗೋಪ್ಯತೆ ಎನ್ನುವುದೇ ಉಳಿದಿಲ್ಲ ಎನ್ನುವುದಕ್ಕೆ ಇದೊಂದು ನಿದರ್ಶನವಷ್ಟೆ.



ಪಿಎಸ್‌ಐ ಹುದ್ದೆಗಳಿಗೆ ಪರೀಕ್ಷೆ ಬರೆಯಲು ಬಯಸಿದ್ದ ಅಭ್ಯರ್ಥಿಗಳು 2022ರ ನವೆಂಬರ್‌ನಲ್ಲಿ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಕೆಪಿಎಸ್‌ಸಿ ವಿರುದ್ಧ ಪ್ರತಿಭಟನೆ ನಡೆಸಿದ್ದರು —ಪ್ರಜಾವಾಣಿ ಸಂಗ್ರಹ ಚಿತ್ರ

'ಹಣ ಕೊಟ್ಟರೆ ಗರಿಷ್ಠ, ಇಲ್ಲದಿದ್ದರೆ ಕನಿಷ್ಠ': ಕೆಪಿಎಸ್‌ಸಿ ಸದಸ್ಯರು ಹಾಗೂ ವಿಷಯ ತಜ್ಞರ ಸಂದರ್ಶಕ ಮಂಡಳಿ ವ್ಯಕಿತ್ವ ಪರೀಕ್ಷೆಯನ್ನು (ಸಂದರ್ಶನ) ನಡೆಸುತ್ತದೆ. ಅಂಕ ನೀಡುವುದು ಈ ಮಂಡಳಿಯ ವಿವೇಚನಾಧಿಕಾರ. ಪಿಡಬ್ಲ್ಯುಡಿ ಸಹಾಯಕ ಎಂಜಿನಿಯರ್ (ಎಇ) 660 ಹುದ್ದೆಗಳ ಭರ್ತಿಗೆ ಅಭ್ಯರ್ಥಿಗಳ ವ್ಯಕ್ತಿತ್ವ ಪರೀಕ್ಷೆ ಪ್ರಕ್ರಿಯೆಯನ್ನು ಪಾರದರ್ಶಕ ಮತ್ತು ನ್ಯಾಯೋಚಿತವಾಗಿ ನಡೆಸಲು ಹಾಗೂ ಸಹಜ ನ್ಯಾಯ ಒದಗಿಸುವ ಉದ್ದೇಶದಿಂದ ನಾಲ್ವರ ಸಂದರ್ಶಕ ಮಂಡಳಿಯನ್ನು ಕೆಪಿಎಸ್‌ಸಿ ಅಧ್ಯಕ್ಷರು ರಚಿಸಬೇಕು. ಈ ಸದಸ್ಯರು ನೀಡುವ ಅಂಕಗಳ ಸರಾಸರಿಯನ್ನು ಒಟ್ಟು ಅಂಕವೆಂದು ಪರಿಗಣಿಸಬೇಕು. 50 ಅಂಕಗಳ ಸಂದರ್ಶನದಲ್ಲಿ 40ಕ್ಕಿಂತ ಹೆಚ್ಚು ಅಥವಾ 20ಕ್ಕಿಂತ ಕಡಿಮೆ ಅಂಕ ನೀಡಿದರೆ, ಅದಕ್ಕೆ ಮಂಡಳಿ ಕಾರಣ ದಾಖಲಿಸಬೇಕೆಂದು ರಾಜ್ಯ ಸರ್ಕಾರ ಸೂಚಿಸಿತ್ತು. ಆದರೆ, ಹಣ ನೀಡಿದ ಅಭ್ಯರ್ಥಿಗಳಿಗೆ ಈ ಚೌಕಟ್ಟಿನೊಳಗೇ ಗರಿಷ್ಠ, ಉಳಿದವರಿಗೆ ಕನಿಷ್ಠ ಅಂಕಗಳನ್ನು ನೀಡಿ ಅನ್ಯಾಯ ಎಸಗಲಾಗಿದೆ. ಈ ಹುದ್ದೆಗಳ ಆಯ್ಕೆಗೆ 400 ಅಂಕಗಳ ಲಿಖಿತ ಪರೀಕ್ಷೆಯಲ್ಲಿ 83.50, 94 ಅಂಕ ಗಳಿಸಿದ ಅಭ್ಯರ್ಥಿಗಳಿಗೆ ವ್ಯಕ್ತಿತ್ವ ಪರೀಕ್ಷೆಯಲ್ಲಿ 40 ಅಂಕ, 69 ಅಂಕ ಗಳಿಸಿದ ಅಭ್ಯರ್ಥಿಗೆ 39 ಅಂಕ ನೀಡಿದ್ದರೆ, 236 ಅಂಕ ಗಳಿಸಿ ರ‍್ಯಾಂಕಿಂಗ್ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದ್ದ ಅಭ್ಯರ್ಥಿಗೆ ಸಂದರ್ಶನದಲ್ಲಿ ಕೇವಲ 13.25 ಅಂಕ ನೀಡಲಾಗಿತ್ತು. ಈ ಹುದ್ದೆಗಳು ₹30 ಲಕ್ಷದಿಂದ ₹50 ಲಕ್ಷವರೆಗೆ ಬಿಕರಿಯಾಗಿದ್ದವು. ಪ್ರತಿಭೆ ಇದ್ದರೂ ಹಣ ಇಲ್ಲದೇ ಇದ್ದರೆ ಉದ್ಯೋಗ ಗಿಟ್ಟಿಸಿಕೊಳ್ಳುವುದು ಕಷ್ಟ ಎನ್ನುವ ಸ್ಥಿತಿ ನಿರ್ಮಾಣವಾಗಿದೆ ಎನ್ನುವುದು ಹುದ್ದೆ ವಂಚಿತರ ಆರೋಪ.

ಇನ್ನಷ್ಟು ದಿನ 'ಸದಸ್ಯತ್ವ'ದ ರುಚಿ ಅನುಭವಿಸಲು ಯತ್ನ

ಕೆಪಿಎಸ್‌ಸಿ ಸದಸ್ಯರ ಅವಧಿ ನೇಮಕಗೊಂಡ ದಿನದಿಂದ ಆರು ವರ್ಷ ಅಥವಾ 62 ವರ್ಷ ವಯಸ್ಸು ಈ ಪೈಕಿ ಯಾವುದು ಮೊದಲೋ ಅಲ್ಲಿಯವರೆಗೆ. ಜನ್ಮ ದಿನಾಂಕಕ್ಕೆ ಸಂಬಂಧಿಸಿದಂತೆ, ಅಧಿಕಾರೇತರ ವರ್ಗದಿಂದ ಸದಸ್ಯರಾಗಿ ನೇಮಕಗೊಂಡವರು ಎಸ್ಸೆಸ್ಸೆಲ್ಸಿ ಅಂಕಪಟ್ಟಿ ಹಾಗೂ ಅಧಿಕಾರಿ ವರ್ಗದಿಂದ ನೇಮಕಗೊಂಡ ಸದಸ್ಯರು ಎಸ್ಸೆಸ್ಸೆಲ್ಸಿ ಅಂಕಪಟ್ಟಿಯ ಜೊತೆಗೆ ಸೇವಾ ಪುಸ್ತಕದಲ್ಲಿ ದಾಖಲಾಗಿರುವ ಜನ್ಮ ದಿನಾಂಕದ ವಿವರಗಳನ್ನು ಒದಗಿಸಬೇಕು. ಆದರೆ, ಒಮ್ಮೆ ನೇಮಕಗೊಂಡ ಸದಸ್ಯರು, ಇನ್ನಷ್ಟು ದಿನ 'ಅಧಿಕಾರ'ದ ಕುರ್ಚಿಯಲ್ಲಿರಲು ಬಯಸಿ ಜನ್ಮ ದಿನಾಂಕವನ್ನೇ ತಿದ್ದಲು ಮುಂದಾದ ಘಟನೆಗಳೂ ನಡೆದಿದೆ.

ಅಧಿಕಾರಿ ವರ್ಗದಿಂದ ನೇಮಕಗೊಂಡಿದ್ದ ಸದಸ್ಯರೊಬ್ಬರು ತಮ್ಮ ನಿವೃತ್ತಿ ಕುರಿತಂತೆ ಸರ್ಕಾರದಿಂದ ಅಧಿಸೂಚನೆ ಬಂದಿಲ್ಲ ಎಂಬ ಕಾರಣಕ್ಕೆ ನಿವೃತ್ತಿ ಬಳಿಕವೂ ಐದು ದಿನ ಕರ್ತವ್ಯ ನಿರ್ವಹಿಸಿದ್ದರು. ಈ ಬಗ್ಗೆ ವ್ಯಕ್ತಿಯೊಬ್ಬರು ರಾಜ್ಯಪಾಲರಿಗೆ ದೂರು ನೀಡುತ್ತಿದ್ದಂತೆ, ರಾಜ್ಯಪಾಲರಿಗೆ ಪತ್ರ ಬರೆದಿದ್ದ ಆ ಸದಸ್ಯ, 'ನನ್ನ ಅವಧಿ ಮುಕ್ತಾಯಗೊಂಡಿರುವ ಬಗ್ಗೆ ಸರ್ಕಾರದಿಂದ ಅಧಿಸೂಚನೆಗಾಗಿ ಕಾಯುತ್ತಿದ್ದೆ. ಆದರೆ, ನನಗೆ ಯಾವುದೇ ಪತ್ರ ಬಾರದಿರುವುದರಿಂದ ತಕ್ಷಣದಿಂದ ಜಾರಿಗೆ ಬರುವಂತೆ ಹುದ್ದೆ ಬಿಟ್ಟು ಕೊಡುತ್ತಿದ್ದೇನೆ' ಎಂದು ತಿಳಿಸಿದ್ದರು. ಹುದ್ದೆ ತ್ಯಜಿಸುವುದಾಗಿ ಸದಸ್ಯ ನೀಡಿದ್ದ ಪತ್ರ ಮತ್ತು ಜನ್ಮ ದಿನಾಂಕ ತಿದ್ದಿದ್ದಾರೆಂದು ಆರೋಪಿಸಿ ಸಲ್ಲಿಕೆಯಾಗಿದ್ದ ದೂರನ್ನು ಗಂಭೀರವಾಗಿ ಪರಿಗಣಿಸಿದ್ದ ಅಂದಿನ ರಾಜ್ಯಪಾಲರು, ಈ ಬಗ್ಗೆ ಸಮಗ್ರವಾಗಿ ಪರಿಶೀಲಿಸಿ ವರದಿ ನೀಡುವಂತೆ ಮುಖ್ಯ ಕಾರ್ಯದರ್ಶಿಗೆ ಸೂಚಿಸಿದ್ದರು.

ಸರ್ಕಾರಿ ಕರ್ತವ್ಯದಿಂದ ನಿವೃತ್ತಿಯಾದ ಬಳಿಕ ನೇಮಕಗೊಂಡಿದ್ದ ಮತ್ತೊಮ್ಮ ಸದಸ್ಯ, ಸದಸ್ಯತ್ವದ ಅವಧಿ ಮುಗಿಯುವ ಹೊತ್ತಿನಲ್ಲಿ, 'ನನ್ನ ಜನ್ಮ ದಿನಾಂಕ ತಪ್ಪಾಗಿದ್ದು ಅದನ್ನು ಸರಿಪಡಿಸಬೇಕು. ಈ ಬಗ್ಗೆ ಕೆಪಿಎಸ್‌ಸಿ ಮತ್ತು ಮಹಾಲೆಕ್ಕಪರಿಶೋಧಕರಿಗೆ ಸೂಚನೆ ನೀಡಬೇಕು' ಎಂದು ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದಿದ್ದರು. ಬೆಂಗಳೂರಿನ ಹೆಚ್ಚುವರಿ ನಗರ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯದಲ್ಲಿ ಹೂಡಿದ್ದ ದಾವೆಯಲ್ಲಿ ನೀಡಿದ್ದ ತೀರ್ಪಿನ ಪ್ರತಿ ಹಾಗೂ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಜನ್ಮ ದಿನಾಂಕ ಸರಿಪಡಿಸಿ ಹೊಸ ಅಂಕಪಟ್ಟಿ ನೀಡಿದೆ ಎಂದು ದಾಖಲೆಗಳನ್ನೂ ಸಲ್ಲಿಸಿದ್ದರು. ಆದರೆ, ಸೇವಾ ಅವಧಿಯ ಕೊನೆಯಲ್ಲಿ ಜನ್ಮ ದಿನಾಂಕ ತಿದ್ದುಪಡಿಗೆ ಅವಕಾಶ ಇಲ್ಲದ ಕಾರಣ, 'ಸದಸ್ಯತ್ವ'ದ ರುಚಿಯನ್ನು ಇನ್ನಷ್ಟು ದಿನ ಅನುಭವಿಸಲು ಯತ್ನಿಸಿದ್ದ ಆ ಸದಸ್ಯನ ಯತ್ನವೂ ವಿಫಲವಾಗಿತ್ತು.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

04 ಏಪ್ರಿಲ್ 2026 ಶನಿವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಕೃಷ್ಣ ದ್ವಿತೀಯ ಗಂ. 10-10 ನಕ್ಷತ್ರ: ಸ್ವಾತಿ ಗಂ. 21-36 ಯೋಗ: ಹರ್ಷಣ ಗಂ. 14-17 ಕರಣ: ಗರ ಗಂ 10-10 ಮೀನ ಮಾಸದ 21 ನೇ ದಿನ. **ಮಳೆ ನಕ್ಷತ್ರ :** ರೇವತಿ 2 ನೇ ಪಾದ. **ರಾಹುಕಾಲ :** ಬೆಳಿಗ್ಗೆ 09-00 - 10-30 , **ಸೂರ್ಯೋದಯ :** 06-28 **ಸೂರ್ಯಾಸ್ತ :** 06-39 **ಮುಸ್ಲಿಂ ದಿನಾಂಕ :** 15 ಶವ್ವಾಲ್ ,ಅದೃಷ್ಟ ಸಂಖ್ಯೆ : 9, 8

ಮೇಷ: ಧಾನ್ಯ ಹಾಗೂ ಮಸಾಲೆ ಪದಾರ್ಥಗಳ ಸಗಟು ಹಾಗೂ ರಫ್ತು ವ್ಯಾಪಾರಿಗಳಿಗೆ ಅಧಿಕ ವ್ಯಾಪಾರ ಇರಲಿದೆ. ಕಚೇರಿಯ ಖರ್ಚು-ವೆಚ್ಚಗಳ ವಿಷಯದಲ್ಲಿ ಜಾಗ್ರತೆ ಇರಲಿ.

ವೃಷಭ: ಮಹಿಳೆಯರಿಗೆ ಮನ್ನಣೆ ಹೆಚ್ಚಲಿದ್ದು, ರಾಜಕೀಯವಾಗಿ ಲಾಭ ಪಡೆದುಕೊಳ್ಳುವಿರಿ. ಸಂಶೋಧನಾ ಕ್ಷೇತ್ರದಲ್ಲಿನ ಕಾರ್ಯಗಳಲ್ಲಿ ಪ್ರಗತಿ ಸಾಧಿಸುವಿರಿ. ಹಣದ ವಿಚಾರದಲ್ಲಿ ಮಿತ ವ್ಯಯಿಗಳಾಗುವಿರಿ.

ಮಿಥುನ: ಮನೆಯಲ್ಲಿ ನಡೆಯಬೇಕಿರುವ ಕಾರ್ಯಕ್ರಮಗಳ ಬಗ್ಗೆ ಒಡಹುಟ್ಟಿದವರೊಡನೆ ಮಾತುಕತೆ ನಡೆಯಲಿದೆ. ಪ್ರೀತಿಯ ವಿಚಾರದಲ್ಲಿ ಗುಣಾತ್ಮಕ ಬೆಳವಣಿಗೆ ಅನುಭವಕ್ಕೆ ಬಂದೀತು. ವಿದೇಶಿ ವಸ್ತುಗಳ ಮೇಲೆ ಹಣ ವ್ಯಯ.

ಕರ್ಕಾಟಕ: ಪಾಲುದಾರಿಕೆ ವ್ಯವಹಾರದಲ್ಲಿ ಬುದ್ಧಿಶಕ್ತಿಯಿಂದ ಸಮಸ್ಯೆಗಳನ್ನು ಎದುರಿಸುವ ಸಾಮರ್ಥ್ಯ ಇದ್ದಲ್ಲಿ ಲಾಭವಾಗುವುದು. ಗಂಟಲು ಬೇನೆ ಕಾಣಿಸಿಕೊಂಡಲ್ಲಿ ಗಿಡಮೂಲಿಕೆಗಳ ಬಳಕೆಯಿಂದ ಶಮನವಾಗುವುದು.

ಸಿಂಹ: ಕ್ರೀಡಾಪಟುಗಳು ಮತ್ತು ಕಲಾವಿದರಿಗೆ ಪ್ರತಿಭಾ ಪ್ರದರ್ಶನಕ್ಕೆ ಪೂರ್ವ ತಯಾರಿ ಅನಿವಾರ್ಯ. ಎಲ್ಲವನ್ನು ಸ್ವಂತವಾಗಿಯೇ ಮಾಡಬಲ್ಲೆನೆಂಬ ಹುಮ್ಮಸ್ಸು ನಷ್ಟಕ್ಕೆ ಕಾರಣವಾಗುತ್ತದೆ.

ಕನ್ಯಾ: ಪೂರ್ವ ನಿಯೋಜಿತ ಕೆಲಸ ನೆರವೇರುವುದರಿಂದ ನೆಮ್ಮದಿ ಇರುವುದು. ವಿನಾ ಕಾರಣ ಪರಿಶ್ರಮದಿಂದ ಫಲ ಸಿಗಲಿಲ್ಲವೆಂದು ಬೇಸರಪಟ್ಟುಕೊಳ್ಳುವ ಅಗತ್ಯವಿಲ್ಲ. ಪ್ರಯಾಣದಲ್ಲಿ ಎಚ್ಚರಿಕೆಯಿಂದ ಇರಿ.

ತುಲಾ: ದಿನಚರಿಯಲ್ಲಿ ತಪ್ಪುಗಳ ಬಗ್ಗೆ ಮನವರಿಕೆ ಆಗುವುದು. ಮನೆಯಲ್ಲಿ ಆನಂದದ ವಾತಾವರಣ ಇರಲಿದೆ. ಉದ್ಯೋಗದಲ್ಲಿ ಸ್ಥಾನ ಬದಲಾವಣೆಯಾಗಿ ಮನಸ್ಸಿಗೆ ಆಘಾತವಾಗಲಿದೆ.

ವೃಶ್ಚಿಕ: ಕಾರ್ಯನಿಮಿತ್ತ ಅತ್ತೆ-ಸೊಸೆಯಲ್ಲಿ ಭಿನ್ನಾಭಿಪ್ರಾಯ ತೋರಿಬಂದರೂ ತಾಳ್ಮೆಯನ್ನು ಇಬ್ಬರೂ ಪರಸ್ಪರವಾಗಿ ಕಾಪಾಡಿಕೊಳ್ಳಿ. ಯಾರಿಗೂ ಸಾಲದ ರೂಪದಲ್ಲಿ ಹಣ ನೀಡಬೇಡಿ.

ಧನು: ತಂದೆಯ ಅನಾರೋಗ್ಯ ಬದಲಾವಣೆಗೆ ಕಾರಣವಾಗುವುದು. ಉದಾರ ಮನೋಭಾವ ಅನುಕೂಲ ಒದಗಿಸಲಿದೆ. ವ್ಯವಹಾರದಲ್ಲಿ ನುರಿತವರ ಸಲಹೆ ಸೂಚನೆಗಳನ್ನು ಅಳವಡಿಸಿಕೊಳ್ಳಿ.

ಮಕರ: ಅಜಾಗರೂಕತೆಯಿಂದ ಹಣ ಕಳೆದುಕೊಳ್ಳುವಂತಾಗಬಹುದು ಎಚ್ಚರವಿರಲಿ. ಸತ್ಕಾರ್ಯದ ಯತ್ನಗಳು ಕೈಗೂಡಲು ತಾಳ್ಮೆ ವಹಿಸಿ. ಮಗನ ತಾಂತ್ರಿಕ ವಿದ್ಯಾಭ್ಯಾಸದಲ್ಲಿ ಪ್ರಗತಿ ಕಂಡು ಅತೀವ ಸಂತೋಷ.

ಕುಂಭ: ಅಕ್ಕ-ಪಕ್ಕದಲ್ಲಾಗುವ ಸನ್ನಿವೇಶಗಳು ಪ್ರಾಮಾಣಿಕತೆಗೆ ಅಥವಾ ಸ್ವಾಮಿನಿಷ್ಠೆಗೆ ಬೆಲೆ ಇಲ್ಲವೆಂದು ಕಾಣಿಸುವುದು, ಅದರ ಫಲವಾಗಿ ಸ್ವಭಾವವನ್ನು ಬದಲಿಸಿಕೊಳ್ಳಬೇಡಿ. ಸಾಂಸಾರಿಕ ಸುಖದಲ್ಲಿ ಅಭಿವೃದ್ಧಿ ಅಪೇಕ್ಷಿಸಬಹುದು.

ಮೀನ: ಅತಿ ಬುದ್ಧಿವಂತ ಜನರಲ್ಲಿ ವ್ಯವಹಾರ ನಡೆಸಬೇಕಾಗುವುದರಿಂದ ಜಾಗ್ರತೆ ಇರಲಿ. ಗುರಿಯನ್ನು ಸಾಧಿಸುವ ಬಗ್ಗೆ ಮಾತ್ರ ಗಮನವಿರಲಿ. ಮನಸ್ಸಿಗೆ ನೆಮ್ಮದಿ ಉಂಟಾಗುವುದು.

ಪದಬಂಧ 6363


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಮಾರ್ದನಿಯನ್ನು ಹೀಗೆನ್ನಿ (4)
3.ಆ ಸಾರೆ ನೀಡಿರುವ ಆಶ್ರಯ! (3)
5.ಶಿರೋನಾಮೆ ಇಲ್ಲಿದೆ (5)
7.ತಾರೆ ಇಲ್ಲಿ ಕಾಣುತ್ತಿದೆ (3)
9.ವಠಾರದವರ ಬಳಿಯಿರುವ ಕೊಡಲಿ (3)
11.ಸಂತನಿಂದ ಬಂದಿರುವ ಆನಂದ (3)
13.ಲೋಹದ ಹಕ್ಕಿಯಲ್ಲಿನ ಪಯಣ (5)
15.ಕನ್ನಡಿಗನು ನೀಡಿರುವ ಡೊನೇಷನ್! (3)
16.ಕಾಮನಬಿಲ್ಲನ್ನು ಹೀಗೂ ಕರೆಯುತ್ತಾರೆ (4)

ಮೇಲಿಂದ ಕೆಳಕ್ಕೆ

1.ಕೊನೆಗೆ ಜನವಿದ್ದಾಗಲೇ ಇದು ಉಪಯೋಗ! (4)
2.ನಿರಂತರವಾಗಿ ನುಡಿಯುವ ಸತ್ಯ! (3)
4.ಹತ್ತಿರ ಎಂದು ಹೀಗೆನ್ನಿ (3)
6.ಬರದಲ್ಲಿರುವ ಅಸಂಸ್ಕೃತ ಕಾಣುತ್ತಿದ್ದನೆಯೇ? (3)
8.ಕುಗ್ಗುವಿಕೆಯು ಸಂವತ್ಸರದ ಹೆಸರೂ ಆದೀತು (2)
9.ಒಳ್ಳೆಯ ಕುಲದಲ್ಲಿ ಹುಟ್ಟಿದವ (3)
10.ಮೂರು ಮಾತ್ರೆಗಳ ಕಾಲವನ್ನು ಹೊಂದಿರುವ ಅಕ್ಷರ (2)
12.ಆರೋಪದಲ್ಲೇ ಮುಕ್ತಾಯ ಕೊನೆಗೊಂಡಿದೆ! (4)
13.ಬಿನ್ನಹವನ್ನು ಹೀಗೆನ್ನಿ (3)
14.ಕೊನೆಗೆ ಪಾಸು ಎಂದಿದ್ದರೂ ಇದು ಫೇಲು! (3)



6362ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:

1,ಪರಿವಾರ 3.ನತದೃಷ್ಟ
5.ಪಠಿಸು 6.ಪ್ರೀತಿಪಾತ್ರ
8.ಮಡಿವಂತ 10.ಪರಧನ
12.ಸವಕಲು 13.ವಠಾರ
16.ಅರುಹಂತ 17.ತಿರುಬೋಕಿ

ಮೇಲಿಂದ ಕೆಳಕ್ಕೆ:

1.ಪಕ್ಷ 2.ರಕ್ಷಾಪತ್ರ
3.ನವಸುಮ 4.ಷ್ಟಕ
7.ತಿಮಿರ 9.ವಂಚಕ
11.ನವನೀತ 12.ಸರಸ್ವತಿ
14.ಣ್ಣಅ 15.ಬೆಂಕಿ

ಸುಡೊಕು 6746

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6		4				7		8
		5			1		4	
1	3			4				6
		1				9		7
	8		3	9	7			4
7		9				8		
5				6		4		
4					3		2	1
	6	2		8	4			5

6745 ಸುಡೊಕು

9	3	7	6	1	8	2	5	4
2	6	1	4	5	9	8	3	7
5	4	8	7	2	3	9	6	1
4	8	6	5	3	2	7	1	9
7	2	3	9	6	1	5	4	8
1	5	9	8	4	7	3	2	6
8	1	5	3	7	6	4	9	2
3	9	2	1	8	4	6	7	5
6	7	4	2	9	5	1	8	3

‘ಎಲ್‌ಪಿಜಿ ಅಕ್ರಮ ದಾಸ್ತಾನು ವಿರುದ್ಧ ಕ್ರಮ’

ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಕೇಂದ್ರ ಸರ್ಕಾರ ಸೂಚನೆ, ನಿತ್ಯ ತಪಾಸಣೆಗೆ ತಾಕೀತು

ನವದೆಹಲಿ (ಪಿಟಿಐ): ಪೆಟ್ರೋಲಿಯಂ ಉತ್ಪನ್ನಗಳು ಹಾಗೂ ಎಲ್‌ಪಿಜಿ ಸಿಲಿಂಡರ್‌ಗಳ ಅಕ್ರಮ ದಾಸ್ತಾನು ಮತ್ತು ಕಾಳಸಂತೆಯಲ್ಲಿ ಅವುಗಳ ಮಾರಾಟದ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು ಎಂದು ಕೇಂದ್ರ ಸರ್ಕಾರವು ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಸೂಚನೆ ನೀಡಿದೆ.

ಅಗತ್ಯ ವಸ್ತುಗಳ ಕಾಯ್ದೆಯ ಅಡಿಯಲ್ಲಿ ಇರುವ ಅಧಿಕಾರ ಹಾಗೂ ಎಲ್‌ಪಿಜಿ ನಿಯಂತ್ರಣ ಆದೇಶದ ಅಡಿಯಲ್ಲಿ ಇರುವ ಅಧಿಕಾರ ಬಳಸಿಕೊಂಡು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯವು ಈ ಸೂಚನೆ ರವಾನಿಸಿದೆ.

ಕಾನೂನು ಜಾರಿಯನ್ನು ಬಿಗಿಗೊಳಿಸಬೇಕು, ತೈಲೋತ್ಪನ್ನಗಳ ಮಾರಾಟ ಕಂಪನಿಗಳ ಜೊತೆ ಸಮನ್ವಯ ಸಾಧಿಸಿ ನಿತ್ಯ ತಪಾಸಣೆ ನಡೆಸಬೇಕು ಎಂದು ಸಚಿವಾಲಯವು ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಸೂಚಿಸಿದೆ. ಅಲ್ಲದೆ, ಉತ್ಪನ್ನಗಳನ್ನು ಅನ್ಯ ಉದ್ದೇಶಗಳಿಗೆ ಬಳಕೆ ಮಾಡುವುದರ ಮೇಲೆ ತೀವ್ರ ನಿಗಾ ಇರಿಸಬೇಕು, ತಪ್ಪು ಮಾಹಿತಿ ಹರಡುವವರ ಮೇಲೆ ಕೂಡ ನಿಗಾ ಇರಿಸಬೇಕು ಎಂದು ತಾಕೀತು ಮಾಡಿದೆ.

ರಾಜ್ಯಗಳು ಪ್ರತಿನಿತ್ಯ ಪತ್ರಿಕಾಗೋಷ್ಠಿ ನಡೆಸಿ ಮಾಹಿತಿ ಕೊಡುವ ವ್ಯವಸ್ಥೆ ರೂಪಿಸಿಕೊಳ್ಳಬೇಕು. ಇಂಧನ ಲಭ್ಯತೆಗೆ ಸಂಬಂಧಿಸಿದಂತೆ ಸುಳ್ಳು ಸುದ್ದಿ ಹರಡುವುದನ್ನು ತಡೆಯಲು ಸಕ್ರಿಯವಾಗಿ ಕೆಲಸ ಮಾಡಬೇಕು ಎಂದು ಅದು ಹೇಳಿದೆ.

ಸಾರ್ವಜನಿಕರು ಭೀತಿಗೆ ಒಳಗಾಗಿ ಪೆಟ್ರೋಲ್ ಮತ್ತು ಡೀಸೆಲ್ ಖರೀದಿಗೆ ಮುಗಿಬೀಳಬಾರದು, ಅನಗತ್ಯವಾಗಿ ಎಲ್‌ಪಿಜಿ ಸಿಲಿಂಡರ್ ಬುಕಿಂಗ್ ಮಾಡಬಾರದು ಎಂದು ಕೂಡ ಸಚಿವಾಲಯವು ಸೂಚಿಸಿದೆ. ನಿತ್ಯದ ಕೆಲಸಗಳಲ್ಲಿ ಇಂಧನ ಉಳಿತಾಯ ಮಾಡಲು ಜನರು ಸಾಧ್ಯವಿರುವೆಡೆಗಳಲ್ಲಿ ಪಿಎನ್‌ಜಿ (ಕೊಳವೆ ಮೂಲಕ ಮನೆಗೆ ಅಡುಗೆ ಅನಿಲ ಪೂರೈಸುವ ವ್ಯವಸ್ಥೆ) ಬಳಸಬೇಕು, ಇಂಡಕ್ಷನ್ ಹಾಗೂ ಎಲೆಕ್ಟ್ರಿಕ್ ಕುಕ್‌ಟಾಪ್ ಬಳಕೆ ಮಾಡಬೇಕು ಎಂದು ಸಲಹೆ ನೀಡಿದೆ.



ಜಾರ್ಖಂಡ್‌ನ ರಾಂಚಿಯಲ್ಲಿ ಜನರು ಹೊಸ ಎಲ್‌ಪಿಜಿ ಸಿಲಿಂಡರ್ ಪಡೆಯಲು ಶುಕ್ರವಾರ ಸಾಲುಗಟ್ಟಿ ನಿಂತಿದ್ದರು –ಪಿಟಿಐ ಚಿತ್ರ

ಇಂಡಕ್ಷನ್ ಕುಕ್‌ಟಾಪ್ ಉತ್ಪಾದನೆ ಹೆಚ್ಚಳಕ್ಕೆ ಸಭೆ

ಇಂಡಕ್ಷನ್ ಕುಕ್‌ಟಾಪ್‌ಗಳು ಹಾಗೂ ಅವುಗಳಿಗೆ ಸರಿಹೊಂದುವ ಪಾತ್ರೆಗಳ ಉತ್ಪಾದನೆಯನ್ನು ಹೆಚ್ಚು ಮಾಡುವಂತೆ ಕಂಪನಿಗಳಿಗೆ ಉತ್ತೇಜನ ನೀಡುವ ಬಗೆ ಹೇಗೆ ಎಂಬ ಬಗ್ಗೆ ಕೇಂದ್ರ ಸರ್ಕಾರವು ಶುಕ್ರವಾರ ಸಭೆ ನಡೆಸಿದೆ ಎಂದು ಮೂಲಗಳು ತಿಳಿಸಿವೆ.

ಪಶ್ಚಿಮ ಏಷ್ಯಾದಲ್ಲಿ ಯುದ್ಧ ಶುರುವಾದ ನಂತರದಲ್ಲಿ ದೇಶದಲ್ಲಿ ಎಲ್‌ಪಿಜಿ ಪೂರೈಕೆಗೆ ಸಮಸ್ಯೆ ಉಂಟಾಗಿದೆ. ಇದರಿಂದಾಗಿ ಇಂಡಕ್ಷನ್ ಕುಕ್‌ಟಾಪ್‌ಗಳಿಗೆ ಬೇಡಿಕೆ ಜಾಸ್ತಿಯಾಗಿದೆ.

ಶುಕ್ರವಾರದ ಸಭೆಯ ಅಧ್ಯಕ್ಷತೆಯನ್ನು ಕೇಂದ್ರ ವಾಣಿಜ್ಯ ಸಚಿವ ಪೀಯೂಷ್ ಗೋಯಲ್ ವಹಿಸಿದ್ದರು. ಇಂಧನ ಕಾರ್ಯದರ್ಶಿ ಪಂಕಜ್ ಅಗರ್ವಾಲ್, ವಿದೇಶ ವ್ಯಾಪಾರದ ಮಹಾನಿರ್ದೇಶಕ (ಡಿಜಿಎಫ್‌ಟಿ) ಲವ ಅಗರ್ವಾಲ್, ಉದ್ಯಮ ಹಾಗೂ ದೇಶಿ ವ್ಯಾಪಾರ ಉತ್ತೇಜನಾ ಇಲಾಖೆಯ (ಡಿಪಿಐಐಟಿ) ಕಾರ್ಯದರ್ಶಿ ಅಮರದೀಪ್ ಸಿಂಗ್ ಭಾಟಿಯಾ ಸೇರಿದಂತೆ ಸರ್ಕಾರದ ಅಧಿಕಾರಿಗಳು ಸಭೆಯಲ್ಲಿದ್ದರು.

‘ಇಂಡಕ್ಷನ್ ಕುಕ್‌ಟಾಪ್‌ಗಳು ಮತ್ತು ಅವುಗಳಲ್ಲಿ ಬಳಕೆ ಮಾಡುವ ಪಾತ್ರೆಗಳ ಉತ್ಪಾದನೆಯನ್ನು ಹೆಚ್ಚಿಸುವುದು ಹೇಗೆ ಎಂಬುದರ ಬಗ್ಗೆ ನಾವು ಚರ್ಚಿಸಿದೆವು’ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಎಲ್‌ಪಿಜಿ ಪೂರೈಕೆ ಸ್ಥಿರ: ಐಒಸಿ

ಪಶ್ಚಿಮ ಏಷ್ಯಾ ಸಂಘರ್ಷದ ನಡುವೆಯೂ ದೇಶದಲ್ಲಿ ದ್ರವೀಕೃತ ಪೆಟ್ರೋಲಿಯಂ ಅನಿಲ (ಎಲ್‌ಪಿಜಿ) ಪೂರೈಕೆಯು ಸ್ಥಿರವಾಗಿದೆ ಎಂದು ಸರ್ಕಾರಿ ಸ್ವಾಮ್ಯದ ತೈಲ ಕಂಪನಿ ಇಂಡಿಯನ್ ಆಯಿಲ್ ಕಾರ್ಪೊರೇಷನ್ (ಐಒಸಿ) ತಿಳಿಸಿದೆ.

ಜಾಗತಿಕ ಮಟ್ಟದಲ್ಲಿ ಉಂಟಾಗಿರುವ ಸಂಘರ್ಷದಿಂದ ಇಂಧನ ಪೂರೈಕೆಯಲ್ಲಿ ಅಡಚಣೆ ಉಂಟಾಗಿದೆ. ಆದರೂ, ಗೃಹ ಬಳಕೆಗೆ ಎಲ್‌ಪಿಜಿ ಪೂರೈಸುವುದು ಪ್ರಮುಖ ಆದ್ಯತೆಯಾಗಿದೆ ಎಂದು ತಿಳಿಸಿದೆ.

ಕಂಪನಿಯು ಪ್ರತಿದಿನ ಸುಮಾರು 28 ಲಕ್ಷ ಎಲ್‌ಪಿಜಿ ಸಿಲಿಂಡರ್‌ಗಳನ್ನು ಗ್ರಾಹಕರಿಗೆ ವಿತರಿಸುತ್ತಿದೆ. ಬಿಕ್ಕಟ್ಟಿನ ಮೊದಲೂ ಇಷ್ಟೇ ಪ್ರಮಾಣದಲ್ಲಿ ಪೂರೈಸಲಾಗುತ್ತಿತ್ತು. ಮನೆಗಳಿಗೆ ಸಿಲಿಂಡರ್ ಪೂರೈಕೆಗೆ ಅಡಚಣೆ ಇಲ್ಲ ಎಂದು ತಿಳಿಸಿದೆ.

ಕೆಲವು ಎಲ್‌ಪಿಜಿ ವಿತರಕರು ಅಕ್ರಮ ವಹಿವಾಟು ನಡೆಸುತ್ತಿರುವ ಬಗ್ಗೆ ಗ್ರಾಹಕರಿಂದ ದೂರುಗಳು ಬಂದಿವೆ. ಸಿಲಿಂಡರ್‌ಗಳನ್ನು ಕಾಳಸಂತೆಯಲ್ಲಿ ಮಾರಾಟ ಮಾಡುವುದನ್ನು ತಪ್ಪಿಸಲು ಮತ್ತು ಅಕ್ರಮ ದಾಸ್ತಾನನ್ನು ತಡೆಯಲು ತಂಡಗಳನ್ನು ರಚಿಸಲಾಗಿದೆ. ಈ ತಂಡಗಳು ಹಠಾತ್ ತಪಾಸಣೆ ನಡೆಸುತ್ತಿವೆ ಎಂದು ಹೇಳಿದೆ.

ಇಲ್ಲಿಯವರೆಗೆ 7,500ಕ್ಕೂ ಹೆಚ್ಚು ತಪಾಸಣೆಗಳನ್ನು ಕೈಗೊಂಡಿದ್ದು, 141 ವಿತರಕರ ವಿರುದ್ಧ ಕ್ರಮ ತೆಗೆದು-ಕೊಳ್ಳಲಾಗಿದೆ. 5 ವಿತರಕರ ಪರವಾನಗಿ ಅಮಾನತು ಮಾಡಲಾಗಿದೆ. ರಾಜ್ಯ ಸರ್ಕಾರಗಳು ಮತ್ತು ಇತರೆ ಕಂಪನಿಗಳ ಸಮನ್ವಯದೊಂದಿಗೆ, ಸುಮಾರು 68 ಸಾವಿರ ದಾಳಿಗಳನ್ನು ನಡೆಸಲಾಗಿದ್ದು, 855 ಎಫ್‌ಐಆರ್ ದಾಖಲಿಸಲಾಗಿದೆ. 48 ಸಾವಿರ ಸಿಲಿಂಡರ್‌ಗಳನ್ನು ವಶಕ್ಕೆ ಪಡೆದುಕೊಳ್ಳಲಾಗಿದೆ ಎಂದು ತಿಳಿಸಿದೆ.

ಸುದ್ದಿ 2 ನಿಮಿಷ

‘ರಫ್ತು ಸದೃಢ ನಿರೀಕ್ಷೆ’

ನವದೆಹಲಿ (ಪಿಟಿಐ): ಜಾಗತಿಕ ಮಟ್ಟದಲ್ಲಿ ಉಂಟಾಗಿರುವ ಬಿಕ್ಕಟ್ಟಿನ ನಡುವೆಯೂ 2025–26ರ ಆರ್ಥಿಕ ವರ್ಷದಲ್ಲಿ ದೇಶದ ರಫ್ತು ವಹಿವಾಟು ಏರಿಕೆ ಕಾಣುವ ನಿರೀಕ್ಷೆ ಇದೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

2025–26ರ ಪೂರ್ಣ ಆರ್ಥಿಕ ವರ್ಷದ ರಫ್ತು ಮತ್ತು ಆಮದು ದತ್ತಾಂಶವನ್ನು ಏಪ್ರಿಲ್ 15ರಂದು ವಾಣಿಜ್ಯ ಸಚಿವಾಲಯ ಬಿಡುಗಡೆ ಮಾಡಲಿದೆ.

ಮಾರ್ಚ್ 31ಕ್ಕೆ ಕೊನೆಗೊಂಡ ಆರ್ಥಿಕ ವರ್ಷದಲ್ಲಿ ಅಮೆರಿಕದ ಸುಂಕಗಳು, ಉಕ್ರೇನ್ ಯುದ್ಧ, ಇರಾನ್ ಸಂಘರ್ಷ ಸೇರಿದಂತೆ ಹಲವಾರು ಅಡಚಣೆಗಳು ಉಂಟಾಗಿವೆ. ಆದರೂ, ದೇಶದ ರಫ್ತು ವಹಿವಾಟು ಸಕಾರಾತ್ಮಕವಾಗಿರಬಹುದು ಎಂದು ಹೇಳಿದ್ದಾರೆ.

ಫೆಬ್ರುವರಿಯಲ್ಲಿ ದೇಶದ ಸರಕುಗಳ ರಫ್ತು ಶೇ 0.81ರಷ್ಟು ಇಳಿಕೆಯಾಗಿ, ₹3.39 ಲಕ್ಷ ಕೋಟಿಯಷ್ಟಾಗಿತ್ತು. ವ್ಯಾಪಾರ ಕೊರತೆಯು ₹2.50 ಲಕ್ಷ ಕೋಟಿಯಾಗಿದೆ.

2025–26ರ ಏಪ್ರಿಲ್‌ನಿಂದ ಫೆಬ್ರುವರಿ ತಿಂಗಳವರೆಗೆ ದೇಶದ ಸರಕುಗಳ ಒಟ್ಟು ರಫ್ತು ಪ್ರಮಾಣದಲ್ಲಿ ಶೇ 1.84ರಷ್ಟು ಹೆಚ್ಚಳವಾಗಿದ್ದು, ₹37.31 ಲಕ್ಷ ಕೋಟಿಯಾಗಿದೆ.



ಆಮದು ಶೇ 8.53ರಷ್ಟು ಏರಿಕೆಯಾಗಿದ್ದು, ₹66 ಲಕ್ಷ ಕೋಟಿಯಷ್ಟಾಗಿದೆ. ವ್ಯಾಪಾರ ಕೊರತೆ ₹28.76 ಲಕ್ಷ ಕೋಟಿಯಷ್ಟಾಗಿದೆ.

8 ಸಾವಿರ ಸೇವಾ ಕೇಂದ್ರ: ಮಾರುತಿ

ನವದೆಹಲಿ (ಪಿಟಿಐ): 2030–31ರ ಆರ್ಥಿಕ ವರ್ಷದ ವೇಳೆಗೆ ಕಂಪನಿಯ ವಾಹನಗಳ ಸೇವಾ ಕೇಂದ್ರಗಳ ಸಂಖ್ಯೆಯನ್ನು 8 ಸಾವಿರಕ್ಕೆ ಹೆಚ್ಚಿಸುವ ಗುರಿ ಹೊಂದಲಾಗಿದೆ ಎಂದು ಮಾರುತಿ ಸುಜುಕಿ ಇಂಡಿಯಾದ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಹಿಸಾಷಿ ತಕೆಯುಚಿ ಹೇಳಿದ್ದಾರೆ.

ಮಾರ್ಚ್ 31ಕ್ಕೆ ಕೊನೆಗೊಂಡ ಆರ್ಥಿಕ ವರ್ಷದಲ್ಲಿ ಕಂಪನಿಯು, 502 ಹೊಸ ಸೇವಾ ಕೇಂದ್ರಗಳನ್ನು ಆರಂಭಿಸಿದೆ.

‘ನಮ್ಮ ಗ್ರಾಹಕರು ದೇಶದ ವಿವಿಧೆಡೆ ಇದ್ದಾರೆ. ಹೆಚ್ಚುತ್ತಿರುವ ಗ್ರಾಹಕರ ಅಗತ್ಯಗಳನ್ನು ಪೂರೈಸಲು ನಮ್ಮ ಸೇವಾ ಕೇಂದ್ರಗಳ ವಿಸ್ತರಣೆ ಮಾಡುತ್ತಿದ್ದೇವೆ. ಪ್ರಸ್ತುತ ಕಂಪನಿಯು 5,926 ಸೇವಾ ಕೇಂದ್ರಗಳನ್ನು ಹೊಂದಿದ್ದು, ಇದನ್ನು 2030–31ರ ವೇಳೆಗೆ 8 ಸಾವಿರಕ್ಕೆ ಹೆಚ್ಚಿಸುವ ಗುರಿ ಹೊಂದಿದ್ದೇವೆ’ ಎಂದು ಶುಕ್ರವಾರ ತಿಳಿಸಿದ್ದಾರೆ.

ಇದೇ ವೇಳೆಗೆ ಕಂಪನಿಯು ವಾರ್ಷಿಕ 40 ಲಕ್ಷ ವಾಹನಗಳನ್ನು ತಯಾರಿಸುವ ಯೋಜನೆ ಹೊಂದಿದೆ.

5 ಕೋಟಿ ಗಂಭೀರವಲ್ಲದ ಬಾಕಿ ಪ್ರಕರಣ ಪುನರ್ ಪರಿಶೀಲನೆ: ಸಚಿವ ಗೋಯಲ್

ಪ್ರಜಾವಾಣಿ ವಾರ್ತೆ

ನವದೆಹಲಿ: ಜನ ವಿಶ್ವಾಸ (ನಿಬಂಧನೆಗಳ ತಿದ್ದುಪಡಿ) ಮಸೂದೆ–2026ಕ್ಕೆ ಸಂಸತ್ತಿನ ಒಪ್ಪಿಗೆ ದೊರೆತ ಬೆನ್ನಲ್ಲೇ ಕೇಂದ್ರ ಸರ್ಕಾರ ಮಹತ್ವದ ಹೆಜ್ಜೆ ಇಟ್ಟಿದೆ. ‘ಬಾಕಿ ಇರುವ, ಗಂಭೀರವಲ್ಲದ 5 ಕೋಟಿ ಪ್ರಕರಣಗಳಿಗೆ ಸಂಬಂಧಿಸಿ ಪುನರ್ ಪರಿಶೀಲನೆ ನಡೆಸಲಾಗುವುದು’ ಎಂದು ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಶುಕ್ರವಾರ ತಿಳಿಸಿದ್ದಾರೆ.

ಜನವಿಶ್ವಾಸ ಮಸೂದೆ ಮೂಲಕ 79 ಕಾನೂನುಗಳ ಅಡಿಯ 1000ಕ್ಕೂ ಹೆಚ್ಚು ಗಂಭೀರವಲ್ಲದ ಪ್ರಕರಣಗಳನ್ನು ನಿರಪರಾಧೀಕರಣ (ಶಿಕ್ಷೆಯಿಲ್ಲದೆ ದಂಡ ಇತರೆ ಕ್ರಮ) ಎಂದು ಪರಿವರ್ತಿಸಲಾಗಿದೆ. ಈ ಪ್ರಕರಣಗಳು ನ್ಯಾಯಾಲಯಗಳಲ್ಲಿ ಬಾಕಿ ಇದ್ದು, ಹೊಸ ಅವಕಾಶಗಳ ಅಡಿಯಲ್ಲಿ ಅಭಿಯೋಜಕರು ಈ ಪ್ರಕರಣವನ್ನು ಅಂತ್ಯಗೊಳಿಸುವಂತೆ ನ್ಯಾಯಾಲಯಗಳನ್ನು ಕೋರಬಹುದು ಎಂದು ಅವರು ಪತ್ರಕರ್ತರಿಗೆ ತಿಳಿಸಿದರು.

‘ಗಂಭೀರವಲ್ಲದ 5 ಕೋಟಿ ಬಾಕಿ ಪ್ರಕರಣಗಳಲ್ಲಿ ಬಹುತೇಕ ಪ್ರಕರಣಗಳು ನ್ಯಾಯಾಲಯವನ್ನೂ ತಲುಪಿಲ್ಲ. ಆಪಾದಿತನನ್ನು ಅಪರಾಧಿ ಎಂದು ನಿರ್ಧರಿಸಿಲ್ಲ’ ಎಂದರು.

ಮಸೂದೆಯಲ್ಲಿರುವ ಅವಕಾಶದ ಮೂಲಕ 23 ಸಚಿವಾಲಯಗಳಿಗೆ ಸಂಬಂಧಿಸಿದ 79 ಕೇಂದ್ರ ಕಾನೂನುಗಳ ಅಡಿಯ 784 ನಿಬಂಧನೆಗಳನ್ನು ತಿದ್ದುಪಡಿ ಮಾಡಬಹುದು. 717 ನಿಬಂಧನೆಗಳನ್ನು ನಿರಪರಾಧೀಕರಣಗೊಳಿಸಿದ್ದು, 67 ನಿಬಂಧನೆಗಳನ್ನು ವ್ಯವಹಾರ ಸರಳಗೊಳಿಸಲು ತಿದ್ದುಪಡಿ-ಗೊಳಿಸಲಾಗುತ್ತಿದೆ ಎಂದರು.

ಎನ್‌ಸಿಇಆರ್‌ಟಿಗೆ ಡೀಮ್ಡ್ ವಿಶ್ವವಿದ್ಯಾಲಯ ಸ್ಥಾನಮಾನ

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಷ್ಟ್ರೀಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಮಂಡಳಿ (ಎನ್‌ಸಿಇಆರ್‌ಟಿ) ಮತ್ತು ಅದರ ಆರು ಘಟಕಗಳಿಗೆ ಶಿಕ್ಷಣ ಸಚಿವಾಲಯವು ವಿಶಿಷ್ಟ ವರ್ಗದಡಿ ಡೀಮ್ಡ್ ವಿಶ್ವವಿದ್ಯಾಲಯ ಸ್ಥಾನಮಾನವನ್ನು ನೀಡಿದೆ.

ಆ ಮೂಲಕ ಎನ್‌ಸಿಇಆರ್‌ಟಿಯ ಅಧಿಕಾರವನ್ನು ವಿಸ್ತರಿಸಲಾಗಿದೆ ಮತ್ತು ಅದನ್ನು ಯುಜಿಸಿ ವ್ಯಾಪ್ತಿಗೆ ತರಲಾಗಿದೆ. ಜೊತೆಗೆ ಎನ್‌ಸಿಇಆರ್‌ಟಿ ತನ್ನದೇ ಆದ ಕೋರ್ಸ್‌ಗಳನ್ನು ವಿನ್ಯಾಸಗೊಳಿಸಲು, ಪದವಿ ಮತ್ತು ಸ್ನಾತಕೋತ್ತರ ಪದವಿಗಳನ್ನು ನೀಡಲು ಸಾಧ್ಯವಾಗುತ್ತದೆ.

ವಿಶ್ವವಿದ್ಯಾಲಯ ಅನುದಾನ ಆಯೋಗದ (ಯುಜಿಸಿ) ಸಲಹೆಯ ಮೇರೆಗೆ ಶಿಕ್ಷಣ ಸಚಿವಾಲಯವು ಈ ಸ್ಥಾನಮಾನ ನೀಡಿದೆ ಎಂದು ಪ್ರಕಟಣೆ ತಿಳಿಸಿದೆ.

50 ವರ್ಷಗಳ ಬಳಿಕ ನಾಸಾ ಕೈಗೊಂಡ ಯೋಜನೆ

ಚಂದ್ರನತ್ತ ಹೊರಟ ‘ಆರ್ಟೆಮಿಸ್–2’

ಕೇಪ್ ಕೆನವೆರಾಲ್(ಎಪಿ): ಐದು ದಶಕಗಳ ಬಳಿಕ ಚಂದ್ರನ ಕಕ್ಷೆಗೆ ಗಗನಯಾನಿಗಳನ್ನು ಕಳುಹಿಸಲು ಮುಂದಾಗಿರುವ ನಾಸಾ, ತನ್ನ ಮಹತ್ವಾ-ಕಾಂಕ್ಷೆಯ ಬಾಹ್ಯಾಕಾಶ ಕಾರ್ಯಕ್ರಮ ‘ಆರ್ಟೆಮಿಸ್–2’ರ ರಾಕೆಟ್ ಅನ್ನು ಕೆನಡಿ ಬಾಹ್ಯಾಕಾಶ ಕೇಂದ್ರದಿಂದ ಯಶಸ್ವಿಯಾಗಿ ಉಡಾವಣೆ ಮಾಡಿದೆ.

ಗಗನನೌಕೆ ಹೊತ್ತ ರಾಕೆಟ್ ವರ್ಷದ ಆರಂಭದಲ್ಲಿಯೇ ಅಂತರಿಕ್ಷಯಾನ ಆರಂಭಿಸಬೇಕಿತ್ತು. ಆದರೆ, ಉಡ್ಡಯನಕ್ಕೂ ಕೆಲ ಗಂಟೆಗಳ ಮುನ್ನ ರಾಕೆಟ್‌ನಲ್ಲಿನ ಇಂಧನ ಜಲಜನಕ ಸೋರಲು ಆರಂಭಿಸಿದ್ದರಿಂದ ಉಡ್ಡಯನವನ್ನು ಮುಂದೂಡಲಾಗಿತ್ತು.

32 ಮಹಡಿಯ ಈ ರಾಕೆಟ್‌ಗೆ 26 ಲಕ್ಷ ಲೀಟರ್ ಇಂಧನ ತುಂಬಬೇಕಿತ್ತು. ಈ ಕಾರ್ಯ ಪೂರ್ಣಗೊಂಡ ಬಳಿಕ ರಾಕೆಟ್ ನಭಕ್ಕೆ ಚಿಮ್ಮಿದೆ.

10 ದಿನಗಳ ಕಾಲ ಯೋಜನೆಯು ನಡೆಯಲಿದ್ದು, ಅಮೆರಿಕದ ರೀಡ್ ವೈಸ್‌ಮನ್, ವಿಕ್ಟರ್ ಗ್ಲೋವರ್, ಕ್ರಿಸ್ಟಿನಾ ಕೋಚ್ ಹಾಗೂ ಕೆನಡಾದ ಜೆರೆಮಿ ಹ್ಯಾನ್ಸನ್ ತಂಡದಲ್ಲಿದ್ದಾರೆ.



ನಾಸಾದ ‘ಆರ್ಟೆಮಿಸ್–2’ ಬಾಹ್ಯಾಕಾಶ ಕಾರ್ಯಕ್ರಮದಡಿ ನೌಕೆ ಒರಿಯಾನ್‌ನಲ್ಲಿದ್ದ ಗಗನಯಾನಿಗಳು —ಎಎಫ್‌ಪಿ ಚಿತ್ರ

ಉಡಾವಣೆಗೊಂಡ 25 ಗಂಟೆಗಳ ನಂತರ ನಾಲ್ವರೂ ಭೂಮಿಯ ಕಕ್ಷೆಯಿಂದ ಹೊರಗೆ ಇದ್ದರೂ, ಭೂಮಿಗೆ ಹತ್ತಿರವೇ ಇರಲಿದ್ದಾರೆ. ಕೋಶವನ್ನು (ಕ್ಯಾಪ್ಸುಲ್) ಭೂಮಿಯ ಹತ್ತಿರ ಪರೀಕ್ಷಿಸಲಿದ್ದಾರೆ. ನಂತರ ಚಂದ್ರನ ಸಮೀಪದಲ್ಲಿ ಪ್ರಯಾಣಿಸಲಿದ್ದಾರೆ. ನಿಗದಿತ ಅವಧಿವರೆಗೆ ಪರಿಭ್ರಮಣೆ ಮಾಡಿದ ಬಳಿಕ ಅವರು ಭೂಮಿಗೆ ಮರಳಲಿದ್ದು, ಅವರನ್ನು ಹೊತ್ತ ಬಾಹ್ಯಾಕಾಶ ಕೋಶವು ಪೆಸಿಫಿಕ್ ಸಾಗರದಲ್ಲಿ ಇಳಿಯಲಿದೆ.

‘ಎಲ್ಲ ನನ್ನ ಮಿತ್ರರೇ, 1972ರ ಅಪೋಲೊ–17ರ ನಂತರ ಮಾನವರು ಭೂಮಿಯ ಕಕ್ಷೆಯನ್ನು ದಾಟಿ ಮುಂದೆ ಸಾಗಿದ್ದಾರೆ’ ಎಂದು ನಾಸಾದ ಹಿರಿಯ ವಿಜ್ಞಾನಿ ಲೊರೊ ಗ್ಲೇಜ್ ತಿಳಿಸಿದ್ದಾರೆ.

‘ರಾಕೆಟ್ ಇಂಧನ ತುಂಬಿಸುವ ಪ್ರಕ್ರಿಯೆಯಲ್ಲಿ ಯಾವುದೇ ಲೋಪವಾಗಲಿಲ್ಲ’ ಎಂದು ಹೇಳಿದ್ದಾರೆ.

‘ಮಾನವೀಯ ಸಾಮರ್ಥ್ಯ ಏನೆಂಬುದನ್ನು ಮತ್ತೊಮ್ಮೆ ತೋರಿಸಿದೆ. ನಿಮ್ಮ ಭವಿಷ್ಯದ ಭರವಸೆಗಳೇ, ನಮ್ಮನ್ನು ಚಂದ್ರನ ಸುತ್ತ ಈ ಪ್ರಯಾಣದಲ್ಲಿ ಕರೆದೊಯ್ದಿದೆ’ ಎಂದು ಗಗನಯಾನಿ ಜೆರೆಮಿ ಹ್ಯಾನ್ಸನ್ ತಿಳಿಸಿದ್ದಾರೆ.

1972ರಲ್ಲಿ ಅಪೋಲೊ–17 ಕಾರ್ಯಕ್ರಮದಡಿ ಗಗನಯಾನಿಗಳು ಕೊನೆಯದಾಗಿ ಚಂದ್ರನ ಅಂಗಳದಲ್ಲಿ ಇಳಿದಿದ್ದರು.

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1780 (1780)
ಸೋಯಾ (ರಿಫೈನ್ಡ್)	₹1590 (1600)
ಸೂರ್ಯಕಾಂತಿ (ರಿಫೈನ್ಡ್)	₹1720 (1720)
ಪಾಮೋಲಿನ್	₹1490 (1490)

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	100 ಕ್ಕೆ	₹455
	12 ಕ್ಕೆ	₹72
ಮೈಸೂರು:	100 ಕ್ಕೆ	₹460

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹400-715
ದ್ವಿತಳಿ (ಬಿ.ವಿ)	₹421-821

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹211.50
ಆರ್‌ಎಸ್‌ಎಸ್-5	₹205
ಗುಡ್ ಲಾಟ್	₹190

ಮುದ್ರಮನೆ ಕಾಫಿ (50 ಕೆಜಿಗೆ)

ಎಪಿ	₹23500
ಎಸಿ	₹14150
ಆರ್‌ಪಿ	₹18100
ಆರ್‌ಸಿ	₹9825

ಫೋನ್ ಸೂಚನೆಯಿಂದ ‘ಸಿಸೇರಿಯನ್’: ತಾಯಿ, ಶಿಶು ಸಾವು

ಪ್ರಜಾವಾಣಿ ವಾರ್ತೆ

ಲಖನೌ: ವೈದ್ಯೆಯೊಬ್ಬರು ಮೊಬೈಲ್ ಫೋನ್ ಮೂಲಕ ನೀಡಿದ ಸೂಚನೆಗಳನ್ನು ಆಧರಿಸಿ, ತರಬೇತಿ ಪಡೆಯದ ಸಿಬ್ಬಂದಿಯೊಬ್ಬರು ಸಿಸೇರಿಯನ್ ಮೂಲಕ ಹೆರಿಗೆ ಮಾಡಿಸಿದ ಪರಿಣಾಮ ತಾಯಿ ಮತ್ತು ನವಜಾತ ಶಿಶು ಮೃತಪಟ್ಟ ಆಘಾತಕಾರಿ ಘಟನೆ ಅಯೋಧ್ಯೆಯ ಖಾಸಗಿ ಆಸ್ಪತ್ರೆಯೊಂದರಲ್ಲಿ ನಡೆದಿದೆ.

ಈ ಘಟನೆ ಬುಧವಾರ ನಡೆದಿದ್ದು, ಕುಟುಂಬದವರು ಗುರುವಾರ ದೂರು ನೀಡಿದ್ದಾರೆ.

32 ವರ್ಷದ ಸೋನಿ ಯಾದವ್ ಎಂಬವರಿಗೆ ಕೆಲ ದಿನಗಳ ಹಿಂದೆ ಹೆರಿಗೆ ನೋವು ಕಾಣಿಸಿಕೊಂಡಿದ್ದರಿಂದ ಅಯೋಧ್ಯೆಯ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು.

‘ಪತ್ನಿಗೆ ನೋವು ಕಾಣಿಸಿಕೊಂಡಿದ್ದು, ಶಸ್ತ್ರಚಿಕಿತ್ಸಾ ಕೊಠಡಿಗೆ ಕರೆದೊಯ್ಯಲಾಯಿತು. ಆದರೆ, ಅಲ್ಲಿ ಯಾವ ವೈದ್ಯೆಯೂ ಇರಲಿಲ್ಲ. ಮೊಬೈಲ್ ಫೋನ್ ಮೂಲಕ ನೀಡುವ ಸೂಚನೆಗಳನ್ನು ಅನುಸರಿಸಿ ಹೆರಿಗೆ ಮಾಡಿಸುವಂತೆ ವೈದ್ಯೆಯು ಅಲ್ಲಿನ ಸಿಬ್ಬಂದಿಗೆ ಸೂಚಿಸಿದರು. ಅದರಂತೆ ಸಿಬ್ಬಂದಿ ಸಿಸೇರಿಯನ್ ಮಾಡಿದ್ದಾರೆ’ ಎಂದು ಆಕೆಯ ಪತಿ ಸುರೇಶ್ ಯಾದವ್ ಆರೋಪಿಸಿದ್ದಾರೆ.

ಸ್ವಲ್ಪ ಸಮಯದ ನಂತರ, ‘ನವಜಾತ ಶಿಶು ಉಸಿರಾಡುತ್ತಿಲ್ಲ’ ಎಂದ ಸಿಬ್ಬಂದಿ ಮಗುವನ್ನು ಕುಟುಂಬದವರಿಗೆ ಹಸ್ತಾಂತರಿಸಿದ್ದಾರೆ. ಇದರಿಂದ ಗಾಬರಿಗೊಂಡ ಸಂಬಂಧಿಕರು ಮಗುವನ್ನು ಮತ್ತೊಂದು ಆಸ್ಪತ್ರೆಗೆ ಕರೆದೊಯ್ದಿದ್ದಾರೆ. ಆದರೆ, ಅಷ್ಟರಲ್ಲಾಗಲೇ ಮಗು ಮೃತಪಟ್ಟಿರುವುದಾಗಿ ವೈದ್ಯರು ಘೋಷಿಸಿದ್ದಾರೆ.

ಈ ಮಧ್ಯೆ ಸೋನಿ ಯಾದವ್ ಅವರ ಸ್ಥಿತಿಯೂ ಹದಗೆಟ್ಟಿದ್ದು, ಅವರನ್ನೂ ತಕ್ಷಣವೇ ಮತ್ತೊಂದು ಆಸ್ಪತ್ರೆಗೆ ಕರೆದೊಯ್ಯಲಾಗಿದೆ. ಅಲ್ಲಿ ಅವರು ಮೃತಪಟ್ಟಿದ್ದಾರೆ.

ಜಿಲ್ಲಾ ಆರೋಗ್ಯ ಇಲಾಖೆ ಅಧಿಕಾರಿಗಳು ಆಸ್ಪತ್ರೆಗೆ ಭೇಟಿ ನೀಡಿದ್ದು, ಅಲ್ಲಿ ಅರ್ಹ ವೈದ್ಯರಾಗಲಿ ಅಥವಾ ತರಬೇತಿ ಪಡೆದ ಅರೆವೈದ್ಯಕೀಯ ಸಿಬ್ಬಂದಿಯಾಗಲಿ ಇಲ್ಲದಿರುವುದು ಕಂಡುಬಂದಿದೆ. ಆಸ್ಪತ್ರೆಯನ್ನು ಬಂದ್ ಮಾಡಿದ್ದು, ಅಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ರೋಗಿಗಳನ್ನು ಬೇರೆ ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ. ಈ ಬಗ್ಗೆ ತನಿಖೆಗೆ ಆದೇಶಿಸಲಾಗಿದೆ.

ಪೆಟ್ರೋಕೆಮಿಕಲ್ಸ್‌ಗೆ ತಾತ್ಕಾಲಿಕ ಸುಂಕ ವಿನಾಯಿತಿ

ನವದೆಹಲಿ (ಪಿಟಿಐ): ಪಶ್ಚಿಮ ಏಷ್ಯಾದ ಸಂಘರ್ಷ ಹಿನ್ನೆಲೆಯಲ್ಲಿ ಪ್ರಮುಖ ಪೆಟ್ರೋಕೆಮಿಕಲ್ ಉತ್ಪನ್ನಗಳ ಮೇಲಿನ ಸೀಮಾ ಸುಂಕಕ್ಕೆ ಜೂನ್ 30ರವರೆಗೆ ಕೇಂದ್ರ ಸರ್ಕಾರ ಪೂರ್ಣ ವಿನಾಯಿತಿ ನೀಡಿದೆ.

‘ಈ ತಾತ್ಕಾಲಿಕ ವಿನಾಯಿತಿಯಿಂದ ಸರ್ಕಾರದ ಬೊಕ್ಕಸಕ್ಕೆ ₹1,800 ಕೋಟಿ ಹೊರೆಯಾಗಲಿದೆ. ಆದರೆ, ಇದು ದರ ಸ್ಥಿರತೆ ಒದಗಿಸಲಿದ್ದು, ಉತ್ಪಾದನೆ ಮತ್ತು ಪೂರೈಕೆ ವ್ಯವಸ್ಥೆಯಲ್ಲಿ ಅಡ್ಡಿಗಳು ಉಂಟಾಗದಂತೆ ನೋಡಿಕೊಳ್ಳುತ್ತದೆ’ ಎಂದು ಸಿಬಿಐಸಿ ಸದಸ್ಯ (ತೆರಿಗೆ ನೀತಿ) ಸಂಜಯ್ ಮಂಗಲ್ ಸುದ್ದಿಗಾರರಿಗೆ ಹೇಳಿದ್ದಾರೆ.

ಪಶ್ಚಿಮ ಏಷ್ಯಾದ ಸಂಘರ್ಷದಿಂದ ಜಾಗತಿಕ ಪೂರೈಕೆ ವ್ಯವಸ್ಥೆಯಲ್ಲಿ ಉಂಟಾಗಿರುವ ಅಡಚಣೆಯಿಂದಾಗಿ ಕೇಂದ್ರವು ಜೂನ್ 30ರವರೆಗೆ ಪ್ರಮುಖ ಪೆಟ್ರೋಕೆಮಿಕಲ್ ಉತ್ಪನ್ನಗಳ ಮೇಲಿನ ಸೀಮಾ ಸುಂಕಕ್ಕೆ ಪೂರ್ಣ ವಿನಾಯಿತಿ ನೀಡಲು ನಿರ್ಧರಿಸಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯವು ತಿಳಿಸಿದೆ.

ಪ್ಲಾಸ್ಟಿಕ್, ಪ್ಯಾಕೇಜಿಂಗ್, ಜವಳಿ, ಔಷಧಗಳು, ರಾಸಾಯನಿಕ ಮತ್ತು ವಾಹನದ ಬಿಡಿಭಾಗಗಳು ಮತ್ತು ಇತರೆ ತಯಾರಿಕಾ ವಲಯದ ಕ್ಷೇತ್ರಗಳಿಗೆ ಸೀಮಾ ಸುಂಕದ ವಿನಾಯಿತಿಯ ಪ್ರಯೋಜನ ದೊರೆಯಲಿದೆ. ಇದು ದೇಶದ ಕಂಪನಿಗಳ ವೆಚ್ಚವನ್ನು ತಗ್ಗಿಸಲಿವೆ. ಅಂತಿಮವಾಗಿ ಇದರ ಪ್ರಯೋಜನ ಗ್ರಾಹಕರಿಗೆ ದೊರೆಯಲಿದೆ ಎಂದು ಹೇಳಿದೆ.

ಮುಂಬೈ ಧಾರಣೆ (ಶೇಂಗಾ)

03-04-2026	
ಜಾವಾ 70/80(ಹೊಸ)	11400-11500
ಜಾವಾ 80/90(ಹೊಸ)	10700-10800
ದಪ್ಪ ಮಧ್ಯಪ್ರದೇಶ (ಹೊಸ)	8400-8500
ದಪ್ಪ ಗುಜರಾತ್ (ಹೊಸ)	9700-9800
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1790 (1790)
ಒಂದು ವಾರದ ಡೆಲಿವರಿ	1785 (1785)
ಪಾಮ್ ವಾರದ ಡೆಲಿವರಿ	1488 (1488)
ಸೂರ್ಯಕಾಂತಿ ಎಣ್ಣೆ ಕಚ್ಚಾ	1600 (1600)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,58,000 (1,45,400)
ಬೆಳ್ಳಿ ಕೆ.ಜಿಗೆ	2,34,000 (2,26,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಆರ್‌ಬಿಎಲ್ ಬ್ಯಾಂಕ್ ಖರೀದಿಗೆ ಎಮಿರೇಟ್ಸ್ ಎನ್‌ಬಿಡಿಗೆ ಒಪ್ಪಿಗೆ

ನವದೆಹಲಿ (ಪಿಟಿಐ): ಆರ್‌ಬಿಎಲ್ ಬ್ಯಾಂಕ್‌ನಲ್ಲಿ ಶೇಕಡ 74ರಷ್ಟು ಪಾಲು ಹೊಂದಲು ದುಬೈ ಮೂಲದ ಎಮಿರೇಟ್ಸ್ ಎನ್‌ಬಿಡಿ ಬ್ಯಾಂಕ್‌ಗೆ ಆರ್‌ಬಿಐ ಏಪ್ರಿಲ್ 1ರಂದು ಒಪ್ಪಿಗೆ ನೀಡಿದೆ.

ಒಪ್ಪಿಗೆಯು ಒಂದು ವರ್ಷದ ಅವಧಿಗೆ ಚಾಲ್ತಿಯಲ್ಲಿರಲಿದೆ ಎಂದು ಆರ್‌ಬಿಎಲ್ ಬ್ಯಾಂಕ್ ಷೇರುಪೇಟೆಗೆ ತಿಳಿಸಿದೆ. ಎಮಿರೇಟ್ಸ್ ಎನ್‌ಬಿಡಿ ಬ್ಯಾಂಕ್ ಇಷ್ಟು ಪ್ರಮಾಣದ ಷೇರುಗಳನ್ನು ಖರೀದಿಸಿದಲ್ಲಿ, ಆರ್‌ಬಿಎಲ್ ಬ್ಯಾಂಕ್ ಮಾಲೀಕತ್ವವು ವಿದೇಶಿಯರದ್ದಾಗಲಿದೆ.

ಆರ್‌ಬಿಎಲ್ ಬ್ಯಾಂಕ್‌ನಲ್ಲಿ ಹೆಚ್ಚಿನ ಪಾಲು ಹೊಂದಲು ಎಮಿರೇಟ್ಸ್ ಎನ್‌ಬಿಡಿ ಬ್ಯಾಂಕ್ ಕಳೆದ ಅಕ್ಟೋಬರ್‌ನಲ್ಲಿ ಆಸಕ್ತಿ ತೋರಿತ್ತು.

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ಕೇಂದ್ರದ ವಿರುದ್ಧ ಮಾತನಾಡಲು ಛಡ್ಡಾ ಹಿಂದೇಟು ● ‘ಸಾಫ್ಟ್ ಪಿಆರ್’ ಆಗಿ ಕೆಲಸ

ಛಡ್ಡಾ ವಿರುದ್ಧ ಎಎಪಿ ಗುಡುಗು

ನವದೆಹಲಿ (ಪಿಟಿಐ): ರಾಜ್ಯಸಭೆಯ ಉಪನಾಯಕ ಸ್ಥಾನದಿಂದ ರಾಘವ್ ಛಡ್ಡಾ ಅವರನ್ನು ಕೆಳಗಿಳಿಸಿದ ಬೆನ್ನಲ್ಲೇ, ಆಮ್ ಆದ್ಮಿ ಪಕ್ಷವು (ಎಎಪಿ) ಅವರ ವಿರುದ್ಧ ಶುಕ್ರವಾರ ವಾಗ್ದಾಳಿ ನಡೆಸಿದೆ.

‘ಛಡ್ಡಾ ಅವರು ಸಂಸತ್ತಿನಲ್ಲಿ ಕೇಂದ್ರ ಸರ್ಕಾರದ ವಿರುದ್ಧ ಧ್ವನಿ ಎತ್ತಲು ಹಿಂದೇಟು ಹಾಕುತ್ತಾರೆ; ಬದಲಾಗಿ ಅಷ್ಟೇನೂ ಮುಖ್ಯವಲ್ಲದ ವಿಷಯಗಳ ಬಗ್ಗೆ ಚರ್ಚಿಸಿ, ‘ಸಾಫ್ಟ್ ಪಿಆರ್’ (ತಮ್ಮನ್ನು ತಾವು ಬಿಂಬಿಸಿಕೊಳ್ಳುವ ಪ್ರಚಾರ ತಂತ್ರ) ಕೆಲಸ ಮಾಡುತ್ತಾರೆ’ ಎಂದು ಆರೋಪಿಸಿದೆ.

ದೆಹಲಿ ಎಎಪಿ ಅಧ್ಯಕ್ಷ ಸೌರಭ್ ಭಾರದ್ವಾಜ್ ಅವರು, ‘ಛಡ್ಡಾ ಅವರು ಹಲವು ವಿಚಾರಗಳಲ್ಲಿ ಪಕ್ಷದ ನಿರ್ದೇಶನಗಳನ್ನು ಪಾಲಿಸುತ್ತಿಲ್ಲ. ಕೆಲವೊಮ್ಮೆ ವಿರೋಧ ಪಕ್ಷಗಳು ಸಂಸತ್ ಕಲಾಪ ಬಹಿಷ್ಕರಿಸಿದಾಗ ಅವರು ಕೈಜೋಡಿಸಿಲ್ಲ’ ಎಂದು ದೂರಿದರು.

‘ನಾವೆಲ್ಲರೂ ಅರವಿಂದ ಕೇಜ್ರಿವಾಲ್ ಅವರ ಸೈನಿಕರು. ಸಂಸತ್ತಿನಲ್ಲಿ ಪ್ರಸ್ತಾಪಿಸಲು ಹಲವಾರು ಪ್ರಮುಖ ವಿಚಾರಗಳು ಇರುವಾಗ ವಿಮಾನನಿಲ್ದಾಣದ ಕ್ಯಾಂಟೀನ್‌ನ ಸಮೋಸಾ ಮತ್ತಿತರ ಲಘು ವಿಚಾರಗಳನ್ನು ಪ್ರಸ್ತಾಪಿಸಿದರೆ ಅದಕ್ಕೆ ಕೇಂದ್ರ ಸರ್ಕಾರ ಗಮನ ನೀಡುವುದಿಲ್ಲ’ ಎಂದು ‘ಎಕ್ಸ್’ನಲ್ಲಿ ವಿಡಿಯೊ ಪೋಸ್ಟ್ ಮಾಡಿದ್ದಾರೆ.

‘ವಿರೋಧ ಪಕ್ಷಗಳು ಸಂಸತ್ ಕಲಾಪದಿಂದ ಹೊರನಡೆದು ಪ್ರತಿಭಟನೆ ನಡೆಸಿದಾಗ ಛಡ್ಡಾ ಅವರು ಭಾಗಿಯಾಗುವುದಿಲ್ಲ. ತಾವು ಚುನಾಯಿತರಾಗಿ ಬಂದಿರುವ ಪಂಜಾಬ್ ಕುರಿತ ಸಮಸ್ಯೆಗಳ ಬಗ್ಗೆಯೂ ಧ್ವನಿ ಎತ್ತಿಲ್ಲ, ಅರವಿಂದ ಕೇಜ್ರಿವಾಲ್ ಅವರ ಬಂಧನವಾದಾಗ ಅವರು ವಿದೇಶದಲ್ಲಿ ಅಡಗಿದ್ದರು’ ಎಂದು ಹರಿಹಾಯ್ದಿದ್ದಾರೆ.

ಎಎಪಿ ರಾಷ್ಟ್ರೀಯ ಮಾಧ್ಯಮ ಉಸ್ತುವಾರಿ ಅನುರಾಗ್ ಢಂಡಾ ಅವರು, ‘ಸಂಸತ್ತಿನಲ್ಲಿ ಮಾತನಾಡಲು ಅತ್ಯಂತ ಕಡಿಮೆ ಸಮಯ ಇರುತ್ತದೆ. ಈ ಸಮಯವನ್ನು ದೇಶದ ಒಳಿತಿಗಾಗಿ ಬಳಕೆ ಮಾಡಬಹುದು ಅಥವಾ ಸಮೋಸಾದಂತಹ ಕ್ಷುಲ್ಲಕ ವಿಚಾರಗಳ ಪ್ರಸ್ತಾವಕ್ಕೂ ಬಳಕೆ ಮಾಡಬಹುದು’ ಎಂದು ‘ಎಕ್ಸ್’ನಲ್ಲಿ ಹೇಳಿದ್ದಾರೆ.

‘ಪಶ್ಚಿಮ ಬಂಗಾಳದಲ್ಲಿ ಮತದಾನದ ಹಕ್ಕನ್ನು ಕಸಿಯಲಾಗು-ತ್ತಿದೆ. ಆದರೆ ಚುನಾವಣಾ ಆಯೋಗ ವಿರುದ್ಧದ ಪ್ರಸ್ತಾವಕ್ಕೆ ಸಹಿ ಮಾಡಲು ಛಡ್ಡಾ ನಿರಾಕರಿಸಿದರು’ ಎಂದು ಹೇಳಿದ್ದಾರೆ.

ಮೌನವಾಗಿದ್ದೇನೆಯೇ ವಿನಾ ಸೋತಿಲ್ಲ: ಛಡ್ಡಾ

‘ನಾನು ಮೌನವಾಗಿದ್ದೇನೆಯೇ ವಿನಾ ಸೋತಿಲ್ಲ’ ಎಂದು ಎಎಪಿ ಸಂಸದ ರಾಘವ್ ಛಡ್ಡಾ ಶುಕ್ರವಾರ ಹೇಳಿದ್ದಾರೆ.



ರಾಘವ್ ಛಡ್ಡಾ

‘ಅವಕಾಶ ಲಭಿಸಿದಾಗಲೆಲ್ಲಾ ಜನರಿಗೆ ಸಂಬಂಧಿಸಿದ ವಿಚಾರಗಳ ಬಗ್ಗೆ ಸಂಸತ್ತಿನಲ್ಲಿ ಧ್ವನಿ ಎತ್ತಿದ್ದೇನೆ. ನಿರ್ಲಕ್ಷಿತ ವಿಚಾರಗಳ ಬಗ್ಗೆಯೂ ಮಾತನಾಡಿದ್ದೇನೆ. ಜನರ ಸಮಸ್ಯೆ ಬಗ್ಗೆ ಮಾತನಾಡುವುದು ಅಪರಾಧವೇ’ ಎಂದು ‘ಎಕ್ಸ್’ನಲ್ಲಿ ಅವರು ಪ್ರಶ್ನಿಸಿದ್ದಾರೆ.

‘ಮಾತನಾಡದಂತೆ ತಡೆಯಲು ಅಥವಾ ಮಾತನಾಡಲು ಅವಕಾಶ ನೀಡದಿರಲು ಸಂಸತ್ತಿಗೆ ಪಕ್ಷವು ಸೂಚಿಸಿದೆ. ಸಮಯ ಬಂದಾಗ ಪ್ರವಾಹವಾಗಿ ಪರಿವರ್ತನೆಯಾಗಬಲ್ಲ ನದಿ ನಾನು’ ಎಂದಿದ್ದಾರೆ.

ನಂತರ ಅವರು, ರಾಜ್ಯಸಭೆಯಲ್ಲಿ ವಿವಿಧ ವಿಚಾರಗಳ ಬಗ್ಗೆ ಪ್ರಸ್ತಾಪಿಸಿರುವ ಸಂಕ್ಷಿಪ್ತ ವಿಡಿಯೊವನ್ನು ‘ಎಕ್ಸ್’ನಲ್ಲಿ ಹಂಚಿಕೊಂಡಿದ್ದಾರೆ.

ಛಡ್ಡಾ ‘ರಾಜಿ’ಯಾಗಿದ್ದಾರೆ: ಮಾನ್

ಚಂಡೀಗಢ: ಎಎಪಿ ಸಂಸದ ರಾಘವ್ ಛಡ್ಡಾ ಅವರ ವಿರುದ್ಧ ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಅವರು ಶುಕ್ರವಾರ ವಾಗ್ದಾಳಿ ನಡೆಸಿದರು.




ಭಗವಂತ್ ಮಾನ್

ಪಕ್ಷದ ವಿಪ್ ಉಲ್ಲಂಘಿಸಿದ್ದನ್ನು ಉಲ್ಲೇಖಿಸಿದ ಅವರು, ಛಡ್ಡಾ ‘ರಾಜಿ’ಯಾಗಿದ್ದಾರೆ ಎಂದೆನಿಸುತ್ತದೆ ಎಂದು ಹೇಳಿದರು.

‘ಪಶ್ಚಿಮ ಬಂಗಾಳದಲ್ಲಿ ಮತದಾರರನ್ನು ಪಟ್ಟಿಯಿಂದ ಹೊರಗಿಟ್ಟ ಬಗ್ಗೆ, ಪ್ರಮುಖ ವಿಚಾರಗಳ ಬಗ್ಗೆ ಸಂಸತ್ ಹೊರಗೆ ಪ್ರತಿಭಟನೆ ನಡೆಸಿದ ಬಗ್ಗೆ ಅಥವಾ ಗುಜರಾತ್‌ನಲ್ಲಿ ಎಎಪಿಯ ಹಲವು ನಾಯಕರು ಮತ್ತು ಕಾರ್ಯಕರ್ತರನ್ನು ಬಂಧಿಸಿದ್ದರ ವಿರುದ್ಧ ಮಾತನಾಡಲು ಛಡ್ಡಾ ಅವರಿಗೆ ಇಷ್ಟವಿಲ್ಲ ಎಂದಾದರೆ ಪಕ್ಷದ ವಿಪ್ ಉಲ್ಲಂಘಿಸಿದಂತೆಯೇ ಅಲ್ಲವೇ’ ಎಂದು ಹೇಳಿದ್ದಾರೆ.

'ಮೃತ್ಯುದೇವತೆ'ಯಲ್ಲಿ ಹೆಣ್ಣಿನ ಕಥೆ


ವಿನಯಾ ಪ್ರಕಾಶ್


ಚಿತ್ರತಂಡ

ಸಿಡಿದೆದ್ದ ಹೆಣ್ಣಿನ ಕಥೆಯನ್ನು ಹೊಂದಿರುವ 'ಮೃತ್ಯುದೇವತೆ' ಚಿತ್ರದ ಟ್ರೇಲರ್ ಹಾಗೂ ಹಾಡುಗಳು ಇತ್ತೀಚೆಗಷ್ಟೇ ಬಿಡುಗಡೆಗೊಂಡಿವೆ. ನವೀನ್ ಮಹದೇವ ಕಥೆ-ಚಿತ್ರಕಥೆ ಬರೆದು ನಿರ್ದೇಶಿಸಿರುವುದರ ಜತೆಗೆ ಪ್ರಮುಖ ಪಾತ್ರದಲ್ಲೂ ಕಾಣಿಸಿಕೊಂಡಿದ್ದಾರೆ.

'ಇದಕ್ಕೂ ಮೊದಲು ಕಿರುಚಿತ್ರ ಮಾಡಿದ್ದೆ. ಮೊದಲ ಬಾರಿಗೆ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದೇನೆ. ಹೆಣ್ಣುಮಕ್ಕಳು ಅದೆಷ್ಟೇ ಬುದ್ಧಿವಂತರಾದರೂ, ಎಷ್ಟೇ ಓದಿಕೊಂಡಿದ್ದರೂ ಕೆಲವೊಮ್ಮೆ ಗೊತ್ತಿಲ್ಲದೆ ಯಾವುದೋ ಬಲೆಗೆ ಬೀಳುತ್ತಾರೆ. ಅಂಥ ಸನ್ನಿವೇಶಗಳಲ್ಲಿ ಸಿಡಿದೇಳುವ ಹೆಣ್ಣಿನ ಕಥೆ ಈ ಚಿತ್ರದಲ್ಲಿದೆ. ಚಿತ್ರದ ಕೆಲಸಗಳು ಸಂಪೂರ್ಣವಾಗಿ ಮುಗಿದು, ಬಿಡುಗಡೆಯ ಹಂತಕ್ಕೆ ಬಂದಿದೆ. ಸೆನ್ಸಾರ್ ಪ್ರಕ್ರಿಯೆ ನಡೆಯುತ್ತಿದೆ. ಶೀಘ್ರದಲ್ಲಿಯೇ ಚಿತ್ರ ಬಿಡುಗಡೆ ದಿನಾಂಕ ಘೋಷಿಸುತ್ತೇವೆ' ಎಂದರು ನಿರ್ದೇಶಕ.

ಈ ಹಿಂದೆ 'ಸಹಾರಾ' ಎಂಬ ಮಹಿಳಾ ಪ್ರಧಾನ ಚಿತ್ರದಲ್ಲಿ ನಟಿಸಿದ್ದ ಸಾರಿಕಾ ಈ ಚಿತ್ರದ ನಾಯಕಿ. ವಿನಯಾ ಪ್ರಕಾಶ್ ಪ್ರಮುಖ ಪಾತ್ರದಲ್ಲಿದ್ದಾರೆ. 'ಈ ತಂಡದ ಒಂದು ವಿಶೇಷ ಎಂದರೆ ಒಗ್ಗಟ್ಟು. ಎಲ್ಲರೂ ಕೆಲಸದ ಘನತೆಯನ್ನು ಸಂಪೂರ್ಣವಾಗಿ ಅರ್ಥ ಮಾಡಿಕೊಂಡು ಕೆಲಸ ಮಾಡಿದ್ದಾರೆ. ಚಿತ್ರದ ಪೋಸ್ಟರ್‌ನಲ್ಲಿ ಗುಡ್ಡ, ಬೆಟ್ಟ, ಹಿಮ ಎಲ್ಲವೂ ಇದೆ. ಇದನ್ನೆಲ್ಲ ಪೋಸ್ಟರ್‌ಗಾಗಿ ವಿನ್ಯಾಸ ಮಾಡಿದ್ದಲ್ಲ. ಅಂಥ ಚೆಂದದ ವಾತಾವರಣದಲ್ಲಿ ಚಿತ್ರೀಕರಣ ಮಾಡಿದ್ದೇವೆ. ಮಹದೇಶ್ವರ ಬೆಟ್ಟದ ತಪ್ಪಲಿನಲ್ಲಿ ಚಿತ್ರದ ಚಿತ್ರೀಕರಣವಾಗಿದೆ. ಒಳ್ಳೆಯ ಸಂದೇಶ ಹೊಂದಿರುವ ಚಿತ್ರ' ಎಂದರು ವಿನಯಾ ಪ್ರಕಾಶ್.

ಹಿಮಶ್ರೀ, ಡಯಾನಾ, ಮಾಹಿನ್ ಕುಬೇರ, ಸೂರ್ಯ, ಪವನ್, ವರ್ಷಿತಾ ಮುಂತಾದವರು ನಟಿಸಿದ್ದಾರೆ. ಚಿತ್ರಕ್ಕೆ ಅನಿರುದ್ಧ್ ಛಾಯಾಚಿತ್ರಗ್ರಹಣ, ಶಿವಪ್ರಸಾದ್ ಸಂಗೀತ, ವಿಕ್ರಮಾದಿತ್ಯ ಅವರ ಸಂಕಲನವಿದೆ.

ಡಾಲಿ ಗೆಳೆಯರ ಮದರ್ ಪ್ರಾಮಿಸ್


ಚಿತ್ರದ ಪೋಸ್ಟರ್

ಕೆಲ ವರ್ಷಗಳ ಹಿಂದೆ ಡಾಲಿ ಧನಂಜಯ ಮತ್ತು ಅವರ ಮೈಸೂರಿನ ಗೆಳೆಯರು 'ಕೆಜಿಬಿ' ಹೆಸರಿನ ಯೂಟ್ಯೂಬ್ ಚಾನೆಲ್ ಮಾಡಿ ವೀಕ್ಷಕರನ್ನು ನಗಿಸುತ್ತಿದ್ದರು. ನಿರ್ದೇಶಕ ಪವನ್ ಕುಮಾರ್ ಕೂಡ ಕೆಜಿಬಿ ಭಾಗವಾಗಿದ್ದರು. ಖಾಸಗಿ ವಾಹಿನಿಗಳಲ್ಲಿ ಬರುತ್ತಿದ್ದ ರಿಯಾಲಿಟಿ ಶೋಗಳ ಅಣಕು ಪ್ರದರ್ಶನದೊಂದಿಗೆ ಈ ತಂಡ ಗಮನ ಸೆಳೆದಿತ್ತು. ಇಲ್ಲಿನ ಸದಸ್ಯರೆಲ್ಲ ಸಿನಿಮಾ ರಂಗದಲ್ಲಿ ಚದುರಿ ಹೋದ ಕಾರಣ 'ಕೆಜಿಬಿ'ಗೆ ವಿದ್ಯುತ್‌ಚ್ಛಕ್ತಿ ಇಲ್ಲದಂತಾಗಿತ್ತು. ಇದೀಗ ಮತ್ತೆ ಇವರೆಲ್ಲ ಒಟ್ಟಾಗಿದ್ದು, ಡಾಲಿ ಪಿಕ್ಚರ್ಸ್ ಜತೆ ಕೈಜೋಡಿಸಿ 'ಮದರ್ ಪ್ರಾಮಿಸ್' ಎಂಬ ಸಿನಿಮಾ ಚಿತ್ರೀಕರಣ ಮುಗಿಸಿದ್ದು, ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದೆ.

ಈ ಸಿನಿಮಾದೊಂದಿಗೆ ನಟರಾಗಿ ಗುರುತಿಸಿಕೊಂಡಿದ್ದ ಪೂರ್ಣಚಂದ್ರ ಮೈಸೂರು ನಿರ್ದೇಶಕನಾಗಿಯೂ ಬಡ್ತಿ ಪಡೆದಿದ್ದಾರೆ. ಸಿನಿಮಾದ ಫಸ್ಟ್‌ಲುಕ್ ಪೋಸ್ಟರ್ ಬಿಡುಗಡೆಗೊಂಡಿದ್ದು, ಇದೊಂದು ಸಂಪೂರ್ಣ ಹಾಸ್ಯಮಯ ಚಿತ್ರ ಎಂಬುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಚಿತ್ರದಲ್ಲಿ ಪೂರ್ಣಚಂದ್ರ ಮೈಸೂರು, ನಾಗಭೂಷಣ, ವಿನಯಾ ಪ್ರಕಾಶ್, ಡಾಲಿ ಧನಂಜಯ, ಗುರುದತ್ ಜೊತೆಗೆ ಹಲವು ಜನಪ್ರಿಯ ಹಾಸ್ಯ ನಟರು ಇದ್ದಾರೆ.

'ಈ ಸಿನಿಮಾಗೆ ನಾನೇ ಕಥೆ, ಸಂಭಾಷಣೆ ಬರೆದಿದ್ದೇನೆ. ಚಿತ್ರಕಥೆಗೆ ಮಹಾದೇವ್ ಪ್ರಸಾದ್ ಹಾಗೂ ಧಾರವಾಡದ ಅರುಣ ಅವರು ಜತೆಯಾಗಿದ್ದಾರೆ. ಈಗಿನ ಜೆನ್‌ಜಿ ಹುಡುಗರನ್ನು ಸೇರಿಸಿಕೊಂಡು ಪೂರ್ಣ ಪ್ರಮಾಣದ ಮನರಂಜನಾ ಸಿನಿಮಾ ಕಟ್ಟಿದ್ದೇವೆ. ಈ ವರ್ಷವೇ ಚಿತ್ರ ತೆರೆಗೆ ಬರಲಿದೆ' ಎಂದಿದ್ದಾರೆ ನಿರ್ದೇಶಕ. ರಾಹುಲ್ ರಾಯ್ ಛಾಯಾಚಿತ್ರಗ್ರಹಣ, ನವನೀತ್ ಶ್ಯಾಮ್ ಸಂಗೀತ ಚಿತ್ರಕ್ಕಿದೆ.

ಸೇತುಪತಿ–ಮಣಿರತ್ನಂ ಹೊಸ ಸಿನಿಮಾ


ವಿಜಯ್ ಸೇತುಪತಿ

ಜನಪ್ರಿಯ ನಿರ್ದೇಶಕ ಮಣಿರತ್ನಂ ಕೆಲ ದಿನಗಳ ಹಿಂದೆ ನಟ ವಿಜಯ್ ಸೇತುಪತಿಯೊಂದಿಗೆ ತಮ್ಮ ಮುಂದಿನ ಸಿನಿಮಾವನ್ನು ಘೋಷಿಸಿದ್ದರು. ಸಾಯಿ ಪಲ್ಲವಿ ನಾಯಕಿಯಾಗಿರುವ ಚಿತ್ರ ಈ ವರ್ಷ ಜೂನ್‌ನಲ್ಲಿ ಸೆಟ್ಟೇರುವ ಸಾಧ್ಯತೆಯಿದೆ.

ಮದ್ರಾಸ್ ಟಾಕೀಸ್ ಈ ಸಿನಿಮಾವನ್ನು ನಿರ್ಮಿಸುತ್ತಿದ್ದು, ಸದ್ಯ 'ಪ್ರೊಡಕ್ಷನ್ ನಂ.23' ಹೆಸರಿನಡಿಯಲ್ಲಿ ಚಿತ್ರ ಸಿದ್ಧಗೊಳ್ಳಲಿದೆ. ಪ್ರೇಮಕಥೆಯನ್ನು ಹೊಂದಿರುವ ಚಿತ್ರಕ್ಕೆ ಎ.ಆರ್. ರೆಹಮಾನ್ ಸಂಗೀತ ನೀಡುತ್ತಿರುವುದು ಖಚಿತವಾಗಿದೆ. ಚಿತ್ರದ ಎರಡು ಹಾಡುಗಳನ್ನು ರೆಹಮಾನ್ ಈಗಾಗಲೇ ಸಂಯೋಜಿಸಿದ್ದಾರೆ. ಏಪ್ರಿಲ್‌ನಲ್ಲಿ ಚಿತ್ರದ ಫಸ್ಟ್‌ಲುಕ್ ಟೀಸರ್ ಚಿತ್ರೀಕರಣಗೊಳ್ಳಲಿದೆ ಎಂದು ಮೂಲಗಳನ್ನು ಉಲ್ಲೇಖಿಸಿ ಮಾಧ್ಯಮಗಳು ವರದಿ ಮಾಡಿವೆ.

ಮಣಿರತ್ನಂ ಅವರ ಹಿಂದಿನ ಚಿತ್ರ 'ಥಗ್ ಲೈಫ್' ನಿರೀಕ್ಷಿತ ಮಟ್ಟದ ಯಶಸ್ಸು ಕಂಡಿರಲಿಲ್ಲ. ಗೆಲುವು ಎದುರು ನೋಡುತ್ತಿರುವ ಮಣಿರತ್ನಂ ನವಿರಾದ ಪ್ರೇಮಕಥೆಯನ್ನು ಕೈಗೆತ್ತಿಕೊಂಡಿದ್ದಾರೆ ಎನ್ನಲಾಗಿದೆ. ವಿಜಯ್ ಸೇತುಪತಿ ಹಾಗೂ ಸಾಯಿ ಪಲ್ಲವಿ ಬಳಿ ಸದ್ಯ ಹಲವು ಸಿನಿಮಾಗಳಿವೆ. ಸಾಯಿ ಪಲ್ಲವಿ 'ರಾಮಾಯಣ' ಚಿತ್ರದಲ್ಲಿ ಸೀತೆಯಾಗಿ ಕಾಣಿಸಿಕೊಂಡಿದ್ದಾರೆ.

ಗೆಲುವಿನ ಓಟ ಮುಂದುವರಿಸುವ ಛಲದಲ್ಲಿ ಚೆಟ್ರಿ ಪಡೆ

ಬಿಎಫ್‌ಸಿಗೆ ಇಂದು ಗೋವಾ ಸವಾಲು

ಪ್ರಜಾವಾಣಿ ವಾರ್ತೆ


ಸೋಹಮ್ ವರ್ಷ್ಣೇಯ

ಗೋವಾ: ಹಾಲಿ ರನ್ನರ್ಸ್ ಅಪ್ ಬೆಂಗಳೂರು ಎಫ್‌ಸಿ ತಂಡವು ಶನಿವಾರ ಇಂಡಿಯನ್ ಸೂಪರ್ ಲೀಗ್‌ನ ಪಂದ್ಯದಲ್ಲಿ ಗೋವಾ ಎಫ್‌ಸಿ ತಂಡವನ್ನು ಎದುರಿಸಲಿದೆ.

ಗೋವಾ ತಂಡದ ತವರು ಫತೋರ್ಡಾದ ನೆಹರೂ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ. ಕಳೆದ ಮೂರು ಪಂದ್ಯಗಳಲ್ಲಿ ಅಜೇಯವಾಗಿರುವ ಸುನಿಲ್ ಚೆಟ್ರಿ ಪಡೆ ತವರಿನಾಚೆ ಪ್ರಾಬಲ್ಯ ಮುಂದುವರಿಸುವ ವಿಶ್ವಾಸದಲ್ಲಿದೆ.

ರೆನೆಡಿ ಸಿಂಗ್ ಮಾರ್ಗದರ್ಶನದ ತಂಡವು ತನ್ನ ಕೊನೆಯ ಪಂದ್ಯದಲ್ಲಿ 3-1 ಗೋಲುಗಳಿಂದ ಇಂಟರ್ ಕಾಶಿ ತಂಡವನ್ನು ಸುಲಭವಾಗಿ ಮಣಿಸಿ ಆತ್ಮವಿಶ್ವಾಸವನ್ನು ವೃದ್ಧಿಸಿಕೊಂಡಿದೆ. ಆ ಪಂದ್ಯದಲ್ಲಿ ಬ್ರಯನ್ ಸ್ಯಾಂಚೆಜ್ ಕಾಲ್ಚಳಕ ಮೆರೆದು ಡಬಲ್ ಗೋಲು ಗಳಿಸಿದರೆ, ಆಶಿಕ್ ಕುರುಣಿಯನ್ ಒಂದು ಗೋಲು ಉಪಯುಕ್ತ ಕಾಣಿಕೆ ನೀಡಿದ್ದರು.

ಹಾಲಿ ಆವೃತ್ತಿಯಲ್ಲಿ ಒಟ್ಟು ಆರು ಪಂದ್ಯಗಳನ್ನು ಆಡಿರುವ ಬೆಂಗಳೂರು ತಂಡವು ಮೂರು ಗೆಲುವು, ಎರಡು ಡ್ರಾ, ಒಂದು ಸೋಲಿನೊಂದಿಗೆ ಒಟ್ಟು 11 ಅಂಕ ಸಂಪಾದಿಸಿ ಲೀಗ್ ಪಟ್ಟಿಯಲ್ಲಿ ಐದನೇ ಸ್ಥಾನದಲ್ಲಿದೆ. ಗೋವಾ ವಿರುದ್ಧ ಪಾರಮ್ಯ ಮೆರೆದು ಪೂರ್ಣ ಮೂರು ಅಂಕ ಗಳಿಸಿದರೆ ಮೊದಲೆರಡು ಸ್ಥಾನಕ್ಕೇರುವ ಸುವರ್ಣಾವಕಾಶ ತಂಡದ ಮುಂದಿದೆ. ಮುಂಬೈ ಸಿಟಿ (14 ಅಂಕ) ಸದ್ಯ ಅಗ್ರಸ್ಥಾನದಲ್ಲಿದೆ.

ಪ್ರಸಕ್ತ ಲೀಗ್‌ನಲ್ಲಿ ಅಜೇಯವಾಗಿರುವ ಗೋವಾ ಎಫ್‌ಸಿ ತಂಡವು ತನ್ನ ಕೊನೆಯ ಪಂದ್ಯದಲ್ಲಿ ಚೆನ್ನೈಯಿನ್ ಎಫ್‌ಸಿ ವಿರುದ್ಧ 1–1ರಿಂದ ಡ್ರಾ ಮಾಡಿಕೊಂಡಿದೆ. ಒಟ್ಟು ಆರು ಪಂದ್ಯಗಳಲ್ಲಿ ಎರಡು ಗೆಲುವು, ನಾಲ್ಕು ಡ್ರಾ ಸಾಧಿಸಿರುವ ಗೋವಾ ತಂಡವು 10 ಅಂಕಗಳೊಂದಿಗೆ ಲೀಗ್ ಪಟ್ಟಿಯಲ್ಲಿ ಆರನೇ ಸ್ಥಾನದಲ್ಲಿದೆ.

'ಕೋಚ್ ನಮಗೆ ಮೈದಾನದಲ್ಲಿ ಪೂರ್ಣ ಸ್ವಾತಂತ್ರ್ಯ ನೀಡಿದ್ದಾರೆ. ಅದು ಆಟಗಾರನಿಗೆ ಅತ್ಯಂತ ಮುಖ್ಯವಾಗುತ್ತದೆ. ಹೀಗಾಗಿ ಒತ್ತಡವಿಲ್ಲದೆ ಕೌಶಲ ಪ್ರದರ್ಶಿಸಲು ಸಾಧ್ಯವಾಗುತ್ತಿದೆ. ಆತ್ಮವಿಶ್ವಾಸದಿಂದ ಆಡಲು ಸಹಕಾರಿಯಾಗುತ್ತದೆ' ಎಂದು ಬಿಎಫ್‌ಸಿ ಮಿಡ್‌ಫೀಲ್ಡರ್ ಸೋಹಮ್ ವರ್ಷ್ಣೇಯ ಹೇಳಿದ್ದಾರೆ.

ಪಂದ್ಯ ಆರಂಭ: ರಾತ್ರಿ 7.30

ಶ್ರೀಶಂಕರ್, ಶೈಲಿ ಸಿಂಗ್ ಮೇಲೆ ಗಮನ

ಬೆಂಗಳೂರಿನಲ್ಲಿ ಇಂಡಿಯನ್ ಅಥ್ಲೆಟಿಕ್ ಸರಣಿಯ ಮೊದಲ ಕೂಟ ಇಂದು

ಪ್ರಜಾವಾಣಿ ವಾರ್ತೆ


ಮುರಳಿ ಶ್ರೀಶಂಕರ್ ಸಂಗ್ರಹ ಚಿತ್ರ

ಬೆಂಗಳೂರು: ಏಷ್ಯನ್ ಕ್ರೀಡೆಗಳು ಮತ್ತು ಕಾಮನ್‌ವೆಲ್ತ್ ಕ್ರೀಡೆಗಳ ಅರ್ಹತಾ ಮಾನದಂಡದ ಮೇಲೆ ಕಣ್ಣಿಟ್ಟಿರುವ ಲಾಂಗ್‌ಜಂಪ್ ಸ್ಪರ್ಧಿಗಳಾದ ಮುರಳಿ ಶ್ರೀಶಂಕರ್ ಮತ್ತು ಶೈಲಿ ಸಿಂಗ್ ಅವರು ಶನಿವಾರ ಇಲ್ಲಿ ನಡೆಯಲಿರುವ ಇಂಡಿಯನ್ ಅಥ್ಲೆಟಿಕ್ಸ್ ಸರಣಿಯ ಮೊದಲ ಕೂಟದಲ್ಲಿ ಭಾಗವಹಿಸುವ ಮೂಲಕ ಋತುವನ್ನು ಆರಂಭಿಸಲಿದ್ದಾರೆ.

ಶ್ರೀಕಂಠೀರವ ಕ್ರೀಡಾಂಗಣದಲ್ಲಿ ನಡೆಯುವ ಒಂದು ದಿನದ ಈ ಕೂಟದಲ್ಲಿ ಜಿಗಿತದ (ಜಂಪ್) ಸ್ಪರ್ಧೆಗಳ ಮೇಲೆ ಕುತೂಹಲವಿದೆ. ಇಲ್ಲಿ ಈ ಹಿಂದೆ ಜಿಗಿತದ ಸ್ಪರ್ಧೆಗಳಲ್ಲಿ ಉತ್ತಮ ಸಾಧನೆಗಳು ದಾಖಲಾಗಿವೆ. ಈ ಹಿಂದೆ ರಾಷ್ಟ್ರೀಯ ದಾಖಲೆ ಹೊಂದಿದ್ದ ಶ್ರೀಶಂಕರ್ ಅವರು ಇಂಡಿಯನ್ ಓಪನ್ ಜಂಪ್ಸ್ ಸ್ಪರ್ಧೆಯಲ್ಲಿ ಸ್ಪರ್ಧಿಸಿರಲಿಲ್ಲ. ಅವರ ವೈಯಕ್ತಿಕ ಶ್ರೇಷ್ಠ ಸಾಧನೆಯಾದ 8.41 ಮೀ. ದೂರವು 2023ರಲ್ಲಿ ದಾಖಲಾಗಿತ್ತು.

ಅವರಿಗೆ ಇಂಡಿಯನ್ ಓಪನ್‌ನಲ್ಲಿ ಜಯಶಾಲಿಯಾಗಿದ್ದ ಕರ್ನಾಟಕ ಯುವತಾರೆ ಪುರುಷೋತ್ತಮ್ (ವೈಯಕ್ತಿಕ ಶ್ರೇಷ್ಠ ಸಾಧನೆ: 7.87 ಮೀ.) ಅವರಿಂದ ಪೈಪೋಟಿ ಎದುರಾಗಬಹುದು. ಭುವನೇಶ್ವರದಲ್ಲಿ ಕಳೆದ ತಿಂಗಳು ನಡೆದ ರಾಷ್ಟ್ರೀಯ ಒಳಾಂಗಣ ಸ್ಪರ್ಧೆಯಲ್ಲಿ ಜಯಶಾಲಿಯಾಗಿದ್ದ ಒಡಿಶಾದ ಸರುನ್ ಪಯಸಿಂಗ್ ಅವರೂ ತಮ್ಮ (7.81 ಮೀ.) ವೈಯಕ್ತಿಕ ಶ್ರೇಷ್ಠ ಸಾಧನೆ ಉತ್ತಮಪಡಿಸಲು ಶ್ರಮ ಹಾಕಬಹುದು.

ಆದರೆ ಮಹಿಳೆಯರ ವಿಭಾಗದ ಫೈನಲ್ ಹೆಚ್ಚು ಪೈಪೋಟಿ ಕಾಣಬಹುದು. ಇಲ್ಲಿ ಶೈಲಿ ಸಿಂಗ್ ಅವರಿಗೆ ಏಷ್ಯನ್ ಕ್ರೀಡೆಗಳ ಬೆಳ್ಳಿ ಪದಕ ವಿಜೇತೆ ಆ್ಯನ್ಸಿ ಸೋಜನ್ ಅವರಿಂದ ತುರುಸಿನ ಸ್ಪರ್ಧೆ ಎದುರಾಗಬಹುದು. ಫೆಬ್ರುವರಿಯಲ್ಲಿ ಏಷ್ಯನ್ ಒಳಾಂಗಣ ಕೂಟದಲ್ಲಿ ಆ್ಯನ್ಸಿ ಬೆಳ್ಳಿ ಜಯಿಸಿದ ನಂತರ ಇತರ ಕೂಟಗಳಲ್ಲಿ ಭಾಗವಹಿಸಿರಲಿಲ್ಲ.

ಶೈಲಿ ಜೊತೆಯಲ್ಲೇ ಕೆಂಗೇರಿಯಲ್ಲಿ ರಾಬರ್ಟ್ ಬಾಬಿ ಜಾರ್ಜ್ ಅವರಿಂದ ತರಬೇತಿ ಪಡೆಯುತ್ತಿರುವ ಮುಬಾಸಿನಾ ಮೊಹಮ್ಮದ್ ಸಹ ತಮ್ಮ ವೈಯಕ್ತಿಕ ಶ್ರೇಷ್ಠ ನಿರ್ವಹಣೆ (6.38 ಮೀ.) ಉತ್ತಮಪಡಿಸಲು ಯತ್ನಿಸಲಿದ್ದಾರೆ.

ಈ ಕೂಟ ಟ್ರ್ಯಾಕ್ ಮತ್ತು ಫೀಲ್ಡ್ ಅಥ್ಲೀಟುಗಳಿಗೆ ಹಲವು ದೃಷ್ಟಿಯಿಂದ ಮಹತ್ವದ್ದು. ಅಂತರರಾಷ್ಟ್ರೀಯ ಕೂಟಗಳಲ್ಲಿ ಪಾಲ್ಗೊಳ್ಳಲು ಬಯಸುವ ಅಥ್ಲೀಟುಗಳು ಅರ್ಹತಾ ಮಟ್ಟ ಸಾಧಿಸಿದರಷ್ಟೇ ಸಾಲದು. ಕಡೆಪಕ್ಷ ಒಂದು ರಾಜ್ಯದ ಕೂಟದಲ್ಲಿ ಮತ್ತು ಎರಡು ರಾಷ್ಟ್ರೀಯ ಮಟ್ಟದ ಕೂಟಗಳಲ್ಲಿ ಭಾಗವಹಿಸಿದರಷ್ಟೇ, ಅಂಥ ಅಥ್ಲೀಟುಗಳು ಮೇ ತಿಂಗಳಲ್ಲಿ ನಡೆಯಲಿರುವ ರಾಷ್ಟ್ರೀಯ ಸೀನಿಯರ್ ಅಥ್ಲೆಟಿಕ್ಸ್ ಫೆಡರೇಷನ್ ಸ್ಪರ್ಧೆಯಲ್ಲಿ (ರಾಂಚಿ) ಮತ್ತು ಜೂನ್‌ನಲ್ಲಿ ನಡೆಯಲಿರುವ ರಾಷ್ಟ್ರೀಯ ಅಂತರರಾಜ್ಯ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನಲ್ಲಿ (ಭುವನೇಶ್ವರ) ಭಾಗವಹಿಸಲು ಅರ್ಹತೆ ಪಡೆಯುತ್ತಾರೆ. ಕಾಮನ್‌ವೆಲ್ತ್ ಮತ್ತು ಏಷ್ಯನ್ ಕ್ರೀಡೆಗಳಿಗೆ ಅರ್ಹತೆ ಗಳಿಸಲು ಈ ನಾಲ್ಕು ದಿನಗಳ ಎರಡು ಕೂಟಗಳಲ್ಲಿ ಪಾಲ್ಗೊಳ್ಳುವುದು ಕಡ್ಡಾಯವಾಗಿದೆ.

ಪುರುಷರ 100 ಮೀ. ಓಟವೂ ಗಮನ ಸೆಳೆಯುವ ನಿರೀಕ್ಷೆಯಿದೆ. ಕರ್ನಾಟಕದ ಮಣಿಕಂಠ ಹೋಬಳಿದಾರ ಅವರಿಗೆ ತಮ್ಮ ಸಾಮರ್ಥ್ಯ ಸಾಬೀತುಪಡಿಸಲು ಇದು ಸದವಕಾಶ. ಅವರು ಏಷ್ಯನ್ ಒಳಾಂಗಣ ಕೂಟ ಸೇರಿದಂತೆ ತಮ್ಮ ಕೊನೆಯ ಎರಡು ಸ್ಪರ್ಧೆಗಳಲ್ಲಿ ಅನರ್ಹಗೊಂಡಿದ್ದರು. ಗುರಿಂದರ್‌ವೀರ್ ಸಿಂಗ್ ಅವರು ಎರಡು ರಾಷ್ಟ್ರೀಯ ದಾಖಲೆಗಳನ್ನು ಸ್ಥಾಪಿಸಿದ್ದು ಉತ್ತಮ ಮನೋಬಲದೊಡನೆ ಕಣದಲ್ಲಿದ್ದಾರೆ. ಒಳಾಂಗಣ ಚಾಂಪಿಯನ್‌ಷಿಪ್‌ನಲ್ಲಿ ಅವರು 60 ಮೀ. ಓಟದಲ್ಲಿ ರಾಷ್ಟ್ರೀಯ ದಾಖಲೆ ಸ್ಥಾಪಿಸಿದ್ದರು. 4x100 ಮೀ. ಮಿಶ್ರ ರಿಲೆಯಲ್ಲೂ ಅವರು ಉತ್ತಮ ಓಟ ಓಡಿದ್ದರು.

ಪುರುಷರ 800 ಮೀ. ಓಟದಲ್ಲಿ ರಾಷ್ಟ್ರೀಯ ದಾಖಲೆ ಹೊಂದಿರುವ ಮೊಹಮ್ಮದ್ ಅಫ್ಜಲ್, ಮಹಿಳೆಯರ 800 ಮೀ. ಓಟದಲ್ಲಿ ಏಷ್ಯನ್ ಚಾಂಪಿಯನ್‌ಷಿಪ್‌ನ ಬೆಳ್ಳಿ ವಿಜೇತೆ ಪೂಜಾ ಅವರು ಕಣಕ್ಕಿಳಿಯುವ ಪ್ರಮುಖ ಅಥ್ಲೀಟುಗಳಾಗಿದ್ದಾರೆ.

ಕಳೆದ ತಿಂಗಳು ರಾಷ್ಟ್ರೀಯ ಒಳಾಂಗಣ ಕೂಟದ ಪೋಲ್‌ವಾಲ್ಟ್‌ನಲ್ಲಿ 4.22 ಮೀ. ಎತ್ತರ ಜಿಗಿದು ರಾಷ್ಟ್ರೀಯ ದಾಖಲೆ ಸ್ಥಾಪಿಸಿರುವ ಭರಣಿಕಾ ಇಳಂಗೋವನ್ ಅವರೂ ಹೊರಾಂಗಣ ಕೂಟಕ್ಕೆ ಮರಳಲಿದ್ದಾರೆ.

ಸಂಕ್ಷಿಪ್ತ ಸುದ್ದಿ

ಕೊಡವ ಕೌಟುಂಬಿಕ ಹಾಕಿ ಉತ್ಸವ ನಾಳೆಯಿಂದ

ಮಡಿಕೇರಿ: ತಾಲ್ಲೂಕಿನ ನಾಪೋಕ್ಲುವಿನಲ್ಲಿ ಏ.5ರಿಂದ ಮೇ 2ರವರೆಗೆ ನಡೆಯಲಿರುವ 26ನೇ ಆವೃತ್ತಿಯ ಕೊಡವ ಕೌಟುಂಬಿಕ ಹಾಕಿ ಉತ್ಸವ 'ಚೇನಂಡ ಕಪ್'ಗಾಗಿ ಒಟ್ಟು 383 ಕುಟುಂಬಗಳು ನೋಂದಾಯಿಸಿವೆ.

'ನಾಪೋಕ್ಲುವಿನಲ್ಲಿ 3 ಮೈದಾನಗಳಲ್ಲಿ ಪಂದ್ಯಗಳು ನಡೆಯಲಿದ್ದು, 4ನೇ ಮೈದಾನವನ್ನೂ ಸಿದ್ಧಪಡಿಸಿ ಇಟ್ಟುಕೊಳ್ಳಲಾಗಿದೆ' ಎಂದು ಕೊಡವ ಹಾಕಿ ಅಕಾಡೆಮಿಯ ಅಧ್ಯಕ್ಷ ಪಾಂಡಂಡ ಕೆ. ಬೋಪಣ್ಣ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಈ ವರ್ಷ ವಿನೂತನವಾಗಿ 'ಗೋಲಿಗೊಂದು ಗಿಡ' ಯೋಜನೆಯಡಿ ಪ್ರತಿ ಗೋಲಿಗೂ ಒಂದೊಂದು ಸಸಿ ನೆಡಲಾಗುವುದು' ಎಂದು ತಿಳಿಸಿದರು.

ಕೊಕ್ಕೊ; ಅಖಿಲ ಭಾರತ ಟೂರ್ನಿಗೆ ರಾಜ್ಯದ 3 ತಂಡಗಳು

ದಾವಣಗೆರೆ: ಮಂಡ್ಯ, ಮಂಗಳೂರು, ಮೈಸೂರು ಮತ್ತು ಕ್ಯಾಲಿಕಟ್ ವಿಶ್ವವಿದ್ಯಾಲಯದ ಮಹಿಳಾ ತಂಡಗಳು ಅಖಿಲ ಭಾರತ ಅಂತರ ವಿಶ್ವವಿದ್ಯಾಲಯಗಳ ಕೊಕ್ಕೊ ಟೂರ್ನಿಗೆ ಅರ್ಹತೆ ಪಡೆದಿವೆ.

ಅಖಿಲ ಭಾರತ ವಿಶ್ವವಿದ್ಯಾಲಯಗಳ ಸಂಘದ ಆಶ್ರಯದಲ್ಲಿ ದಾವಣಗೆರೆ ವಿ.ವಿ. ಆವರಣದಲ್ಲಿ ನಡೆಯುತ್ತಿರುವ ದಕ್ಷಿಣ ವಲಯ ಅಂತರ ವಿಶ್ವವಿದ್ಯಾಲಯಗಳ ಟೂರ್ನಿಯಲ್ಲಿ ಒಟ್ಟು 89 ತಂಡಗಳು ಪಾಲ್ಗೊಂಡಿದ್ದವು. ಇದರಲ್ಲಿ 8 ತಂಡಗಳು ಅರ್ಹತಾ ಹಂತ ಪ್ರವೇಶಿಸಿದ್ದವು.

ಶುಕ್ರವಾರ ನಡೆದ 'ಎ' ಗುಂಪಿನ ಅರ್ಹತಾ ಪಂದ್ಯದಲ್ಲಿ ಮಂಡ್ಯ 13–4ರಿಂದ ಆತಿಥೇಯ ದಾವಣಗೆರೆ ತಂಡವನ್ನು ಮಣಿಸಿತು. 'ಬಿ' ಗುಂಪಿನ ಪಂದ್ಯದಲ್ಲಿ ಮಂಗಳೂರು 12–8ರಿಂದ ಕೊಯಮತ್ತೂರಿನ ಭಾರತಿಯಾರ್, 'ಸಿ' ಗುಂಪಿನ ಹಣಾಹಣಿಯಲ್ಲಿ ಮೈಸೂರು 10–8ರಿಂದ ಬೆಂಗಳೂರು ನಗರ ವಿ.ವಿ, 'ಡಿ' ಗುಂಪಿನ ಪೈಪೋಟಿಯಲ್ಲಿ ಕ್ಯಾಲಿಕಟ್ 10–7ರಿಂದ ಚೆನ್ನೈನ ಅಣ್ಣಾ ವಿ.ವಿ. ತಂಡವನ್ನು ಪರಾಭವಗೊಳಿಸಿತು.

ಅಖಿಲ ಭಾರತ ಟೂರ್ನಿ ಏಪ್ರಿಲ್ 19 ರಿಂದ 23ರವರೆಗೆ ಮುಂಬೈನ ಎಸ್‌ಎನ್‌ಡಿಟಿ ಮಹಿಳಾ ವಿಶ್ವವಿದ್ಯಾಲಯದಲ್ಲಿ ನಡೆಯಲಿದೆ.

ಮಂಡ್ಯ, ಮಂಗಳೂರು, ಮೈಸೂರು ಮತ್ತು ಕ್ಯಾಲಿಕಟ್ ತಂಡಗಳು ದಕ್ಷಿಣ ವಲಯ ಟೂರ್ನಿಯ ಲೀಗ್ ಹಂತಕ್ಕೂ ಮುನ್ನಡೆದಿದ್ದು, ಅಗ್ರ ಸ್ಥಾನಕ್ಕಾಗಿ ಪೈಪೋಟಿ ನಡೆಸಲಿವೆ.

'ಸಂಜೀವಿನಿ'ಗೆ ತೊಡಕಾದ ನಿರಾಸಕ್ತಿ

ಒಂದನೇ ಪುಟದಿಂದ...

ಆದರೆ, ಆಸ್ಪತ್ರೆಗಳಿಗೆ ನೀಡುತ್ತಿರುವ ಚಿಕಿತ್ಸಾ ವೆಚ್ಚವನ್ನು ರಾಷ್ಟ್ರೀಯ ಆರೋಗ್ಯ ಯೋಜನೆಯ ದರಗಳಿಗೆ ಅನುಗುಣವಾಗಿ ಪರಿಷ್ಕರಿಸಿಲ್ಲ. ಹೆರಿಗೆ, ಕ್ಯಾನ್ಸರ್, ಶ್ವಾಸಕೋಶ ಸಮಸ್ಯೆ, ಕಣ್ಣಿನ ಚಿಕಿತ್ಸೆ ಸೇರಿದಂತೆ ಬಹುತೇಕ ಕಾಯಿಲೆಗಳ ಚಿಕಿತ್ಸಾ ವೆಚ್ಚ ಅತ್ಯಂತ ಕಡಿಮೆ ಇದೆ. ಅಷ್ಟು ಮೊತ್ತದಲ್ಲಿ ಸೌಲಭ್ಯ ನೀಡಲು ಸಾಧ್ಯವಿಲ್ಲ' ಎನ್ನುವುದು ಯೋಜನೆ ವ್ಯಾಪ್ತಿಯಿಂದ ಹೊರ ಹೋಗುತ್ತಿರುವ, ಯೋಜನೆ ಅಳವಡಿಸಿಕೊಳ್ಳಲು ಹಿಂದೇಟು ಹಾಕುತ್ತಿರುವ ಖಾಸಗಿ ಆಸ್ಪತ್ರೆಗಳ ವಾದ.

ಸುವರ್ಣ ಕರ್ನಾಟಕ ಆರೋಗ್ಯ ಸುರಕ್ಷಾ ಟ್ರಸ್ಟ್ (ಎಸ್‌ಎಎಸ್‌ಟಿ) ಯೋಜನೆಯ ಅನುಷ್ಠಾನದ ಸಂಸ್ಥೆಯಾಗಿ ಹೊಣೆ ನಿರ್ವಹಿಸುತ್ತಿದ್ದು, ಎಲ್ಲ ವರ್ಗದ ನೌಕರರು ಪ್ರತಿ ತಿಂಗಳು ತಮ್ಮ ಪಾಲಿನ ಕಂತು ಪಾವತಿಸುತ್ತಿದ್ದಾರೆ. ಕಳೆದ ಆರು ತಿಂಗಳಲ್ಲಿ ನೌಕರರು ಪಾವತಿಸಿದ ಕಂತು ₹120 ಕೋಟಿಗೂ ಅಧಿಕ. ಟ್ರಸ್ಟ್ ಪಾವತಿಸಿರುವ ಚಿಕಿತ್ಸಾ ವೆಚ್ಚ ₹35 ಕೋಟಿ.

'ಯೋಜನೆ ವ್ಯಾಪ್ತಿಗೆ ಒಳಪಡುವ ಎಲ್ಲ ನೌಕರರ ಕಂತನ್ನು ಅಕ್ಟೋಬರ್ ತಿಂಗಳ ವೇತನದಿಂದಲೇ ಕಟಾವು ಮಾಡಿ, ಖಜಾನೆ–2 ಮೂಲಕ ಟ್ರಸ್ಟ್ ಖಾತೆಗೆ ಜಮೆ ಮಾಡಲಾಗುತ್ತಿದೆ. ಟ್ರಸ್ಟ್‌ನಲ್ಲಿ ಸಾಕಷ್ಟು ಹಣ ಸಂಗ್ರಹವಾದರೂ ರಾಜ್ಯದ ಪ್ರಮುಖ ಆಸ್ಪತ್ರೆಗಳು ಸೇರಿದಂತೆ ಬಹುತೇಕ ಖಾಸಗಿ ಆಸ್ಪತ್ರೆಗಳು ಯೋಜನೆ ಅಡಿ ಚಿಕಿತ್ಸೆ ನೀಡಲು ಒಲವು ತೋರಿಲ್ಲ. ಹಾಗಾಗಿ, ನೌಕರರಿಗೆ ಸ್ಥಳೀಯ ಆಸ್ಪತ್ರೆಗಳಲ್ಲಿ ಸೌಲಭ್ಯ ಸಿಗುತ್ತಿಲ್ಲ. ಯೋಜನೆ ನಿರೀಕ್ಷಿತ ಫಲ ನೀಡುತ್ತಿಲ್ಲ' ಎನ್ನುತ್ತಾರೆ ಶಿಕ್ಷಕ ಸದಾನಂದ.

ಹಿಂದಿ 'ಗ್ರೇಡ್': ಲೋಕಭವನ ಆಕ್ಷೇಪ

ಒಂದನೇ ಪುಟದಿಂದ...

ಹಿಂದಿ ಭಾಷೆಯ ಪ್ರಾಮುಖ್ಯ ಕಡಿಮೆ ಮಾಡುವುದರಿಂದ ದೀರ್ಘಕಾಲೀನ ಪರಿಣಾಮ ಬೀರುತ್ತವೆ. ಶಿಕ್ಷಕರು, ಪೋಷಕರು ಮತ್ತು ಶಿಕ್ಷಣ ತಜ್ಞರಲ್ಲಿ ಆತಂಕ ಆರಂಭವಾಗಿದೆ. ಶಾಲಾ ಶಿಕ್ಷಣದ ಒಟ್ಟಾರೆ ಗುಣಮಟ್ಟ, ದೇಶದ ಇತರೆ ರಾಜ್ಯಗಳ ಜತೆಗಿನ ಭವಿಷ್ಯದ ಸಂವಹನ, ಉದ್ಯೋಗದ ಅವಕಾಶಗಳ ಮೇಲೂ ಪರಿಣಾಮ ಬೀರುವ ಸಾಧ್ಯತೆ ಇದೆ ಎಂಬ ಆತಂಕವೂ ವ್ಯಕ್ತವಾಗಿದೆ. ಶಿಕ್ಷಣ ಕ್ಷೇತ್ರದ ಶೈಕ್ಷಣಿಕ ಹಾಗೂ ಆಡಳಿತಾತ್ಮಕ ಅಂಶಗಳನ್ನು ಪರಿಗಣಿಸಿ ಸಮಗ್ರವಾಗಿ ಪರಿಶೀಲಿಸಬೇಕು. ಶಾಲಾ ಶಿಕ್ಷಣ ಇಲಾಖೆ ಅಧಿಕಾರಿಗಳು ಹಾಗೂ ಮುಖ್ಯಸ್ಥರ ಜತೆ ಚರ್ಚಿಸಿ, ವಿದ್ಯಾರ್ಥಿಗಳು ರಾಜ್ಯದ ಶೈಕ್ಷಣಿಕ ಭವಿಷ್ಯ ಗಮನದಲ್ಲಿಟ್ಟುಕೊಂಡು ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಪ್ರಭು ಶಂಕರ್ ಪತ್ರದಲ್ಲಿ ವಿವರಿಸಿದ್ದಾರೆ.

ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ 2026ರ ಪರೀಕ್ಷೆಯಿಂದಲೇ ಅನ್ವಯವಾಗುವಂತೆ ಮೂರನೇ ಭಾಷಾ ವಿಷಯಗಳಿಗೆ ಅಂಕ ನೀಡುವ ಪದ್ಧತಿ ಕೈಬಿಟ್ಟು, ಗ್ರೇಡ್ ನಮೂದಿಸುವುದಾಗಿ ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಮಾರ್ಚ್ 27ರಂದು ಘೋಷಣೆ ಮಾಡಿದ್ದರು. ಸರ್ಕಾರದ ನಿರ್ಧಾರಕ್ಕೆ ಹಿಂದಿ ಶಿಕ್ಷಕರು, ಹಿಂದಿ ಪರ ಸಂಘಟನೆಗಳು, ಬಿಜೆಪಿಯ ಕೆಲವು ನಾಯಕರು ವಿರೋಧ ವ್ಯಕ್ತಪಡಿಸಿದ್ದರು.

ಸಿಬಿಎಸ್‌ಇ: ತ್ರಿಭಾಷಾ ಸೂತ್ರ ಕಡ್ಡಾಯ

ಒಂದನೇ ಪುಟದಿಂದ...

ಆದರೆ ವಿಜ್ಞಾನ ಮತ್ತು ಗಣಿತ ವಿಷಯಗಳಲ್ಲಿ ತಮ್ಮ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ಬಯಸುವ ವಿದ್ಯಾರ್ಥಿಗಳು ಐಚ್ಛಿಕ ಹಂತವನ್ನು ಆಯ್ಕೆ ಮಾಡಿಕೊಳ್ಳಬಹುದು. ಇದು 25 ಅಂಕಗಳಿಗೆ ನಡೆಯುವ 1 ಗಂಟೆಯ ಪರೀಕ್ಷೆ ಆಗಿರುತ್ತದೆ.

ಐಚ್ಛಿಕ ಹಂತದಲ್ಲಿ ನಡೆಯುವ ಪರೀಕ್ಷೆಯ ಅಂಕಗಳನ್ನು ಒಟ್ಟಾರೆ ಫಲಿತಾಂಶಕ್ಕೆ ಪರಿಗಣಿಸಲಾಗುವುದಿಲ್ಲ. ಆದರೆ ಶೇ 50 ಅಥವಾ ಅದಕ್ಕಿಂತ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳ ಅಂಕಪಟ್ಟಿಯಲ್ಲಿ ಈ ಅಂಕಗಳನ್ನು ತೋರಿಸಲಾಗುತ್ತದೆ.

9 ಮತ್ತು 10ನೇ ತರಗತಿಗೆ, ಸಮಸ್ಯೆ ಬಗೆಹರಿಸುವ ಕೌಶಲ (ಕಂಪ್ಯೂಟೇಷನಲ್ ಥಿಂಕಿಂಗ್), ಕೃತಕ ಬುದ್ಧಿಮತ್ತೆ (ಎ.ಐ) ವಿಷಯಗಳನ್ನೂ ಕಡ್ಡಾಯಗೊಳಿಸಲಾಗಿದೆ. ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ಈ ವಿಷಯಗಳನ್ನು ಆಂತರಿಕ ಮೌಲ್ಯಮಾಪನಕ್ಕಾಗಿ ಪ್ರಾಯೋಗಿಕವಾಗಿ ಅಳವಡಿಸಲಾಗುವುದು. 2029ರಿಂದ ಈ ವಿಷಯಗಳು 10ನೇ ತರಗತಿಯ ಬೋರ್ಡ್ ಪರೀಕ್ಷೆಗೆ ಕಡ್ಡಾಯ ವಿಷಯಗಳಾಗಿರುತ್ತವೆ.

ಹೊಸ ಪಠ್ಯಕ್ರಮದಲ್ಲಿ ಕಲಾ ಶಿಕ್ಷಣ, ವೃತ್ತಿಪರ ಶಿಕ್ಷಣ ಹಾಗೂ ದೈಹಿಕ ಶಿಕ್ಷಣವನ್ನು 9 ಮತ್ತು 10ನೇ ತರಗತಿಗೆ ಕಡ್ಡಾಯ ವಿಷಯಗಳನ್ನಾಗಿ ಪರಿಚಯಿಸಲಾಗುತ್ತಿದೆ. 2027–28ರ ಶೈಕ್ಷಣಿಕ ಅವಧಿಯಿಂದ 10ನೇ ತರಗತಿಯ ಬೋರ್ಡ್ ಪರೀಕ್ಷೆಗೆ ವೃತ್ತಿಪರ ಶಿಕ್ಷಣವನ್ನು ಕಡ್ಡಾಯಗೊಳಿಸಲಾಗುತ್ತದೆ ಎಂದು ಅಧಿಕಾರಿಗಳು ವಿವರಿಸಿದರು.

ದ್ವಿಭಾಷಾ ನೀತಿ ಜಾರಿಗೆ ಒತ್ತಾಯ

ಹಿಂದಿ ಸೇರಿ ತೃತೀಯ ಭಾಷಾ ವಿಷಯಗಳಿಗೆ ಅಂಕದ ಬದಲಿಗೆ ಗ್ರೇಡ್ ನೀಡಲು ರಾಜ್ಯ ಸರ್ಕಾರ ಕೈಗೊಂಡಿರುವ ನಿರ್ಧಾರವನ್ನು ಖಂಡಿಸಿರುವ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಬಿಜೆಪಿ ನಾಯಕರು ಹಾಗೂ ಹಿಂದಿ ಭಾಷಾ ಸಂಘಟನೆಗಳ ವಿರುದ್ಧ ಕನ್ನಡ ಪರ ಸಂಘಟನೆಗಳು ಆಕ್ರೋಶ ವ್ಯಕ್ತಪಡಿಸಿವೆ.

ಕರ್ನಾಟಕದಲ್ಲಿ ಕನ್ನಡ ಭಾಷೆಯೇ ಸಾರ್ವಭೌಮ, ಹಿಂದಿ ಭಾಷೆಯನ್ನು ರಾಜ್ಯದಲ್ಲಿ ಬಲವಂತವಾಗಿ ಹೇರಬಾರದು. ಸಾಂವಿಧಾನಿಕ ಹುದ್ದೆಯಲ್ಲಿ ಇರುವವರು ರಾಜ್ಯದ ಹಿತಾಸಕ್ತಿಗೆ ವಿರುದ್ಧವಾಗಿ ಹೇಳಿಕೆ ನೀಡುವುದು ಕನ್ನಡಿಗರಿಗೆ ಮಾಡುವ ಅಪಮಾನ. ಸರ್ಕಾರ ತಕ್ಷಣವೇ ದ್ವಿಭಾಷಾ ನೀತಿ ಜಾರಿಗೆ ತರಬೇಕು ಎಂದು ಕರ್ನಾಟಕ ರಕ್ಷಣಾ ವೇದಿಕೆ ಅಧ್ಯಕ್ಷ ಟಿ.ಎ.ನಾರಾಯಣಗೌಡ, ರಾಜ್‌ಕುಮಾರ್ ಅಭಿಮಾನಿಗಳ ಸಂಘದ ಅಧ್ಯಕ್ಷ ಗೌ.ಹಾಲೇಶ್ ಸೇರಿದಂತೆ ಹಲವರು ಒತ್ತಾಯಿಸಿದ್ದಾರೆ.

ಕೊಹ್ಲಿ ತಾಲೀಮು

ಪ್ರಜಾವಾಣಿ ಚಿತ್ರ: ಬಿ.ಕೆ. ಜನಾರ್ದನ


ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಬ್ಯಾಟರ್ ವಿರಾಟ್ ಕೊಹ್ಲಿ ಮತ್ತು ಬೌಲರ್ ಜೇಕಬ್ ಡಫಿ ಅವರು ಶುಕ್ರವಾರ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಅಭ್ಯಾಸ ನಡೆಸಿದರು. ಭಾನುವಾರ ನಡೆಯುವ ಐಪಿಎಲ್ ಪಂದ್ಯದಲ್ಲಿ ಆರ್‌ಸಿಬಿ ತಂಡವು ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು ಎದುರಿಸಲಿದೆ

ನಿಖತ್, ಪ್ರಿಯಾ, ಪ್ರೀತಿ ಸೆಮಿಗೆ

ಉಲಾನ್‌ಬಾತರ್ (ಮಂಗೋಲಿಯಾ), (ಪಿಟಿಐ): ನಿಖತ್ ಜರೀನ್, ಪ್ರಿಯಾ ಮತ್ತು ಪ್ರೀತಿ ಪವಾರ್ ಅವರು ಇಲ್ಲಿ ನಡೆಯುತ್ತಿರುವ ಏಷ್ಯನ್ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಶುಕ್ರವಾರ ಸೆಮಿಫೈನಲ್ ಪ್ರವೇಶಿಸಿದರು. ಈ ಮೂಲಕ ಭಾರತಕ್ಕೆ ಕನಿಷ್ಠ ಮೂರು ಕಂಚಿನ ಪದಕಗಳನ್ನು ಖಚಿತಪಡಿಸಿದರು.

ಮಹಿಳೆಯರ 51 ಕೆ.ಜಿ ವಿಭಾಗದ ಕ್ವಾರ್ಟರ್ ಫೈನಲ್‌ನಲ್ಲಿ ನಿಖತ್ ಸಂಪೂರ್ಣ ಪ್ರಾಬಲ್ಯ ಮೆರೆದರು. ಮೊದಲ ಸುತ್ತಿನ ಆರ್‌ಎಸ್‌ಸಿ (ರೆಫರಿ ಸ್ಟಾಪ್ಸ್ ಸ್ಪರ್ಧೆ)ಯಲ್ಲಿ ಫಿಲಿಪೀನ್ಸ್‌ನ ಕ್ರಿಯಾನ್ ಬಾಗುಹಿನ್ ವಿರುದ್ಧ ಗೆಲುವು ಸಾಧಿಸಿದರು. ಸೆಮಿಫೈನಲ್‌ನಲ್ಲಿ ಭಾರತದ ಸ್ಪರ್ಧಿಗೆ ಅವರಿಗೆ ಕಠಿಣ ಪೈಪೋಟಿ ಎದುರಾಗಿದೆ. 2024ರ ಒಲಿಂಪಿಕ್ ಚಾಂಪಿಯನ್, ಚೀನಾದ ವು ಯು ವಿರುದ್ಧ ಅವರು ಸೆಣಸಲಿದ್ದಾರೆ.

60 ಕೆ.ಜಿ ವಿಭಾಗದಲ್ಲಿ ಪ್ರಿಯಾ 4–1 ಅಂತರದಿಂದ ಚೀನಾದ ಚೆಂಗ್ಯು ಯಾಂಗ್ ಅವರನ್ನು ಸೋಲಿಸಿದರು. ಪ್ರಿಯಾ ನಾಲ್ಕರ ಘಟ್ಟದಲ್ಲಿ ಮಂಗೋಲಿಯಾದ ನಮುನ್ ಮಂಖೋರ್ ಎದುರಾಳಿಯಾಗಿದ್ದಾರೆ.

54 ಕೆ.ಜಿ ವಿಭಾಗದಲ್ಲಿ ಪ್ರೀತಿ 5–0 ಅಂತರದ ಸರ್ವಾನುಮತದ ತೀರ್ಪಿನಿಂದ ಮಂಗೋಲಿಯಾದ ಮುಂಗುನ್ ತ್ಸೆಟ್ಸೆಗ್ ಅವರನ್ನು ಮಣಿಸಿದರು. ಅವರು ಸೆಮಿಫೈನಲ್‌ನಲ್ಲಿ ದಕ್ಷಿಣ ಕೊರಿಯಾದ ಇಲ್ ಏಜಿ ಅವರನ್ನು ಎದುರಿಸುವರು.

ಆದರೆ, ಪುರುಷರ 70 ಕೆ.ಜಿ ವಿಭಾಗದಲ್ಲಿ ದೀಪಕ್ ಹೊರಬಿದ್ದರು. ಕ್ವಾರ್ಟರ್ ಫೈನಲ್‌ನಲ್ಲಿ ಅವರು 1-4 ಅಂತರದಿಂದ ಜೋರ್ಡಾನ್‌ನ ಜೆಯಾದ್ ಇಶಾಶ್ ವಿರುದ್ಧ ಸೋತು ನಿರಾಸೆ ಅನುಭವಿಸಿದರು.

ಕರ್ನಾಟಕ ತಂಡಕ್ಕೆ ಸಮಗ್ರ ಪ್ರಶಸ್ತಿ

ಪದಕ ಪಟ್ಟಿ

ರಾಜ್ಯ	ಚಿನ್ನ	ಬೆಳ್ಳಿ	ಕಂಚು	ಒಟ್ಟು
ಕರ್ನಾಟಕ	23	8	7	38
ಒಡಿಶಾ	21	15	21	57
ಜಾರ್ಖಂಡ್	16	8	11	35
ಮಹಾರಾಷ್ಟ್ರ	6	10	4	20

ರಾಯಪುರ (ಪಿಟಿಐ): ಕರ್ನಾಟಕ ತಂಡವು ಒಟ್ಟು 23 ಚಿನ್ನದ ಪದಕಗಳೊಂದಿಗೆ ಚೊಚ್ಚಲ ಖೇಲೊ ಇಂಡಿಯಾ ಆದಿವಾಸಿ ಕ್ರೀಡಾಕೂಟದಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿತು. ಇಲ್ಲಿ 10 ದಿನ ನಡೆದ ಕೂಟಕ್ಕೆ ಶುಕ್ರವಾರ ತೆರೆಬಿತ್ತು.

ಕೂಟದಲ್ಲಿ ಮೂವತ್ತು ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಿಂದ ಸುಮಾರು 3800 ಕ್ರೀಡಾಪಟುಗಳು ಭಾಗವಹಿಸಿದ್ದರು. ಆರ್ಚರಿ, ಅಥ್ಲೆಟಿಕ್ಸ್, ಫುಟ್‌ಬಾಲ್, ಹಾಕಿ, ಈಜು, ವೇಟ್‌ಲಿಫ್ಟಿಂಗ್ ಮತ್ತು ಕುಸ್ತಿ ಸೇರಿದಂತೆ ಒಂಬತ್ತು ಕ್ರೀಡೆಗಳಲ್ಲಿ ಒಟ್ಟು 106 ಚಿನ್ನದ ಪದಕಗಳು ಪಣದಲ್ಲಿದ್ದವು.

23 ಚಿನ್ನ, ಎಂಟು ಬೆಳ್ಳಿ ಮತ್ತು ಏಳು ಕಂಚು ಸೇರಿದಂತೆ 38 ಪದಕಗಳನ್ನು ಗೆದ್ದ ಕರ್ನಾಟಕ ತಂಡವು ಚಾಂಪಿಯನ್ ಕಿರೀಟವನ್ನು ಗೆದ್ದುಕೊಂಡಿತು. ಕರ್ನಾಟಕಕ್ಕೆ ಪ್ರಬಲ ಪೈಪೋಟಿ ನೀಡಿದ್ದ ಒಡಿಶಾ ಎರಡನೇ ಸ್ಥಾನಕ್ಕೆ ಸರಿಯಿತು. ಒಡಿಶಾ 21 ಚಿನ್ನ ಒಳಗೊಂಡಂತೆ ಒಟ್ಟು 57 ಪದಕಗಳನ್ನು ಗೆದ್ದುಕೊಂಡಿದೆ.

ಕರ್ನಾಟಕ ತಂಡವು ಈಜು ಸ್ಪರ್ಧೆಗಳಲ್ಲಿ ಒಟ್ಟು 15 ಚಿನ್ನ, ಐದು ಬೆಳ್ಳಿ ಮತ್ತು ಮೂರು ಕಂಚಿನ ಪದಕಗಳನ್ನು ಗೆದ್ದು ಮೊದಲ ದಿನದಿಂದಲೇ ಪದಕ ಪಟ್ಟಿಯಲ್ಲಿ ಮುನ್ನಡೆ ಸಾಧಿಸಿತ್ತು. ಅಥ್ಲೆಟಿಕ್ಸ್‌ನಲ್ಲಿ ಐದು ಚಿನ್ನ ಮತ್ತು ಕುಸ್ತಿಯಲ್ಲಿ ಮೂರು ಚಿನ್ನ ಗೆದ್ದುಕೊಂಡಿತು.

ಕರ್ನಾಟಕದ ಈಜುಪಟು ಮಣಿಕಂಠ ಎಲ್. ಅವರು ಎಂಟು ಚಿನ್ನ ಮತ್ತು ಒಂದು ಬೆಳ್ಳಿ ಪದಕಗಳೊಂದಿಗೆ ಕೂಟದ ಅತ್ಯಂತ ಯಶಸ್ವಿ ಕ್ರೀಡಾಪಟು ಎನಿಸಿದರು.

ಶುಕ್ರವಾರ ಸಂಜೆ ನಡೆದ ಸಮಾರೋಪ ಸಮಾರಂಭದಲ್ಲಿ ಸಮಗ್ರ ಪ್ರಶಸ್ತಿ ಟ್ರೋಫಿಯನ್ನು ಪ್ರದಾನ ಮಾಡಲಾಯಿತು. ಆದರೆ, ಈ ವೇಳೆ ಕರ್ನಾಟಕ ತಂಡದ ಕ್ರೀಡಾಪಟುಗಳಾಗಲಿ ಅಥವಾ ಅಧಿಕಾರಿಗಳಾಗಲಿ ಹಾಜರಿರಲಿಲ್ಲ.

ಚೆಸ್: ಇಂಗ್ಲೆಂಡ್‌ನ ಅಗ್ರ ಆಟಗಾರ್ತಿ ಆಗಿ ಬೋಧನಾ

ನವದೆಹಲಿ (ಪಿಟಿಐ): ಭಾರತ ಮೂಲದ ಚೆಸ್ ಪ್ರತಿಭೆ ಬೋಧನಾ ಶಿವಾನಂದನ್ ಅವರು ಇಂಗ್ಲೆಂಡ್‌ನ ಅಗ್ರ ರ‍್ಯಾಂಕಿನ ಮಹಿಳಾ ಆಟಗಾರ್ತಿ ಎಂಬ ಗೌರವಕ್ಕೆ ಪಾತ್ರಳಾಗಿದ್ದಾಳೆ.



ಫಿಡೆ ಕ್ರಮಾಂಕಪಟ್ಟಿಯಲ್ಲಿ, 11 ವರ್ಷ ವಯಸ್ಸಿನ ಬೋಧನಾ 2366 ರೇಟಿಂಗ್ ಪಾಯಿಂಟ್ಸ್ ಗಳಿಸಿದ್ದಾಳೆ. ಬೋಧನಾಳ ಪೋಷಕರು 2007ರಲ್ಲಿ ತಮಿಳುನಾಡಿನ ತಿರುಚಿನಾಪಳ್ಳಿಯಿಂದ ಇಂಗ್ಲೆಂಡ್‌ಗೆ ಹೋಗಿದ್ದರು.

ಬೋಧನಾ, ನಾಲ್ಕು ಬಾರಿ ಬ್ರಿಟಿಷ್ ಮಹಿಳಾ ಚಾಂಪಿಯನ್ ಲಾನ್ ಯಾವೊ ಅವರನ್ನು ಹಿಂದೆಹಾಕಿದ್ದಾರೆ. ವಿಶ್ವದ ಅಗ್ರ 100 ಆಟಗಾರ್ತಿಯರ ಪಟ್ಟಿಯಲ್ಲಿ ಮೊದಲ ಬಾರಿ (72ನೇ) ಸ್ಥಾನ ಪಡೆದಿದ್ದಾಳೆ.



ಕಿಂಗ್ಸ್‌ಗೆ ಎರಡನೇ ಗೆಲುವು

ಶ್ರೇಯಸ್ ಅರ್ಧಶತಕ • ಪ್ರಿಯಾಂಶ್ ಮಿಂಚಿನ ಆರಂಭ • ಚೆನ್ನೈಗೆ ಮತ್ತೆ ಸೋಲು

ಚೆನ್ನೈ (ಪಿಟಿಐ): ಅಗ್ರಕ್ರಮಾಂಕದ ಬ್ಯಾಟರ್‌ಗಳ ಅಬ್ಬರದ ಆಟದ ಬಳಿಕ ನಾಯಕ ಶ್ರೇಯಸ್ ಅಯ್ಯರ್ ಅಮೋಘ ಅರ್ಧಶತಕ ಸಿಡಿಸಿದರು. ಇದರಿಂದಾಗಿ ಪಂಜಾಬ್ ಕಿಂಗ್ಸ್ ತಂಡವು ಶುಕ್ರವಾರ ನಡೆದ ಐಪಿಎಲ್ ಪಂದ್ಯದಲ್ಲಿ 5 ವಿಕೆಟ್‌ಗಳಿಂದ ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು ಮಣಿಸಿತು. ಸತತ ಎರಡನೇ ಗೆಲುವಿನೊಂದಿಗೆ ಅಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿತು.

ಚೆಪಾಕ್ ಕ್ರೀಡಾಂಗಣದಲ್ಲಿ 210 ರನ್‌ಗಳ ಸವಾಲಿನ ಗುರಿ ಬೆನ್ನಟ್ಟಿದ ಪಂಜಾಬ್ ಕಿಂಗ್ಸ್ ತಂಡದ ಬ್ಯಾಟರ್‌ಗಳು ಒತ್ತಡಕ್ಕೊಳಗಾಗದೆ ಸರಾಗವಾಗಿ ಬ್ಯಾಟ್ ಬೀಸಿದರು. ಪ್ರಿಯಾಂಶ್ ಆರ್ಯ (39; 11ಎ, 4x3, 6x4) ಮತ್ತು ಪ್ರಭಸಿಮ್ರನ್ ಸಿಂಗ್ (43; 34ಎ, 4x6, 6x1) ಮಿಂಚಿನ ಆರಂಭ ಒದಗಿಸಿದರು. ಮೊದಲ ವಿಕೆಟ್ ಜೊತೆಯಾಟದಲ್ಲಿ 26 ಎಸೆತಗಳಲ್ಲಿ 61 ರನ್ ಸೇರಿಸಿದರು.

ಅಮೋಘ ಆಟ ಮುಂದುವರಿಸಿದ ಆಸ್ಟ್ರೇಲಿಯಾದ ಬ್ಯಾಟರ್ ಕೂಪರ್ ಕನೊಲಿ ಅವರು 22 ಎಸೆತಗಳಲ್ಲಿ 36 ರನ್ ಬಾರಿಸಿದರು. ನಾಲ್ಕನೇ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗೆ ಇಳಿದ ನಾಯಕ ಶ್ರೇಯಸ್ (50; 29ಎ, 4x4, 6x3) ಜವಾಬ್ದಾರಿ ಯುತವಾಗಿ ಇನಿಂಗ್ಸ್ ಕಟ್ಟಿದರು. ನೇಹಲ್ ವಧೇರಾ ಜೊತೆಗೆ 59 ರನ್ ಜೊತೆಯಾಟವಾಡಿ ತಂಡವನ್ನು ಗೆಲುವಿನ ಹತ್ತಿರಕ್ಕೆ ತಂದು ನಿಲ್ಲಿಸಿದರು.

ಕೊನೆಯಲ್ಲಿ ಆಲ್‌ರೌಂಡರ್ ಮಾರ್ಕಸ್ ಸ್ಟೊಯಿನಿಸ್ (9; 3ಎ) ಹಾಗೂ ಶಶಾಂಕ್ ಸಿಂಗ್ (14; 6ಎ) ಔಪಚಾರಿಕತೆಯನ್ನು ಪೂರೈಸಿದರು. ಶ್ರೇಯಸ್ ಪಡೆ ಇನ್ನೂ 8 ಎಸೆತಗಳು ಬಾಕಿಯಿರುವಂತೆ ಗುರಿ ತಲುಪಿತು.

ಇದಕ್ಕೆ ಮೊದಲು, ಟಾಸ್ ಗೆದ್ದ ಪಂಜಾಬ್ ಕಿಂಗ್ಸ್ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಯುವ ಪ್ರತಿಭೆ ಆಯುಷ್ ಮ್ಹಾತ್ರೆ ಮಿಂಚಿನ ಬ್ಯಾಟಿಂಗ್ ಬಲದಿಂದ ಆತಿಥೇಯ ತಂಡವು 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 209 ರನ್ ಗಳಿಸಿತು.

ಎರಡನೇ ವಿಕೆಟ್ ಜೊತೆಯಾಟದಲ್ಲಿ ಆಯುಷ್ (73, 46ಎ, 4x6, 6x5) ಅವರು ನಾಯಕ ಋತುರಾಜ್ ಗಾಯಕವಾಡ (28 ರನ್) ಅವರೊಂದಿಗೆ 96 ರನ್ ಸೇರಿಸಿದರು. ಶಿವಂ ದುಬೆ (ಔಟಾಗದೇ 45 ರನ್) ಲಯಕ್ಕೆ ಮರಳಿದರು. ಸರ್ಫರಾಜ್ ಖಾನ್ (32, 12ಎ) ಬೀಸಾಟವಾಡಿ ತಂಡದ ರನ್ ಗಳಿಕೆಗೆ ವೇಗ ನೀಡಿದರು. ಇದರಿಂದಾಗಿ, ತಂಡವು 200ರ ಗಡಿ ದಾಟಿತು. ಕನ್ನಡಿಗ ವೈಶಾಖ ವಿಜಯಕುಮಾರ್ ಅವರು 2 ವಿಕೆಟ್ ಪಡೆದು, ಆರೆಂಜ್ ಕ್ಯಾಪ್ (5 ವಿಕೆಟ್) ತಮ್ಮದಾಗಿಸಿಕೊಂಡರು.

ಚೆನ್ನೈ ತಂಡವು ಐಪಿಎಲ್ ಇತಿಹಾಸದಲ್ಲಿ ಎರಡನೇ ಬಾರಿಗೆ ಆವೃತ್ತಿಯೊಂದರ ಮೊದಲೆರಡು ಪಂದ್ಯಗಳಲ್ಲಿ ಪರಾಭವಗೊಂಡಿತು. 2022ರ ಆವೃತ್ತಿಯಲ್ಲಿ ಆರಂಭಿಕ ಎರಡೂ ಪಂದ್ಯಗಳಲ್ಲಿ ಸೋತಿತ್ತು.



ಶ್ರೇಯಸ್ ಅಯ್ಯರ್ ಬ್ಯಾಟಿಂಗ್ —ಪಿಟಿಐ ಚಿತ್ರ

ಐಪಿಎಲ್: ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಟೈ	ಅಂಕ	ಎನ್‌ಆರ್‌ಆರ್
ಪಿಬಿಕೆಎಸ್	2	2	0	0	4	0.637
ಆರ್‌ಆರ್	1	1	0	0	2	4.171
ಆರ್‌ಸಿಬಿ	1	1	0	0	2	2.907
ಡಿಸಿ	1	1	0	0	2	1.397
ಎಂಐ	1	1	0	0	2	0.687
ಎಸ್‌ಆರ್‌ಎಚ್	2	1	1	0	2	0.469
ಜಿಟಿ	1	0	1	0	0	-0.509
ಎಲ್‌ಎಸ್‌ಜಿ	1	0	1	0	0	- 1.397
ಕೆಕೆಆರ್	2	0	2	0	0	-1.964
ಸಿಎಸ್‌ಕೆ	1	0	1	0	0	-4.171

ಆರೇಂಜ್ ಕ್ಯಾಪ್–ಕೂಪರ್ ಕನೊಲಿ, ಪಿಬಿಕೆಎಸ್ (108 ರನ್)
ಪರ್ಪಲ್ ಕ್ಯಾಪ್–ವೈಶಾಖ ವಿಜಯಕುಮಾರ್, ಪಂಜಾಬ್ ಕಿಂಗ್ಸ್ (5 ವಿಕೆಟ್)

ಸ್ಕೋರ್ ಕಾರ್ಡ್

ಚೆನ್ನೈ ಸೂಪರ್ ಕಿಂಗ್ಸ್: 5ಕ್ಕೆ 209 (20 ಓವರುಗಳಲ್ಲಿ)
ಸ್ಯಾಮ್ಸನ್ ಸಿ ಪ್ರಭಸಿಮ್ರನ್ ಬಿ ಬಾರ್ಟ್‌ಲೆಟ್ 7 (7ಎ, 4x1)
ಋತುರಾಜ್ ಸಿ ವಧೇರಾ ಬಿ ಚಾಹಲ್ 28 (22ಎ, 4x2)
ಆಯುಷ್ ಸಿ ಚಾಹಲ್ ಬಿ ವೈಶಾಖ್ 73 (43ಎ, 4x6, 6x5)
ಶಿವಂ ದುಬೆ ಔಟಾಗದೇ 45 (27ಎ, 4x5, 6x1)
ಕಾರ್ತಿಕ್ ಎಲ್‌ಬಿಡಬ್ಲ್ಯು ಬಿ ಯಾನ್ಸೆನ್ 1 (3ಎ)
ಸರ್ಫರಾಜ್ ಸಿ ವಧೇರಾ ಬಿ ವೈಶಾಖ್ 32 (12ಎ, 4x6, 6x1)
ಪ್ರಶಾಂತ್ ವೀರ್ ಔಟಾಗದೇ 6 (7ಎ, 4x1)
ಇತರೆ: 17 (ಬೈ 1, ನೋಬಾಲ್ 1, ವೈಡ್ 15)
ವಿಕೆಟ್ ಪತನ: 1–14 (ಸಂಜು ಸ್ಯಾಮ್ಸನ್, 1.6), 2–110 (ಋತುರಾಜ್ ಗಾಯಕವಾಡ, 11.1), 3–123 (ಆಯುಷ್ ಮ್ಹಾತ್ರೆ, 12.3), 4–130 (ಕಾರ್ತಿಕ್ ಶರ್ಮಾ, 13.4), 5–168 (ಸರ್ಫರಾಜ್, 16.4)
ಬೌಲಿಂಗ್: ಅರ್ಷದೀಪ್ ಸಿಂಗ್ 4–0–41–0; ಕ್ಸೇವಿಯರ್ ಬಾರ್ಟ್ಲೆಟ್ 4–0–48–1; ಮಾರ್ಕೊ ಯಾನ್ಸೆನ್ 4–0–43–1; ವೈಶಾಖ ವಿಜಯಕುಮಾರ್ 4–0–38–2; ಯಜುವೇಂದ್ರ ಚಾಹಲ್ 3–0–21–1; ಮಾರ್ಕಸ್ ಸ್ಟೊಯಿನಿಸ್ 1–0–17–0

ಪಂಜಾಬ್ ಕಿಂಗ್ಸ್: 5ಕ್ಕೆ 210 (18.4 ಓವರ್‌ಗಳಲ್ಲಿ)
ಪ್ರಿಯಾಂಶ್ ಬಿ ಹೆನ್ರಿ 39 (11ಎ, 4x3, 6x4)
ಪ್ರಭಸಿಮ್ರನ್ ರನೌಟ್ (ಸರ್ಫರಾಜ್/ಗಾಯಕವಾಡ್) 43 (34ಎ, 4x6, 6x1)
ಕೂಪರ್ ಸಿ ಹೆನ್ರಿ ಬಿ ಕಂಬೋಜ್ 36 (22ಎ, 4x6)
ಶ್ರೇಯಸ್ ಸಿ ಚಾಹರ್ ಬಿ ಕಂಭೋಜ್ 50 (29ಎ, 4x4, 6x3)
ನೇಹಲ್ ಸಿ ನೂರ್ ಬಿ ಹೆನ್ರಿ 10 (9ಎ, 6x1)
ಶಶಾಂಕ್ ಸಿಂಗ್ ಔಟಾಗದೇ 14 (6ಎ, 4x2)
ಮಾರ್ಕಸ್ ಸ್ಟೊಯಿನಿಸ್ ಔಟಾಗದೇ 9 (3ಎ, 4x2)
ಇತರೆ: 9 (ಲೆಗ್‌ಬೈ 1, ನೋಬಾಲ್ 2, ವೈಡ್ 6)
ವಿಕೆಟ್ ಪತನ: 1-61 (ಪ್ರಿಯಾಂಶ್ ಆರ್ಯ, 4.2), 2-95 (ಪ್ರಭಸಿಮ್ರನ್ ಸಿಂಗ್, 8.5), 3-127 (ಕೂಪರ್ ಕೊನೊಲಿ, 11.5), 4–186 (ಶ್ರೇಯಸ್ ಅಯ್ಯರ್, 16.6), 5–186 (ನೇಹಲ್ ವಧೇರಾ, 17.1)
ಬೌಲಿಂಗ್: ಖಲೀಲ್ ಅಹಮ್ಮದ್ 3–0–28–0, ಮ್ಯಾಟ್ ಹೆನ್ರಿ 4–0–54–2, ಅನ್ಶುಲ್ ಕಂಭೋಜ್ 3.4–0–43–2, ನೂರ್ ಅಹಮ್ಮದ್ 4–0–38–0, ರಾಹುಲ್ ಚಾಹರ್ 4–0–46–0
ಪಂದ್ಯದ ಆಟಗಾರ: ಪ್ರಿಯಾಂಶ್ ಆರ್ಯ

ಕಪಿಲ್–ಧೋನಿ ಕ್ಷಮೆ ಕೋರಿದ ಯುವರಾಜ್



ನವದೆಹಲಿ (ಪಿಟಿಐ): ಕಪಿಲ್ ದೇವ್ ಮತ್ತು ಮಹೇಂದ್ರಸಿಂಗ್ ಧೋನಿ ಅವರ ಕುರಿತು ತಮ್ಮ ತಂದೆ ಯೋಗರಾಜ್ ಸಿಂಗ್ ಅವರು ವಿವಾದಾತ್ಮಕ ಹೇಳಿಕೆ ನೀಡಿದ್ದು ಸರಿಯಲ್ಲ. ಅದಕ್ಕಾಗಿ ಮನಪೂರ್ವಕವಾಗಿ ಕ್ಷಮೆಯಾಚಿಸುತ್ತೇನೆ ಎಂದು ಕ್ರಿಕೆಟ್ ದಂತಕಥೆ ಯುವರಾಜ್ ಸಿಂಗ್ ಹೇಳಿದ್ದಾರೆ.

'ಕಪಿಲ್ ಮತ್ತು ಎಂ.ಎಸ್. ಧೋನಿ ಅವರಲ್ಲಿ ನಾನು ಕ್ಷಮೆಯಾಚಿಸುತ್ತೇನೆ. ಕಪಿಲ್ ಅವರು ಈ ದೇಶದ ಶ್ರೇಷ್ಠ ಆಟಗಾರ. ಅವರಿಬ್ಬರ (ಯೋಗರಾಜ್ ಸಿಂಗ್ ಮತ್ತು ಕಪಿಲ್ ದೇವ್) ಬಾಂಧವ್ಯ ಹೇಗಿತ್ತು ಎಂಬುದು ನನಗೆ ಗೊತ್ತಿಲ್ಲ. ಏಕೆಂದರೆ ಆ ಕಾಲಘಟ್ಟದಲ್ಲಿ ನಾನು ಜನಿಸಿರಲಿಲ್ಲ' ಎಂದು ಯುವರಾಜ್ ಸಿಂಗ್ ಅವರು 'ಸ್ಪೋರ್ಟ್ಸ್ ಟಾಕ್' ಪಾಡ್‌ಕಾಸ್ಟ್‌ನಲ್ಲಿ ಹೇಳಿದ್ದಾರೆ.

'ನಾನು ಮತ್ತು ಧೋನಿ ಕೂಡಿ ಆಡಿದವರು. ಅವರ ಬಗ್ಗೆ ಟೀಕಿಸಿದಾಗ ನಾನು ತಂದೆಯವರಿಗೆ (ಯೋಗರಾಜ್) ಇದು ಸರಿಯಲ್ಲ. ಆ ರೀತಿ ಮಾತನಾಡಬೇಡಿ. ಅದರಿಂದ ನನ್ನ ಮೇಲೆ ಪರಿಣಾಮ ಬೀರಬಹುದು ಎಂದು ಹೇಳಿದ್ದೆ' ಎಂದು ಯುವರಾಜ್ ನೆನಪಿಸಿದರು.

2011ರಲ್ಲಿ ಭಾರತ ತಂಡವು ಏಕದಿನ ಕ್ರಿಕೆಟ್ ವಿಶ್ವಕಪ್ ಜಯಿಸುವಲ್ಲಿ ಯುವರಾಜ್ ಸಿಂಗ್ ಅವರ ಆಲ್‌ರೌಂಡ್ ಆಟ ಪ್ರಮುಖವಾಗಿತ್ತು.

'ಯೋಗರಾಜ್ ಅವರ ಹೇಳಿಕೆಗಳ ಬಗ್ಗೆ ಕಪಿಲ್ ಮತ್ತು ಧೋನಿ ಅವರಿಗೆ ಪೂರ್ಣವಾಗಿ ಅರಿವು ಇದೆ. ಆ ಹೇಳಿಕೆಗಳು ನನ್ನವಲ್ಲ ಎಂಬ ಬಗ್ಗೆಯೂ ಅವರಿಗೆ ತಿಳಿದಿದೆ' ಎಂದು ಹೇಳಿದ್ದಾರೆ.

'ಯುವರಾಜ್ ವೃತ್ತಿಜೀವನವನ್ನು ಧೋನಿ ಹಾಳು ಮಾಡಿದರು. ಆತನನ್ನು ನಾನೆಂದಿಗೂ ಕ್ಷಮಿಸುವುದಿಲ್ಲ' ಎಂದು ಯೋಗರಾಜ್ ಕೆಲವು ವರ್ಷಗಳ ಹಿಂದೆ ಕಿಡಿ ಕಾರಿದ್ದರು. 2011ರ ವಿಶ್ವಕಪ್ ಟೂರ್ನಿ ನಂತರ ಕ್ಯಾನ್ಸರ್ ಚಿಕಿತ್ಸೆಗಾಗಿ ಯುವರಾಜ್ ಸಿಂಗ್ ದೀರ್ಘಕಾಲ ಕ್ರಿಕೆಟ್‌ನಿಂದ ದೂರವಿದ್ದರು. ಕೆಲ ವರ್ಷಗಳ ನಂತರ ಮರಳಿದ್ದರು. ಆದರೆ ಅವರನ್ನು 2019ರ ವಿಶ್ವಕಪ್ ಟೂರ್ನಿಗೆ ಆಯ್ಕೆ ಮಾಡಿರಲಿಲ್ಲ. ಅದಕ್ಕಾಗಿ ಯೋಗರಾಜ್ ಅಸಮಾಧಾನಗೊಂಡಿದ್ದರು.

ಕಪಿಲ್ ದೇವ್ ಉತ್ತರ ವಲಯ ತಂಡದ ನಾಯಕರಾಗಿದ್ದಾಗ ಯೋಗರಾಜ್ ಕೂಡ ಆಡಿದ್ದರು. ಆದರೆ 'ಯಾವುದೇ ಕಾರಣವಿಲ್ಲದೇ' ಅವರನ್ನು ತಂಡಕ್ಕೆ ಆಯ್ಕೆ ಮಾಡಿರಲಿಲ್ಲ. ಇದರಿಂದಾಗಿ ಆಕ್ರೋಶಗೊಂಡು ಕಪಿಲ್ ಅವರನ್ನು ನಿಂದಿಸಿದ್ದರು.

ನಿಯಮ ಉಲ್ಲಂಘನೆ: ಅಭಿಷೇಕ್‌ಗೆ ದಂಡ



ಕೋಲ್ಕತ್ತ (ಪಿಟಿಐ): ಸನ್‌ರೈಸರ್ಸ್ ಹೈದರಾಬಾದ್ ತಂಡದ ಉಪನಾಯಕ ಅಭಿಷೇಕ್ ಶರ್ಮಾ ಅವರಿಗೆ ಪಂದ್ಯದ ಸಂಭಾವನೆಯ ಶೇ 25ರಷ್ಟು ದಂಡ ವಿಧಿಸಲಾಗಿದೆ. ಒಂದು ಡಿಮೆರಿಟ್ ಪಾಯಿಂಟ್ ಕೂಡ ವಿಧಿಸಲಾಗಿದೆ.

ಗುರುವಾರ ನಡೆದಿದ್ದ ಕೋಲ್ಕತ್ತ ನೈಟ್ ರೈಡರ್ಸ್ ಎದುರಿನ ಪಂದ್ಯದಲ್ಲಿ ಅವರು ಅಂಪೈರ್ ನಿರ್ಧಾರಕ್ಕೆ ಭಿನ್ನಾಭಿಪ್ರಾಯ ವ್ಯಕ್ತಪಡಿಸಿದ್ದರು. ಆರ್ಟಿಕಲ್ 2.3ರ ಲೆವೆಲ್ 1ರ ನಿಯಮ ಉಲ್ಲಂಘಿಸಿದ್ದರು.

ಪಂದ್ಯದಲ್ಲಿ ಸನ್‌ರೈಸರ್ಸ್ ತಂಡ 65 ರನ್‌ಗಳಿಂದ ಗೆದ್ದಿತು. ಅಭಿಷೇಕ್ 21 ಎಸೆತಗಳಲ್ಲಿ 48 ರನ್ ಹೊಡೆದಿದ್ದರು. ಟಿ.ವಿ. ಅಂಪೈರ್ ನಿತಿನ್ ಮೆನನ್ ನೀಡಿದ ತೀರ್ಪಿಗೆ ಅಭಿಷೇಕ್ ಅಸಮ್ಮತಿ ವ್ಯಕ್ತಪಡಿಸುವಂತಹ ನಡವಳಿಕೆ ತೋರಿದ್ದರು.

ಆಲ್‌ರೌಂಡರ್ ಜೋಡಿ ಹಾರ್ದಿಕ್–ಅಕ್ಷರ್ ಪಟೇಲ್ ಮುಖಾಮುಖಿ ಇಂದು

ಕ್ಯಾಪಿಟಲ್ಸ್–ಇಂಡಿಯನ್ಸ್ ಹಣಾಹಣಿ

ನವದೆಹಲಿ (ಪಿಟಿಐ): ಆತಿಥೇಯ ಡೆಲ್ಲಿ ಕ್ಯಾಪಿಟಲ್ಸ್ ತಂಡವು ಶನಿವಾರ ಇಲ್ಲಿ ನಡೆಯಲಿರುವ ಐಪಿಎಲ್ ಪಂದ್ಯದಲ್ಲಿ ಭರ್ತಿ ಆತ್ಮವಿಶ್ವಾಸದಲ್ಲಿರುವ ಮುಂಬೈ ಇಂಡಿಯನ್ಸ್ ವಿರುದ್ಧ ಕಣಕ್ಕೆ ಇಳಿಯಲಿದೆ.

ಡೆಲ್ಲಿ ತಂಡವು ಪ್ರಸಕ್ತ ಋತುವಿನಲ್ಲಿ ತನ್ನ ತವರಿನಂಗಳದಲ್ಲಿ ಮೊದಲ ಪಂದ್ಯ ಆಡಲಿದೆ. ಈಚೆಗೆ ಲಖನೌ ಸೂಪರ್ ಜೈಂಟ್ಸ್ ವಿರುದ್ಧ ಡೆಲ್ಲಿ ಜಯಿಸಿತ್ತು. ಆದರೆ ಆ ಪಂದ್ಯದಲ್ಲಿ 142 ರನ್‌ಗಳ ಸಾಧಾರಣ ಮೊತ್ತವನ್ನು ಬೆನ್ನಟ್ಟಿದ್ದ ತಂಡವು ಆರಂಭದಲ್ಲಿಯೇ ಎಡವಿತ್ತು. ಕೆ.ಎಲ್. ರಾಹುಲ್ ಮೊದಲ ಎಸೆತದಲ್ಲಿಯೇ ಔಟ್ ಆಗಿದ್ದರು. ನಿತೀಶ್ ರಾಣಾ ಮತ್ತು ಪಥುಮ್ ನಿಸಾಂಕಾ ಕೂಡ ಬೇಗನೆ ನಿರ್ಗಮಿಸಿದರು. ಇದರಿಂದಾಗಿ ತಂಡವು 26 ರನ್‌ಗಳಿಗೆ 4 ವಿಕೆಟ್ ಕಳೆದುಕೊಂಡಿತ್ತು.

ಈ ಹಂತದಲ್ಲಿ 22 ವರ್ಷದ ಸಮೀರ್ ರಿಜ್ವಿ ಅವರ ಶಾಂತಚಿತ್ತದ ಆಟ ಡೆಲ್ಲಿ ತಂಡವು ಗೆಲುವಿನ ಹಾದಿಗೆ ಮರಳಲು ಕಾರಣವಾಯಿತು. ಅಜೇಯ ಅರ್ಧಶತಕ ಗಳಿಸಿದ ಸಮೀರ್ ಮತ್ತು ಟ್ರಿಸ್ಟನ್ ಸ್ಟಬ್ಸ್ ಅವರೊಂದಿಗಿನ ಜೊತೆಯಾಟದಿಂದ ತಂಡವು ಆರು ವಿಕೆಟ್‌ಗಳಿಂದ ಜಯಿಸಿತು.

ಆದರೆ ಈಗ ಮುಂಬೈ ಎದುರು ಸಮೀರ್ ಮಾತ್ರವಲ್ಲ ಡೆಲ್ಲಿ ತಂಡದ ಎಲ್ಲ ಬ್ಯಾಟರ್‌ಗಳೂ ಸರ್ವಸನ್ನದ್ಧರಾಗಿ ಕಣಕ್ಕಿಳಿಯಬೇಕಾದ ಸವಾಲು ಇದೆ. ಏಕೆಂದರೆ ಮುಂಬೈ ತಂಡದಲ್ಲಿ ವೇಗಿ ಜಸ್‌ಪ್ರೀತ್ ಬೂಮ್ರಾ ಅವರಿದ್ದಾರೆ. ನಾಯಕ ಹಾರ್ದಿಕ್ ಪಾಂಡ್ಯ, ಅನುಭವಿ ಟ್ರೆಂಟ್ ಬೌಲ್ಟ್, ದೀಪಕ್ ಚಾಹರ್ ಅವರು ಲಯಕ್ಕೆ ಮರಳಿದರೆ ಬ್ಯಾಟರ್‌ಗಳಿಗೆ ಕಠಿಣ ಸವಾಲಾಗಬಹುದು.

ಮುಂಬೈ ಬ್ಯಾಟಿಂಗ್ ಪಡೆಯೂ ಅಮೋಘ ಲಯದಲ್ಲಿದೆ. ರೋಹಿತ್ ಶರ್ಮಾ ಅವರು ಮೊದಲ ಪಂದ್ಯದಲ್ಲಿ ಅಬ್ಬರದ 78 ರನ್ ಗಳಿಸಿದ್ದರು. ಅವರೊಂದಿಗೆ ಇನಿಂಗ್ಸ್ ಆರಂಭಿಸಿದ್ದ ರಿಯಾನ್ ರಿಕೆಲ್ಟನ್ 81 ರನ್ ಗಳಿಸಿದ್ದರು. ಕ್ವಿಂಟನ್ ಡಿ ಕಾಕ್ ಬದಲು ಸ್ಥಾನ ಪಡೆದಿದ್ದ ರಿಕೆಲ್ಟನ್ ತಮ್ಮ ಆಯ್ಕೆಯನ್ನು ಸಮರ್ಥಿಸಿಕೊಂಡಿದ್ದರು. ತಿಲಕ್ ವರ್ಮಾ, ಕಾರ್ಬಿನ್ ಬಾಷ್, ಶೆರ್ಫೇನ್ ರುದರ್‌ಫೋರ್ಡ್, ವಿಲ್ ಜ್ಯಾಕ್ಸ್ ಅವರೂ ತಂಡಕ್ಕೆ ಗೆಲುವಿನ ಕಾಣಿಕೆ ನೀಡುವ ಸಮರ್ಥರಾಗಿದ್ದಾರೆ.

ಇದರಿಂದಾಗಿ ಅಕ್ಷರ್ ಪಟೇಲ್ ನಾಯಕತ್ವದ ಡೆಲ್ಲಿ ಬೌಲರ್‌ಗಳ ಮುಂದೆ ಕಠಿಣ ಸವಾಲು ಇದೆ. ಮೊದಲ ಪಂದ್ಯದಲ್ಲಿ ಟಿ. ನಟರಾಜನ್ ಮತ್ತು ಲುಂಗಿ ಎನ್‌ಗಿಡಿ ಅವರು ಉತ್ತಮವಾಗಿ ಬೌಲಿಂಗ್ ಮಾಡಿದ್ದರು. ಸ್ಪಿನ್ನರ್ ಕುಲದೀಪ್ ಯಾದವ್ ಮತ್ತು ಅಕ್ಷರ್ ಅವರಿಗೆ ತವರಿನಂಗಳದಲ್ಲಿ ಮಿಂಚಲು ಉತ್ತಮ ಅವಕಾಶ ಇದೆ.



ಮುಂಬೈ ಇಂಡಿಯನ್ಸ್ ತಂಡದ ಸೂರ್ಯಕುಮಾರ್ ಯಾದವ್ ಹಾಗೂ ಡೆಲ್ಲಿ ಕ್ಯಾಪಿಟಲ್ಸ್ ತಂಡದ ಕೆ.ಎಲ್. ರಾಹುಲ್ ಅವರು ಅಭ್ಯಾಸ ವೇಳೆ ಮಾತುಕತೆ ನಡೆಸಿದರು ಪಿಟಿಐ ಚಿತ್ರಗಳು



ರೋಹಿತ್ ಶರ್ಮಾ

ಇಂದಿನ ಪಂದ್ಯ

ಡೆಲ್ಲಿ ಕ್ಯಾಪಿಟಲ್ಸ್	V/s	ಮುಂಬೈ ಇಂಡಿಯನ್ಸ್
ತಾಣ: ದೆಹಲಿ, ಆರಂಭ: ಮಧ್ಯಾಹ್ನ 3.30		
ಗುಜರಾತ್ ಜೈಂಟ್ಸ್	V/s	ರಾಜಸ್ಥಾನ ರಾಯಲ್ಸ್
ತಾಣ: ಅಹಮದಾಬಾದ್, ಆರಂಭ: ರಾತ್ರಿ 7.30		

ಲೈವ್ ಸ್ಟಾರ್‌ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್ ಆ್ಯಪ್

ವೈಭವ್‌ಗೆ ಟೈಟನ್ಸ್ ವೇಗಿಗಳ ಸವಾಲು

ಅಹಮದಾಬಾದ್‌ನಲ್ಲಿಂದು ಗುಜರಾತ್ ಟೈಟನ್ಸ್–ರಾಜಸ್ಥಾನ ರಾಯಲ್ಸ್ ಪಂದ್ಯ

ಅಹಮದಾಬಾದ್ (ಪಿಟಿಐ): ಕಗಿಸೊ ರಬಾಡ, ಪ್ರಸಿದ್ಧ ಕೃಷ್ಣ ಮತ್ತು ಮೊಹಮದ್ ಸಿರಾಜ್ ಅವರನ್ನು ಒಳಗೊಂಡ ಗುಜರಾತ್ ಟೈಟನ್ಸ್ ವೇಗದ ದಾಳಿ ಪ್ರಬಲವಾಗಿರುವಂತೆ ಕಾಣುತ್ತಿದ್ದರೂ, ಬ್ಯಾಟರ್‌ಸ್ನೇಹಿ ಪಿಚ್‌ನಲ್ಲಿ ಅವರಿಗೆ 'ಅಚ್ಚರಿಯ ಬಾಲಕ' ವೈಭವ ಸೂರ್ಯವಂಶಿ ಅವರನ್ನು ಕಟ್ಟಿಹಾಕುವ ಸವಾಲು ಇದೆ. ಶನಿವಾರ ಗುಜರಾತ್ ಟೈಟನ್ಸ್ ವಿರುದ್ಧ ನಡೆಯಲಿರುವ ಐಪಿಎಲ್ ಪಂದ್ಯದಲ್ಲಿ ಮೇಲ್ನೋಟಕ್ಕೆ ರಾಜಸ್ಥಾನ ರಾಯಲ್ಸ್ ಫೇವರಿಟ್ ಆಗಿ ಕಾಣುತ್ತಿದೆ.

15 ವರ್ಷದ ಈ ಆಕ್ರಮಣಕಾರಿ ಆಟಗಾರ, ತನ್ನ ಎರಡನೇ ಐಪಿಎಲ್ ಋತುವಿನ ಮೊದಲ ಪಂದ್ಯದಲ್ಲೇ ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ಅಬ್ಬರಿಸಿ 15 ಎಸೆತಗಳಲ್ಲಿ 50 ರನ್ ಸಿಡಿಸಿದ್ದರು. ಆದರೆ ಆ ಪಂದ್ಯದಲ್ಲಿ ಗುರಿ (127) ಸಣ್ಣದಿದ್ದು ಎದುರಾಳಿ ದಾಳಿಯೂ ಅಷ್ಟೇನೂ ಪರಿಣಾಮಕಾರಿ ಆಗಿರಲಿಲ್ಲ.

ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಅವರಿಗೆ ಎದುರಾಗಲಿರುವ ಮೂವರು ವೇಗಿಗಳು (ರಬಾಡ, ಸಿರಾಜ್, ಪ್ರಸಿದ್ಧ) ಅಂತರರಾಷ್ಟ್ರೀಯ ಬೌಲರ್‌ಗಳು. ಅವರು ಬಿಹಾರದ ಹುಡುಗನನ್ನು ಸತ್ವ ಪರೀಕ್ಷೆಗೆ ಒಳಪಡಿಸುವುದು ಖಚಿತ.

ಈ ಹಿಂದಿನ ಪಂದ್ಯದಲ್ಲಿ ಟೈಟನ್ಸ್ ನಾಯಕ ಶುಭಮನ್ ಗಿಲ್ ಅವರ ನಿರ್ಧಾರಗಳು ಅತಾರ್ಕಿಕವಾಗಿದ್ದವು. ಅವರು ಸಿರಾಜ್ ಅವರಿಗೆ ಎರಡೇ ಓವರ್ ನೀಡಿದ್ದರು. ಪ್ರಸಿದ್ಧ ಅವರನ್ನು ತಡವಾಗಿ– 12ನೇ ಓವರಿನಲ್ಲಿ ದಾಳಿಗಿಳಿಸಿದ್ದರು.

ರಾಯಲ್ಸ್‌ನ ಪ್ರಮುಖ ವೇಗಿಗಳಾದ ನಾಂಡ್ರೆ ಬರ್ಗರ್ ಮತ್ತು ಜೋಫ್ರಾ ಆರ್ಚರ್ ಅವರು ಟೈಟನ್ಸ್‌ನ ಅಗ್ರ ಬ್ಯಾಟರ್‌ಗಳಾದ ಗಿಲ್, ಸಾಯಿ ಸುದರ್ಶನ್ ಮತ್ತು ಜೋಸ್ ಬಟ್ಲರ್ ಅವರನ್ನು ಕಠಿಣ ಪರೀಕ್ಷೆಗೊಡ್ಡುವುದಂತೂ ಖಚಿತ. ಟೈಟನ್ಸ್ ತಂಡದ ಸಮಸ್ಯೆಯೆಂದರೆ ಈ ಮೂವರು ಆಕ್ರಮಣಕಾರಿಯಾಗಿ ಆಡುತ್ತಿಲ್ಲ. ಮೊದಲ ಪಂದ್ಯದಲ್ಲಿ ಇದು ಎದ್ದುಕಂಡಿತ್ತು. ಶಾರೂಕ್ ಖಾನ್, ವಾಷಿಂಗ್ಟನ್ ಸುಂದರ್, ರಾಹುಲ್ ತೆವಾಟಿಯಾ ಕೂಡ ವಿಶ್ವಾಸದಿಂದ ಆಡಿಲ್ಲ.

ರಾಯಲ್ಸ್ ತಂಡವು ನಾಯಕ ರಿಯಾನ್ ಪರಾಗ್, ಭಾರತ ತಂಡದ ಆಟಗಾರರಾದ ರವೀಂದ್ರ ಜಡೇಜ, ಯಶಸ್ವಿ ಜೈಸ್ವಾಲ್ ಮತ್ತು ಧ್ರುವ್ ಜುರೇಲ್ ಅವರನ್ನು ಹೊಂದಿದ್ದು ಬ್ಯಾಟಿಂಗ್ ಸರದಿ ಪ್ರಬಲವಾಗಿದೆ.



ವೈಭವ್ ಸೂರ್ಯವಂಶಿ ಪಿಟಿಐ ಚಿತ್ರ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331



ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

FEW SITES FOR SALE
Sondekoppa Road
Nelamangala Town Limits
Nagarasabha E-Katha Ready for Registration
Bank Loan Available.
Rs.3300/- per sqft.
Negotiable
Contact : +91 63640 18956

ರಾಷ್ಟ್ರೀಯ ಗ್ರಾಹಕರ ಮೇಳ
NATIONAL CONSUMER FAIR
ಬೆಂಗಳೂರಿನ ಪ್ರಮುಖ ಆಕರ್ಷಣೆಯ ಧುಮುಕುವ ಅದ್ಭುತ ಜಲಪಾತ
wonder falls



VISIT TODAY
From 27th March onwards
Shopping & Amusement Expo
Daily: 4pm - 9pm, Call: 8904727123
Binny Mill Ground, Bengaluru

ಅದ್ದೂರಿ ಉದ್ಘಾಟನೆ
ನಮ್ಮ 3ನೇ ಮಳಿಗೆ
MYSORE SILKS ಸೀರೆ ಉತ್ಸವ
Opening Offer 60% off
ON PURE MYSORE CREPE SILK SAREE



ಸೀರೆ ಉತ್ಸವ-3 ನಮ್ಮೊಂದಿಗೆ ಸೇರಿ ಆಚರಿಸಿ
ನಮ್ಮ ಹೊಸ ಮಳಿಗೆಯಲ್ಲಿ 1 ರಿಂದ 10ನೇ ಏಪ್ರಿಲ್ 2026
SULAKSHMI SILKS
ಕರ್ನಾಟಕದ ಅತಿದೊಡ್ಡ ಸೀರೆ ಉತ್ಸವ
ಸಂಪರ್ಕಿಸಿ: 99727 18898 | 93531 38343 | 9886306643 | 96631 27606
ಸ್ಥಳ: ನಂ.119/1, ಶ್ರೀನಿಧಿ ಕಾಂಪ್ಲೆಕ್ಸ್, 11ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560003

TATA VEG JAIN
Velvet Vacations
By: NOVEX COMMUNICATIONS



• MEDICAL SERVICE
• COMFORTABLE ACCOMMODATIONS
• ALL MEALS
• TRANSFERS
• VISA & PERMIT
• EXPERT GUIDE

TOUR OPERATED BY INDIA'S NO. 1 KAILASH EXPERT
WITH AN EXPERIENCE OF SUCCESSFULLY COMPLETING 56 YATRAS & 56 PARIKRAMAS
(SERVING YATRIS SINCE 1998)

Ashtapad (Optional)
Kailash Mansarovar Yatra
(Dep: May - Sept. 2026)
"Tour Manager Travels with you."
4 DEPARTURES EVERY MONTH
FULL MOON DEP. DATES: MAY 24 | JUN. 23 | JUL. 22 | AUG. 21 | SEP. 19
NORMAL DEP. DATES: APR. 24 | MAY. 12 | JUN. 10 | JUL. 08 | AUG. 12 | SEP. 09
DETAILED ITINERARY EXPLANATION (WITH Q & A)
हर हर महादेव
FREE SEMINAR: 11TH APRIL, 2026
CALL NOW TO BOOK YOUR SLOTS (ONLY 5 PEOPLE IN ONE SLOT).
www.velvetvacations.in
177/20, GROUND FLOOR, 49TH CROSS, 3RD BLOCK RAJAJINAGAR BANGALORE - 560010.
KAMLESH: +91 8108142472
DARSHAN: +91 8422090451
HEAD OFFICE: MUMBAI
OUR BRANCHES: AHMEDABAD, HYDERABAD, JAIPUR, UDAIPUR, PUNE.

REAL ESTATE SELLING

Sites

Banashankari

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

BDA EAST FACING site 30'x43.5' for sale in BSK 1st stage, Srinagar, for price. 9845380312

BANASHANKARI 6TH Stage 1st Block. 30x40 Site For Sale Near NPS School. Brokers Excuse. 9686026739.

BANASHANKARI 6TH Stage 11th Block, 40x60 Site for Sale Behind 80 Feet Road. 9972338060/ 9880448478.

Basavanagudi

50X80 NORTH East Corner and 40x40 Commercial Property in Basavanagudi Buyers and Sellers Contact 8618373754

Basaweshwaranagar

SALE BASAWEHWARNGR 40x60 Site North Facing, Adjacent to Bharath gas. Contact Owner. 9480060249

Hanumanthnagar

40X60 NORTH and East Hanumanthanagar, N/West N.R. Colony, 40x60 N/West Girinagar. Sellers/ Buyers Contact 8618373754

Jakkur

BDA PLOT for Sale 20x30, 30x40, at Jakkur in Arkavathy 7th Block. Contact: HN 9019144869.

Kempegowda Layout

KEMPEGOWDA LAYOUT, Commercial/ Residential BDA Site for Sale 20x30, 30x40, 40x60, 50x80 Contact Kumar 9945119449

Multiple Locations

BANASHANKARI 6TH Stage, Nadaprabhu Kempegowda Layout, Vishweshwariah, BDA Site, Houses are available. Contact: 9900999919.

Kengeri

FOR SALE: BBMP A Khatha Sites at Kengeri, 500 meters from the Metro Station with Cauvery Water. Contact: 9606342643

Nagarabhavi

NAGARABHAVI EXTENSION (Sri Gandhada Kavalu Vasathirahitara Sangha Site Nos. 119 & 120) Two adjacent Sites (Free Hold) 30x40 North Facing, Available for immediate SALE (Rs. 1.25 Crore each) Contact: 9986465377 Shivaswamy

SITE SALE, North Facing 40x60 Sqft Behind Namooru Tindi Nagarbhavi, No Brokers/ No Agents: 9448377834

Vishweshwariah Layout

SITE SALE West Facing 50x80 BDA 40ft Road Rs. 9000/- Vishweshwaraiah Layout Full White Money 9916826976

VISHWESHWARAIAH LAYOUT BDA 6th Block 20x30 West Facing 30 Feet Road Direct Owner Meeting 6360050356

VISHWESHWARAIAH LAYOUT 3rd block 30x40 BDA Site for Sale West facing Contact: 7349549087

2 BDA Corner Sites for sale Sir.M.Visvesvaraya layout, Bengaluru. 1) 8th block, site no.1460, odd dimension-1730 Sqft North west corner. 2) Site number-589 South west corner 4th block overlooking park-1743 Sqft. CONTACT OWNER -7349713114

Vidyaranyapura

SAMBRAM COLLEGE Near Amba Bhavani Temple Back,Side 30x40, 37.5x40 WF BBMP B/E Katha, 40x60 WF Best County 2, DC Conversion A/E Katha: 8296895858

Residential/ Commercial

Multiple Locations

LANDS AVAILABLE FOR SALE
BIDADI, RAMANAGAR, CHANNAPATTANA, NELAMANGALA, DEVANAHALLI, DABASPETE, STRR Road, HOSAKOTE
Extent of 5 to 50 Acres Suitable for Warehouse, Industrial, Villa Plots, Farmhouse.
Interested Contact: 9845488488

Mysore

FOR NRI CLIENTS Owner interested in making Studio type Apartments and a portion to commercial Development , On a prime property on mysore express way near to mysore and before toll point. Financially sound Interested parties Contact 9741019028

Agricultural Land

Mysore Road

AGRLCULTURAL LAND Available on Mysore Road, In and around Bidadi, Ramanagar, Channapatna, Clear Title- 9900115519

Chikkaballapura

AGRICULTURAL LAND-SALE 15 K.M. From CHIKKABALLAPUR. 8 K.M. From HYDERABAD HIGHWAY. Suitable: FARMHOUSE 7019666458.

Commerical

Jayanagar

JAYANAGAR 9TH Block 30x40 Commercial vacant Site near Central Mall (good footfall) Suraj Realtors- 9845232711

Flat

Kengeri

3-BHK FLAT For SALE, One Floor One House, 2200 sqft. Near Kengeri Hoysala Circle, 7204224999

Nagarabhavi

FLATS FOR-SALE @ Nagarabhavi Chandra Layout 2 & 3 BHK Ready to Move In Good Location Call:9538472420 9845066608

Tumkur Road

60X40 `A`KHATHA 100Square Building, 8Flats, 8Carpark Walkable Chikkabidarakallu Metro`& Adjacent-to Prestige Jindal-City. 7.02.Cr. 7019455938.

Yelahanka

3BHK CENTURY SARAS. Near California-Resort. Semi-Furnished. EastFacing. First Floor. 1674Sft. Parking+ Amenities. 1.25cr. 9845336624

House

J P Nagar

J.P.NAGAR 4TH Phase 30x40, South, old house, BDA clear title near Ringroad, Suraj Realtors- 9845232711

AGRICULTURAL LAND 5 ACRES FOR SALE
with one acre Kharab fenced cleaned and gated with scenic view of mountains.
2 km. from Thattekere on Harohalli Anekal Road, approx 11 km. from Harohalli. Off Kanakapura Road,
REASONABLE PRICE
CALL : 9845022447 Brokers Excuse

SIGNATURE PREMIUM PLOTS
ON NH-766 HIGHWAY, NEAR MYSORE AIRPORT
MUDA & RERA APPROVED
PLOT SIZES 30X40, 30X50, 40X60
CALL : 63663 84518

Kanakapura Road

"FOR RENT 2BHK close to Forum South Mall, Konanakunte Metro Station, Kumaran School. 9845286505"

Yelahanka

SALE 50% Complete Building South East on 30x53.5 Site @ Yelahanka (Shivkote) Rs.90Lakhs Broker Excuse Call:9019516062

REAL ESTATE BUYING

Sites

Banashankari

BDA SITES WANTED ARKAVATI, ANJANAPURA, BANASHANKARI 6TH STAGE, VISHWESHWARAIAH KEMPEGOWDA ANY BDA LAYOUT. 9845062822/ 8660751654

Multiple Locations

WANTED BDA Sites Arkavathi, Nadaprabhu Kempegowda & BDA other Layouts. Contact: SAPTHAGIRI (Opposite BDA Head Office):: 9036360366

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th- stage. Contact: 9844533371/ 9341733480

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Guest House

GUEST HOUSE/ Service Apartment FOR RENT Doddaballapur 1km from TB circle near to industrial area's ideal for corporate executives capacity 20, 25pax (5 units 2BHK+2 rooms on top) Fully furnished AC, 24×7 power backup, LONGTERM RENT available with/ without maintenance interested pls Call 9845264539.

Accommodation Wanted

Commercial

WANTED COMMERCIAL SPACE 20,000 sft. for Rent/Lease in Bankapur Chowk Road, Hubli and Electronic City, Bangalore.Ph: 90006 93366.

JOB OPPORTUNITIES

Drivers

CAR DRIVERS for Home in Koramangala. Driving within City. Mon-Sat 10AM-7PM. Salary Rs.22,000. Ph: 8951234569

General

WANTED FEMALE in house live in MAID languages preferred Hindi & etc, Attractive Salary, Call:9980140661

PERSONAL

Change of Name

CHANGE OF NAME
I, **NIRMALA NIRANJAN,** residing at # 58/1, G-10th Street, Jogupalya, Halasuru, Bengaluru-560008, have changed my name to **NIRMALA JANARTHANA SINGH** vide affidavit dated 02-04-2026 before notary Gangaraju B.N, Bengaluru. Henceforth I shall be called **NIRMALA JANARTHANA SINGH** only

I LALITHA BAI NAGESH. R/a, # 25/1-18, 9th Cross, Maranahalli palya, 2nd phase JP.Nagar Bangalore-560078 have changed my name from LALITHA BAI NAGESH to LALITHA BAI VENKOBA RAO NALIGE vide affidavit dated 02/04/2026 before notary Muhammad Hussain. K, Bangalore.

EDUCATIONAL

Distance Education


CHEMISTRY PLUS2 Boards, JEE, NEET Online by reputed tutor from Kolkata. Chatterjee Sir Mob: 9674959386

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

READY TO MOVE-IN LUXURY HOME
REGISTRATION READY
AT VIJAYNAGAR 4TH STAGE, MYSURU
4 BHK | PRIVATE LIFT
MUDA ALLOTED
CALL : 87922 36363


READY TO MOVE-IN PREMIUM APARTMENT
REGISTRATION READY
AT VIJAYNAGAR 4TH STAGE, MYSURU
2 BHK
CALL : 87922 36363

BHARATH EDUCATION SOCIETY®
BES DEGREE COLLEGE
Recognised by UGC. Approved by AICTE.
Affiliated to Dr. MMS BCU, Re-accredited B++ Grade by NAAC.
27, Sahakara Rathna B.L. Lakke Gowda Road, 16th Main, Jayanagar 4th Block, Bengaluru-560011
080 - 2663 7295 / 94488 48416
Email: besddcol@yahoo.co.in
besdegreecol@gmail.com
Website: www.besinstitutions.com



Sahakara Rathna B.L. Lakke Gowda
Founder
B.E.S Institutions

SHAPE YOUR CAREER WITH INTEGRATED SKILL ENHANCEMENT PROGRAMMES



Sri S.T. Somashekhar
Hon. President, Bharath Education Society
MLA, Yeshwanthpura Constituency,
Former Minister, Govt of Karnataka

PROGRAMMES OFFERED FOR : 2026-27
B.Com | BBA | BCA
BA HEP HES HEK
Languages Offered: English, Kannada, Hindi & Sanskrit
As per Dr. MMS BCU Syllabus

BES EVENING DEGREE COLLEGE
Re-accredited B Grade by NAAC.
080-26638415 / 99455 46840 E-mail: besedceve@gmail.com
PROGRAMMES OFFERED FOR : 2026-27
B.Com | BA HEP HES HEK

Sri..Nirmal Kumar K.R., President, Bharath Education Society
Prof N.S. Vijaya, Secretary, Bharath Education Society
Dr. N. Ashok Kumar, Principal, BES Degree College
Dr. Rekha Kowshik P.R., Principal, BES Evening Degree College
HOSTEL FACILITY AVAILABLE FOR GIRLS
BES-26701

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331
ಪ್ರತಿಯೊಬ್ಬರಿಗೂ ಉಪಯುಕ್ತ
ಪ್ರಜಾವಾಣಿ ಕ್ಲಾಸಿಫೈಡ್ಸ್



ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331